UNIVERSAL
LIBRARY
OU_200579
UNIVERSAL
LIBRARY

# ತೊರವೆ ರಾಮಾಯಣ

## ಬಾಲಕಾಂಡ

(ಲಘು ಟಿಪ್ಪಣಿಯೊಡನೆ ಮುದ್ರಿಸಿದೆ)

ಕರ್ಣಾಟಕ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೨೩

[ಬೆಲೆ ರೂ. ೧—೨—೧

ಕ್ಯಾಕ್ಸ್‌ಟನ್ ಪ್ರೆಸ್, ಬೆಂಗಳೂರು ಸಿಟಿ.

# ತೊರವೆ ರಾಮಾಯಣ.

## ಬಾ ಲ ಕಾಂ ಡ

### ಮೊದಲನೆಯ ಸಂಧಿ.

ಎಂಬುದು ಶಿಥಿಲೋಚ್ಚಾರಣೆಯನ್ನು ತೋರಿಸುತ್ತದೆ.]

ಶ್ರೀಜನಕಜಾ ರಮಣ ವಿಮಲ ಸ ।
ರೋಜಸಂಭವ ಜನಕನನುಪಮ ।
ರಾಜಶೇಖರ ವಿನುತನಖಿಲಾಮರ ಕಿರೀಟಚಯ ॥
ರಾಜಿತಾಮಲ ಲಲಿತಪದ ಪಂ ।
ಕೇಜನಾನತಜನ ದಯಾಸುರ ।
ಭೂಜ ತೊರವೆಯರಾಯ ನರಹರಿ ಪಾಲಿಸುಗೆ ಜಗವ ॥ ೧ ॥

ಪರಮ ಮಂಗಳಮೂರ್ತಿ ಪಾವನ ।
ಚರಿತ ಪರಮಾನಂದಮಯ ಪುರ ।
ಹರ ಪುರಂದರ ಪೂಜಿತಾಂಘ್ರಿಸರೋಜ ಶಶಿಮೌಳಿ ॥
ಶರಣಜನ ಸುರಧೇನು ಗಂಗಾ ।
ಧರ ಗಜಾಸುರಮಥನ ಗೌರೀ ।
ವರ ತ್ರಿಯಂಬಕನೊಲಿದು ಸಲಹುಗೆ ಸಕಲ ಸಜ್ಜನರ ॥ ೨ ॥

(೧) ಅನ್ವಯ-ಶ್ರೀಜನಕಜಾ ರಮಣ, ವಿಮಲಸರೋಜ ಸಂಭವಜನಕನು, ಅನುಪಮ ರಾಜಶೇಖರವಿನುತನು, ಅಖಿಲಾಮರ ಕಿರೀಟಚಯ ರಾಜಿತಾಮಲ ಲಲಿತ ಪದಪಂಕೇಜನು, ಆನತಜನ ದಯಾಸುರಭೂಜ, ತೊರವೆಯರಾಯ ನರಹರಿ ಜಗವ ಪಾಲಿಸುಗೆ; ಸರೋಜ...ಜನಕನು-ಕಮಲದಲ್ಲಿ ಹುಟ್ಟಿದವನ (ಬ್ರಹ್ಮನ) ತಂದೆ. ಕರ್ತೃ-ನರಹರಿ, ಕರ್ಮ-ಜಗವ, ಕ್ರಿಯಾಪದ-ಪಾಲಿಸುಗೆ. ಮೊದಲಿನ ೬ ಪದಗಳು ಕರ್ತೃವಿಗೆ ವಿಶೇಷಣಗಳು. ಇದು ಮಂಗಳಶ್ಲೋಕ. ಮಂಗಳದಲ್ಲಿ ಆಶೀರ್ವಾದ, ನಮಸ್ಕಾರ, ವಸ್ತುನಿರ್ದೇಶ ಎಂಬ ಮೂರು ಬಗೆಗಳಿವೆ. ಇಲ್ಲಿ ಆಶೀರ್ವಾದ ರೂಪವಾದ ಮಂಗಳವು. ಈ ಪದ್ಯದಲ್ಲಿ ಗಜ ಪ್ರಾಸವಿರುತ್ತದೆ. ಪ್ರತಿಪಾದದ ಎರಡನೆಯ ಅಕ್ಷರವು ತನ್ನ ಹಿಂದೆ ದೀರ್ಘದಿಂದ ಕೂಡಿರಬೇಕೆಂಬುದು ಗಜಪ್ರಾಸಕ್ಕೆ ಲಕ್ಷಣ.

(೨) ಅನ್ವಯ-ತ್ರಿಯಂಬಕನು ಸಕಲ ಸಜ್ಜನರ ಒಲಿದು ಸಲಹುಗೆ; ಮೊದಲಿನ ೧೦ ಪ್ರಥಮಾವಿಭಕ್ತ್ಯಂತ ಪದಗಳು ತ್ರಿಯಂಬಕನು ಎಂಬ ಕರ್ತೃಪದಕ್ಕೆ ವಿಶೇಷಣಗಳು. ಸಲಹು+ಗೆ=ಸಲಹುಗೆ, ವಿಧ್ಯರ್ಥದ "ಗೆ" ಎಂಬ ಪ್ರತ್ಯಯವು ಬಂದಿದೆ.

# ತೊರವೆ ರಾಮಾಯಣ.

ಕಡಲ ಕಡೆಹದಲದುರಿ ತೆರೆಗಳ ।
ನೊಡೆದು ಮೂಡಿ ಸಮಸ್ತದೇವರ ।
ಗಡಣಗಳನರಸುತ್ತ ಕಂಡು ಜನಾರ್ದನನ ಚೆಲುವ ॥
ಬಿಡದೆ ನೋಡುತ ಸಂಭ್ರಮದಲಡಿ ।
ಗಡಿಗೆ ಸಡಗರದಿಂದ ಹರಿಯುರ ।
ದೆಡೆಯನಪ್ಪಿದ ಲಕ್ಷ್ಮಿ ಕೊಡು ನಮಗಿಷ್ಟಸಂಪದವ ॥ ೧ ॥

ಗಿರಿಜೆ *ತ್ರಿಜಗನ್ಮಾತೆ ದಕ್ಷನ ।
ವರಕುಮಾರಿಕೆ ಪಾಪಸಂಹರೆ ।
ಪರಮ ಮಂಗಳಮೂರ್ತಿ ಶುಭದಾಯಿಕೆಯೆ ಕಲ್ಯಾಣಿ ॥
ದುರಿತಹರೆ ಬಹುರಾಕ್ಷಸಾಂತಕೆ ।
ಹರನ ಮೋಹದ ರಾಣಿ ಮಾಹೇ ।
ಶ್ವರಿಯೆ ಕೊಡು ಕಾರುಣ್ಯದಿಂದಲಿಯಧಿಕ ಸಂಪದವ ॥ ೨ ॥

ವನರುಹಾಸನ ವಿಶ್ವಜಗತೀ ।
ಜನಕ ಸನಕಾದ್ಯಖಿಲ ಮುನಿಜನ ।
ವಿನುತ ವಿಬುಧವರೇಣ್ಯ ವಾಣೀವಧು ಮುಖಾಂಭೋಜ ॥
ದಿನಪ ಘನಚಾತುರ್ಯ ಚತುರಾ ।
ನನ ರಜೋಗುಣ ಲೋಕವಿಭು ಭೂ ।
ವಿನುತ ವಿಮಲವಿರಿಂಚಿ ಮಾಳ್ಕೆಮಗಧಿಕ ಸಂಪದವ ॥ ೩ ॥

(೧) ತಾತ್ಪರ್ಯ-ಕ್ಷೀರಸಮುದ್ರವನ್ನು ಕಡೆದ ಕಾಲದಲ್ಲಿ ತೆರೆಗಳ ಮಧ್ಯದಿಂದ ಹುಟ್ಟಬಂದು ದೇವತೆಗಳೆಲ್ಲರನ್ನು ನೋಡಿ ಯಾರನ್ನೂ ಒಪ್ಪದೆ ವಿಷ್ಣುವಿನ ರೂಪಾತಿಶಯಕ್ಕೆ ಮೆಚ್ಚಿ ಆತನ ಹೃದಯವನ್ನು ಸೇರಿದ ಲಕ್ಷ್ಮಿಯೇ ! (ನೀನು) ನಮಗೆ ಇಷ್ಟಸಿದ್ಧಿಯನ್ನುಂಟುಮಾಡು.

ಕಡೆ + ಪ = ಕಡೆಪ, ಕೃದಂತಭಾವನಾಮ; ಪಕಾರಕ್ಕೆ ಹಕಾರಾದೇಶವು ಬಂದು "ಕಡೆಹ" ಎಂದಾಯ್ತು. ಕಡೆಹದಲಿ + ಅದುರಿ = ಕಡೆಹದಲದುರಿ. ಲಕ್ಷ್ಮಿ-ಇದು ಸಂಬೋಧನಪ್ರಥಮೆ.

(೨) ಅನ್ವಯ-ಮಾಹೇಶ್ವರಿಯೆ, (ನೀನು) ಕಾರುಣ್ಯದಿಂದಲಿ ಅಧಿಕಸಂಪದವ ಕೊಡು. „ಮಾಹೇಶ್ವರಿಯೇ" ಎಂಬುದಕ್ಕೆ ಮೊದಲಿನ ೧೦ ಸಂಬೋಧನಪ್ರಥಮೈಕವಚನದ ಪದಗಳು ವಿಶೇಷಣಗಳಾಗಿವೆ. ರಾಣಿ-ರಾಜ್ಞೀ (ತ್ಸ.)

(೩) ಅನ್ವಯ-ವಿಮಲ ವಿರಿಂಚಿ ನಮಗೆ ಅಧಿಕ ಸಂಪದವ ಮಾಳ್ಕೆ. ವಿಮಲ ವಿರಿಂಚಿ ಎಂಬ ಕರ್ತೃಪದಕ್ಕೆ ಮೊದಲಿನ ೧೦ ಪದಗಳೂ ವಿಶೇಷಣಗಳು ವಾಣೀ......ದಿನಪ-ಸರಸ್ವತಿಯ ಮುಖವೆಂಬ ಕಮಲಕ್ಕೆ ಸೂರ್ಯನಂತಿರುವವನು-ಸರಸ್ವತಿಯನ್ನು ಸಂತೋಷಪಡಿಸತಕ್ಕವನು.

ಈ ಪದ್ಯದಲ್ಲಿ ಸಿಂಹಪ್ರಾಸವು. ಪ್ರತಿಪಾದದ ಎರಡನೆಯ ಅಕ್ಷರವು ತನ್ನ ಹಿಂದೆ ಹ್ರಸ್ವಾಕ್ಷರದಿಂದ ಕೂಡಿ ಬರಬೇಕೆಂಬುದೇ ಸಿಂಹಪ್ರಾಸ ಲಕ್ಷಣವು.

ಸರಸಿಜಾಂಘ್ರಿದ್ವಯದ ಕೋಮಲ ।
ತರ ಸಿತಾಂಗದ ಘನನಿತಂಬದ ।
ನಿರುಪಮಾಸ್ಯದ ನಿಮ್ನನಾಭಿಯ ನಿಬಿಡ ಕಚಭರದ ॥
ವರಕರಾಭಯ ಕರದ ಶೋಭಾ ।
ಕರದ ನಗೆಮೊಗದನುಪಮದ ಬಂ ।
ಧುರದ ಭಾರತಿ ನಿಲುಗೆ ಮನ್ಮುಖಪದ್ಮ ಸದ್ಮದಲಿ

ಕರಚತುಷ್ಟಯದುದಿತ ಮದ ಸಿಂ ।
ಧುರ ನಿಭಾನನದಮಲ ಲಂಬೋ ।
ದರದ ನವ ಸಿಂದೂರ ಚಂದನ ಗಂಧ ಬಂಧುರದ ॥
ಉರು ಲಲಾಟದಿ ನರ್ತಿಸುವ ಕಚ ।
ಭರದ ಕಮನೀಯಪ್ರಭಾ ವಿ ।
ಸ್ತರ ವಿನಾಯಕ ಮಾಳ್ಕೆಮಗೆ ನಿರ್ವಿಘ್ನದಾಯತವ ॥ ೭ ।

ಉದಧಿ ಲಂಘನ ಜನಕಜಾ ಸ ।
ನ್ಮುದ ವಿವರ್ಧನ ವೈರಿಭಟ ಗಜ ।
ವಿದಳನೋದ್ಧತಸಿಂಹ ಲಂಕಾನಗರ ನಿರ್ದಹನ ॥
ಕದನಕರ್ಕಶ ಭೀಮರಿಪು ದಶ ।
ವದನ ದರ್ಪ ವಿರಾಮ ರಾಘವ ।
ಪದಸರೋಜ ಭ್ರಮರ ಭುವನಪ್ರಾಣಜಂ ವಂದೇ ॥ ೮ ॥

(೬) ಅನ್ವಯ-ಭಾರತಿ ಮನ್ಮುಖ ಪದ್ಮ ಸದ್ಮದಲಿ ನಿಲುಗೆ; ಷಷ್ಠ್ಯಂತಗಳಾದ ಮೊದಲಿನ ೧೧ ಪದಗಳು ಕರ್ತೃವಾದ ಭಾರತಿ ಎಂಬ ಪದಕ್ಕೆ ವಿಶೇಷಣವಾಗಿವೆ.

ಮನ್ಮುಖ ಪದ್ಮ (ಉಪ. ಉ. ಕರ್ಮ. ಸ) ಮನ್ಮುಖಪದ್ಮ ಸದ್ಮ (ಅವ. ಪೂರ್ವ. ಕ. ಸ.)

(೭) ಅನ್ವಯ-ಕಮನೀಯ ಪ್ರಭಾವಿಸ್ತರ ವಿನಾಯಕ ಎಮಗೆ ನಿರ್ವಿಘ್ನದ ಆಯತವ ಮಾಳ್ಕೆ; ಮೊದಲಿನ ೫ ಷಷ್ಠ್ಯಂತ ಪದಗಳು ಕರ್ತೃವಿಶೇಷಣಗಳಾಗಿವೆ.

(೮) ಅನ್ವಯ-(ಅಹಂ-ನಾನು) ಉದಧಿ.........ಪ್ರಾಣಜಂ ವಂದೇ; ಇದು ಸಂಸ್ಕೃತ ವಾಕ್ಯ ಈ ಪದ್ಯವು ಪೂರ್ತಿಯಾಗಿ-ಎಂದರೆ 'ಪ್ರಾಣಜಾ' ಎಂಬ ವರೆಗೆ ಒಂದೇ ಪದವಾಗಿದೆ. ಸಂಸ್ಕೃತ ವಾಕ್ಯವನ್ನೇ ಈ ಪದ್ಯವಾಗಿ ಉಪಯೋಗಿಸಿದ್ದಾನೆ. ಪ್ರಾಣಜಂ ಎಂಬ ವಿಶೇಷ್ಯದ ಹಿಂದಿರುವ ೬ ವಿಶೇಷಣಗಳು ಸಮಾಸದಲ್ಲಿ ಸೇರಿಕೊಂಡಿವೆ. ವೈರಿ.........ಸಿಂಹ-ಶತ್ರುಗಳ ಯೋಧರೆಂಬ ಆನೆಗಳನ್ನು ಸೀಳುವುದರಲ್ಲಿ ಸಮರ್ಥವಾದ ಸಿಂಹದಂತಿರುವ, ಕದನ.........ವಿರಾಮ-ಯುದ್ಧದಲ್ಲಿ ಕಠಿಣನಾದ ರಾವಣನ ಶೌರ್ಯವನ್ನು ನಾಶಮಾಡಿದ, ರಾಘವ.........ಭ್ರಮರ-ಶ್ರೀರಾಮನ ಪಾದಕಮಲಕ್ಕೆ ಭ್ರಮರದಂತಿರುವ-(ಶ್ರೀರಾಮಭಕ್ತನಾದ.)

ಸುರ ನರೋರಗ ವಂದ್ಯ ನಿಗಮೋ ।
ತ್ಕರ ಕಲಾಪಾನಿಂದ್ಯ ವಿಶ್ವಂ ।
ಭರ ಪದಾಂಬುಜ ಭೃಂಗ ಭೂನುತ ಮುನಿಜನೋತ್ತುಂಗ ॥
ಶರಣಜನ ಪರಿಪಾಲನಾನತ ।
ಪರಿಧಿ ನಿರುಪಮ ತತ್ತ್ವವಿದ್ಯಾ ।
ಶರಧಿ ಸಲಹುಗೆ ನಮ್ಮ ಭಾರದ್ವಾಜ ಗುರುರಾಯ ॥ ೯ ॥
ಆದಿಕವಿ ಕವಿ ರಾಜಹಂಸಮ ।
ನಾದಿ ಕವಿಕುಲ ಕಮಲ ಮಿತ್ರಮ ।
ಹಾ ದಿವೌಕಃ ಪ್ರಚುರಭಾಷಾ ಕವಿಜನೋತ್ತಂಸ ॥
ವೇದಗರ್ಭ ವರಪ್ರಸಾದಾ ।
ಹ್ಲಾದಕವಿ ರಘುವರಕಥಾ ವಿಮ ।
ಲೋದಧೀಂದು ಮಹಾಮುನಿ ಪ್ರಾಚೇತಸಂವಂದೇ ॥ ೧೦ ॥
ಚಾರುತರ ಕರ್ಣಾಟಕದ ವಿ ।
ಸ್ತಾರ ರಾಮಾಯಣಕೆ ಕರ್ತೃ ಕು ।
ಮಾರವಾಲ್ಮೀಕಿಯೆ ಕಥಾಪತಿ ತೊರೆವೆಯಧಿನಾಥ ॥
ವೀರ ನರಹರಿಯೆನಲು ಮೆಚ್ಚದ ।
ರಾರು ಸತ್ಕವಿತಾ ವಿಲಾಸದ ।
ಸೂರಿಗಳ ಹೃದಯಾಕರುಷಣ ಕಥಾ ಕುತೂಹಲವ ॥೧೧॥

(೯) ಅನ್ವಯ-ಭಾರದ್ವಾಜ ಗುರುರಾಯ ನಮ್ಮ ಸಲಹುಗೆ. ಮೊದಲಿನ ೮ ಪ್ರಥಮಾಂತ ಪದಗಳು 'ಗುರುರಾಯ' ಎಂಬ ಕರ್ತೃವಿಗೆ ವಿಶೇಷಣಗಳು. ನಿಗಮೋತ್ಕರ ಕಲಾಪಾನಿಂದ್ಯ-ವೇದ ಸಮೂಹವೆಂಬ ಆಭರಣಗಳಿಂದ ಪ್ರಕಾಶಿಸುತ್ತಿರುವ. ವಿಶ್ವಂಭರ ಪದಾಂಬುಜಭೃಂಗ-ವಿಷ್ಣುವಿನ ಪಾದ ಕಮಲಕ್ಕೆ ತುಂಬಿಯಂತಿರುವ (ವಿಷ್ಣುಭಕ್ತನಾದ); ಆನತಪರಿಧಿ-ನಮಸ್ಕರಿಸಲ್ಪಟ್ಟ ಜನರಿಂದ ಸುತ್ತಿದವನಾದ. ಕವಿಯು ಭಾರದ್ವಾಜಗೋತ್ರದವನಾದುದರಿಂದ ಆ ಋಷಿಯನ್ನು ಸ್ತೋತ್ರಮಾಡಿರುವನು.

(೧೦) ಅನ್ವಯ- (ಅಹಂ-ನಾನು) ಪ್ರಾಚೇತಸಂ ವಂದೇ; ಪ್ರಾಚೇತಸ-ವಾಲ್ಮೀಕಿ. "ಅನಾದಿಕವಿ...ಪ್ರಾಚೇತಸಂ"ಎಂಬ ವರೆಗೆ ಒಂದೇ ಸಮಸ್ತಪದವು. ಈ ಪದದಲ್ಲಿ ೫ ಪದಗಳು ಪ್ರಾಚೇತಸಂ ಎಂಬುದಕ್ಕೆ ವಿಶೇಷಣಗಳಾಗಿ ಸೇರಿವೆ. ಕವಿ ರಾಜಹಂಸ-ಕವಿಗಳೆಂಬ ನೀರಹಕ್ಕಿಗಳಲ್ಲಿ ಹಂಸ ಪಕ್ಷಿಯಂತಿರುವ; ದಿವೌಕಃ ಪ್ರಚುರಭಾಷಾ-ದೇವತೆಗಳಲ್ಲಿ ರೂಢಿಯಾಗಿರುವಭಾಷೆ-ದೇವಭಾಷೆ (ಸಂಸ್ಕೃತ) ದಿವ-ಸ್ವರ್ಗವೇ, ಓಕಃ-ವಾಸಸ್ಥಾನವಾಗಿರುವವರು (ದೇವತೆಗಳು); ವೇದಗರ್ಭ...ಹ್ಲಾದ ಕವಿ-ಬ್ರಹ್ಮನ ವರಪ್ರಸಾದದಿಂದ ಸಂತೋಷವನ್ನು ಪಡೆದ ಕವಿ. ಹಂಸಂ + ಅನಾದಿಕವಿ = ಹಂಸಮನಾದಿಕವಿ.

(೧೧) ಭಾವಾರ್ಥ: ಈ ಕನ್ನಡದ ರಾಮಾಯಣಕ್ಕೆ ಕವಿಯು ಮಹಾಕವಿಯಾದ ಕುಮಾರವಾಲ್ಮೀಕಿ, ಕಥಾನಾಯಕನು ಶ್ರೀರಾಮನು, ಇದರ ಕವಿತ್ವವು ರಸಭರಿತವಾದುದು, ಇಂತಹ ಅತ್ಯುತ್ತಮವಾದ ಮಹಾಕಾವ್ಯವನ್ನು ಮೆಚ್ಚದೆ ಇರುವ ರಸಿಕರೊಬ್ಬರೂ ಇಲ್ಲ.

ಪರರ ಬಗೆ ಪರರುಕ್ತಿ ಪರರು ।
ತ್ಕರುಷ ಪರರುನ್ನತಿಯ ಕೃತಿಯುಪ ।
ಹರಣೆ ಪರರುಪಮಾನ ಪರಬೊಡ್ಡವದ ಪರುಠವದ ॥
ಹರಹು ಹೊಗದಗ್ಗಳಿಕೆ ಪದಸಂ ।
ಚರಣೆಯಲಿ ಲಿಪಿ ತಿರುಗಿನೋಡದ ।
ಬಿರುದು ಬೇರೆ ಕುಮಾರವಾಲ್ಮೀಕಿಯ ವಚೋಲಹರಿ ॥೧೨॥

ಶುಕಕವಿಯ ಸುಮ್ಮಾನ ಸೂರಿ ।
ಪ್ರಕರದಮಲಜ್ಞಾನ ಮುನಿಕರ ।
ಮುಕುರ ಗುಣಿಗಳ ಗೂಢನಿಧಿ ರಸಿಕರ ಸುಧಾಜಲಧಿ ॥
ಅಕುಟಿಲರ ಮನಮೆಚ್ಚು ಸಿರಿಹರಿ ।
ಬಕುತರುಮ್ಮಹದಚ್ಚು ಶಿವಸೇ ।
ವಕರ ಮುಚ್ಚು ಕುಮಾರ ವಾಲ್ಮೀಕಿ ಪ್ರಬಂಧ ಕೃತಿ ॥೧೩॥

ಪ್ರಿಯರಿಗಪ್ರಿಯರಿಗೆ ವಿವೇಕಾ ।
ಶ್ರಯರಿಗತಿ ಮೂರ್ಖರಿಗೆ ವಿಜ್ಞಾ ।
ನಿಯರಿಗತಿ ಜಾಣರಿಗೆ ಜಡರಿಗಸೂಯಭಾವರಿಗೆ ॥

(೧೨) ಅನ್ವಯ-ಪದಸಂಚರಣೆಯಲಿ, ಪರರ ಬಗೆ......ಹರಹು ಹೊಗದ ಅಗ್ಗಳಿಕೆ, ಲಿಪಿ ತಿರುಗಿನೋಡದ ಬಿರುದು, ಕುಮಾರ ವಾಲ್ಮೀಕಿಯ ವಚೋಲಹರಿ ಬೇರೆ ಭಾವಾರ್ಥ:-ಇತರ ಕವಿಗಳ ರೀತಿ, ಮಾತು, ಶ್ರೇಷ್ಠ ಕವಿತ್ವಗಳನ್ನು ಕದಿಯದಿರುವನು, ಇತರರು ಹೇಳಿರುವ ಉಪಮಾನಗಳು, ಶೈಲಿ ಇವುಗಳನ್ನು ಅಂಗೀಕರಿಸದಿರುವನು, ಎಂಬ ಬಿರುದುಗಳು ಕುಮಾರ ವಾಲ್ಮೀಕಿಗೆ ಬಂದಿವೆ ಆದಕಾರಣ ಇವನ ವಾಕ್ಪ್ರವಾಹವು ಬೇರೆ, ಇತರ ಕವಿಗಳಿಗೆ ಇಂತಹ ಮಾತಿನ ಸರಣಿಯು ಲಭಿಸಲಾರದು.

(೧೩) ಭಾವಾರ್ಥ-ಕುಮಾರವಾಲ್ಮೀಕಿಯ ಈ ಕಾವ್ಯವು ನವರಸಭರಿತವಾಗಿರುವುದರಿಂದ ಮುನಿಗಳು, ದೈವಭಕ್ತರು, ವಿದ್ವಾಂಸರು, ರಸಿಕರು, ಜ್ಞಾನಿಗಳು, ಸುಜನರು ಮೊದಲಾದ ಸರ್ವರಿಗೂ ಉಪಯೋಗಕರವಾದುದು. ಪದ್ಯದಲ್ಲಿ ಮಾನ, ಜ್ಞಾನ; ನಿಧಿ, ಜಲಧಿ; ಮೆಚ್ಚು, ದಚ್ಚು, ಮುಚ್ಚು ಇವುಗಳಲ್ಲಿ ಒಂದೇ ವ್ಯಂಜನಕ್ಕೆ ಆವೃತ್ತಿಯು ಬಂದಿರುವುದರಿಂದ, ವೃತ್ತ್ಯನುಪ್ರಾಸವೆಂಬ ಶಬ್ದಾಲಂಕಾರವಿದೆ. ೧, ೨ ಅಥವಾ ಹೆಚ್ಚು ವ್ಯಂಜನಗಳು ಅನೇಕಸಾರಿ ಪ್ರಯೋಗಿಸಲ್ಪಟ್ಟರೆ, ವೃತ್ತ್ಯನುಪ್ರಾಸ.

(೧೪)-ಅನ್ವಯ-ಕುಮಾರವಾಲ್ಮೀಕಿಯ ಪ್ರಬಂಧ ಪ್ರೌಢತರ ಕವಿತಾಚಮತ್ಕಾರವು ಪ್ರಿಯರಿಗೆ......ಅಜ್ಞರಿಗೆ ಸಂತೋಷದಾಯಕದ ಸೊಂಪು (ಆಗಿದೆ).

ನಯವಿದರಿಗಜ್ಞರಿಗೆ ಹರ್ಷೋ ।
ದಯದ ಪೆಂಪು ಕುಮಾರವಾಲ್ಮೀ ।
ಕಿಯ *ಪ್ರಬಂಧ ಪ್ರೌಢತರ ಕವಿತಾ ಚಮತ್ಕಾರ ॥೧೪॥

ಧರೆಯೊಳಗ್ಗದ ರಾಘವೇಂದ್ರನ ।
ಚರಿತ ಶತಕೋಟಿ ಪ್ರವಿಸ್ತರ ।
ವರ ಮಹಾಚಾರಿತ್ರ ರಚನಾ ಸುಪ್ರಬಂಧದಲಿ ॥
ಪರಮ ಭಕ್ತಿಯೊಳಾವನೊಂದ ।
ಕ್ಷರವ ಕೇಳ್ವನವಂಗೆ ಪಾತಕ ।
ಹರಿವುದೆಂದು ಕುಮಾರರಿಗೆ ವಾಲ್ಮೀಕಿಮುನಿ ನುಡಿದ ॥೧೫॥

ಭವಭವಾರ್ಜಿತ ದುರಿತಕೋಟಿಯ ।
ತವಿಸುವಗ್ಗದ ನಾಮ ಸರಸಿಜ ।
ಭವ ಭವಾಚ್ಯುತರಮಲ ಪದವಿಯನೀವ ಗುಣನಾಮ ॥
ಶಿವನ ಮೆಚ್ಚಿನ ನಾಮ ಗಿರಿಸಂ ।
ಭವೆಯ ನೇಮದ ನಾಮ ಸುರನರ ।
ಭುವನ ಪಾವನನಾಮ ಸೀತಾಪತಿಯ ಸಿರಿನಾಮ ॥೧೬॥

ರಾಮರಾಮೆಂದವನು *ಸ್ವರ್ಗದ ।
ಕಾಮಿನೀಜನಕೊಡೆಯನಹ ರಘು ।
ರಾಮ ರಕ್ಷಿಸು ರಕ್ಷಿಸೆಂದವ ಕಮಲಭವನಹನು ॥

ಭಾವಾರ್ಥ-ಕುಮಾರವಾಲ್ಮೀಕಿಯ ಕವಿತಾಚಮತ್ಕಾರವು ನಾನಾವಿಧ ಸ್ವಭಾವವುಳ್ಳ ಜನರಿಗೆಲ್ಲರಿಗೂ ಆಹ್ಲಾದಕರವಾಗಿದೆ. ಪಿರಿದು + ಪು = ಪೆಂಪು, ಪಿರಿದು ಎಂಬ ಶಬ್ದಕ್ಕೆ ಭಾವಾರ್ಥದಲ್ಲಿ ಪೆಂ ಎಂಬ ಆದೇಶವಾಗುವುದು.

ಈ ಪದ್ಯವು ವಾಲ್ಮೀಕಿರಾಮಾಯಣದ ಪೀಠಿಕೆಯಲ್ಲಿ ಹೇಳಿರುವ "ಚರಿತಂ ರಘುನಾಥಸ್ಯ ಶತಕೋಟಿಪ್ರವಿಸ್ತರಂ । ಏಕೈಕಮಕ್ಷರಂ ಪ್ರೋಕ್ತಂ ಮಹಾಪಾತಕನಾಶನಂ" ಎಂಬ ಶ್ಲೋಕದ ಪರಿವರ್ತನೆಯಾಗಿದೆ. ಅವಂಗೆ ಪಾತಕ ಹರಿವುದು-ಇಲ್ಲಿ ಷಷ್ಠಿಗೆ ವಿಭಕ್ತಿಪಲ್ಲಟದಿಂದ ಚತುರ್ಥೀವಿಭಕ್ತಿ ಬಂದಿದೆ.

(೧೬) ಭವಭವಾರ್ಜಿತ-ಇಲ್ಲಿ ವೀಪ್ಸೆಯಲ್ಲಿ ಭವ ಎಂಬ ಶಬ್ದಕ್ಕೆ ದ್ವಿರುಕ್ತಿ ಬಂದಿದೆ. ಸುರನರಭುವನಪಾವನನಾಮ-ದೇವತೆಗಳ ಮತ್ತು ಮನುಷ್ಯರ ಲೋಕಗಳನ್ನು ಪರಿಶುದ್ಧಮಾಡುವ ನಾಮ. ಅಚ್ಯುತರ + ಅಮಲ = ಅಚ್ಯುತರಮಲ.

(೧೭) ತಾತ್ಪರ್ಯ-ರಾಮ, ರಾಮ, ಎಂದು ಸ್ಮರಣೆಮಾಡಿದವನಿಗೆ ಸ್ವರ್ಗಲೋಕವು ದೊರೆಯುವುದು. ರಾಮ ! ರಕ್ಷಿಸು, ಎಂದು ಬೇಡಿದವನು ಬ್ರಹ್ಮಪದವಿಯನ್ನು ಪಡೆಯುವನು.

ರಾಮಚರಿತಾಮೃತವ ಕೇಳ್ದವ ।
ರಾಮನಿಗೆ ಸರಿಯಹನು ಜಗದೊಳು ।
ರಾಮನಾಮಕೆ ಸರಿಯ ಕಾಣೆನು ಎಂದು ಮುನಿ ನುಡಿದ ॥೧೭॥

ಒದವಿದಘ ಸಂಹತಿಯ ತಲೆದೋ ।
ರಿದೊಡೆ ದಹಿಸುವುದೆಡರನೌಕಿದೊ ।
ಡುದುಹಿ ಸುಡುವುದದುನ್ನತ ಪ್ರಳಯ ಪ್ರಪಂಚಗಳ ॥
ಮುದವನಿಹದಲಿ ಕೊಡುವುದಚ್ಯುತ ।
ಪದವ ಪರದೊಳಗೀವುದದು ನಿಗ ।
ಮದ ರಹಸ್ಯ ಪುರಾಣ ಕಥೆ ಮಿಗೆಯೆಂದು ಮುನಿನುಡಿದ ॥೧೮॥

---

## ಎರಡನೆಯ ಸಂಧಿ.

ಸೂಚನೆ॥ ಕುಶಲವರಿಗರುಹಿದನು ಪ್ರಾಚೇ ।
ತಸನು ದಿವಿಜ ಮುನೀಂದ್ರನುಪದೇ ।
ಶಿಸಿದ ರಾಮಾಯಣ ಸುಧಾಮಯ ಕಥನ ಕೌತುಕವ ॥

ನಿಗಮ ತತಿ ನಿಲುಕದ ಗುಣತ್ರಯ ।
ಹೊಗದ ಮಾಯಾಸತಿಯ ಸೊಬಗಿನ ।
ಸೊಗಸು ಸೋಂಕದ ಸಕಲ ಸಮ್ಯಜ್ಞಾನಿಗಳ ಮತಿಯ ॥

ರಾಮನ ಕಥೆಯನ್ನು ಕೇಳಿದವನು ಶ್ರೀರಾಮನಿಗೆ ಸಮಾನವಾದ ಮಹಿಮೆಯನ್ನು ಪಡೆವನು.

(೧೮) ಅನ್ವಯ-ನಿಗಮದ ರಹಸ್ಯ ಪುರಾಣಕಥೆ, ಅದು ಮಿಗೆ ಒದವಿದ ಅಘ……… ದಹಿಸುವುದು, ಅದು ಎಡರಂ ಔಕಿದೊಡೆ ಉದುಹಿ ಉನ್ನತ………ಪಂಚಗಳ ಸುಡುವುದು, ಇಹದಲಿ ಮುದವ ಕೊಡುವುದು, ಪರದೊಳಗೆ ಅಚ್ಯುತಪದವ ಕೊಡುವುದು, ಎಂದು ಮುನಿ ನುಡಿದ.

ಅರ್ಥ:-ನಿಗಮದ ರಹಸ್ಯ-ವೇದಗಳಲ್ಲಿರುವ ಗುಟ್ಟು.

ಸೂಚನೆಯ ಪದ್ಯದ ಪ್ರಾಸಸ್ಥಾನದಲ್ಲಿ ಶಕಾರವೂ ಸಕಾರವೂ ಬಂದಿವೆ. ಪ್ರಾಸ ವಿಷಯದಲ್ಲಿ ಶ, ಷ, ಸ ಕಾರಗಳನ್ನು ಭೇದವಿಲ್ಲದಂತೆ ಉಪಯೋಗಿಸುವ ಸಂಪ್ರದಾಯವುಂಟು. ಇಂತಹ ಪ್ರಾಸಕ್ಕೆ ಸಮಾಸಪ್ರಾಸವೆಂಬ ಸಂಜ್ಞೆ.

(೧೯) ಅನ್ವಯ-ದೇವರ ದೇವನು ರಜತ ಶಿಖರಿಯಲಿ ಇದ್ದನು. ನಿಗಮತತಿ ನಿಲುಕದ ಮೊದಲಾದ ೬ ಪದಗಳು ಕರ್ತೃವಿಶೇಷಣಗಳಾಗಿವೆ.

ಬಗೆಗೆ ಬಾರದ ಜನನಮರಣಾ ।
ದಿಗಳು ಹೊದ್ದದ ತೋರಿ ತೋರದ ।
ಜಗದ ದೇವರ ದೇವನಿದ್ದನು ರಜತಶಿಖರಿಯಲಿ ॥೧೯॥

ಪರಮ ಪರಮೇಶಾನ ಘನತ ।
ತ್ಪುರುಷ ನಿರ್ಮಲ ವಾಮದೇವ ।
ಸ್ಫುರಿತ ಸದ್ಯೋಜಾತ ವಿಮಲಾಘೋರ ನಾಮಕದ ॥
ಪರಮ ತತ್ತ್ವದ ಬಿತ್ತಿನೊಳಗಂ ।
ಕುರಗಳೈದಾದಂತೆ ತೋರುವ ।
ಪರಮ ತೇಜೋಮಯನು ಮೆರೆದನು ಪಂಚವಕ್ತ್ರದಲಿ ॥೨೦॥

ಶಿರದ ಚಂದ್ರನು ಫಾಲಲೋಚನ ।
ನುರಗ ಕುಂಡಲದಸಿತ ಕಂಠದ ।
ವರಕರಾಭಯ ಕರದ ಶೋಭಾಕರದ ತನುಕಾಂತ ॥
ನಿರುಪಮಾಗಮ ನಿಗಮಮಯ ಬಂ ।
ಧುರದ ಕರಿ ಶಾರ್ದೂಲ ಚರ್ಮಾಂ ।
ಬರನು ಹರನೆಸೆದಿರ್ದನಗಜಾಸತಿಯ ಮೇಳದಲಿ ॥೨೧॥

ಭಾವಾರ್ಥ:- ವೇದ ವಚನಗಳಿಗೂ ಗೋಚರನಾಗದೆಯೂ ಗುಣತ್ರಯಗಳು ಸೇರದವನಾಗಿಯೂ, ಮಾಯೆಯ ಮಹಿಮೆಗೆ ಸಿಕ್ಕಿಕೊಳ್ಳದವನಾಗಿಯೂ, ಸುಜ್ಞಾನಿಗಳ ಮನಸ್ಸಿಗೂ ಗೋಚರನಾಗದೆಯೂ, ಹುಟ್ಟು ಸಾವುಗಳಿಲ್ಲದವನಾಗಿಯೂ, ಪ್ರಪಂಚರೂಪವಲ್ಲಿ ಕಂಡರೂ ಕಾಣದವನಾಗಿಯೂ, ದೇವೋತ್ತಮನಾಗಿಯೂ, ಇರುವ ಈಶ್ವರನು ಕೈಲಾಸಪರ್ವತದಲ್ಲಿದ್ದನು. ಗುಣತ್ರಯ-ಸತ್ತ್ವ, ರಜಸ್ಸು, ತಮಸ್ಸು.

(೨೦) ಈಶ್ವರನಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಐದು ಮುಖಗಳುಂಟು. ಬ್ರಹ್ಮತತ್ತ್ವವೆಂಬ ಬೀಜದಿಂದ ಐದು ಮೊಳಕೆಗಳಾದುವೋ ಎನ್ನುವಹಾಗೆ ಈಶ್ವರನಿಗೆ ಐದುಮುಖಗಳು ಪ್ರಕಾಶಿಸಿದುವು.

(೨೧) ಅನ್ವಯ-ಹರನು ಅಗಜಾ ಸತಿಯ ಮೇಳದಲಿ ಎಸೆದಿರ್ದನು. ಹರನು ಎಂಬ ಕರ್ತೃವಿಗೆ ೫ ವಿಶೇಷಣಗಳು ಮೊದಲಿನಲ್ಲಿವೆ ಆತನು ಎಂಬ ವಿಶೇಷ್ಯಕ್ಕೆ ೪ ಷಷ್ಠ್ಯಂತಪದಗಳು ವಿಶೇಷಣಗಳಾಗಿವೆ.

ಅಸಿತ-ಬಿಳುಪಿಲ್ಲದ (ಕಪ್ಪಾದ), ಕಂಠ-ಕೊರಳುಳ್ಳವನು; ಅಗ-ಬೆಟ್ಟದಿಂದ ಜಾ-ಹುಟ್ಟಿದವಳು (ಪಾರ್ವತಿ)

ಸುರರು ವಸುಗಳು ಸಿದ್ಧವಿದ್ಯಾ ।
ಧರರು ಖಚರರು ಕಿನ್ನರರು ಕಿಂ ।
ಪುರುಷರುರಗರು ಮರುತ್ತುಗಳಗಣ ಯಕ್ಷರಾಕ್ಷಸರು ॥
ಗರುಡಗಂಧರ್ವರು ದಿಶಾಧೀ ।
ಶ್ವರರು ದಿವಿಜಮುನೀಂದ್ರ ಮುಖ್ಯಾ ।
ಮರಕದಂಬಕ ವಿದ್ದುದೋಲಗದಲಿ ಮಹೇಶ್ವರನ ॥ ೨೨ ॥

ಶ್ರುತಿಗಳೇ ಕೈವಾರಿಸುವ ಮಾ ।
ಗತೆಯರಖಿಲ ಮಹಾಪುರಾಣ ।
ಪ್ರತತಿಯೇ ಪಾಠಕರು ನಿಜದಣಿಮಾದಿಗಳೆ ಚರರು ॥
ಸ್ಮೃತಿಗಳೇ ತತ್ಕರದ ಕಂಚುಕಿ ।
ತತಿಗಳೆನಲೊಪ್ಪಿರ್ದುದಾ ಭಾ ।
ರತಿಯ ಹೊಗಳಿಕೆಯಲಿ ಸಭಾಸ್ಥಳವಾ ತ್ರಿಯಂಬಕನ ॥ ೨೩ ॥

ಆಸಮಯದಲಿ ಕೈಮುಗಿದು ಬಿ ।
ನ್ನೈಸಿದಳು ಭಾಳೇಕ್ಷಣಂಗಾ ।
ವಾಸುದೇವಸ್ತುತಿ ಪರಾಯಣೆ ಗೌರಿದೇವತೆಯು ॥
ಕೇಶವಾದಿಸಹಸ್ರನಾಮ ವಿ ।
ಲಾಸದೊಳ ಗಧಿನಾಮಧೇಯದ ।
ಭಾಸುರಾನುಗ್ರಹ ರಹಸ್ಯವನರುಹಬೇಕೆಂದು ॥ ೨೪ ॥

(೨೨) ದೇವತೆಗಳಲ್ಲಿ ಮೊದಲಿನ ೧೩ಬಗೆಯ ಭೇದಗಳಿವೆ. ವಸುಗಳು:-ಧರ, ಧ್ರುವ ಸೋಮ, ಅಪ, ಅಗ್ನಿ, ಪ್ರಭಂಜನ, ಪ್ರತ್ಯೂಷ, ಪ್ರಭಾಸ; ಈ ಎಂಟೂ ಅಷ್ಟವಸುಗಳು. ಮರುತ್ತುಗಳು-ಆವಹ, ವಿವಹ, ಪ್ರವಹ, ಉದ್ವಹ, ಪರಿವಹ, ಸಂವಹ, ಪರಾವಹ; ಈ ಏಳೂ ಸಪ್ತ ಮರುತ್ತುಗಳು.

(೨೩) ದ್ಭ-ಮಾಗತೆ, ತ್ಗ-ಮಾಗಧ, ಅಣಿಮಾದಿಗಳು:-ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ, ಈ ೮ ಸಿದ್ಧಿಗಳು.
ತತ್ಕರ-ಆ ಈಶ್ವರನ ಕೈಕೆಳಗಿರುವ

(೨೪) ಅನ್ವಯ-ವಾಸುದೇವಸ್ತುತಿಪರಾಯಣೆ ಗೌರಿದೇವತೆಯು ಕೇಶವಾದಿ……… ಬೇಕೆಂದು ಆ ಸಮಯದಲಿ ಭಾಳೇಕ್ಷಣಂಗೆ ಕೈಮುಗಿದು ಬಿನ್ನೈಸಿದಳು. ಈಪದ್ಯದ ಉತ್ತರಾರ್ಧವು ಪೂರ್ತಿಯಾಗಿ ಎಂದು ಎಂಬ ವಿಹಿತಕ್ರಿಯೆಗೆ ಕರ್ಮವಾಗಿದೆ. ಭಾವಾರ್ಥ-ಕೇಶವ ಮೊದಲಾದ ವಿಷ್ಣುವಿನ ಸಹಸ್ರನಾಮಗಳಲ್ಲಿ ಮುಖ್ಯ ಸಾರಭೂತವಾದ ನಾಮವಾವುದು? ಅದರ ರಹಸ್ಯವನ್ನು ತಿಳಿಸಬೇಕೆಂದು ಪಾರ್ವತಿಯು ಈಶ್ವರನನ್ನು ಕೇಳಿಕೊಂಡಳು.

ದೇವಿ ಕೇಳಾದಡೆ ಸಮಸ್ತ ।
ಸ್ಥಾವರಕೆ ಜಂಗಮಕೆ ಜಗತೀ ।
ಜೀವದಂತರ್ಯಾಮಿಯಹ ವಿಷ್ಣುವಿನ ನಾಮವನು ॥
ಆವನುಪಮಿಸಬಹುದು ಹೊಗಳಿದ ।
ಪಾವನಾಂಬಿಕೆ ಪೇಳ್ವ ಮಾತ್ರದಿ ।
ಸಾವುಜನ್ಮಾದಿಗಳು ತೊಲಗುವುವಖಿಲಜನಗಳಿಗೆ ॥ ೨೫ ॥

ಆ ಪರಾಪರವಸ್ತುವಿನ ನಿಜ ।
ರೂಪಗುಣಶೌರ್ಯಾದಿಗಳ ಮಹಿ ।
ಮಾಪಯೋಧಿಯ ನೆಲೆಯ ನರಿವವರಾರು ಲೋಕದಲಿ ॥
ಆಪುರಾತನ ಪುರುಷನಭಿಧಾ ।
ನೋಪಲಕ್ಷಣಲಕ್ಷಿತಗಳ ಕ ।
ಲಾಪ ರಚನೆಯ ಕಂಡೆನಗ್ಗದ ರಾಮನಾಮದಲಿ

ಗಿರಿಜೆ ಕೇಳು ಸಹಸ್ರನಾಮದ ।
ಸರಿಕಣಾ ರಘುರಾಮಚಂದ್ರನ ।
ಪರಮಮಂಗಳನಾಮ ನಿರುಪಮನಿಗಮ ವಿಶ್ರಾಮ ॥

(೨೫) ಹೊಗಳೆ + ಇದ, ಇದ ಹೊಗಳೆ ಆವನು ಉಪಮಿಸಬಹುದು? —ವಿಷ್ಣುವಿನ ನಾಮವನ್ನು ಯಾವನು ತಾನೇ ಹೊಗಳಿ ಸಾಮ್ಯವನ್ನು ಹೇಳಬಲ್ಲನು? ಇದಕ್ಕೆ ಸಮಾನವಾದ ಸಾದೃಶ್ಯವನ್ನು ಲೋಕದಲ್ಲಿಲ್ಲವೆಂದು ಭಾವವು. ಪಾವನಾಂಬಿಕೆ —ಪಾವನವನ್ನುಂಟುಮಾಡುವ ಅಂಬಿಕೆಯೆ.

(೨೬) ಅರ್ಥ – ಮಹಿಮಾಪಯೋಧಿಯ – ಮಾಹಾತ್ಮ್ಯಯೆಂಬ ಸಮುದ್ರದ, (ಅಗಾಧವಾದಮಹಿಮೆಯ), ಅಭಿಧಾನೋಪ...ರಚನೆಯು, ಹೆಸರುಗಳಿಗೆ ಗುರುತಾಗಿರುವ ವಿಷಯಗಳಗುಂಪಿನವಿವರವನ್ನು.

ಭಾವಾರ್ಥ – ಆ ಮಹಾವಿಷ್ಣುವಿನ ಗುಣ ರೂಪ ಶೌರ್ಯಾದಿಗಳನ್ನು ಯಾರೂ ಅರಿಯರು. ಆತನ ಹೆಸರಿಗೆ ತಕ್ಕ ಗುರುತುಗಳನ್ನು ರಾಮನಾಮದಲ್ಲಿ ನಾನುಕಂಡೆನು.

(೨೭) ಪದಚ್ಛೇದ- ನಿನಗೆ + ಉರುತರಾನುಗ್ರಹದ; ಇದು + ಈಗ + ಎಂದ;

ಅರ್ಥ:- ಉರು.........ಕ್ಷರವು ಉರುತರ — ಹೆಚ್ಚಾದ, ಅನುಗ್ರಹದ — (ವಿಷ್ಣುವಿನ) ಕೃಪೆಗೆ, ಬೀಜ — ಕಾರಣವಾದ, ಅಕ್ಷರವು — ವರ್ಣವು.

ಭಾವಾರ್ಥ:- ಶ್ರೀರಾಮ, ಎಂಬ ಒಂದೇನಾಮವು, ವಿಷ್ಣುವಿನ ಸಾಸಿರನಾಮಗಳಿಗೆ ಸಮಾನವಾಪ್ಪುದು ನಿನಗೆ ಆತನನುಗ್ರಹವಾಗುವುದಕ್ಕೆ ಇದು ಬೀಜಮಂತ್ರವು ಎಂದು ಶಿವನುಪಾರ್ವತಿಗೆಹೇಳಿದನು

ನಿರುತವಿದು ನಿಜವೆಂದು ಬಗೆ ನಿ ।
ರ್ಧರಿಸಿದೆವು ನಿಗಮಾರ್ಥದಲಿ ನಿನ ।
ಗುರುತರಾನುಗ್ರಹ ದಬೀಜಾಕ್ಷರ ವಿದೀಗೆಂದ ॥ ೨೭ ॥

ಹಾ ಮಹಾದೇವೆಂದು ಪುಳಕಿತ ।
ರೋಮಹರ್ಷಿತೆಯಾಗಿ ಕರಯುಗ ।
ತಾಮರಸವನು ಮುಗಿದು ರಾಮನ ನೆನೆದು ಕಣ್ದೆರೆದು ।
ಆಮಹಾತ್ಮನ ಗುಣಚರಿತ್ರೋ ।
ದ್ದಾಮತೆಯ ನಾಜ್ಞಾಪಿಸೆಂದು ಸು ।
ಧಾಮರೀಚಿಧರಂಗೆ ಬಿನ್ನೈಸಿದಳು ಗಿರಿಜಾತೆ ॥ ೨೮ ॥

ಆದಡವಧರಿಸೆ ಒಡನೆಯ ಯುಗ ।
ದಾದಿಯಲಿ ಕ್ರೌಂಚಾಟವಿಯಲಿ ಮ ।
ಹಾದುರಾತ್ಮವ್ಯಾಧ ನಿದ್ದನು ಚೋರ ವೃತ್ತಿಯಲಿ ।
ಆದಿವಾಂಗಣದಿಂ ಭರದ್ವಾ ।
ಜಾದಿಮುನಿಗಳು ಬರಲುಕಂಡನು ।
ಹಾದಿಯಲಿ ಬಳಿಕಾಪ್ರಯಾಗೆಯ ಬದರಿಕಾಶ್ರಮದ ॥ ೨೯ ॥

ದನಾಮಕ್ಕೆ ಸರಿ, ಇಲ್ಲಿ ಪ್ರತಿನಿಧಿ ಎಂಬರ್ಥದಲ್ಲಿ ಚತುರ್ಥೀವಿಭಕ್ತಿ ಬರಬೇಕಾಗಿತ್ತು. ವಿಭಕ್ತಿವ್ಯತ್ಯಯದಿಂದ ಚತುರ್ಥ್ಯರ್ಥದಲ್ಲಿ 'ನಾಮದ' ಎಂದು ಷಷ್ಠಿ ಬಂದಿದೆ.

(೨೮) ಮಹಾದೇವ + ಎಂದು = ಮಹಾದೇವೆಂದು, — ಸ್ವಭಾವವಾಗಿ ಅಕಾರಾಂತವಾಗಿರುವ ಅನುಕರಣಕ್ಕೆ ಸ್ವರವು ಪರವಾದರೆ ವಿಕಲ್ಪವಾಗಿ ಪ್ರಕೃತಿಭಾವವು ಬರುವುದು. ಆದುದರಿಂದ ಮಹಾದೇವ ಎಂದು, ಎಂದಾದರೆ ಪ್ರಕೃತಿಭಾವವೆಂತಲೂ, ಮಹಾದೇವೆಂದು ಎಂದಾದರೆ ಲೋಪಸಂಧಿ ಎಂತಲೂ ತಿಳಿಯಬೇಕು.

ಕರಗಳಯುಗ — ಕರಯುಗ (ಷ. ತ) ತಾಮರಸದಂತಿರುವ ಕರಯುಗ — ತಾಮರಸಕರಯುಗಳ (ಉ. ಉ. ಕರ್ಮ. ಸ) ಸುಧಾ — ಅಮೃತದ, ಮರೀಚಿ — ಕಿರಣಗಳುಳ್ಳವನು. ಸುಧಾಮರೀಚಿ (ಚಂದ್ರ)

(೨೯) ವ್ಯಾಧ — ತತ್ಸಮ, ಬೇಡ— ತದ್ಭವ. ಹಾದಿ ಎಂಬುದು ಉತ್ತರಮಾರ್ಗಪದಕ್ಕೆ ಸದೃಶ. ಭರದ್ವಾಜಾದಿಮುನಿಗಳು ಆಪ್ರಯಾಗೆಯ, ಬದರಿಕಾಶ್ರಮದ ಹಾದಿಯಲಿ ಬರಲು ಕಂಡನು ಎಂದನ್ವಯವು.

ಅವರನುಗ್ರಹದಿಂದ ತಪಸಂ ।
ಭವಿಸಿತಾ ವ್ಯಾಧಂಗೆ ವಾರಿಜ ।
ಭವನ ದೆಸೆಯಿಂದಾಯ್ತು ಪರಮರ್ಷಿತ್ವವಾತಂಗೆ ॥
ಅವತರಿಸಿದನು ಬಳಿಕ ಮುನಿಪುಂ ।
ಗವನು ವಲ್ಮೀಕದಲಿ ಹೆಸರಾ ।
ಯ್ತವನಿಯಲಿ ವಾಲ್ಮೀಕಿಮುನಿಯೆಂದಗಜೆ ಕೇಳೆಂದ ॥ ೩೦ ॥

ಆತಪೋಧನ ಬಳಿಕ ಮುನಿಸಂ ।
ಜಾತದಲಿ ಸೇರಿದನು ಸುಜನ ।
ಖ್ಯಾತನಾದನು ಸುಳಿದುವಿದಿರೊಳು ಕ್ರೌಂಚಖಗಯುಗಳ ॥
ಆತಪೋರ್ವಿಯೊಳೊರ್ವ ದುಷ್ಟಕಿ ।
ರಾತನವ ಕಂಡೆಸೆಯ ಲದರೊಳು ।
ಚೇತನಂ ಬಿಟ್ಟೊದರಿ ಕೆಡೆದುದು ವಿಹಗಪತಿ ನೆಲಕೆ ॥ ೩೧ ॥

ಅರೆಮುಗಿದಲೋಚನದ ಸಂಪುಟ ।
ವರಳಿ ಚಲಿಸುವ ಚಂಚುಪುಟ ।
ದು ರಿಪರಿಸಿ ದಂಷ್ಟ್ರಿಯಕೆದರ್ದ ರಕ್ಕೆಯ ಪರಿದತುಪ್ಪುಳಿನ ॥
ಕೊರಳಮಿಡುಕಿನ ಮುಲಿನಮುಖದಲಿ ।
ಸುರಿವನೆತ್ತರಪತಿಯ ಸುತ್ತಲು ।
ತಿರುಗಿ ಚೀರುವ ವಿಹಗಸತಿಯನು ಕಂಡನಾಮುನಿಪ ॥ ೩೨ ॥

(೩೦ ವಾರಿಜ — ಕಮಲದಲ್ಲಿ, ಭವ — ಹುಟ್ಟಿದವನು (ಬ್ರಹ್ಮ). ವಲ್ಮೀಕ — ಹುತ್ತ, ಅದರಿಂದ ಹುಟ್ಟಿದವನು = ವಾಲ್ಮೀಕಿ.

ಪೂರ್ವಕಥೆ-ಬೇಡನು ಭರದ್ವಾಜನ ದರ್ಶನದಿಂದ ತನ್ನ ಚೋರವೃತ್ತಿಯಲ್ಲಿ ಜುಗುಪ್ಸೆಯನ್ನು ಪಡೆದು, ಅವರಿಂದ ಉಪದೇಶವನ್ನು ಹೊಂದಿ ತಪಸ್ಸು ಮಾಡುತ್ತಾ ಕುಳಿತಿರಲು, ಬಹುಕಾಲವು ಕಳೆದು ಹೋಯಿತು. ಬಳಿಕ ಭರದ್ವಾಜನು ಆಮಾರ್ಗವಾಗಿ ಬರುತ್ತಾ ತಪೋನಿಷ್ಠನಾಗಿ 'ರಾಮನಾಮವನ್ನು ಜಪಿಸುತ್ತಿದ್ದ ಆ ಬೇಡನ ಧ್ವನಿಯನ್ನು ಕೇಳಿ, ಅಲ್ಲಿ ಹುಡುಕಲು ಅವನಮೇಲೆ ಹುತ್ತವು ಬೆಳೆದಿತ್ತು; ಅದನ್ನು ಬಿಡಿಸಲು ಆ ಬೇಡನು ಋಷಿಯಾಗಿ ಈಚೆಗೆಬಂದನು. ಭರದ್ವಾಜನು ಅವನನ್ನು ಅನುಗ್ರಹಿಸಿ ಹೊರಟು ಹೋದನು. ಆಗಿನಿಂದ ವಾಲ್ಮೀಕಿ ಎಂದು ಹೆಸರಾಯ್ತು. ತಪ-ಸಂಸ್ಕೃತದ ಸಕಾರಾಂತ ಶಬ್ದಗಳು ಕೊನೆಯ ಅಕ್ಷರದ ಲೋಪವನ್ನು ಹೊಂದಿ ಕನ್ನಡಕ್ಕೆ ಲಿಂಗವಾಗುವುವು ಎಂಬ ಸೂತ್ರದಿಂದ ತಪಸ್-ಎಂಬುದು ತಪ ಎಂದಾಯ್ತು.

(೩೧) ತಪೋರ್ವಿ — ತಪೋವನ, ಚೇತನಮಂ + ಬಿಟ್ಟು — ಚೇತನಂಬಿಟ್ಟು (ಕ್ರಿಯಾಸಮಾಸ). ವಿಹ — ಆಕಾಶದಲ್ಲಿ, ಗ — ಸಂಚರಿಸುವುದು — ವಿಹಗ (ಹಕ್ಕಿ). ಇಸು — ಶರವಿಮೋಚನೆ ಎಂದು ಧಾತುಪಾಠದಲ್ಲಿದೆ. ಇಸಲ್, ಎಂದು ರೂಪವಾಗುವುದು. ಇಲ್ಲಿ ಎಸೆ, ಎಂಬ ಧಾತುವಾಗಿ ಉಪಯೋಗಿಸಿದ್ದಾನೆ. ಇದು ಉತ್ತರಮಾರ್ಗದ ಕನ್ನಡದಧಾತು.

(೩೨) ಪತಿಯು ಎಂಬ ವಿಶೇಷ್ಯಕ್ಕೆ ಮೊದಲಿನ ೭ ಷಷ್ಠ್ಯಂತಪದಗಳು ವಿಶೇಷಣಗಳಾಗಿವೆ,

ನೊಂದುದಲ್ಲಾ ಕ್ರೌಂಚಪತಗ ಪು ।
ರಂದರನು ತಾನೆನುತ ಮನದಲಿ ।
ನೊಂದು ನಯನದೊಳೊಸರಿ ಸೂಸಿದುವಶ್ರುಧಾರೆಗಳು ॥
ಒಂದುನಿಮಿಷಕೆ ವಿಹಗಪತಿಬಳಿ ।
ಕೊಂದಿದುದು ಮರಣದಲಿ ಕೇಳರ ।
ವಿಂದಮುಖಿ! ಶೋಕಿಸಿದನಾ ಮುನಿನಾಥ ಮರುಕದಲಿ ॥ ೩೩ ॥

ಶೋಕದಲಿ ಹಳವಿಸಲು ಕಡು ತಾ ।
ಲೋಕಪದ್ಧತಿ ಯಾಗಿ ಯಿಳಿದನು ।
ನಾಕದಿಂ ನಾರದನು ತನ್ಮುನಿವರನ ಸರಿಸದಲಿ ॥
ಈಕುತೂಹಲ ರಚನೆಯನು ವಾ ।
ಲ್ಮೀಕಿಮುನಿಯಲಿ ಕಂಡು ಬಳಿಕಾ ।
ಶೋಕಸರಣಿಗೆ ಶಿರವನೊಲೆದನು ನಾರದನು ನಗುತ ॥ ೩೪ ॥

ಅಹುದಲೇ ವಾಲ್ಮೀಕಿ ಕವಿತೆಯ ।
ರಹಣಿ ಲೇಸ್ಸು ಶೋಕಮುಖಸ ।
ನ್ನಿಹಿತವಹ ಶ್ಲೋಕಪ್ರಬಂಧ ಸುಕಾವ್ಯರಚನೆಯಲಿ ॥
ವಹಿಸಲೀ ಪದ್ಧತಿ ಪರಿಶ್ರುತ ।
ಮಹುದು ಬಳಿಕೀ ಲೋಕದಲಿ ನಿನ ।
ಗಹುದು ಕೀರ್ತಿ ಪ್ರಥಮಕವಿಯೆಂದಜನಸಭೆಯೊಳಗೆ ॥ ೩೫ ॥

(೩೩) ಪುರಂದರ _ ಇಂದ್ರ, ಇಂದ್ರನೆಂದರೆ ಶ್ರೇಷ್ಠ, ಅಥವಾ ಒಡೆಯ ಎಂಬರ್ಥವಿರುವುದ ರಿಂದ ಇಲ್ಲಿ ಪುರಂದರಶಬ್ದವನ್ನು ಒಡೆಯ ಎಂಬರ್ಥದಲ್ಲಿ ಉಪಯೋಗಿಸಿದ್ದಾನೆ. :- ಕ್ರೌಂಚಪತಗ ಪುರಂದರನು _ ಕ್ರೌಂಚ ಪಕ್ಷಿಗಳೊಡೆಯನು. ಸೂಸಿದುವು _ ಸುರಿಸಲ್ಪಟ್ಟುವು

(೩೪) ಪ್ರಲಾಪ + ಇಸು = ಪ್ರಲಾಪಿಸು ಇದಕ್ಕೆ ತದ್ಭವವಾಗಿ ಹಳವಿಸು ಎಂದಾಗಿದೆ. ನಾಕ = ಕ _ ಸುಖ, ಅದಿಲ್ಲದುದು _ ಅಕ, (ಸುಖಾಭಾವ) ಅದಿಲ್ಲದುದು _ ನಾಕ (ಸ್ವರ್ಗ) ನಾರದ ನಾರ _ ಮನುಷ್ಯಸಂಬಂಧವಾದ(ಪಾಪಗಳನ್ನು)ದ _ ಪರಿಹರಿಸತಕ್ಕವನು, ನಾರದ

(೩೫) ಭಾವಾರ್ಥ - ಎಲೈ ವಾಲ್ಮೀಕಿಯೇ ದುಃಖದಿಂದ ನೀನು ಹೇಳಿದ ಶಾಪರೂಪವಾದ ಶ್ಲೋಕವು ಉತ್ತಮವಾದುದು. ಇದರಿಂದ ನೀನು ಆದಿಕವಿಯೆಂಬ ಹೆಸರುಲೋಕಪ್ರಸಿದ್ಧವಾಗಿ ಬ್ರಹ್ಮ ನಸಭೆಯಲ್ಲಿಯೂ ನಿನ್ನ ಕಾವ್ಯವು ಶ್ಲಾಘನೆಗೆ ಅರ್ಹವಾಗುವುದು. ಇದು ಕೆಟ್ಟುದೆಂದು ಚಿಂತಿಸಬೇಡ, ಎಂದು ನಾರದನು ನುಡಿದನು.

ಎಂದು ನಿಜವನು ತೋರಿ ಮುನಿ ರಘು ।
ನಂದನೋಪಾಖ್ಯಾನವನು ಮುದ ।
ದಿಂದ ಸಂಕ್ಷೇಪದಲನುಗ್ರಹವಿತ್ತು ಹಂಸೆಯಲಿ ॥
ಸಂದನಜಪುರಿ ಗತ್ತಲಾಮುನಿ ।
ಕಂದೆರೆದು ಮಾಡಿದನು ಕೇಳರ ।
ವಿಂದಮುಖಿ ಲೋಕದಲಿ ರಾಮಾಯಣಕಥಾಮೃತವ ॥ ೩೬ ॥

ಜಾತರಹಿತನು ಜನಿಸಿದನು ಖ ।
ದ್ಯೋತಕುಲದಲಿ ರಘುದಿಲೀಪಾ ।
ಖ್ಯಾತರೊಳಗಗ್ಗದ ದಶರಥನೃಪನ ಗರ್ಭದಲಿ ॥
ಭೂತಳದ ದುರ್ಜನವ ಮನದ ವಿ ।
ಘಾತಿಗೋಸುಗ ವಗಜೆ ಕೇಳ್ಪುರು ।
ಹೂತ ಮುಖ್ಯರ ದುರಿನಲಿ ರಾಮಾಭಿಧಾನದಲಿ ॥ ೩೭ ॥

ಬಾಲತನದಲಿ ತಾಟಕೆಯ ಗೋ ।
ಮಾಳಿಯನು ಗೋರಿದನು ಕದನದ ।
ಕೇಳಿಯಲಿ ಕಡುಗಲಿ ಸುಬಾಹು ಪ್ರಮುಖರಾಕ್ಷಸರ ।
ಸೀಳಿವನು ಸಲಹಿದನು ಮುನಿಕುಲ ।
ಪಾಲ ಕೌಶಿಕನಧ್ವರವ ಪದ ।
ಧೂಳಿಯಲಿ ದೂಟಿದನಹಲ್ಯಾಸತಿಯ ದುಷ್ಕೃತವ ॥ ೩೮ ॥

ಎರಡನೆಯ ನಮ್ಮುಗ್ರ ಚಾಪವ ।
ನೆರೆದ ನೃಪರಲಿ ಗೆಲಿದು ಸೀತೆಯ ।
ವರಿಸಿ ಭಾರ್ಗವನುರುಭುಜದದರ್ಪವನು ಪರಿಹರಿಸಿ ॥
ಗುರುನಿರೂಪವ ಧರಿಸಿ ವನವನು ।
ಚರಿಸಿ ಚಂಡಖರಾದಿಗಳ ಸಂ ।
ಹರಿಸಿ ಕಡಲನು ಕಟ್ಟಿ ಗೆಲಿದನು ಕಲಿದಶಾಸನನನ ॥ ೩೯ ॥

(೩೬) ಊಷ್ಮ ಮೊದಲಾದ ಶಬ್ದಗಳ ಕೊನೆಯಸ್ವರಕ್ಕೆ ಎಕಾರಾದೇಶವು ವಿಕಲ್ಪವಾಗಿ ಬರುವುದು. ಊಷ್ಮ — ಊಷ್ಮೆ, ಹಂಸ - ಹಂಸೆ,

(೩೭) ಖ — ಆಕಾಶದಲ್ಲಿ, ದ್ಯೋತ — ಪ್ರಕಾಶಿಸುವವನು, ಖದ್ಯೋತ (ಸೂರ್ಯ). ಪುರು-ಬಹಳವಾಗಿ, ಹೂತ — (ಯಜ್ಞದಲ್ಲಿ) ಕರೆಯಲ್ಪಡುವವನು — ಪುರುಹೂತ (ಇಂದ್ರ)

(೩೮) ಬಾಲ ಎಂಬ ಶಬ್ದದಮೇಲೆ ತನ ಎಂಬ ಪ್ರತ್ಯಯವು ಭಾವಾರ್ಥದಲ್ಲಿಬಂದು ಬಾಲತನ ಎಂದಾಯ್ತು. ದೂಟು — ಇದು ದಕ್ಷಿಣಮಾರ್ಗದಲ್ಲಿ ದೂಂಟು ಎಂದು ಆಗುವುದು.

(೩೯) ಗುರು — ತಂದೆ, ಉಪಾಧ್ಯಾಯ, ಬೃಹಸ್ಪತಿ, ದೊಡ್ಡದು, ಎಂಬ ಅರ್ಥಗಳುಂಟು.

ಭಾರವಿಳಿದುದು ಬಳಿಕ ವಸುಧಾ ।
ನಾರಿಗೊಲಿಸಿದ ಗೊಣಸು ಸಾಸಿರ ।
ನೇರಿತಾದುವು ಫಣಿಪತಿಯ ಪದ್ಮಜಪುರಂದರರ ॥
ಊರೊಳಗೆ ಗುಡಿಕಟ್ಟಿದುವು ಘನ ।
ಭೂರಿಭುವನ ಜನೌಘ ಹರುಷದ ।
ವಾರಿಧಿಯ ಲೋಲಾಡಿದುದು ದಶಶಿರನ ಮರಣದಲಿ ॥ ೪೦ ॥

ಶರಣವೊಕ್ಕ ವಿಭೀಷಣನ ಪತಿ ।
ಕರಿಸಿ ಲಂಕಾರಾಜ್ಯವನು ಸರ ।
ಸಿರುಹ ಭವನಾಯುಷ್ಯ ಪರಿಯಂತಿತ್ತ ಕರುಣದಲಿ ॥
ಸುರರನೆಲ್ಲರ ಸಲಹಿ ವಿಶ್ವಂ ।
ಭರೆಯ ಭಾರವನಿಳುಹಿ ಸುಜನೋ ।
ದ್ಧರಣ ನೈದಿದ ನಮಲತರ ಸಾಕೇತಪುರವರವ ॥ ೪೧ ॥

## ಮೂರನೆಯಸಂಧಿ.

ಸೂಚನೆ ॥ ಮನುಮಹೀಶಾನ್ವಯದ ಜನಪರ ।
ಜನನವನು ವಾಲ್ಮೀಕಿ ಸೀತಾ ।
ತನಯರಿಗೆ ವಿಸ್ತರಿಸಿದನು ಕುಶಲವ ಕುಮಾರರಿಗೆ ॥

ಈಕಥೆಯ ನಾದಿವಿಜಮುನಿ ವಾ ।
ಲ್ಮೀಕಿಗ ರುಹಿದನಾಮುನಿಪ ನಿ ॥
ಕ್ಷ್ವಾಕುಕುಲ ಕುಶಲವರಿ ಗೊರೆದನು ಬಹಳ ರಚನೆಯಲಿ ॥

(೪೦) ಭೂಭಾರವು ಕಡಿಮೆಯಾದುದರಿಂದ ಮೊದಲು ಭಾರಕ್ಕೆ ಬಗ್ಗಿಹೋಗಿದ್ದ ಆದಿಶೇಷನ ಹೆಡೆಗಳು ನೇರವಾದುವು. ಪದ್ಮ _ ಕಮಲದಲ್ಲಿ, ಜ _ ಹುಟ್ಟಿದವನು (ಬ್ರಹ್ಮ)
ಪುರ _ ಶತ್ರುಗಳಪಟ್ಟಣಗಳನ್ನು, ದರ _ ನಾಶಮಾಡಿದವನು ಪುರಂದರ (ಇಂದ್ರ)

(೪೧) ವಿಶ್ವ _ ಲೋಕವನ್ನು, ಧರೆ _ಹೊತ್ತಿರತಕ್ಕವಳು (ಭೂಮಿ). ಅಲ್ಲಿ, ಎಂಬ ಸಪ್ತಮೀ ವಿಭಕ್ತಿಪ್ರತ್ಯಯವು ಉತ್ತರಮಾರ್ಗದಲ್ಲಿ ದ್ವಿತ್ವವಿಲ್ಲದೆ ಅಲಿ ಎಂದು ಪ್ರಯೋಗಿಸಲ್ಪಟ್ಟಿದೆ. ಪುರಗಳಲ್ಲಿ ವರ _ ಪುರವರ (ಸ. ತ) ಸಾಕೇತವೆಂಬ ಪುರವರ _ ಸಾಕೇತಪುರವರ (ಸಂ. ಪೂರ್ವ. ಕ.)

(೪೨) ದಿವಿ _ ಸ್ವರ್ಗದಲ್ಲಿ ಜ _ ಹುಟ್ಟಿದವನು(ದೇವತೆ)ದಿವಿಜನಾದ ಮುನಿ _ ದಿವಿಜಮುನಿ (ನಾರದನು). ಋಷಿಗಳಲ್ಲಿ ದೇವರ್ಷಿ ಬ್ರಹ್ಮರ್ಷಿ ಎಂಬ ಭೇದಗಳಿವೆ. ನಾರದ, ಪರ್ವತ, ಸನಕ, ಸನಂ

ಆಕಥೆಯ ಕೇಳೆಂದು ಸತಿಗೆ ಪಿ ।
ನಾಕಧರ ವಿಸ್ತರಿಸಿದನು ಬಳಿ ।
ಕಾ ಕಕುಸ್ಥಜಗಾದ ಮೇಲಣ ಕಥೆಯ ಕೌತುಕವ ॥ ೪೨ ॥

ಗಿರಿಜೆ ಕೇಳ್ ಪಟ್ಟಾಭಿಷೇಕೋ ।
ತ್ಕರುಷವಾದುದು ಮೇಲೆ ವಸುಧೆಯ ।
ನರಪತಿಗಳೈತಂದು ಕಂಡರು ರಾಘವೇಶ್ವರನ ॥
ಕರವ ನವರವರೊಡಬಡಿಕೆಯಲಿ ।
ತರಿಸಿಕೊಂಡು ಸಮಸ್ತಧರಣೀ ।
ಶ್ವರರಿಗಧಿಪತಿಯಾಗಿ ಮೆರೆದನು ರಾಜತೇಜದಲಿ ॥ ೪೩ ॥

ಮಿಗಿಸಿದನು ರವಿರಾಜವಂಶಾ ।
ದಿಗಳ ರಾಯರ ರಾಜಧರ್ಮದ ।
ಸೊಗಸ ನಮಲಚರಿತ್ರದಲಿ ಪಾಲಿಸಿದನುರ್ವಿಯನು ॥
ಅಗಜೆಕೇಳ್ ಕೆಲವಾನುದಿವಸಕೆ ।
ಚಿಗುರಿ ದುರ್ವಾರ್ತಾಲತೆಯು ನಿಜ ।
ನಗರದಲಿ ಲಂಬಿಸಿತು ಕರ್ಣದೊಳಾ ಕಕುಸ್ಥಜನ ॥ ೪೪ ॥

ಏತರರಸು ಕಕುಸ್ಥಜನು ಕಾ ।
ಮಾತುರದಲ ಸುರೇಂದ್ರ ಬನದಲಿ ।
ಸೀತೆಯನು ಕೊಂಡೊಯ್ಯೆ ಬಿಡಲಾರದೆ ನಿಜಾನ್ವಯದ ॥

ದನ, ಮೊದಲಾದವರು ದೇವರ್ಷಿಗಳು ವಶಿಷ್ಠ, ವಿಶ್ವಾಮಿತ್ರ ಮೊದಲಾದವರು ಬ್ರಹ್ಮರ್ಷಿಗಳು.
ಪಿನಾಕ _ ಪಿನಾಕವೆಂಬಬಿಲ್ಲನ್ನು, ಧರ — ಧರಿಸಿದವನು _ ಪಿನಾಕಧರ (ಈಶ್ವರನು)

(೪೩) ಪಟ್ಟಾಭಿಷೇಕೋತ್ಕರುಷ _ ಪಟ್ಟಾಭಿಷೇಕೋತ್ಸವವು, ವಸು _ ಧನಕ್ಕೆ, ಧಾ-ಆಶ್ರಯವಾದುದು _ ವಸುಧೆ (ಭೂಮಿ). ಅವರವರ _ ವೀಪ್ಸಾರ್ಥದಲ್ಲಿ ದ್ವಿರುಕ್ತಿ ಬಂದಿದೆ.

(೪೪) ಭಾವಾರ್ಥ ಶ್ರೀರಾಮನು ಸೂರ್ಯಚಂದ್ರವಂಶದ ದೊರೆಗಳನ್ನು ರಾಜಧರ್ಮದಲ್ಲಿ ಮೀರಿಸಿದನು. ಹೀಗೆಯೇ ಕೆಲವುಕಾಲ ರಾಜ್ಯವಾಳುತ್ತಿರಲು ಅಯೋಧ್ಯೆಯಲ್ಲಿ ಸೀತೆಯ ವಿಷಯಕವಾದ ಅಪವಾದವು ಹುಟ್ಟಿ ಹಬ್ಬುತ್ತಾ ರಾಮನಕಿವಿಗೂ ಬಿದ್ದಿತು. ದುರ್ವಾರ್ತೆಯೇಲತೆ _ ದುರ್ವಾರ್ತಾಲತೆ
(ಅವ. ಪೂರ್ವ. ಕ) ನಿಜವಾದ ನಗರ _ ನಿಜನಗರ (ವಿ. ಪೂರ್ವ. ಕ)

(೪೫) ಅಸುರೇಂದ್ರ _ ರಾವಣನು, ಬನದಲಿ _ ವನವಾಸಮಾಡುತ್ತಿದ್ದಾಗ. ನಿಜಾನ್ವಯದ ಖ್ಯಾತಿಯನು ಕೆಡಿಸಿದನು. ಧರ್ಮಮಾರ್ಗವನ್ನು ಬಿಡುವವರಲ್ಲವೆಂದು ತಮ್ಮ ವಂಶಕ್ಕೆಬಂದಿದ್ದ ಪ್ರಸಿದಿಯನ್ನು ನಾಶಮಾಡಿದನು.

ಖ್ಯಾತಿಯನು ಕೆಡಿಸಿದನು ಎಂಬೀ ।
ಮಾತು ಭದ್ರಕನಿಂದ ರಘುಸಂ ।
ಜಾತನಿದಿರಲಿ ಬಿದ್ದುದಾತನ ಕೀರ್ತಿ ಪಂಕದಲಿ ॥ ೪೫ ॥

ಕೇಳಿ ಕಡುಸಿಗ್ಗಾಗಿ ಸಿಗುರೆ ।
ದ್ದೇಳಿಗೆಯ ಚಿಂತೆಯಲಿ ಜಗದಜ ॥
ನಾಳಿಕೆಯ ಪದ್ಧತಿ ತಿರಸ್ಕರಿಸುವುದಲೇ ಯೆನುತ ॥
ಕೇಳಿಸಿದನೀ ನುಡಿಯ ನನುಜರ ।
ಮೇಳದಲಿ ಮೈತ್ರಾವರುಣಿ ಜಾ ।
ಬಾಲಿಗಳಲಿ ಸುಮಂತ್ರಮುಖ್ಯಮಹಾಪ್ರಧಾನರಲಿ ॥ ೪೬ ॥

ಲೋಕದುರ್ಜನರುಗಳ ರಸನಾ ।
ನೀಕದಪಹಾಸಕ್ಕೆ ಠಾವಿದು ।
ಲೌಕಿಕಕ್ಕಿದು ದುಷ್ಟವೆಂದವರುಗಳ ನೊಡಬಡಿಸಿ ॥
ಲೋಕವರಿಯಲು ಬಿಟ್ಟು ಬಾ ವಾ ।
ಲ್ಮೀಕಿ ಭವನದೊಳೆಂದು ವಿಮಲೇ ।
ಕ್ಷ್ವಾಕುಕುಲಸಂಭವನು ಸೌಮಿತ್ರಿಗೆ ನಿರೂಪಿಸಿದ ॥ ೪೭ ॥

ಅವನಿಪನ ನೇಮದಲಿ ಬಯಕೆಯ ।
ನೆವದಿ ನಾಪತಿಭಕ್ತೆಯನು ಮುನಿ ।
ಭವನದಲಿ ಬಿಟ್ಟನು ಕಣಾ ಕೊಂಡೊಯ್ದು ಸೌಮಿತ್ರಿ ॥

ಭದ್ರಕ — ಇವನೊಬ್ಬ ಗೂಢಚಾರನು. ಬಿದ್ದುದು ಎಂಬುದನ್ನು ಎರಡುಸಾರಿ ಅನ್ವಯದಲ್ಲಿ ಸೇರಿಸಬೇಕು. ಈ ಮಾತು ಭದ್ರಕನಿಂದ ರಘುಸಂಜಾತನಿದಿರಲಿ ಬಿದ್ದುದು, ಆತನ ಕೀರ್ತಿ ಪಂಕದಲಿ ಬಿದ್ದುದು, ಎಂದು ಅನ್ವಯವು.

(೪೬) ಜನಾಳಿಕೆಯ ಪದ್ಧತಿ — ಜನಸಮೂಹದ ಪದ್ಧತಿ. ಮಿತ್ರಾವರುಣನಮಗ-ಮೈತ್ರಾವರುಣ (ಅಗಸ್ತ್ಯ). ಸಿಗ್ಗಾಗಿ — ಸಿಗ್ಗು + ಆಗಿ — ಬಹಳವಾಗಿ ನಾಚಿಕೆ ಪಟ್ಟು

(೪೭) ಭಾವಾರ್ಥ:-ಇದು ಪ್ರಪಂಚದಲ್ಲಿರುವ ದುಷ್ಟರ ಅಪಹಾಸ್ಯಕ್ಕೆ ಕಾರಣ, ಲೋಕವಿರೋಧ, ಎಂದು ಅಗಸ್ತ್ಯಾದಿಗಳನ್ನು ಮಂತ್ರಿ ಮೊದಲಾದವರನ್ನೂ ಒಪ್ಪಿಸಿ ಸೀತೆಯನ್ನು ವಾಲ್ಮೀಕ್ಯಾಶ್ರಮದಬಳಿಯಲ್ಲಿ ಬಿಟ್ಟುಬಾರೆಂದು ಲಕ್ಷ್ಮಣನಿಗೆ ಹೇಳಿದನು. ನಿರೂಪಿಸು ಎಂಬುದಕ್ಕೆ ತದ್ಭವದಲ್ಲಿ ನಿರವಿಸು ಎಂದಾಗುವುದು.

(೪೮) ಬಯಕೆಯ ನೆವದಿ — ಸೀತಾದೇವಿಯು "ಕೆಲವುದಿನಗಳು ಋಷ್ಯಾಶ್ರಮಗಳಿಗೆ ಹೋಗಿ ಅವರ ದರ್ಶನಮಾಡಿಕೊಂಡು ಬರಬೇಕೆಂಬ ಅಪೇಕ್ಷೆ ಇದೆ" ಎಂದು ಶ್ರೀರಾಮನೊಡನೆ ಹೇಳಿ

ಯುವತಿಯನು ತಾಪಸನು ಮುನಿಸಂ ।
ತವಿಸಿ ಬಳಿಕಾ ಪುಣ್ಯಚರಿತೆಯ ।
ಭುವನಮಾತೆಯನುಪಚರಿಸಿಕೊಂಡಿರ್ದ ನೊಲವಿನಲಿ ॥ ೪೮ ॥

ತಿಂಗಳೇಳರ ಗರ್ಭದಲಿ ರಘು ।
ಪುಂಗವನ ನಗಲಿದಳು ಮೇಲಣ ।
ತಿಂಗಳೆರಡಕೆ ಪೂರ್ಣವಾದುದು ಗರ್ಭವವನಿಜೆಯ ॥
ಮಂಗಳ ಗ್ರಹತಾರೆ ಶುಭಲ ।
ಗ್ನಂಗಳಲಿ ಮುನಿಮಂದಿರದಲಿ ಕು ।
ರಂಗಲೋಚನೆ ಪಡೆದಳಿಬ್ಬರ ವರಕುಮಾರಕರ ॥ ೪೯ ॥

ಆಕುಮಾರರಿ ಗೊಲವಿನಲಿ ವಾ ।
ಲ್ಮೀಕಿ ವಿಸ್ತರಿಸಿದನು ವೈದಿಕ ।
ಲೌಕಿಕೋತ್ಸವದಿಂದ ನಿಜನಾಮಾಭಿರಂಜಕವ ॥
ಲೋಕವಿಭು ಕುಶನೆಂದು ಮೊದಲು ವಿ ।
ವೇಕಿಪದನೆರಡನೆಯ ಶಿಶುಶೋ ।
ಭಾಕಲಿತ ಲವನೆಂದು ಕರೆದನು ಕಾಂತೆ ಕೇಳೆಂದ ॥ ೫೦ ॥

ಆದುವೆಂಟಬುದಂಗಳಿಬ್ಬರಿ ।
ಗಾದಿನಕೆ ತನ್ಮುನಿಪನುಪನಯ ।
ನಾದಿ ಕರ್ಮವರಚಿಸಿ ಶಾಸ್ತ್ರಾಭ್ಯಾಸ ಶಿಕ್ಷೆಯಲಿ ॥

ಮ್ಮದನ್ನೇ ಸೇವಮಾಡಿಕೊಂಡು, ಆ ಪತಿಭಕ್ತೆಯನ್ನು — ಪತಿಭಕ್ತಿಯುಳ್ಳ ಸೀತೆಯನ್ನು. ಉಯ್-ಕರೆದುಕೊಂಡುಹೋಗು, ಎಂಬ ಧಾತುವು ದಕ್ಷಿಣಮಾರ್ಗದಲ್ಲಿದೆ. ಉತ್ತರಮಾರ್ಗದಲ್ಲಿ 'ಒಯ್', ಎಂಬ ಧಾತುವಾಗಿ ಉಪಯೋಗಿಸಿದ್ದಾನೆ (ಒಯ್ + ದು). ತ್ಸ — ಪುಣ್ಯ, ದ್ಧ — ಹೂಸ್ಯ;

(೪೯) ರಘುಗಳಲ್ಲಿ ಪುಂಗವ-ರಘುಪುಂಗವ(ಸ. ತ) ಪುಂಗವ — ಹೋರಿ (ಶ್ರೇಷ್ಠ). ಮಂಗಳ ಗ್ರಹತಾರೆ ಶುಭಲಗ್ನಂಗಳಲಿ — ಶುಭಗ್ರಹವಿರುವ ನಕ್ಷತ್ರ, ಮತ್ತು ಲಗ್ನಗಳಲ್ಲಿ. ಕುರಂಗಲೋಚನೆ-ಜಿಂಕೆಯ (ಕಣ್ಣಿನಂತೆ), ಕಣ್ಣುಳ್ಳವಳು. ತ್ಸ — ಕುಮಾರ, ದ್ಧ — ಕುವರ

(೫೦) ವೈದಿಕ ಲೌಕಿಕೋತ್ಸವದಿಂದ — ವೇದೋಕ್ತವಾದ ಶಾಂತಿಕರ್ಮಗಳಿಂದಲೂ, ಲೌಕಿಕವಾದ ಗೃಹಾಲಂಕಾರ, ವಾದ್ಯ ಮೊದಲಾದ ವೈಭವದಿಂದಲೂ. ನಿಜನಾಮಾಭಿರಂಜಕವ — ಅಂಕಿತ ನಾಮವನ್ನು. ನಾಮಕರಣದಲ್ಲಿ ನಿಜನಾಮವಲ್ಲದೆ ಮಾಸನಾಮ, ನಕ್ಷತ್ರನಾಮಗಳೆಂದು, ಎರಡು ಹೆಸರುಗಳನ್ನು ಇಡುವುದು ಪದ್ಧತಿ, ಅವನ್ನು ವ್ಯವಹಾರದಲ್ಲಿ ಉಪಯೋಗಿಸುವುದಿಲ್ಲ.

(೫೧) ಅಬುದ — ಸಂವತ್ಸರ, ಇದಕ್ಕೆ ತತ್ಸಮ. ಅಬ್ದ. ಉಪ — ಸಮೀಪಕ್ಕೆ, ನಯನ-ಕರೆದುಕೊಳುವುದು; ಜ್ಞಾನೋಪದೇಶಕ್ಕಾಗಿ ತನ್ನ ಬಳಿಗೆ ಕರೆದುಕೊಳ್ಳುವ ಒಂದು ಕರ್ಮಕ್ಕೆ ಉಪನಯನ

ವೇದಶಾಸ್ತ್ರಂಗಳಲಿ ತನ್ನೋ ।
ಪಾದಿಯಲಿ ಮಾಡಿದನು ಸೀತಾ ।
ಹ್ಲಾದಕರ ದಿನಕರಕುಲದ ಕುಶಲವ ಕುಮಾರಕರ ॥ ೫೧ ॥

ಒಂದುದಿನ ಬಳಿಕವರು ಮುನಿಗಭಿ ।
ವಂದನಂಗೆಯ್ದುಚಿತವಚನದ ।
ಲೆಂದರೆಲೆ ಮುನಿನಾಥ ಚಿತ್ತೈಸೆಮ್ಮನನು ಪಡೆದ ॥
ತಂದೆಯಾರೆಮ್ಮನ್ವಯವದೇ ।
ನೆಂದು ಬಿನ್ನಹ ಮಾಡೆ ಮುನಿ ಸಾ ।
ನಂದದಲಿ ಹೇಳಲಿಕೆ ತೊಡಗಿದ ನೀಮಹಾ ಕಥೆಯ ॥ ೫೨ ॥

ಜನಿಸಿದನು ಮಾನಸದೊಳಬ್ಜಾ ।
ಸನನ ಪೂರ್ವದ ಸೃಷ್ಟಿಯಲಿ ನೂ ।
ತನ ವಿರಿಂಚಿಮರೀಚಿಮುನಿ ತನ್ಮನಿಪನಿಂ ಬಳಿಕ ॥
ಜನಿಸಿದನು ಕಶ್ಯಪನು ಕಶ್ಯಪ ।
ಮುನಿಯುದೆಸೆಯಿಂ ದಾದುದೀ ಮೇ ।
ದಿನಿಯ ವಿಸ್ತರವೆಂದು ಮುನಿನುಡಿದನು ಕುಮಾರರಿಗೆ ॥ ೫೩ ॥

ವೆಂದು ಹೆಸರು. ಓಪಾದಿಯಲಿ ಎಂಬುದು ಉಪಮಾನಾರ್ಥಕವಾದ ತದ್ಧಿತಪ್ರತ್ಯಯ. ಇದು ಷಷ್ಠೀ ವಿಭಕ್ತಿಯಮೇಲೆ ಸೇರುವುದು. ಉದಾ. ತನ್ನೋಪಾದಿಯಲಿ; ದಿನ _ ಹಗಲನ್ನು, ಕರ _ ಮಾಡುವವನು _ ದಿನಕರ (ಸೂರ್ಯ)

(೫೨) ಎಮ್ಮನ್ವಯವದೇನು _ ನಮ್ಮ ವಂಶವಾವುದು. ಬಿನ್ನಹ ಎಂಬುದಕ್ಕೆ 'ವಿಜ್ಞಾಪನ' ಎಂಬುದು ತತ್ಸಮ; ಅಲ್ಕೆ ಎಂಬ ಪ್ರತ್ಯಯವು ಉತ್ತರಮಾರ್ಗದಲ್ಲಿ ಅಲಿಕೆ ಎಂದಾಗುವುದು. ಈ ಮಹಾಕಥೆಯ _ ಈ ದೊಡ್ಡಕಥೆಯನ್ನು (ರಾಮಾಯಣದ ಕಥೆಯನ್ನು)

(೫೩) ಅನ್ವಯ:-ಅಬ್ಜಾಸನನ ಮಾನಸದೊಳ್ ನೂತನವಿರಂಚಿ ಮರೀಚಿಮುನಿ ಪೂರ್ವದ ಸೃಷ್ಟಿಯಲಿ ಜನಿಸಿದನು. ಬ್ರಹ್ಮನಿಗೆ ಮರೀಚಿಬ್ರಹ್ಮನು ಮಾನಸಪುತ್ರನಾಗಿ ಹುಟ್ಟಿದನು. ಕಶ್ಯಪಮುನಿಯು ದೆಸೆಯಿಂದ ಈ ಮೇದಿನಿಯವಿಸ್ತಾರವು ಆದುದು. ಕಶ್ಯಪನಿಗೆ ದಿತಿ, ಅದಿತಿ, ಕದ್ರು, ವಿನತೆ ಮೊದಲಾದ ಅನೇಕಮಂದಿ ಹೆಂಡತಿಯರಿದ್ದರು. ಅವರಲ್ಲಿ ದೇವತೆಗಳು, ರಾಕ್ಷಸರು, ಸರ್ಪ, ಪಕ್ಷಿ ಮೊದಲಾದ ಸಮಸ್ತಜಾತಿಯ ಪ್ರಾಣಿಗಳೂ ಹುಟ್ಟಿದುದರಿಂದ ಪ್ರಪಂಚವು ಬಳೆಯಿತು. ಮೇದಿನಿ – (ಮಧುಕೈಟಭರೆಂಬ) ರಾಕ್ಷಸರ ಮೇದಸ್ಸಿನಿಂದ ಆದುದು ಮೇದಿನಿ (ಭೂಮಿ)

ಆಮಹಾಮುನಿವರನ ಬಸುರಲಿ ।
ತಾಮರಸ ಸಖನುದಿಸಿದನು ಬಳಿ ।
ಕಾ ಮಹೋತ್ಪಲ ಬಾಂಧವಂಗಾಮನುಮಹೀಪಾಲ ॥
ಭೂಮಿಯಲಿ ಜನಿಸಿದನು ನಿಗಮ ।
ಸ್ತೋಮಕಾದಿ ಪ್ರಣವದವೊಲು ।
ದ್ದಾಮ ಕುಕ್ಷಿನೃಪಾಲ ಜನಿಸಿದನಾಮಹೀಪತಿಗೆ ॥ ೫೪ ॥

ಕೇಳಿದೈ ಕುಶ! ಬಳಿಕ ಕುಕ್ಷಿನೃ ।
ಪಾಲನಿಂದಿತ್ತಲು ವಿಕುಕ್ಷಿನೃ ।
ಪಾಲನರಸಾದನು ಕಣಾ ಲವ ಕೇಳು ಭೂತಳಕೆ ॥
ಮೇಲೆ ತನ್ನೃಪಗರ್ಭವರ ವರು ।
ಣಾಲಯದೊಳುದ್ಭವಿಸಿದನು ಭೂ ।
ಪಾಲ ಚೂಡಾರತ್ನನಮಳೇಕ್ಷ್ವಾಕು ನಾಮದಲಿ ॥ ೫೫ ॥

ಆಪರಂಪರೆ ಯನ್ವಯದಲಿ ದಿ ।
ಲೀಪನೃಪ ಸಂಭವಿಸಿ ಸಪ್ತ ।
ದ್ವೀಪಕಧಿಪತಿಯಾದನಲ್ಲಿಂ ಮೇಲೆ ರಘುವೆಂಬ ॥
ಭೂಪ ನಾಳಿದ ನವನಿಯನು ರಾ ।
ಜೋಪಲಾಲಿತಧರ್ಮಮಾರ್ಗದ ।
ಲಾಪರಂತಪ ನಾದನಾತ್ಮಜನಜಮಹೀಪಾಲ ॥ ೫೬ ॥

(೫೪) ತ್ಸ _ ತಾಮರಸ, ದ್ಭ — ತಾವರೆ, ಮಹೋತ್ಪಲ _ ಕಮಲಕ್ಕೆ, ಬಾಂಧವ-ಬಂಧುವಾದವನು (ಸೂರ್ಯ) ಕಶ್ಯಪಸಮಗ _ ಸೂರ್ಯ, ಸೂರ್ಯಸಮಗ _ ಮನು. ಮನುವಿನಮಗ _ ಕುಕ್ಷಿ.

(೫೫) ವರುಣ _ ವರುಣನೆಂಬ ದಿಕ್ಪಾಲಕನ, ಆಲಯ _ ಮನೆ (ಸಮುದ್ರ), ತನ್ನೃಪ ಗರ್ಭವರ ವರುಣಾಲಯದೊಳ್ _ ಆ ದೊರೆಯ ಗರ್ಭವೆಂಬ ಶ್ರೇಷ್ಠವಾದ ಸಮುದ್ರದಲ್ಲಿ, ಕುಕ್ಷಿಗೆ ವಿಕುಕ್ಷಿಯೂ ವಿಕುಕ್ಷಿಗೆ ಇಕ್ಷ್ವಾಕುವೂ ಮಕ್ಕಳಾಗಿ ಹುಟ್ಟಿದರು.

ನೃಪಾಲನು + ಅರಸು + ಆದನು.

(೫೬) ಆ ಪರಂಪರೆಯನ್ವಯದಲಿ _ ಕಶ್ಯಪನ ಮನೆತನದವರ ವಂಶಾನುಕ್ರಮದಲ್ಲಿ. ರಾಜೋಪಲಾಲಿತ ಧರ್ಮಮಾರ್ಗದಲಿ। ದೊರೆಗಳೆಲ್ಲರೂ ಹೊಗಳುವಂತಿರುವ ನ್ಯಾಯಮಾರ್ಗದಲ್ಲಿ. ಪರಂತಪ _ ಶತ್ರುಗಳನ್ನು ಸಂಕಟಪಡಿಸತಕ್ಕವನು. ದ್ವೀಪಕ್ಕೆ - ಷ್ಟ _ದೀವ. ಸಪ್ತದ್ವೀಪಗಳು-ಜಂಬು, ಪ್ಲಕ್ಷ, ಕುಶ, ಕ್ರೌಂಚ, ಶಾಕ, ಶಾಲ್ಮಲಿ, ಪುಷ್ಕರ. ಭೂ _ ಭೂಮಿಯನ್ನು, ಭುಜರು _ ಅನುಭವಿಸುವವರು (ದೊರೆಗಳು)

ಅಜನೃಪಾಲಕನ ರಸುತನಭೂ ।
ಭುಜರ ಮಿಕ್ಕುದು ಪೂರ್ವದಮುಳಾಂ ।
ಬುಜ ಸಖಾನ್ವಯ ದಮೃತಕರವಂಶಾಧಿಜಾತಕದ ॥
ಭುಜಪರಾಕ್ರಮ ಚಕ್ರಿಯನು ದಿಗು ।
ವಿಜಯ ವಿಕ್ರಮ ಶಕ್ರನನು ನೃಪ ।
ಸೃಜಿಸಿದನು ನಿಜಮಹಿಳೆಯಲಿ ದಶರಥ ಮಹೀಪತಿಯ ॥ ೫೭ ॥

ದಾಶರಥಿಸುತ ಕೇಳು ಬಳಿಕೀ ।
ಕೋಸಲದನೃಪಸುತೆಯ ಮಗಧವ ।
ಹೀಶತನುಜೆಯ ಕೇಕಯಕ್ಷ್ಮಾಪಾಲನಂದನೆಯ ॥
ಆಸುತಗೆ ಪರಿಣಯವ ಮಾಡಿ ಮ ।
ಹೀಶ ಪಟ್ಟವ ಕಟ್ಟಿ ಸಾರ್ದನು ।
ವಾಸವನಗದ್ದುಗೆಗೆ ತಾ ನಂದಾ ಮಹೀಪಾಲ ॥ ೫೮ ॥

ಬಳಿಕ ನಿಂದುದು ರಾಜ್ಯಲಕ್ಷ್ಮಿಯ ।
ವಿಳಸದಭಿನವತೇಜ ದಿಙ್ಮಂ ।
ಡಲ ಪರೀತ ಪುರಂದರನ ವೈಭವಕೆ ಮಿಗಿಲೆನಿಸಿ ॥
ಇಳೆಯೊಳಿನ್ನಾರಧಿಕರವನಿಪ ।
ತಿಲಕರಲಿ ಷೋಡಶನೃಪಾಲರ ।
ನುಳಿದವರಹೇಳದಿರು ನಿಮ್ಮ ವೊಲೆಂದನಾ ಮುನಿಪ ॥ ೫೯ ॥

(೫೭) ಅಮೃತ _ ಅಮೃತದ, ಕರ _ ಕಿರಣವುಳ್ಳವನು (ಚಂದ್ರ). ಭುಜಪರಾಕ್ರಮ ಚಕ್ರಿ _ ಬಾಹುಬಲದಲ್ಲಿ ವಿಷ್ಣುವಿನಂತಿರುವ. ದಿಗುವಿಜಯವಿಕ್ರಮಶಕ್ರನನು _ ದಿಗ್ವಿಜಯಮಾ ಡುವ ಸಾಮರ್ಥ್ಯದಲ್ಲಿ ಇಂದ್ರನಂತಿರುವ.

(೫೮) ಮಗಧಮಹೀಶತನುಜೆ _ ಮಗಧರಾಜನ ಮಗಳು(ಸುಮಿತ್ರೆ). ಆ ಮಹೀಪಾಲ ಅಂದು ವಾಸವನ ಗದ್ದುಗೆಗೆ ತೆರಳಿದನು _ ಆ ಅಜಮಹಾರಾಜನು ಇಂದ್ರನ ಸಿಂಹಾಸನಕ್ಕೆ ಹೋದನು(ಸ್ವರ್ಗಸ್ಥನಾದನು). ಕ್ಷ್ಮಾ _ ಭೂಮಿಯನ್ನು, ಪಾಲ _ ಆಳತಕ್ಕವನು (ದೊರೆ)

(೫೯) ಅನ್ವಯ-ಬಳಿಕ ದಿಙ್ಮಂಡಲಪರೀತ ರಾಜ್ಯಲಕ್ಷ್ಮಿಯು ವಿಳಸದಭಿನವತೇಜ ಪುರಂಧರನ ವೈಭವಕೆ ಮಿಗಿಲೆನಿಸಿ ನಿಂದುದು. ಷೋಡಶನೃಪಾಲನು + ಉಳಿದು + ಅವರ; ಷೋಡಶನೃಪಾಲರು:-ಮಾಂಧಾತ, ಭಗೀರಥ, ಸಗರ, ಕಕುತ್ಸ್ಥ, ರಘು, ಪೂರು, ಪುರೂರವ, ಶಿಬಿ, ರುಕ್ಮಾಂಗದ, ಜನಕ, ನಹುಷ, ಕಾರ್ತವೀರ್ಯಾರ್ಜುನ, ಯಯಾತಿ, ನಳ, ಅರ್ಜುನ, ರಾಮ.

ಶಿಶುತನದಲಿ ಸಮಸ್ತವಿದ್ಯಾ ।
ವ್ಯಸನಿಗಳು ಯೌವನದ ಲನುಭವ।
ವಿಷಯಿಗಳು ಮುಪ್ಪಿನಲಿಮುನಿಮಾರ್ಗಾನುವರ್ತಿಗಳು ॥
ಅಸುಪರಿತ್ಯಾಗದಲಿ ಯೋಗದ ।
ಬೆಸುಗೆಗಳ ಮಾಡುವರು ಕೇಳೈ ।
ಕುಶನೆ ನಿಮ್ಮನ್ವಯದ ರಾಯರು ಲವನೆಕೇಳೆಂದ ॥ ೬೦ ॥

ಕುಲದಲಧಿಕರು ಕೀರ್ತಿಯಲಿ ವೆ ।
ಗ್ಗಳರು ಕರ್ಮಫಲಂಗಳಲಿ ಸಂ ।
ಮಿಳಿತ ರಂಭೋರಾಶಿಪರಿವೃತ ಧಾತ್ರಿವಲ್ಲಭರು ॥
ಬಲವಿರೋಧಿಸಹಾಯ ಶೌರ್ಯ ।
ಕಲಿತ ದಿನಕುಲದವನಿಪಾಲಕ ।
ತಿಲಕರವರಿಂದೀ ಮಹೀಪತಿ ಹತ್ತುಮಡಿಯೆಂದ ॥ ೬೧ ॥

ಚರಿಸುವುದು ರಥವೊಂದು ವಾಣೀ ।
ವರನ ಪುರಕಿಂದ್ರಾಗ್ನಿ ಯಮಕ ।
ಕರ್ಬುರ ವರುಣವಾಯುವ್ಯ ಕೌಬೇರೇಶ ಪುರಗಳಿಗೆ ॥

(೬೦) ಅನುಭವವಿಷಯಿಗಳು-ವಿಷಯಸುಖಗಳನ್ನು ಅನುಭವಿಸುವವರು. ಅಸುಪರಿತ್ಯಾಗದಲ್ಲಿ ಯೋಗದ ಬೆಸುಗೆಗಳಮಾಡುವರು-ಯೋಗಾಭ್ಯಾಸವನ್ನು ಮಾಡಿ ಆ ಯೋಗದ ಬಲದಿಂದಲೇ ಪ್ರಾಣವನ್ನು ದೇಹವನ್ನು ಪ್ರತ್ಯೇಕಿಸುವರು ಎಂಬುದು ಭಾವ. ಈ ಪದ್ಯವು ರಘುವಂಶದ “ಶೈಶವೇಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಂ। ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಂ॥ ಎಂದ ಶ್ಲೋಕದ ಪರಿವರ್ತನೆಯಾಗಿದೆ.

(೬೧) ಕರ್ಮಫಲಂಗಳಲ್ಲಿ ಸಮ್ಮಿಳಿತರು _ ಕಷ್ಟಸುಖಗಳಲ್ಲಿ ಮನಸ್ಸನ್ನು ಒಂದೇರೀತಿಯಾಗಿ ಇಟ್ಟುಕೊಂಡು ವಿಕಾರವನ್ನು ಹೊಂದದೆ ನಿರ್ಲಿಪ್ತರಾಗಿರುವವರು (ಅತಿಯಾದ ಸುಖದುಃಖಕ್ಕೊಳಗಾಗದವರು.) ಬಲ _ ಬಲನೆಂಬ ರಾಕ್ಷಸನಿಗೆ, ವಿರೋಧಿ _ ಶತ್ರು (ಇಂದ್ರ)

ಬಲವಿರೋಧಿ ಸಹಾಯಶೌರ್ಯ ಕಲಿತರು _ಇಂದ್ರನಿಗೆ ಯುದ್ಧದಲ್ಲಿ ಸಹಾಯಮಾಡುವಷ್ಟು ಪರಾಕ್ರಮವುಳ್ಳವರು.

ಹತ್ತು _ ದಕ್ಷಿಣಮಾರ್ಗದ ಕನ್ನಡದ ಕೆಲವುಶಬ್ದಗಳ ಪಕಾರಕ್ಕೆ ಉತ್ತರಮಾರ್ಗದಲ್ಲಿ ಹಕಾರಾದೇಶವು ಬರುವುದು ಉ:-ಪತ್ತು _ ಹತ್ತು, ಪುಳು _ ಹುಳು, ಪುಲ್ _ ಹುಲ್ಲು;

(೬೨) ಕರ್ಬುರ _ ರಾಕ್ಷಸ, ಇಲ್ಲಿ ನಿರ್ಋತಿ. ಗುಣನಾಮ _ ಅನ್ವರ್ಥನಾಮ, ಅಷ್ಟ

ಉರಗರಾಜನ ನಗರಿಗದರಿಂ ।
ಧರೆಯೊಳಗೆ ಹೆಸರಾದುದಾ ಭೂ ।
ವರ ಶಿರೋರತ್ನಂಗೆ ದಶರಥ ನೆಂಬ ಗುಣನಾಮ ॥ ೬೨ ॥

ತಿರುವರೀತಗೆ ಕಪ್ಪವನು ಸಾ ।
ಗರಪರೀ ತಸಮಸ್ತ ಪೃಥ್ವೀ ।
ಶ್ವರರು ಪುರುಹೂತಾದಿ ನಾನಾ ಲೋಕಪಾಲಕರು ॥
ನರಭುಜಂಗಮರಾಯರಾ ದಶ ।
ಶಿರನತಪ್ಪಿಸಿ ಖಂಡೆಯದ ಮೆ ।
ಯ್ಸಿರಿಯದೆಂತುಟೊ ನಿಮ್ಮ ದಶರಥಸಾರ್ವಭೌಮಕನ ॥ ೬೩ ॥

ಹಗಲು ಸಂಧ್ಯಾರಾಗದೆಸಕದ ।
ಬಗೆಯ ವಿಭ್ರಾಂತಿಯಲಿ ನೀರಜ ।
ಮುಗಿವುವಾಶಾಜನಿತ ದಾವಜ್ವಾಲೆಯೆಂದಳುಕಿ ॥
ದಿಗಿಭವಂಜುವುವರಿನೃಪರು ಮೆ ।
ಯ್ದೆಗೆವರುಲ್ಕಾಪಾತ ಭೀತಿಯ ।
ಬಿಗುಹಿನಲಿ ಬಹುಳಪ್ರತಾಪವದೆಂತೊ ದಶರಥನ ॥ ೬೪ ॥

ಶರಧಿಪರಿವೃತ ವಳಯದವನೀ ।
ಶ್ವರರ ಮುಕುಟಮರೀಚಿ ಮಂಜರಿ ।
ಚರಣನಖಮುಕುರಂಗಳಲಿ ಬಿಂಬಿಸುವುದನವರತ ॥

ದಿಕ್ಪಾಲಕರ ೮ ಪಟ್ಟಣಗಳಿಗೂ, ಬ್ರಹ್ಮ, ಆದಿಶೇಷ ಇವರ ಪುರಗಳಿಗೂ ರಥದಲ್ಲಿ ಸಂಚರಿಸತಕ್ಕವನಾದುದರಿಂದ ದಶರಥನೆಂಬ ಹೆಸರುಬಂತು.

(೬೩) ಪುರು _ ಬಹುವಾಗಿ, ಹೂತ _ (ಯಜ್ಞದಲ್ಲಿ) ಕರೆಯಲ್ಪಡುವನು (ಹೋಮ ಮಾಡಲ್ಪಡುವನು) ಪುರುಹೂತ (ಇಂದ್ರ)

(೬೪) ಭಾವಾರ್ಥ-ದಶರಥನ ಪ್ರತಾಪಜ್ವಾಲೆ ಲೋಕದಲ್ಲೆಲ್ಲ ಹರಡಿಕೊಂಡಿರಲು ಅದನ್ನು ನೋಡಿ, ಕಮಲಗಳು ಹಗಲಿನಲ್ಲಿಯೂ ಸಂಜೆಗೆಂಪೆಂಬ ಭ್ರಾಂತಿಯಿಂದ ಸೂರ್ಯನು ಮುಳುಗಿದನೆಂದರಿದು ಮುಚ್ಚಿಕೊಳ್ಳುವುವು; ದಿಗ್ಗಜಗಳು ದವಾಗ್ನಿಯು ಉರಿಯೆಂದು ಹೆದರುವುವು; ಶತ್ರುರಾಜರು ತಮಗೆ ಅಪಶಕುನ ಸೂಚಕವಾದ ಉಲ್ಕಾಪಾತವೆಂದು ಹೆದರಿ ಓಡುತ್ತಿರುವರು. ದಿಕ್ + ಇಭ _ ದಿಗಿಭ-ದಿಗ್ಗಜ. ಬಿಗುಹಿನಲಿ _ ಬಿಗುರ್ + ಪು ಬಿಗುರ್ಪು, ಎಂಬ ಕೃದ್ಭಾವನಾಮಕ್ಕೆ ಉತ್ತರವಾಗುವ ಕನ್ನಡದಲ್ಲಿ ಬಿಗುಪು, ಎಂದಾಗಿ ಪಕಾರಕ್ಕೆ ಹಕಾರಾದೇಶವು ಬಂದು, ಬಿಗುಹು ಎಂಬ ಶಬ್ದವಾಗಿದೆ.

(೬೫) ಶರಧಿಪರಿವೃತವಳಯದ _ ಸಮುದ್ರದಿಂದ ಸುತ್ತಲ್ಪಟ್ಟದು (ಭೂಮಿ) ಅವನೀಶ್ವರ.........ಬಿಂಬಿಸುವುದು _ ದೊರೆಗಳ ಕಿರೀಟಗಳ ರತ್ನಗಳ ಕಾಂತಿಯುಗುಂಪು (ದಶರಥನ) ಕಾಲಿನ

ಅರಿ ವಿಕಾರದಲಾವನೊಬ್ಬನು ॥
ಶಿರವ ನೆಗಹುವನಿಲ್ಲ ವೇನ ।
ಚ್ಚರಿಯೊ ಮಹದುದಿತಪ್ರತಾಪ ಪತಂಗವಂಶಜನ ‖ ೬೫ ‖

ಜಲಧಿ ಮೊಗೆಯಲಿ ಮಹಿಯೊಳಿನಮಂ ।
ಡಲವು ಬೀಳಲಿ ಬಿಸುಡಲವನೀ ।
ತಳವ ನಾಶಾದಂತಿ ಧರೆಯೊಗ್ಗುಡಿಸಲಮರಾದ್ರಿ ॥
ಹೊಳಹುಕೆಡದಾ ನೃಪಸುಭಾಷಾ ।
ಕಲಿತ ಸತ್ಯಕೆ ನಿಮ್ಮ ಭಾಸ್ಕರ ।
ಕುಲಲಲಾಮಂ ಗಾರುಸರಿ ಸುರನರಭುಜಂಗರಲಿ ‖ ೬೬ ‖

ಧನಪತಿಯ ಸಿರಿ ವಾರಿಧರ ವಾ ।
ಹನನ ಭೋಗ ಸಮೀರಣನ ಬಲ ।
ಮಿನನ ತೇಜ ವನೂನ ವಿತರಣ ಚಾರುಚಂದ್ರಮನ ॥
ವನಧಿಪನ ಗಾಂಭೀರ್ಯ ರವಿನಂ ।
ದನನ ನಡೆವಳಿ ಧರೆಯ ಸ್ಥೈರಣೆ ।
ಯಿನಿತು ದಶರಥ ಸಾರ್ವಭೌಮಂಗಲ್ಲದಿಲ್ಲೆಂದ ‖ ೬೭ ‖

ಉಗುರುಗಳೆಂಬ ಕನ್ನಡಿಯಲ್ಲಿ ಪ್ರತಿಫಲಿಸುತ್ತಿದ್ದುವು. (ಎಲ್ಲರಾಜರೂ ಪಾದಾಕ್ರಾಂತರಾಗಿದ್ದರು.) ಅರಿವಿಕಾರದಲಿ _ ಶತ್ರುತ್ವವನ್ನು ತೋರಿಸಿಕೊಂಡು.

(೬೬) ಸಮುದ್ರ, ಭೂಮಿ, ಸೂರ್ಯ, ದಿಗ್ಗಜ, ಮೇರುಪರ್ವತ; ಇವು ಸತ್ಯಧರ್ಮಗಳಿಗೆ ಕೆಟ್ಟುಬಿದ್ದು ತಾವು ಚಲಿಸದೆ ತಮ್ಮ ತಮ್ಮ ಸ್ಥಳದಲ್ಲಿವೆ. ಅವು ತಮ್ಮ ಮರ್ಯಾದೆಯನ್ನು ಎಂದಿಗೂ ತಪ್ಪುವುದಿಲ್ಲ. ಒಂದುವೇಳೆ ಕಾಲಗತಿಯಿಂದ ಅವು ತಮ್ಮ ಮರ್ಯಾದೆಯನ್ನು ಬಿಟ್ಟು ಲೋಕವನ್ನೆಲ್ಲಾ ನಾಶಮಾಡುವುವಾದರೂ ದಶರಥನು ಸತ್ಯಭ್ರಷ್ಟನಾಗನು. ಎಂದರೆ ಅವುಗಳಗಿಂತಲೂ ಹೆಚ್ಚಾದ ಸತ್ಯಧರ್ಮಪರಾಯಣನು. ಅವನಿಗೆ ಸಮಾನ ಮೂರುಲೋಕದಲ್ಲಿಯೂ ಯಾರೂಇಲ್ಲವೆಂದು ಭಾವವು. ಆಶಾ-ದಿಕ್ಕುಗಳ, ದಂತಿ _ ಆನೆಗಳು. ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ, ಇವು ಅಷ್ಟದಿಗ್ಗಜಗಳು.

(೬೭) ಧನ _ ನಿಧಿಗೆ, ಪತಿ _ ಒಡೆಯು (ಕುಬೇರ). ವಾರಿ _ ನೀರನ್ನು, ಧರ _ ಹೊತ್ತಿರುವುದು (ಮೇಘ)ಅದು ಯಾರಿಗೆ ವಾಹನವೋ ಅವನು ವಾರಿಧರವಾಹನ (ಇಂದ್ರ). ರವಿ _ ಸೂರ್ಯನ, ನಂದನ _ ಮಗ (ಶನಿ). ಸರ್ವಭೂಮಿಗೂ ಒಡೆಯು ಸಾರ್ವಭೌಮ (ಚಕ್ರವರ್ತಿ) ಅನೂನವಿತರಣ ಚಾರುಚಂದ್ರಮನ _ ಚಂದ್ರನಕಳೆಯೇ ಅಮೃತ, ಅದನ್ನು ದೇವತೆಗಳು ಪಾನಮಾಡಿ ತೃಪ್ತರಾಗುವರು. ತನಗಿರುವ ೧೬ ಅಮೃತಕಳೆಗಳನ್ನು ದೇವತೆಗಳಿಗೆ ದಾನಮಾಡುವುದರಿಂದ ಚಂದ್ರನಿಗೆ ಸಮಾನನಾದ ಉದಾರಿಯೇ ಇಲ್ಲ. ರವಿನಂದನನ ನಡೆವಳಿ _ ಧರ್ಮದೇವತೆಯಾದ ಯಮನು ಧರ್ಮವನ್ನು ಸ್ವಲ್ಪವೂ ಬಿಡದೆ ನಿಷ್ಠೆಯಿಂದ ನಡೆಯತಕ್ಕವನು, ಅದರಿಂದಲೇ ಅವನಿಗೆ ಯಮಧರ್ಮರಾಜನೆಂದು ಹೆಸರು.

ಹುಸಿ ನುಸುಳು ಡೊಳ್ಳಾಸ ಹಿಂಸಾ ।
ವ್ಯಸನವಾರಡಿ ಬಂಧ ದಳವುಳ ।
ವಸುರಭಯ ದುರ್ಭಿಕ್ಷ ನಾನಾವರ್ಣಸಂಮಿಶ್ರ ॥
ಹಿಸುಣ ಧರ್ಮದ್ರೋಹ ರುಜೆ ಕೈ ।
ಮುಸಕವಳಿವನ್ಯಾಯ ವೆಂಬಿವ ।
ರೆಸಕ ಹೊದ್ದದಯೋಧಿಪನ ಧರಣೀತಳಾಗ್ರದಲಿ ॥ ೧೮ ॥

ಮುಳಿಯರಿತರರ ಸಿರಿಗೆ ಹರಯದೊ ।
ಳಳಿಯರಾ ಪರವಮಾಯುವಿನ ಕ ।
ಟ್ಟಳೆಯೊಳಲ್ಲದೆ ನೋಡರನ್ಯ ವಧೂಜನಾವಳಿಯ ॥
ಕಲಸರ ಘಸಂಹತಿಯ ಸುಜನರ ।
ನಿಳಿಕೆ ಗಾಣ ರಸೂಯೆಯಲಿ ಮನ ।
ವೆಳಸ ರಲ್ಲಿಯ ವಿವಿಧ ವರ್ಣದ ವಿಷಯದಖಿಲಜನ ॥ ೧೯ ॥

ನಿಂದೆ ಹೊದ್ದದು ನಡವಳಿಯೊಳಾ ।
ಕುಂದು ಹೊಗದುಬ್ಬರ ದುಪಪ್ಲವ ।
ಸಂಧಿಸದು ನೃಪಬಾಧೆ ಬಾಧಿಸ ದಧಿಕದುರ್ಭಯದ ॥
ಬಂದಿ ಹೊಗದಾಸರು ವಿತಾಳಿಸಿ ।
ನಿಂದಿರದು ನೆಲೆಗೊಳ್ಳದಾ ಜನ ।
ವೃಂದದಲಿ ಕೆಟ್ಟಾಸೆ ದಶರಥನೃಪನ ರಾಜ್ಯದಲಿ ॥ ೨೦ ॥

(೧೮) ಅಯೋಧ್ಯಾಪ ಎಂಬುದಕ್ಕೆ ಅಯೋಧಿಪ, ಎಂಬುದನ್ನು ತದ್ಭವವಾಗಿ ಮಾಡಿಕೊಂಡು ಪ್ರಯೋಗಿಸಿರುವನು.

(೧೯) ಇಳಿಕೆಗಾಣರ್ — ತಿರಸ್ಕಾರದಿಂದ ನೋಡರು (ಅಲಕ್ಷ್ಯವಾಗಿ ಕಾಣರು) ಇಳಿಕೆಯಿಂ ಕಾಣರ್ — ಇಳಿಕೆಗಾಣಂ (ಕ್ರಿ. ಸ.)

ಅನ್ವಯ: ಅಲ್ಲಿಯ ವಿವಿಧವರ್ಣದ ವಿಷಯದ ಅಖಿಳಜನ ಇತರರ ಸಿರಿಗೆಮುಳಿಯರ್......ಮನ ವೆಳಸರ್; ಮೊದಲಿನ ೬ ವಾಕ್ಯಗಳಲ್ಲಿಯೂ ಅಖಿಳಜನ ಎಂಬ ಒಂದು ಕರ್ತೃಪದವು ಅನ್ವಯಿಸಿ ೬ ವಾಕ್ಯಗಳು ಪೂರ್ತಿಯಾಗಿವೆ

ದಶರಥನರಾಜ್ಯದ ಪ್ರಜೆಗಳೆಲ್ಲರೂ ಧರ್ಮಾತ್ಮರು. ಅಧರ್ಮಪ್ರವರ್ತಕರಲ್ಲವೆಂಬುದು ಈ ಪದ್ಯದಿಂದ ತಿಳಿಯಬರುತ್ತದೆ.

(೨೦) ಅನ್ವಯ - ದಶರಥನೃಪನ ರಾಜ್ಯದಲಿ — ನಿಂದೆಹೊದ್ದದು, ನಡೆವಳಿಯೊಳ್ ಆ ಕುಂದು ಹೊಗದು, ಉಬ್ಬರದ ಉಪಪ್ಲವಸಂಧಿಸದು, ನೃಪಬಾಧೆ ಬಾಧಿಸದು, ಅಧಿಕದುರ್ಭಯದ ಬಂದಿಹೊಗದು, ಆಸರು ವಿತಾಳಿಸಿ ನಿಂದಿರದು, ಕೆಟ್ಟಾಸೆ ಆಜನವೃಂದದಲಿ ನೆಲೆಗೊಳ್ಳದು. ಭಾವಾರ್ಥ- ಪ್ರಜೆಗಳೆಲ್ಲರೂ ಧರ್ಮಪರರಾಗಿದ್ದುದರಿಂದ ಅವರಿಗೆ ಯಾವಭಾಧೆಯೂ ಇಲ್ಲದೆ ಸುಖವಾಗಿದ್ದರೆಂಬುದು ಈಪದ್ಯದಿಂದ ತೋರುತ್ತದೆ. ದಶರಥನೃಪನರಾಜ್ಯದಲಿ, ಎಂಬುದನ್ನು ೭ ವಾಕ್ಯಗಳಲ್ಲಿಯೂ ಬೇರೆಬೇರೆ ಅನ್ವಯಿಸಿಕೊಳ್ಳಬೇಕು.

ಇಳೆಯೊಳುಳ್ಳ ಸಮಸ್ತದೇಶಂ ।
ಗಳಿಗೆ ಮಂಗಳತರವಲೇ ಕೋ ।
ಸಲಮಹಾವನಿ ಕೋಸಲಾವತಿ ನೃಪಪುರಂಗಳಿಗೆ ॥
ತಿಲಕವಲ್ಲಾ ರಾಯರೊಳ ಗ ।
ಗ್ಗಳನಲಾ ದಶರಥನೃಪಾಲಕ ।
ನೆಲೆರಘುಕ್ಷಿತಿಪಾಲಸುತಕೇಳೆಂದು ಮುನಿನುಡಿದ ॥ ೭೧ ॥

ಸುರನರೋರಗ ಭುವನ ಲಕ್ಷ್ಮಿಯು ।
ಸುರುಚಿರದ ಮುಕ್ತಾಫಲದ ಬಂ ।
ಧುರದ ಕಾಂಚೀದಾಮದಂತಿರೆ ಸಕಲ ವಿಭವದಲಿ ॥
ಅರಸ ದಶರಥ ಚಕ್ರವರ್ತಿಯ ।
ಧರೆಯಪರಿವೃತ ಕೀರ್ತಿಲತೆ ವಿ ।
ಸ್ಫುರಿಸುತಿರ್ದುದು ಸಕಲ ಜನಪತಿಜನದ ಕಣ್ಮನಕೆ ॥ ೭೨ ॥

## ನಾಲ್ಕನೆಯಸಂಧಿ.

ಸೂಚನೆ ಸಂತಾನಾಭಿವೃದ್ಧಿಯ ।
ನಲಗ ಬಳಲುವ ಭೂಪತಿಗೆ ಕೈ ।
ಕೊಳಿಸಿದನು ಕಾಮ್ಯಾಧ್ವರವನು ವಸಿಷ್ಠಮುನಿರಾಯ ॥

(೭೧) ಕೋಸಲಮಹಾವನಿ _ ದೊಡ್ಡದಾದ ಕೋಸಲದೇಶವು, ಕೋಸಲಾವತಿ _ ಅಯೋಧ್ಯಾಪುರವು, ಅಲೇ, ಅಲ್ಲಾ, ಅಲಾ ಎಂಬ ಶಬ್ದಗಳಲ್ಲಿರುವ ದೀರ್ಘಕಾರ[illegible]ಂದ ಅಹುದು ಎಂಬ ಅರ್ಥವು ತೋರಬರುವುದು.

(೭೨) ಲೋಕತ್ರಯದ ಲಕ್ಷ್ಮೀದೇವಿಯು ನಡುವಿಗೆ ಹಾಕಿ[illegible]ರುವ ಮುತ್ತಿನ ಒಡ್ಯಾಣ (ಡಾಬು) ವೋ ಎನ್ನುವಹಾಗೆ ದಶರಥನಕೀರ್ತಿಯು ಮೂರುಲೋಕ[illegible] ವ್ಯಾಪಿಸಿತ್ತೆಂದು ಭಾವವು.

ಇಲ್ಲಿ ಲೋಕತ್ರಯಕ್ಕೂ ಲಕ್ಷ್ಮಿಗೂ, ಕೀರ್ತಿಗೂ ಬಳ್ಳಿಗ[illegible]ಅಭೇದವನ್ನು ಹೇಳಿರುವುದರಿಂದ ಅಭೇದರೂಪಕಾಲಂಕಾರವು. ಕೀರ್ತಿಲತೆಯು ಕಾಂಚಿದಾಮವೋ[illegible]ನ್ನುವಹಾಗಿತ್ತೆಂದು, ಕೀರ್ತಿಲತೆ ಎಂಬುವಸ್ತುವನ್ನು ಕಾಂಚೀದಾಮವೆಂಬ ವಸ್ತುವೆಂದು ಉತ್ಪ್ರೇ[illegible]ಕ್ಷಿಸಿರುವುದರಿಂದ ವಸ್ತೂತ್ಪ್ರೇಕ್ಷಾಲಂಕಾರವು.

ಕೇಳಿದ್ಯೆ ಕುಶ ನಿಮ್ಮ ಮುತ್ತಯ ।
ನಾಳುತಿರ್ದನಯೋಧ್ಯೆಯನು ಚಿರ ।
ಕಾಲ ವೊಂದಾನೊಂದು ದಿನ ದರ್ಪಣದ ನೋಟದಲಿ ॥
ತಾಳಿದನು ಚಿಂತೆಯನು ಸಂತತ ।
ಮೇಲೆಮೇಲ್ಕೈತರ್ಪ ವಾರ್ಧಿಕ ।
ಕಾಲ ವಿಕೃತಕೆ ಕಲಿತ ಪಲಿತಜರಾತಿರೇಕದಲಿ ॥ ೭೩ ॥

ವ್ಯರ್ಥವಾಯ್ತು ಕಟಕಟ ಜನ್ಮನಿ ।
ರರ್ಥವಾಯ್ತು ನೃಪಯದಸಿರಿ ಪರ ।
ಮಾರ್ಥನಾಪುತ್ರಸ್ಯ ಲೋಕೋನಾಸ್ತಿಯೆಂಬುದದು ॥
ಸ್ವಾರ್ಥವಾಯ್ತೆನಗ ಧಿಕಸುಗತಿ ।
ಸ್ವಾರ್ಥಸಿದ್ಧಿಗೆ ಸಲ್ಲದವನಿಗ ।
ನರ್ಥಭಾಜನ ನಾದೆನೇ ತಾನೆಂದು ಬಿಸುಸುಯ್ದು ॥ ೭೪ ॥

ಮಕ್ಕಳಿಲ್ಲದ ಸಕಲಸಿರಿ ಶವ ।
ಕಿಕ್ಕಿದಖಿಳಾಭರಣವಿಭ್ರಮ ।
ಪಕ್ಕಳಿಲ್ಲದ ಸೊಬಗು ಪತಿಶೂನ್ಯಾಂಗನಾವಿಭವ ॥
ಮಕ್ಕಳಿಲ್ಲದನಾರಿಯರು ನರ ।
ಕಕ್ಕೆ ಸಲುವರು ಗಡ ಮಹಾದೇ ।
ವಕ್ಕಟಾ ಕಡುಕೇಡುಕೆಟ್ಟೆನೆ ಶಿವಶಿವಾಯೆಂದ ॥ ೭೫ ॥

(೭೩) ಅನ್ವಯ-ಕಲಿತಪಲಿತಜರಾತಿರೇಕದಲಿ ಸಂತತಮೇಲೆ ಮೇಲ್ಕೈತರ್ಪ ವಾರ್ಧಿಕಕಾಲ ವಿಕೃತಕೆ ಚಿಂತೆಯನು ತಾಳಿದನು

ಉತ್ತರಮಾರ್ಗದಲ್ಲಿ ಕೆಲವು ಪದಗಳನ್ನು ದ್ವಿತ್ವಸಹಿತವಾಗಿಯೂ, ದ್ವಿತ್ವವಿಲ್ಲದೆಯೂ ಪ್ರಯೋಗಿಸುವುದುಂಟು. ಉ:-ಮುತ್ತಯ್ಯ-ಮುತ್ತಯ, ಹಣೆಗಣ್ಣ ದೃಷ್ಟಿ-ಹಣೆಗಣ್ದೃಷ್ಟಿ, ಚಿಕ್ಕದೇವ-ಚಿಕದೇವ, ಅಡ್ಡಗಟ್ಟಿ-ಅಡಗಟ್ಟಿ, ಇತ್ಯಾದಿ.

(೭೪) ಅನ್ವಯ-ಅಕಟಕಟ! ಜನ್ಮ ವ್ಯರ್ಥವಾಯ್ತು, ಅನ್ವಯದಸಿರಿ ನಿರರ್ಥವಾಯ್ತು, ನಾಪುತ್ರಸ್ಯ ಲೋಕೋನಾಸ್ತಿ ಯೆಂಬುದು ಅದು ಪರಮಾರ್ಥ, ಎನಗೆ ಸ್ವಾರ್ಥವುಆಯ್ತು. ಸ್ವಾರ್ಥಸಿದ್ಧಿಗೆ ಅಧಿಕ ಸುಗತಿ ಸಲ್ಲದು, ತಾನು ಅವನಿಗೆ ಅನರ್ಥಭಾಜನನು ಆದೆನೇ ಎಂದು ಬಿಸುಸುಯ್ದು. ನಾಪುತ್ರಸ್ಯ ಲೋಕೋನಾಸ್ತಿ-ಮಕ್ಕಳಿಲ್ಲದವನಿಗೆ ಪುಣ್ಯಲೋಕವು ದೊರೆಯಲಾರದು.

ಭಾವಾರ್ಥ-ಇಹಪರಸುಖಗಳೆರಡೂ ದೊರೆಯದೆಹೋದುದರಿಂದ ನಾನು ಹುಟ್ಟಿದುದು ವ್ಯರ್ಥವಾಯ್ತು. ಕ್ರಮಕ್ರಮವಾಗಿ ಬಹುಕಾಲದಿಂದ ಬಂದ ಸಾಮ್ರಾಜ್ಯಕ್ಕೆ ದಿಕ್ಕಿಲ್ಲದಂತಾಯ್ತು, ಸ್ವಾರ್ಥಪರನಾದವನಿಗೆ ಸದ್ಗತಿ ಬರುವುದುಂಟೇ? ನಾನು ಸ್ವಾರ್ಥಪರನಾದೆನಲ್ಲದೆ, ಸಂತಾನಾಭಿವೃದ್ಧಿಯನ್ನು ಪಡೆದು ವಂಶೋದ್ಧಾರವನ್ನು ಮಾಡಲಿಲ್ಲ. ಹೀಗೆ ಅನರ್ಥಕ್ಕೆ ಕಾರಣನಾದೆನು, ಎಂದು ವ್ಯಥೆಪಟ್ಟನು.

(೭೫) ಪತಿಶೂನ್ಯಾಂಗನಾ-ಗಂಡನಿಲ್ಲದ ಹೆಂಗಸು, ಅನಾರಿಯ-ದ್ಭ, ತ್ಸ-ಅನಾರ್ಯ; ಅನಾರಿಯರು-ನೀಚರು ಆರ್ಯರಲ್ಲದವರು (ಪೂಜ್ಯರಲ್ಲದವರು) ಅನಾರ್ಯರು.

ಏನುಗತಿ ನಿಜವಂಶವಂಧ್ಯಾ ।
ಮಾನಿನಿಗೆ ಪತಿಯಾದೆನೇ ಗತ ॥
ಸೂನು ವಿಪ್ರನೆಂದೆನ್ನ ಹೊಗಿಸರು ಸಗ್ಗವನು ಸುರರು ॥
ಏನ ಮಾಡುವೆ ನೇನು ದಿಕ್ಕೆನ ।
ಗೇನು ಹದನೆಂದಳಲಿ ಬಳಲುವ ।
ಹೀನಧೈರ್ಯನನು ಪಚರಿಸಲು ವಸಿಷ್ಠನೈತಂದ ॥ ೭೬ ॥

ಭೂಮಿಜಾಸುತ ಕೇಳ್ವಸಿಷ್ಠ ಮು ।
ಹಾಮುನೀಂದ್ರನ ಕೂಡೆ ಬಂದರು ।
ವಾಮದೇವ ಮುನೀಂದ್ರಋಷಿಜಾಬಾಲಿಗಳು ಬಳಿಕ ॥
ವ್ಯೋಮಕೇಶ ವಿರಿಂಚಿಲಕ್ಷ್ಮೀ ।
ಧಾಮ ರಿವರೆನಗೆಂಬ ಭಾವದ ।
ಲಾಮಹಿಪ ನೆರಗಿದನು ತನ್ಮುನಿವರರ ಚರಣದಲಿ ॥ ೭೭ ॥

ನಿಮಿಸುತಾಸುತ ಕೇಳು ನಿಗಮ ।
ಕ್ರಮದ ಲಾಮುನಿವಂಶ ಲಕ್ಷ್ಮೀ ।
ರಮಣರನು ಸತ್ಕರಿಸಿದನು ಸನ್ಮಾನಪೂಜೆಯಲಿ ॥
ದ್ಯುಮಣಿವಂಶ ಲತಾಭಿವೃದ್ಧಿ ।
ಭ್ರಮೆಯ ಭೂಪನ ಕಂಡು ಕರುಣದ ।
ಮಮತೆ ಮಿಗೆ ಮಧುರೋಕ್ತಿಯಲಿ ನುಡಿಸಿದರು ನೃಪವರನ ॥೭೮॥

ಮೊಗದ ದುಗುಡ ವಿದೇನು ಮನದು ।
ಬ್ಬೆಗವಿದೇನ ಸುತಾಪಭೇದ ।
ಸ್ಥಗಿತ ಜಾಡ್ಯದ ಜಂಜಡ ವಿದೇನೆನುತ ಬೆಸಗೊಳಲು ॥

(೭೬) ನಿಜವಂಶವಂಧ್ಯಾಮಾನಿನಿಗೆ - ತನ್ನ ವಂಶವೆಂಬ ಬಂಜೆಗೆ, ಪತಿಯಾದೆನು; ಎಂದರೆ ವಂಶಕ್ಕೆ ಮಕ್ಕಳಿಲ್ಲದೆ ನಷ್ಟವಾಗುವದಾಗಾಯ್ತು. ಗತಸೂನು - ಗತವಾದ ಸೂನುವುಳ್ಳವನು ಯಾರೋ ಅವನು (ಬ. ವ್ರೀ. ಷ)

(೭೭) ವಸಿಷ್ಠ, ವಾಮದೇವ, ಜಾಬಾಲಿ - ಈ ಮೂವರು ಋಷಿಗಳನ್ನು ಸಾಕ್ಷಾತ್ ತ್ರಿಮೂರ್ತಿಗಳೆಂದು ಭಾವಿಸಿದನು. ವ್ಯೋಮ - ಆಕಾಶವೇ, ಕೇಶ - ಕೂದಲಾಗಿಉಳ್ಳವನು (ಈಶ್ವರ) ಲಕ್ಷ್ಮೀ - ಲಕ್ಷ್ಮೀದೇವಿಗೆ, ಧಾಮ - ಆಶ್ರಯನಾದವನು (ವಿಷ್ಣು) ಧಾಮ— ತೇಜಸ್ಸು, ಆಶ್ರಯ, ಮನೆ.

(೭೮) ನಿಮಿಸುತಾ—ಜನಕನಮಗಳಾದ ಸೀತೆಯ, ಸುತ—ಮಗನಾದ (ಕುಶನೇ) ದ್ಯು—ಆಕಾಶಕ್ಕೆ, ಮಣಿ - ರತ್ನದಂತೆ (ಪ್ರಕಾಶಮಾನನಾದವನು) - ದ್ಯುಮಣಿ (ಸೂರ್ಯ) ದ್ಯುಮಣಿವಂಶ ಲತಾಭಿವೃದ್ಧಿಭ್ರಮೆಯ - ಸೂರ್ಯವಂಶದ ಅಭಿವೃದ್ಧಿಯ ವಿಷಯದಲ್ಲಿ ಕುತೂಹಲಪಡುತ್ತಿರುವ.

(೭೯) ಉಬ್ಬೆಗ (ದ್ಭ)—ಉದ್ವೇಗ(ತ್ಸ) ಅನುತಾಪ.........ಜಾಡ್ಯ ದ - ಒಂದುವಿಧವಾದ ಪ್ರಾಣ

ಉಗುವ ಕಂಬನಿಗಳಲಿ ಕಂಠದ ।
ಬಿಗಿದ ಸೆರೆಗಳ ಸೇದುವಕ್ಕೆಯು ।
ವಿಗತ ಪರಿಶೋಷಿತನು ಪಾವನತರರಿಗಿಂತೆಂದ । ॥ ೭೯ ॥

ಸುತವಿಹೀನರಿ ಗಿಲ್ಲಗಡ ಸುರ ।
ಪತಿಯ ಭದ್ರಾಸನ ಮಹಾಕ್ರತು ।
ಪತಿಗಳೊಳಗೆ ಸಲ್ಲರವರ್ಗಳು ಗಡ ಸು ಶಾಸ್ತ್ರದಲಿ ।
ಗತಿ ಯದಾವುದು ತನಗೆ ವಂಶೋ ।
ನ್ನತಿಯು ಹೆಚ್ಚುಗೆಗೇನು ಹದನೆಂ ।
ದತಿಶಯದ ಖೇದದಲಿ ಕಂಬನಿದುಂಬಿದನು ಭೂಪ, ॥ ೮೦ ॥

ಬಿಡದೆ ಬಂದಿನಕುಲದ ಸಿರಿಯಿಂ ।
ದೆಡೆವರಿವುದಿಕ್ಷ್ವಾಕುವಂಶದ ।
ಕಡಲು ಬರತುದು ಬೇರು ಬಿಟ್ಟುದು ರಘುಕುಲದ್ರುಮದ ।
ನಡವಳಿಯ ಗುಣವೋ ಪುರಾಕೃತ ।
ದೊಡಲದುಷ್ಕೃತ ಫಲವೊ ತನಗೆಂ।
ದಡಿಗಡಿಗೆ ಮೂಗಕ್ಕೆಯಲಿ ಮರುಗಿದನು ನರನಾಥ ॥ ೮೧ ॥

ಹೊರೆದೆನಕಟಾ ತನುವನಿದ ಸೂ
ಕರನ ಶುನಕನವೋಲು ಕಾವಾ ।
ತುರದಿ ಮಿಗೆ ಕಣ್ಣಾಣದಾದೆನು ಸುಗತಿಸಂ-
ಎರವಿಗನು ತಾನಾದೆನಿಹಪರ ।
ವೆರಡರಲಿ ಜೀವಾವಸಾನಕೆ ।
ಹರಹಿಕೊಂಬನಲಾ ಕೃತಾಂತಕನೆನುತ ಶೋಕಿಸಿದ ॥ ೮೨ ॥

ಸಂಕಟದಿಂದ ನೆಲಸಿರುವ ಆಲಸ್ಯದ. ಸೇದುವ + ಪಕ್ಕೆ - ಸೇದುವಕ್ಕೆ (ಗಮಕ)

(೮೦) ಸುತರಿಂದ ವಿಹೀನರು - ಸುತವಿಹೀನರು (ತೃ.ತ) ತನಗೆ ಸುಶಾಸ್ತ್ರದಲಿ ಗತಿಯದಾವುದು- ಅಪುತ್ರವಂತನಾದ ರಾಜನಿಗೆ ಇಂದ್ರಸಿಂಹಾಸನವು ದೊರೆಯುವುದಿಲ್ಲವೆಂದು ಶಾಸ್ತ್ರದಲ್ಲಿ ಹೇಳಿರುವುದರಿಂದ ನನಗೆ ಗತಿ ದೊರೆಯದಂತಾಗಿದೆ. ನನ್ನಂತಹರಿಗೆ ಶಾಸ್ತ್ರಗಳಲ್ಲಿ ಏನಾದರೂ ಗತಿಕಲ್ಪನೆಇದ್ದರೆ ತಿಳಿಸಿ.

(೮೧) ಬಿಡದೆ ಬಂದ ಇನಕುಲದ ಸಿರಿ, ಇಂದು ಎಡೆವರಿವುದು ಇಕ್ಷ್ವಾಕುವಂಶದ ಕಡಲು ಬರತುದು ರಘುಕುಲದ್ರುಮದ ಬೇರು ಬಿಟ್ಟುದು, ಎಂದನ್ವಯವು. ಎಡೆವರಿವುದು - ಬಿಟ್ಟುಹೋಗುವುದು, ಎಡೆಯಿಂ + ಪರಿ - ಎಡೆವರಿ, ಬರತುದು - ಒಣಗಿತು, ಮೂಗಕ್ಕೆ - ಮೂಗುನೋವು.

(೮೨) ಎರವಿಗನು - ಸಾಲಗಾರನು, ಎರವು + ಇಗ, ಎರವನ್ನು ಹೊತ್ತವನು; - ತದ್ಧಿತಾಂತ; ವಂಶವು ನಾಶವಾದುದರಿಂದ ಇಹಲೋಕದಸುಖವೂ, ಮಕ್ಕಳಿಲ್ಲದುದರಿಂದ ಸ್ವರ್ಗಸುಖವೂ, ತಪ್ಪಿತಾದುದರಿಂದ ಇಹಪರಗಳೆರಡರಲ್ಲಿಯೂ ಸಾಲಗಾರನಾಗಿ ದುಃಖಕ್ಕೆ ಗುರಿಯಾದೆನೆಂದು ದಶರಥನುಹೇಳಿಕೊಂಡನು

ಸಂತವಿಸು ರಾಜೇಂದ್ರ ಚಿತ್ತದ ।
ಚಿಂತೆಯಿದು ತಾನ್ಯೆಸಲೇ ನಿನ ।
ಗಂತಕನ ಭಯವಿಲ್ಲ ಸಾಕಾ ಮಾತದಂತಿರಲಿ ॥
ಸಂತತಿಯ ಸೌಭಾಗ್ಯಸಿರಿಯ ನಿ ।
ತಾಂತಕಿದಲಾ ನಿನಗೆ ಸಪ್ತಸು ।
ತಂತು ನಿರುಪಮ ಪುತ್ರಕಾಮೇಷ್ಟಿ ಪ್ರಸಿದ್ಧಕವು ॥ ೮೩

ಇಷ್ಟವಹುದೆಲಿ ನೃಪತಿ ಕೇಳ್ವಾ ।
ಮೇಷ್ಟಿಯಲಿ ನಿನಗಾವ ನೆನಹೇ ।
ನೆಷ್ಟು ದೊಡ್ಡಿತು ಬಿಡು ವೃಥಾಚಿಂತಾ ಮನೋವ್ಯಥೆಯ ॥
ಕಷ್ಟವೃತ್ತಿಯ ನೃಪನೆ ನೀಸುರ ।
ಶಿಷ್ಟಪದ ಸುರಪತಿಯ ಮಣಿಮಯ ।
ವಿಷ್ಟರದ ಸಿರಿ ಸೇರುವುದು ಸಂದೇಹವೇನಿದಕೆ ॥ ೮೪ ॥

ಎಂದು ಮೂವರು ಮುನಿಗಳ ಜನೃಪ ।
ನಂದನನ ನುಬ್ಬರದ ದುಗುಡದ ।
ಬಂಧನವ ಪರಿಹರಿಸಿ ಬಿಜಯಂಗೆಯ್ದರಾ ಶ್ರಮಕೆ ॥
ಕಂದ ಕೇಳ್ಳೆ ಬಳಿಕ ಪರಮಾ ।
ನಂದವನು ಪಡೆದಾ ಮಹಿಪ ನರ ।
ವಿಂದನಾಭನ ಭಜಿಸಿದನು ನಿಜಭಾವಶುದ್ಧಿಯಲಿ ॥ ೮೫ ॥

—— :O:——

(೮೩) ನಿನಗಂತಕನಭಯವಿಲ್ಲ-ನೀನು ನರಕಭಾಜನನಾಗುವುದಿಲ್ಲ, ಸಿರಿಯನಿತಾಂತಕೆ-ಐಶ್ವರ್ಯಾಭಿವೃದ್ಧಿಗೆ ನಿನಗೆ ಸಂತತಿಯು ಸೌಭಾಗ್ಯಸಿರಿಯು ನಿತಾಂತಕೆ ನಿರುಪಮ ಪುತ್ರಕಾಮೇಷ್ಟಿ ಪ್ರಸಿದ್ಧಕವು, ಸಪ್ತಸುತಂತು, ಇದು(ಕಾರಣವು) ಅಲಾ, ಎಂದು ಅನ್ವಯ ಸೌಬಾಗ್ಯ (ತ್ತ)-ಸೊಬಗು (ದ್ಧ)

(೮೪) ಸುರಶಿಷ್ಟಪದ-ದೇವತೆಗಳಿಂದ ಪೂಜಿತವಾದ ಪದವಿಯುಳ್ಳವನು. ಈ ಪದ್ಯದ ಪ್ರಾಸಸ್ಥಾನದಲ್ಲಿ (ಷ್ಟ) ಎಂಬ ವಿಜಾತೀಯ ಸಂಯುಕ್ತಾಕ್ಷರವು ಬಂದಿರುವುದರಿಂದ ಇದು ಶರಭಪ್ರಾಸವು.

(೮೫) ಅರ-ದಳಗಳನ್ನು, ವಿಂದ ಪಡೆದಿರತಕ್ಕದು-ಅರವಿಂದ (ಕಮಲ) ಅದನ್ನು ನಾಭಿಯಲ್ಲಿ ಉಳ್ಳವನು ಅಥವಾ ಅವರಂತೆ ನಾಭಿಯುಳ್ಳವನು (ವಿಷ್ಣು). ತನ್ನ ಹಿಂದೆ ಅನುಸ್ವಾರದೊಡನೆ ಕೂಡಿದ ವರ್ಣವು ಪ್ರಾಸವಾಗಿ ಬಂದಿರುವುದರಿಂದ ಈ ಪದ್ಯದಲ್ಲಿ ವೃಷಭಪ್ರಾಸವಿದೆ.

# ಐದನೆಯಸಂಧಿ.

ಸೂಚನೆ ॥ ರಾಯದಶರಥನೃಪತಿ ಗಖಿಳೋ ।
ಪಾಯಕುಶಲಸುಮಂತ್ರಕನು ಮುನಿ ।
ರಾಯ ರಾಜಿತಋಷ್ಯಶೃಂಗನ ಕಥೆಯವರ್ಣಿಸಿದ ॥

ಧರಣಿಜಾಸುತ ಕೇಳು ದಶರಥ ।
ಧರಣಿಪತಿ ರವಿಕುಲದ ಪಾರಂ ।
ಪರೆಯ ಪರಮಾಪ್ತಪ್ರಧಾನರ ಕರಿಸಿ ಮುನಿವರರ ॥
ವರ ವಚೋಽಭಿಪ್ರಾಯ ಮತವಿ ।
ಸ್ತರಣಪನು ಸಿದ್ಧಾರ್ಥಮುಖ್ಯರಿ ।
ಗೊರೆದು ನಿಮ್ಮಭಿಮತ ವದೇನೆಂ ದರಸ ಬೆಸಗೊಂಡ ॥ ೮೬ ॥

ಕ್ರತುವ ಕೈಕೋ ಜೀಯ ಸತ್ಯ ।
ವ್ರತರಲಾ ನುಡಿ ತಪ್ಪುವುದೆ ಮುನಿ ।
ಪತಿ ವಸಿಷ್ಠರ ವಾಮದೇವ ಮಹಾತಪೋಧನರ ॥
ವಿತತಕಾಮ್ಯ ಮಹಾಧ್ವರಕೆ ದೀ ।
ಕ್ಷಿತನು ನೀನಾ ಗಖಿಳ ರಾಜ ।
ಪ್ರತತಿಯನು ಬರಿಸುವೆವು ತರಿಸುವೆ ವಖಿಳ ವಸ್ತುಗಳ ॥ ೮೭ ॥

ಎಣಿಕೆ ಯಾವುದು ಜೀಯ ಧರ್ಮದ ।
ಕಣಿಯಲಾ ನೀನಿನ್ನ ಭಾಗ್ಯಕೆ ।
ತೃಣಕಣಾ ಸ್ವರ್ಗಾದಿ ಭೋಗದ ಸಕಲಸೌಭಾಗ್ಯ ॥
ಗುಣಗಣಾಲಂಕೃತನು ಸುರಮುನಿ ।
ಗಣನತಾಂಘ್ರಿದ್ವಯನ ನಾರಾ ।
ಯಣನ ಕೃಪೆ ನಿನಗುಂಟೆನುತ ಕೊಂಡಾಡಿದರು ನೃಪನ ॥ ೮೮ ॥

(೮೬) ರವಿಕುಲದ ಪಾರಂಪರೆಯ ಪರಮಾಪ್ತಪ್ರಧಾನರ ಸೂರ್ಯವಂಶದ ರಾಜರಿಗೆ ಕುಲಕ್ರಮವಾಗಿ ಆಪ್ತರಾದ ಮಂತ್ರಿಗಳನ್ನು.

(೮೭) ಅನ್ವಯ-ಜೀಯ ನೀನು ಕ್ರತುವಕ್ಕೆಕೋ (ವಸಿಷ್ಠಾದಿಗಳು) ಸತ್ಯವ್ರತರಲಾ, ಮುನಿ ವಸಿಷ್ಠರ ವಾಮದೇವ ಮಹಾ ತಪೋಧನರನುಡಿ ತಪ್ಪುವುದೆ? ನೀನು + ಆಗು + ಅಖಿಳ + ರಾಜ ಪ್ರತತಿಯನು,

(೮೮) **ಸುರಮುನಿನತಾಂಘ್ರಿದ್ವಯನ-ದೇವತೆಗಳಿಂದಲೂ** ನಮಸ್ಕರಿಸಲ್ಪಟ್ಟ ಪಾದಗಳುಳ್ಳ, ಅಂಘ್ರಿಗಳ ದ್ವಯವುಳ್ಳವನಾವನೋ ಅವನು ಅಂಘ್ರಿದ್ವಯನು (ಬ. ವ್ರೀ.) ನಾರ-ಜಲರಾಶಿಯೇ (ಕ್ಷೀರಸಮುದ್ರ), ಅಯನ-ವಾಸಸ್ಥಾನವಾಗಿಉಳ್ಳವನು-ನಾರಾಯಣ (ವಿಷ್ಣು)

ಬಳಿಕವರ ಮತದಿಂದ ಮನುಕುಲ ।
ತಿಲಕ ನತಿಸಂತೋಷದಲಿ ನಿ ।
ಶ್ಚಲತೆಯಲಿ ಕೈಕೊಂಡನಾ ಕಾಮಿತಮಹಾಧ್ವರವ ॥
ಕಳುಹಿದ ನು ನಯದಲಿ ಸುಮಂತ್ರನ ।
ನುಳಿಯೆ ಮಿಕ್ಕ ಮಹಾಪ್ರಧಾನಾ ।
ವಳಿಯ ನಾಪ್ತಾಲೋಚನೆಯ ಲಾಮಂತ್ರಿಗಿಂತೆಂದ ॥ ೪೯ ॥

ಎಲೆ ಸುಮಂತ್ರ ಸುಮಂತ್ರಮುಖದಲಿ ।
ಫಲಿಸುವುದೆ ಸುತಲಾಭ ವನ್ವಯ ।
ಲಲಿತಲತೆ ಕುಡಿಗೊಂಬುದೇ ಕಾಮೇಷ್ಟಿ ಯಜ್ಞದಲಿ ॥
ತೊಲಗಿ ದೆಮ್ಮನ್ವಯದ ರಾಜಾ ।
ವಳಿ ಯಲಹುದೇ ಪುತ್ರಸಂತತಿ ।
ಸುಲಭವಹುದೇ ನೆನಗೆನುತ ಬೆಸಗೊಂಡ ನಾಭೂಪ ॥ ೫೦ ॥

ಅರಸಕೇಳು ಸನತ್ಕುಮಾರನು ।
ಸರಸಿರುಹಸಂಭವನ ಸಭೆಯಲಿ ।
ಸುರಮುನೀಂದ್ರರ ಮಧ್ಯದಲಿ ನಿಮ್ಮನ್ವಯಾಗತದ ॥
ಪರಿವಿಡಿಯ ರಘುವಂಶವನು ವಿ ।
ಸ್ತರಿಸಿದನು ವಿಮಳಾಗ್ನಿವರ್ಣನ ।
ನಿರುಪಮ ಸಾಮ್ರಾಜ್ಯ ಪರಿಯಂತಾದಿ ಕಾಲದಲಿ ॥ ೫೧ ॥

ಮೇಲೆ ತಾಂಡವಪಿತನ ಶಾಪವಿ ।
ಶಾಲರಚನದಿ ಪುತ್ರಲಾಭಫ ।
ಲಾಳಿದೊರಕದೆ ಮಾಣದಿದು ತಾ ಸುಪ್ರಸಿದ್ಧವಲೆ ॥

(೪೯) ನಿಶ್ಚಲತೆಯಲಿ ಕೈಕೊಂಡನು-ದೃಢವಾಗಿ ಅಂಗೀಕರಿಸಿದನು, ಸುಮಂತ್ರನನು ಉಳಿಯೆ-ಸುಮಂತ್ರನನ್ನು ಬಿಟ್ಟು, ಮಿಕ್ಕ-ಉಳಿದ. ಆಪ್ತವಾದ ಆಲೋಚನೆ ಆಪ್ತಾಲೋಚನೆ. (ವಿ. ಪೂರ್ವ. ಕ)

(೫೦) ಸುಮಂತ್ರಮುಖದಲ್ಲಿ-(ಯಜ್ಞದಲ್ಲಿ ಉಪಯೋಗಿಸುವ) ಒಳ್ಳೆಯ ವೇದಮಂತ್ರಗಳ ಮೂಲಕವಾಗಿ; ಇಲ್ಲಿ ಸುಮಂತ್ರಮುಖದಲಿ, ಎಂದದ್ದರ ಇನ್ನೂ ಚೆನ್ನಾಗಿರುವುದು. (ಮಂತ್ರಪೂರ್ವಕವಾಗಿ ಮಾಡುವ ಈ ಯಜ್ಞದಿಂದ, ಎಂವರ್ಥವಾಗುತ್ತದೆ. ) ಎನಗೆ ಸುಲಭವಹುದೇನು-ನನಗೆ ಸುಲಭವಾಗಿ ಸಂತಾನವಾಗುತ್ತದೆಯೋ? ಅನ್ವಯವೇ ಲಲಿತಲತೆ. (ಅ. ಪೂರ್ವ. ಕ) ಕುಡಿಗೊಂಬುದೇ-ಅಭಿವೃದ್ಧಿಯಾಗುವುದೇ ?

(೫೧) ಅಗ್ನಿವರ್ಣನ-ಅಗ್ನಿವರ್ಣನೆಂಬರಾಜನ.

(೫೨) ತಾಂಡವಪಿತನ ಶಾಪವಿಶಾಲ ರಚನದಿ-'ದಶರಥನಿಗೆ ಆತನ ಮಕ್ಕಳು ಸಮೀಪದಲ್ಲಿಲ್ಲದಿರುವಾಗ ಮರಣವು ಸಂಭವಿಸಲಿ , ಎಂದು ತಾಂಡವನೆಂಬ ಮುನಿಕುಮಾರನ ತಂದೆಯು ಕಾರಣಾಂತರ

ಕೇಳಿಬಲ್ಲೆ ನಿದಲ್ಲ ಋಷಿಳ ಸು ।
ರಾಳಿಗಳ ದೂರಿನಲಿ ಲಕ್ಷ್ಮೀ ।
ಲೋಲ ನಿನ್ನುದರದಲಿ ಜನಿಸುವನೆಂದು ಪೂರ್ವದಲಿ ॥ ೧೨ ॥

ಅದರಿನಿಂ ರವಿವಂಶಲಕ್ಷ್ಮೀ ।
ಸುದತಿ ಗರ್ಭಿಣಿಯಾಗದಿರಳೆಂ ।
ಬುದು ಪುರಾತನ ಮುನಿಸುಭಾಷಿತಮದು ಯಥಾರ್ಥವಲೆ ॥
ವಿದಿತವೈದಿಕ ಲೌಕಿಕದ ಸಂ ।
ಪದದ ಸಂರಂಭಾತಿಶಯದ ।
ಭ್ಯುದಯದೊಳು ನಿನಗಾರು ಸರಿ ರವಿಕುಲದ ರಾಯರಲಿ ॥ ೧೩ ॥

ಅರಸ ಕೇಳ್ಯಾವ್ಯಾಧ್ವರಕೆ ಮುನಿ ।
ವರ ವಿಭಾಂಡ ಕುಮಾರಕನ ನೀ ।
ಕರಿಸಿಕೋ ತನ್ಮುನಿವರನ ನಾಚಾರ್ಯ ಭಾವದಲಿ ॥
ವರಿಸು ವರಪಿಂಡ ಪ್ರಸಾದೋ ।
ತ್ಕರದ ಲಹರಾತ್ಮಜರು ಬಳಿಕಾ ।
ಹರಿಹರ ಬ್ರಹ್ಮಾಮರೇಂದ್ರರು ಪಾಡಿ ನಿನಗೆಂದ ॥ ೧೪ ॥

ಎನೆ ಧರಾಧಿಪನತುಳಹರುಷದ ।
ಹೊನಲಿನಲಿ ಹೊದರೆದ್ದು ವಿಕಸಿತ ।
ವನರುಹಾನನನಾಗಿ ನುಡಿದನು ವರ ಸುಮಂತ್ರಂಗೆ ॥

ದಿಂವ ಶಾಪವನ್ನು ಕೊಟ್ಟರುವನು. ಇದರಿಂದಲೂ, ವಿಷ್ಣುವು ದಶರಥನಮಗನಾಗಿ ಹುಟ್ಟುವನೆಂಬಸಂಗ ತಿಯನ್ನು ಕೇಳಿರುವುದರಿಂದಲೂ, ದಶರಥನಿಗೆ ಸಂತಾನವಾಗುವುದು ಸತ್ಯವೆಂದು ಸುಮಂತ್ರನುಹೇಳಿದನು

(೧೩) ರವಿವಂಶಲಕ್ಷ್ಮಿಯೋ ಸುದತಿ (ಅವ. ಪೂರ್ವ. ಕೆ)

(೧೪) ವಿಭಾಂಡಕುಮಾರಕನ-ವಿಭಾಂಡಕಮುನಿಯ ಮಗನಾದ ಋಷ್ಯಶೃಂಗನನ್ನು; ವರ ಪಿಂಡಪ್ರಸಾದೋತ್ಕರದಲಿ-ಉತ್ತಮವಾದ ದೇವಾನ್ನವನ್ನು ಪ್ರಸಾದರೂಪವಾಗಿ ಯಜ್ಞೇಶ್ವರನಿಂದ ಪಡೆಯುವುದರಮೂಲಕವಾಗಿ.

(೧೫) ವಿಕಸಿತವನರುಹಾನನನಾಗಿ-ವಿಸ್ತಾರವಾದ ಮುಖಪದ್ಮವುಳ್ಳವನಾಗಿ (ನಗುವಿನಿಂದ ಕೂಡಿದ ಮುಖವುಳ್ಳವನಾಗಿ.)

ಅರ್ತವಾದ ಮಾನಸವುಳ್ಳವನು-(ಬ. ವ್ರೀ) ದುಃಖದಿಂದಕೂಡಿದ ಮನಸ್ಸುಳ್ಳವನಾಗಿ
ಮುನಿ + ಅದು + ಅರು + ಅಮುನಿಯು

ಮುನಿಯ ದಾರಾಮುನಿಯ ಮಹಿಮೆಯ
ವಿನುತ ಚಾರಿತ್ರವನು ಬಲ್ಲಡೆ ।
ತನಗೆ ಹೇಳೆಂದಾರ್ತಮಾನಸನಾಗಿ ಬೆಸಗೊಂಡ ॥ ೯೫ ॥

ಧರಣಿಪತಿ ಕೇಳೀಚೆಯಲಿ ಸುರ ।
ಪುರದ ಸಿರಿಯನು ಬಯಸಿ ಬಹುಳಾ ।
ಧ್ವರವ ಕೈಕೊಂಡನು ಕಣಾ ರೋಮಾಂಘ್ರಿ ಭೂಪಾಲ ॥
ಹರೆದುದೀವೃತ್ತಾಂತವಮರೇ ।
ಶ್ವರನ ಸಭೆಯಲಿ ರೋಮಪಾದನ ।
ಸಿರಿಗೆ ಸೇವಕನಾದ ನಿಂದ್ರನವಗ್ರಹಂಗಳಲಿ ॥ ೯೬ ॥

ವರುಷ ಹನ್ನೆರಡಬ್ದ ಪರಿಯಂ ।
ತರ ನಿಲಲು ಭಯದಿಂದ ನಿಂದಾ ।
ವರಮಹಾಕ್ರತುಶತಗಳಿಗೆ ಹನ್ನೆರಡು ಬಳಿಕುಳಿಯೆ ॥
ತರಣಿಯುರುಬೆಗೆ ಧರಣಿ ಕಲ್ಪದ ।
ಹರನ ಭಾಳಾಂಬಕದ ಶಿಖಿ ಸೀ ।
ವರಿಸಿದಂತಾಯ್ತೇನನೆಂಬೆನವಗ್ರಹಾಗಮವ ॥ ೯೭ ॥

ಹೊಳೆಗಳುರೆ ಬತ್ತಿದುವು ನಿರ್ಝರ ।
ಜಲವಡಂಗಿತು ಬರತುದಗ್ಗದ ।
ಕೊಳನು ಕೂರ್ಮನ ಬೆನ್ನಿಗಿಳಿದುವು ಜಲತಟಾಕಗಳು ॥
ಆಳಿದುಳಿದ ಜನಪದವು ಕಳವಳ ।
ಗೊಳುತ ಕಂಗೆಟ್ಟಂಗ ಭೂಪನ ।
ಬಳಿಗೆ ಬಂದೊದರಿದರು ದುರ್ಭಿಕ್ಷದ ಮಹಾಭಯವ ॥ ೯೮ ॥

(೯೬) ಇಂದ್ರನು ರೋಮಪಾದನ ಸಿರಿಗೆ ಸೇವಕನಾದನು–ರೋಮಪಾದನ ಐಶ್ವರ್ಯವು ಇಂದ್ರನೈಶ್ವರ್ಯವನ್ನು ಮೀರಿತು.

(೯೭) ವರುಷ–ವೃ, ತ್ರ–ವರ್ಷ. ಭಯದಿಂದ ನಿಂದ–ಭಯದಿಂದ ಕೈಕೊಂಡಿರುವ; ಧರಣಿ, ಕಲ್ಪದ ಹರನ ಭಾಳಾಂಬಕದ ಶಿಖಿ ಸೀವರಿಸಿದಂ ತಾಯ್ತು–ಭೂಮಿಯು ಪ್ರಳಯಕಾಲದ ರುದ್ರನ ಹಣೆಗಣ್ಣಿನ ಅಗ್ನಿಯಿಂದ ಸೀದುಹೋದಂತಾಯ್ತು.

(೯೮) ಜಲತಟಾಕಗಳು ಕೂರ್ಮನ ಬೆನ್ನಿಗಿಳಿದುವು–ನೀರುತುಂಬಿದ ಕೆರೆಗಳು ಬತ್ತಿ ಕೂರ್ಮನ ಬೆನ್ನಿನವರೆಗೆ ಇಳಿದುವು: (ಆಳಕ್ಕೆ ಹೋಯಿತು.) ಅಳಿದು+ಉಳಿದ; ಜನಪದವು–ದೇಶದ ಜನಗಳು; ಇಲ್ಲಿ ವಾಚ್ಯಾರ್ಥವಾದ ದೇಶವು ಎಂಬುದಕ್ಕೆ ಪ್ರಯೋಜನವಿಲ್ಲವಾದುದರಿಂದ ಲಕ್ಷಣಾರ್ಥವನ್ನು ತೆಗೆದುಕೊಳ್ಳಬೇಕು.

ಮನ್ನಿಸಿದ ನವರುಗಳನತಿಸಂ।
ಪನ್ನತೆಯ ಧನಧಾನ್ಯದಲಿ ಕರ।
ಖಿನ್ನನಾದನು ನೃಪ ಪ್ರಜಾಕ್ಷೋಭಪ್ರಯುಕ್ತಿಯಲಿ ॥
ನನ್ನಿಕಾರರ ದೇವಕೇಳ್ ಸಾ।
ಕಿನ್ನನಗೆ ಸಾಮ್ರಾಜ್ಯಸುಖ ಸಂ।
ಪನ್ನತೆಯ ಸೌಭಾಗ್ಯವೆಂದು ವಿರಾಗ ಪರನಾದ ॥ ೯೯ ॥

ಕರಿಸಿ ಮಂತ್ರಿಪುರೋಹಿತರ ಕೂ।
ಡೊರೆದನೇಕಾಂತದಲಿ ಸಾಕೇನ।
ಗರಸುತನ ಸಂಘಟಿಸಿದುದು ದುಷ್ಕೃತ ಪುರಾಕೃತದ ॥
ಸುರರು ಮುನಿದರೊ ಧರ್ಮದೇವತೆ।
ಪರಿಭವಿಸಿದಳೊ ಭಾಗ್ಯವಧು ಮೊಗ।
ತಿರುಹಿದಳೊ ಮರೆಮಾತದೇಕೆಂದರಸ ಚಿಂತಿಸಿದ ॥ ೧೦೦ ॥

ಪರರ ಸತಿಯನನಂಗ ರತಿಯಲಿ।
ಬೆರಸಿತಿಲ್ಲ ಸಮಸ್ತಸುಜನರ।
ಸಿರಿಗೆ ತಪ್ಪಿದುದಿಲ್ಲ ದೇವದ್ವಿಜರ ಪೂಜೆಯಲಿ ॥
ಬರಡುಮನವನು ಮಾಡಿತಿಲ್ಲಾ।
ಧರೆಯನಳುಪಿದುದಿಲ್ಲ ಗುರುಹಿರಿ।
ಯರಲಿ ಹೊದ್ದಿದ ಪಾಪಫಲವಿನ್ನೆಂತುಟೋ ಯೆಂದ ॥ ೧೦೧ ॥

ವಿನುತಸತ್ಯಸುಭಾಷಿತಕೆ ಪ್ರತಿ।
ಮೊನೆಯನೊಡ್ಡಿದುದಿಲ್ಲ ಪರಿಪೂ।
ಲನೆಯೊಳೂಣೆಯ ವಿದ್ದುದಿಲ್ಲ ಮದೀಯಜನಪದದ ॥

(೯೯) ಪ್ರಜಾಕ್ಷೋಭಪ್ರಯುಕ್ತಿಯಲಿ-ಜನಗಳ ಕಷ್ಟಪ್ರಾಪ್ತಿಯಲ್ಲಿ; ನೃಪ-ಎಂಬುದಕ್ಕೆ ನನ್ನಿಕಾರರದೇವ ಎಂಬುದು ವಿಶೇಷಣವು.

(೧೦೦) ಮರೆಮಾತು ಅದೇಕೆ?-ಮುಚ್ಚಿಕೊಂಡು ಮಾತನಾಡುವುದು ಏಕೆ? ನಾನು ಯಾವ ಅಧರ್ಮವನ್ನು ಆಚರಿಸಿದೆನೋ? ಅದರಿಂದಲೇ ಈ ರೀತಿಯಾದ ದೇಶಕ್ಷೋಭೆಯುಂಟಾಗಿದೆ; ಸತ್ಯ ತಪ್ಪನ್ನು ಮುಚ್ಚಿಕೊಳ್ಳುವುದರಿಂದ ಪ್ರಯೋಜನವೇನು?

(೧೦೧) ಬರಡುಮನವನು ಮಾಡಲಿಲ್ಲ-ಮನಸ್ಸನ್ನು ಹಿಂಡಿಗಯ್ಯಲಿಲ್ಲ. ಗುರುಹಿರಿಯರಲಿ ಹೊದ್ದಿದ ಧರೆಯನು ಅಳುಪಿದುದಿಲ್ಲ-ಗುರುಹಿರಿಯರಿಗೆ ಕೊಟ್ಟದ್ದ ಮಾನ್ಯ ಮೊದಲಾದವುಗಳಿಗೆ ಆಸೆಪಟ್ಟಿಲ್ಲ.

(೧೦೨) ಪ್ರತಿಮೊನೆಯನು-ಪ್ರತಿಭಟಿಸಿ ಯುದ್ಧವನ್ನು; ಊಣೆಯ-ದ್ದ, ಊಣತಾಪತ್ರ ದುಷ್ಕೃತಫಲವ + ಇದು;

ಜನಪಧರ್ಮದ ಪದ್ಧತಿಯೊಳೊಂ।
ದಿನಿತು ತಪ್ಪಿದುದಿಲ್ಲವಕಟಿನ।
ಗಿನಿತು ಕೊಟ್ಟುದೆ ದೈವ ದುಷ್ಕೃತಫಲವಿದೇನೆಂದ ॥ ೧೦೨ ॥

ಎಂಬ ಸಮಯದಲಿಳಿದನಂಚೆಯ।
ಲಂಬರದಿನಂಬರಮಣಿ ಪ್ರತಿ।
ಬಿಂಬವೆನೆ ನಾರದನು ನೀತಿವಿಶಾರದನು ಬಳಿಕ॥
ಅಂಬಕದ ಸಲಿಲದ ತುಷಾರ ಕ।
ದಂಬಕದ ಪತನದಲಿ ಮುನಿಯ ಪ।
ದಾಂಬುಜಕೆ ಚಾಚಿದನು ಮಣಿಶಿರವನು ಮಹೀಪಾಲ ॥ ೧೦೩ ॥

ದುಗುಡವೇಕೈ ಭೂಪ! ಬಿಡು ಬಾ।
ಧೆಗಳು ಬಳಿಸಲಿಸುವುವೆ ಪೂರ್ವದ।
ಯುಗದ ರಾಯರಿಗಗ್ಗಳನಲಾ ಗುಣಚರಿತ್ರದಲಿ॥
ಸೊಗಸದವರನು ಬಲ್ಲೆ ನಿನಗೆಂ।
ದುಗುವ ಕರುಣಾರಸಗಳಲಿ ಮುನಿ।
ನೆಗಹಿ ನುಡಿದನು ರೋಮಪಾದಮಹಾಮಹೀಶಂಗೆ ॥ ೧೦೪

ಅರಸ ಕೇಳೈ ನಿನಗೆಸೇರುವ।
ಸಿರಿಗೆ ಮುನಿದನು ಶಕ್ರನಾತನ।
ಸಿರಿಗೆ ನಿಲವೆಂತುಂಟು ನಿನ್ನಯ ನಿಜಮನೋರಥದ॥
ಪರಿಯ ಕೇಳೈ ಋಷ್ಯಶೃಂಗನ।
ಕರಿಸಿಕೋ ಪಟ್ಟಣಕೆ ಸರಿಯಾ।
ರ ರಸ! ನಿನಗಾಬಳಿಕ ಸುರನರನಾಗಲೋಕದಲಿ ॥ ೧೦೫ ॥

(೧೦೩) ಅಂಚೆ-ಪ್ಷ, ಹಂಸ ಪ್ಷ; ಅಂಬಕದ ಸಲಿಲದತುಷಾರಕದಂಬಕದ ಪತನದಲಿ-ಕಣ್ಣಿನಲ್ಲಿ ಆನಂದಭಾಷ್ಪಗಳನ್ನು ಸುರಿಸುತ್ತ.

(೧೦೪) ನಿನಗೆ ಸೊಗಸದವರನುಬಲ್ಲೆ-ನಿನ್ನ ಅಭಿವೃದ್ಧಿಗೆ ಹೊಟ್ಟೆಯುರಿಪಟ್ಟು ಪಡುವವರನ್ನು ನಾನು ತಿಳಿದಿದ್ದೇನೆ. ನಿನಗೆ-ಷಷ್ಠಿಗೆ ಚತುರ್ಥೀ ಬಂದಿದೆ.

(೧೦೫) ನಿನ್ನಯ ಮನೋರಥದ ಪರಿಯಕೇಳೈ-ನಿನ್ನ ಕೋರಿಕೆಯು ನೆರವೇರುವರೀತಿಯನ್ನು ಹೇಳುತೇನೆ ಕೇಳು.

ಹರನು ಪೂರ್ವದಲಾ ಮಹಾಮುನಿ ।
ವರನ ಜನನದೊಳಿತ್ತ ವರ ವುಂ ।
ಟರಸ! ಕೇಳ್ ದುರ್ಭಿಕ್ಷದಾತುರಬಾಧೆ ಭೇದಗಳು ॥
ಇರದವೋಲ್ ತನ್ನುನಿಪನಿಹ ನಾ ।
ಹರಿಯೊಳೆಂದದರಿಂದ ನೀನಾ ।
ವರವಿಭಾಂಡಕ ಸುತನ ನಗರಿಗೆ ಕರಿಸಿಕೋ ಯೆಂದ ॥ ೧೦೬ ॥

ಕಳುಹು ಲಲನಾಜನವನಾ ಮುನಿ ।
ಕುಲಲಲಾಮನ ಬಳಿಗೆ ಸತ್ಕ್ರಿಯರ ।
ಬಲೆಗೆ ಸಿಲುಕದರಾರು ತ್ರೈಮೂರುತಿಗಳೊಳಗಾಗಿ ॥
ನೆಲೆಯಿದೀಗೆನುತಾ ನೃಪಾಲನ ।
ತಿಳುಹಿದನು ನಿಜಸತ್ಕೃತಿಯ ಮಂ ।
ಗಳತೆಯನು ಕೈಕೊಂಡು ಹಾಯ್ಸನು ಹಂಸೆಯಲಿ ಮುನಿಪ॥ ೧೦೭ ॥

ರಾಯ ಕೇಳ್ಕೆ ಒಳಿಕಲಾ ಮುನಿ ।
ರಾಯ ನಾಜ್ಞೆಯಲಂಗಭೂಮಿಯ ।
ರಾಯನಬಲಾಜನವ ಕರೆಸಿದನವರಿಗುತ್ತಮದ ॥
ನಾಯಕಿಯರನು ಪುಷ್ಪಚಾಪ ಶ ।
ರಾಯುಧನ ಮುಂಗುಡಿಯ ಸೇನಾ ।
ನಾಯಕಿಯರನು ನಗರದನುಪಮ ಚಾರನಾರಿಯರ ॥ ೧೦೮ ॥

ಇತ್ತನವರಿಗೆ ನೇಮವನು ಮುನಿ ।
ಪೋತ್ತಮನ ತರಹೇಳಿ ಮಣಿಮಯ ।
ದುತ್ತಮಾಭರಣಂಗಳನು ಪರಿಪರಿಯ ವಸನಗಳ ।

(೧೦೬) ಆ ಹರಿಯೊಳ್-ಆ ವಿಷ್ಣುವಿನಲ್ಲಿ: ಎಂದರೆ ವಿಷ್ಣುವಿನ ಧ್ಯಾನಮಾಡುತ್ತಾ ತಪೋನಿಷ್ಠನಾಗಿ.

(೧೦೭) ನೆಲೆಯಿದೀಗ-ನಿನ್ನ ಕಾರ್ಯವು ನೆರವೇರುವುದಕ್ಕೆ ಇದೇ ಗುಟ್ಟು. ನಿಜಸತ್ಕೃತಿಯ ಮಂಗಳತೆಯನ್ನು-ತಾನುಮಾಡಿದ ಈ ಒಳ್ಳೆಯ ಕಾರ್ಯದ ಶುಭವನ್ನು.

(೧೦೮) ಪುಷ್ಪಚಾಪಶರಾಯುಧನ-ಹೂಗಳೇ ಬಿಲ್ಲು ಬಾಣಗಳೂ ಆಯುಧಗಳೂ ಯಾರಿಗೋ ಅವನು (ಮನ್ಮಥ) ನಾಯಕಿ — ನಾಯಕಶಬ್ದದ ಸ್ತ್ರೀಲಿಂಗರೂಪ.

ಕುಡಿಯ + ಮುಂದು-ಮುಂಗುಡಿ (ಅವ್ಯ. ಭಾ)-ಸೇನೆಯ ಮುಂಭಾಗದ.

(೧೦೯) ಆ + ರುಹ್; ಎಂಬ ಸಂಸ್ಕೃತಧಾತುವಿಗೆ ಬರುವುದು (ಹತ್ತುವುದು) ಎಂಬರ್ಥವಿ

ಇತ್ತು ಪುಷ್ಪರಥಂಗಳಲಿ ಮಣಿ ।
ಮುತ್ತಿನಂದಣಗಳಲಿ ಹಯದಲಿ ।
ಮತ್ತಗಜರೋಹಣಾದಿ ಬೀಳ್ಕೊಟ್ಟನು ಮಹೀಪಾಲ ॥ ೧೦೯ ॥

ಸಿತಗುಡಾಜ್ಯ ಸುಲವಣ ಕಟುಮಿ ।
ಶ್ರಿತರಸಾದಿ ಸಮಸ್ತ ರಸ ಪೂ ।
ರಿತ ಸುಧಾ ಮಧುಭಕ್ಷ್ಯ ಫಲ ಭೋಜ್ಯಾದಿ ವಸ್ತುಗಳ ॥
ಕೃತಕ ಕುಶಲೋಪಾಯದಲಿ ಪರಿ ।
ಚಿತದ ಪಣ್ಯಾ ವಿಕ್ರಯಿಸಿನೀಜನ ।
ತತಿಯೊಡನೆ ಕಳುಹಿದನು ನೃಪ ಕೇಳಾ ಮಹೀಪಾಲ ॥ ೧೧೦ ॥

ಮೇದಿನೀಪತಿ ಕೇಳಿದೈ ಕಮ ।
ಲೋದರನು ಕಾಮಿನಿಯ ನೆದೆಯೊಳ ।
ಗಾದರಿಸಿದನು ಕಮಲಭವ ಜಗವರಿಯೆ ನಂದನೆಯ ॥
ಐದೆಯನು ಮಾಡಿದನು ಅರಿವೆ ।
ಣ್ಣಾದನೀಶ್ವರನಿಂದ್ರ ಚಂದ್ರರ ।
ಹಾದಿಯಿದುವೆನೆ ಮಿಕ್ಕಿನವರನು ಹೇಳಲೇನೆಂದ ॥ ೧೧೧ ॥

ನಡೆದುದೀ ಕಾಂತಾಜನಗಳು ।
ಗ್ಗಡವು ಪಯಣದ ಪಯಣಗತಿಯಲಿ ।
ಸಡಗರದ ಸಂರಂಭದಲಿ ಸರ್ವ್ವರೋಹನಂಗಳಲಿ ॥
ಎಡೆಯ ಮುರುವಿನ ವೀಥಿಗಳ ಸಂ ।
ಗಡವ ಕಳೆ ಕಳೆದೈದಿದರು ಮುನಿ ।
ಮೃಡ ವಿಭಾಂಡ ಕುಮಾರಕನ ಕಮನೀಯ ಕಾನನವ ॥ ೧೧೨ ॥

ರುವುದು, ಆದುದರಿಂದ ಆರೋಹಣ, ಎಂದಾಗಬೇಕಾದ ರೂಪವನ್ನು ಆ, ಎಂಬುಪಸರ್ಗವನ್ನು ಬಿಟ್ಟು 'ರೋಹಣ' ಎಂದು ಪ್ರಯೋಗಿಸಿದ್ದಾನೆ.

(೧೧೦) ಕೃತಕ ಕುಶಲೋಪಾಯದಲಿ ಪರಿಚಿತದ-ಮೋಸದಿಂದ ಚಮತ್ಕಾರವಾಗುವ ಉಪಾಯದಲ್ಲಿ ಪರಿಚಯವುಳ್ಳ

(೧೧೧) ಕಮಲ-ತಾವರೆಯು, ಉದರನು-ಹೊಟ್ಟೆಯಲ್ಲಿ ಯಾರಿಗೋ ಅವನು(ಬ. ವ್ರೀ.)-(ಬ್ರಹ್ಮ); ಅರಿ-ಹೆಣ್ಣು ಯಾರಿಗೋ ಅವನು-ಅರವೆಣ್ಣ, (ಬ. ವ್ರೀ.) ದೇಹದ ಅರ್ಧಭಾಗವು ಹೆಂಗಸಾಗಿರತಕ್ಕವನು-ಅರ್ಧನಾರೀಶ್ವರ.

(೧೧೨) ಎಡೆಯ ಮುರುವಿನ ವೀಥಿಗಳ ಸಂಗಡವ-ಸಮೀಪದಲ್ಲಿ ತಿರುಗಿಕೊಳ್ಳುವ ಬೀದಿಗಳ ಗುಂಪನ್ನು; ಉಗ್ಗಡ, ತ್ಭ ಉತ್ಕಟ-ತ್ಸ,

ಲಂಬಿಸಿದ ಫಲಭರದ ರಸದಾ ।
ಳಿಂಬ ಖರ್ಜೂರಾಮ್ರ ಕದಳಿ ಕ ।
ದಂಬ ಕುರುವಕ ತಿಲಕ ತೆಂಗು ತಮಾಲ ಪುನ್ನಾಗ ॥
ಜಂಬು ಪನಸ ಮಧೂಕ ತರುನಿಕು ।
ರುಂಬದಲಿ ಸುರನಂದನ ಪ್ರತಿ ।
ಬಿಂಬವನೆ ಬಗೆಗೊಳಿಸಿ ತನುಪಮ ಮುನಿತಪೋವಿಪಿನ ॥ ೧೧೩ ॥

ನಳಿನವಿಲ್ಲದ ಕೊಳನು ನವ ಶಾ ।
ಡ್ವಲಗಳಿಲ್ಲದನೆಲನು ಹೊಸಕೆಂ ।
ದಳಿರು ತೀರದಮರನು ಮಘಮಘಿಸದ ಸಮೀರಣನು ॥
ಫಲಿತವಿಲ್ಲದ ಪುಷ್ಪಚಯ ಮ ।
ಕ್ಕಳುಗಳಿಲ್ಲದ ಖಗಮೃಗಾವಳಿ ।
ಮಳೆಗಳಿಲ್ಲದ ಮೇಘವಿಲ್ಲಾ ವನದ ವಳಯದಲಿ॥ ॥ ೧೧೪ ॥

ಗಿಳಿಯಗಿಡಗನಕೂಟ ಮರಿಗೋ ।
ಗಿಲೆಯ ಸಾಳ್ವನಸಖ್ಯ ಹರಿಕರಿ ।
ಕಳಭ ದುರುಬಂಧುತ್ವ ಫಣಿಮುಂಗುಲಿಯನಂಟುತನ ॥
ಹುಲಿಯಹುಲ್ಲೆಯನೇಹ ಬಿರುಗ ।
ತ್ತಲೆಯ ಬೆಳಗಿನ ಮೈತ್ರಿ ಮಧುರದ ।
ಹುಳಿಯ ಸರಿ ಸಮ್ಬಂಧ ವಿದ್ದುವು ಬನದೊಳಾ ಮುನಿಯ ॥೧೧೫॥

ಆಟವೇ ಮೃಗಗಣದೊಡನೆ ಸವಿ ।
ದೂಟವೇ ವನಕಂದಫಲ ಕಂ ।
ಬೇಟವೇ ಕಂಜಾಕ್ಷ ಕಾಮಾರಿಗಳ ಭಜನೆಯಲಿ ॥
ಕೂಟವೇ ಯೋಗಾಂಗನೆಯ ಸರಿ ।
ಪಾಟಿಯಲ್ಲಿಹ ಋಷ್ಯಶೃಂಗನ ।
ನಾಟವಿಕ ಕಾಮಿನಿಯರೈದಿದರರಸ ಕೇಳೆಂದ ॥ ೧೧೬ ॥

(೧೧೩) ನಂದನ-ಇಂದ್ರನ ಉದ್ಯಾನವನಕ್ಕೆ ಹೆಸರು, ಕದಂಬ-ತ್ತು, ಕಹಕ-ದ್ಧ

(೧೧೪) ಫಲಿತವಿಲ್ಲದ ಪುಷ್ಪಚಯ-ಹಣ್ಣುಗಳನ್ನು ಬಿಡದೆ ವ್ಯರ್ಥವಾಗಿ ಬಿಟ್ಟಿರುವ ಹೂಗಳು.

(೧೧೫) ನೇಹ-ದ್ಭ, ಸ್ನೇಹ-ತ್ಸ; ಫಣಾ-ಹೆಡೆ, ಅದುಳ್ಳುದು ಫಣಿ-(ಸರ್ಪ). ಬೆಟ್ಟತು+ ಕತ್ತಲೆ-ಬಿರುಗತ್ತಲೆ (ವಿ. ಪೂರ್ವ. ಕ)

(೧೧೬) ಕಂಬೇಟ-ನೇತ್ರಾನಂದ; ಇಹ ಎಂಬುದನ್ನು ಮೇಲೆಹೇಳಿರುವ ನಾಲ್ಕು ಸಂದರ್ಭಗಳಲ್ಲಿಯೂ ಅನ್ವಯಿಸಬೇಕು.

ಗತಿಗೆ ಕುಣಿದುವು ಹಂಸ ಸಂಭ್ರಾ ।
ಹಿತದವ್ಯೃದುರ ವಕೊದಗಿದುವು ಪರ ।
ಭೃತವ ಪಾಂಗಮರೀಚಿ ಚಂದ್ರಿಕೆಗಾ ಚಕೋರ ಚಯ ॥
ಗತ ಪರಿಶ್ರಮವಾದು ವಧರಾ ।
ಮೃತ ಫಲಕೆ ಮನದಂದುವರಗಿಳಿ ।
ರತಿಗೆ ಸೇವಕರಿಲ್ಲ ದಾದುದು ಹೇಳಲೇನೆಂದ ॥ ೧೧೭ ॥

ಅರಸಕೇಳಾತರುಣಿಯರ ತನು ।
ಪರಿಮಳದ ಸೋಂಕಿನಲಿ ಸುತ್ತಲು ।
ಪರಿಮಳಿಸಿದುವು ಚಲಿಪತರಳಾ ಪಾಂಗರೋಚಿಯಲಿ॥
ಮುರಿದುದಾ ಮರಗತ್ತಲೆಯು ಪ್ಸ ।
ಸಿರಿ ಸುಗೀತಾವ್ಮೃತದ ಸವಿಗ ।
ಚ್ಚರಿಯ ರೋಲೈಸಿದರು ವರಕಾಂತಾ ಕದಂಬಕವ ॥ ೧೧೮ ॥

ಮುನಿಪಸಿದ್ದನು ಮುಗ್ಧತಾಪಸ ।
ಮುನಿಗಣದ ಮಧ್ಯದಲಿ ಸಂಮೋ ।
ಹನವಿಪುಣ್ಯಮೃಗಾವಳಿಯು ಸೋಂಕಿನೆಲುಪಾಸನೆಯ ॥
ವನರುಹಾಕ್ಷ ಧ್ಯಾನದಲಿ ಕೇ ।
ಳಿನಕುಲೇಶ್ವರ ಸತಿಯರೀತನ ।
ನನುವರಿತು ಹೊದ್ದಿದರು ಹರಿಮೇಖಲೆಯ ಚಾಳಿಯಲಿ ॥ ೧೧೯ ॥

ರಾಯಕೇಳೈ ತಾಪಸಾಂಗದ ।
ನಾಯಕಿಯ ರದರೊಳಗೆ ವರಕುಸು ।
ಮಾ ಯುಧನಖಂಡೆಯಕೆ ಮಣಿಯದ ಮುನಿಯ ಚರಣದಲಿ ॥
ಮಾಯದಭಿರಂಜನೆಯ ರಚಿತೋ ।
ಪಾಯದಲಿ ಗೋತ್ರಪ್ರವರ ಪರಿ ।
ಯಾಯದಲಿ ಪದಕೆರಗಿದರು ಪಾವನತಪೋಧನನ ॥ ೧೨೦ ॥

(೧೧೭) ಹಂಸ-ಎಂಬುದು, -ಅತ್ಯೇಕವಚನವಾದುದರಿಂದ ಕುಣಿದುವು ಎಂಬ ಬಹುವಚನ ಕ್ರಿಯೆ ಬಂದಿರುವುದು. ಇದೇರೀತಿಯಲ್ಲಿ ಉಳಿದ ವಾಕ್ಯಗಳಲ್ಲಿಯೂ ತಿಳಿಯಬೇಕು. ಪರ-ಅನ್ಯರಿಂದ (ಕಾಗೆಯಿಂದ) ಭೃತ-ರಕ್ಷಿಸಲ್ಪಡುವುದು, ಪರಭೃತ-ಕೋಕಿಲ.

(೧೧೮) ಅಪ್ಸರ-ತ್ಸ, ಅಚ್ಚರ-ತ್ಛ, ಸ್ತ್ರೀಲಿಂಗರೂಪ ಅಚ್ಚರಿ.

(೧೧೯) ಅನ್ವಯಃ- ಮುನಿಪನು ಮುಗ್ಧ.........ಮಧ್ಯದಲ್ಲಿ, ಪುಣ್ಯಮೃಗಾವಳಿಯು ಸಮ್ಮೋಹನದಿ, ಉಪಾಸನೆಯಸೋಂಪಿನಲಿ, ವನರುಹಾಕ್ಷಧ್ಯಾನದಲಿ ಇದ್ದನು. ಉಪಾಸನೆಯಸೋಂಕಿನಲಿ-ತಪೋನಿಷ್ಠೆಯಿಂದ; ಹರಿಮೇಖಲೆ-ಇಂದ್ರ ನೀಲಮಣಿಯ ಒಡ್ಯಾಣ; ಚಾಳಿಯಲಿ-ಸೇರುವೆಯಿಂದ.

(೧೨೦) ತಾಪಸಾಂಗದ-ಮುನಿವೇಷವುಳ್ಳ.

ವಂದಿಸಿದ ಮುನಿವೇಷದಬಲಾ ।
ವೃಂದಕತಿ ಭಕ್ತಿಯಲಿ ಮುಗುಳಭಿ ।
ವಂದನಂಗೈದು ಚಿತಸತ್ಕಾರೋಪಚಾರದಲಿ ॥
ಕಂದಮೂಲ ಫಲಾದಿವಸ್ತುಗ ।
ಳಿಂದ ಮನ್ನಿಸಿ ನಮ್ಮೆಡೆಗೆ ನೀ ।
ವ್ಬಂದ ಕಾರಣವೇನೆನುತ ಬೆಸಗೊಂಡನವರುಗಳ ॥ ೧೨೧ ॥

ನಾವಲೇ ನಿಮ್ಮಡಿಯ ಬಹುಳ ಕೃ ।
ಪಾವಲೋಕನದಿಂದ ಕಾಮ್ಯಮ ।
ಹಾವಿಳಾಸಾಧ್ವರವ ಕೈಕೊಂಡೆವು ವಿನೋದದಲಿ ॥
ನೀವು ಬಿಜಯಂಗೈದ ಡೀಕ್ರತು ।
ಪಾವನವಲೇಯೆನುತ ಕಪಟಕ ।
ಲಾವಿದೆಯರೊಡಬಡಿಸಿದರು ಗಮನವನು ಮುನಿವರನ ॥ ೧೨೨ ॥

ಜನಪಕೇಳ್ಮುನಿವೇಷದ ಬಲಾ ।
ಜನ ತದೀಯ ಮುನೀಶ್ವರನ ಸೊಬ ।
ಗಿನ ಸು ಸೋಂಕಿನಲೊಲುಮೆಯಲಿ ವಿವಿಧೋಪಚಾರದಲಿ ॥
ವಿನುತ ಗಂಧಸುಮಾಲ್ಯಮಣಿಮಂ ।
ಡನ ನವಾಂಬರಗಳಲಿ ಚಿತ್ತವ ।
ನನುಗೊಳಿಸಿ ಕೈವಶಕೆ ತಂದರು ದಿವಸದಿವಸದಲಿ ॥ ೧೨೩ ॥

ಸಾರಿದರು ಬಳಿಕುತ್ತಮುದ ಶೃಂ ।
ಗಾರನಾರೀ ಜನಮನೋಜನ ।
ಕೂರಲಗಿ ಗೊಡಲೊಡ್ಡಿಸಿಪ ರಾಮುಗುಧ ಮುನಿವರನ ॥
ಆರುಗೆಲಬಹುದರಸ ಕೇಳ್ಕಾ ।
ಮಾರಿಗಸದಳವ ಬಲೆಯುರ ಕಂ ।
ಠೋರೆಗಳ ಕಾಲಾಟ ಕಳುಕದರುಂಟೆ ಹೇಳೆಂದ ॥ ೧೨೪ ॥

(೧೨೧) ಮುಗುಳೆ + ಅಭಿವಂದಿಸಿ.

(೧೨೨) ನಾವು ನಿಮ್ಮಡಿಯ.........ದಿಂದ ಕಾಮ್ಯ.........ರವ, ವಿನೋದದಲಿ ಕೈಕೊಂಡೆವು ಅಲೇ. ನಿಮ್ಮ ದಯೆಯಿಂದ ನಾವು ಕಾಮ್ಯಮಹಾಯಜ್ಞವನ್ನು ಸುಲಭವಾಗಿ ಮಾಡಲುದ್ಯುಕ್ತರಾಗಿದ್ದೇವೆ.

(೧೨೩) ದಿವಸದಿವಸ-ಕ್ರಮಾನುಲ್ಲಂಘನೆಯಲ್ಲಿ ದ್ವಿರುಕ್ತಿ ಬಂದಿದೆ.

(೧೨೪) ಕೂರಿತು + ಅಲಗು - ಕೂರಲಗು (ಶ. ಪೂರ್ವ. ಕ) - ಹರಿತವಾದ ಬಾಣ.

ಬಳಿಕಲಾ ಮುನಿವರನ ನಾನಾ ।
ಫಲಸುಭೋಜನ ಭಕ್ಷ್ಯದಲಿ ಸವಿ ।
ಗೊಳಿಸಿದರು ಸೆಳೆದರು ಮುನೀಂದ್ರನ ಮನವ ಮಾಯೆಯಲಿ ॥
ಕಳವಳಿಸಿದುವು ಕರಣವಿಂದ್ರಿಯ ।
ಗಳು ನಿತಂಬಿನಿಯರಲಿ ಸಿಕ್ಕಿದ ।
ನಲರುಗಣೆಯಂಣನ ಫಡಾವಣೆಗಾವಿಭಾಂಡಸುತ ॥ ೧೩೫ ॥

ಅಮೃತರಸಮಯ ವಿವಿಧಕಾವ್ಯ ।
ಪ್ರಮುಖನಾಟಕಗಾನ ಭರತಾ ।
ಗಮ ರಸಾಲಂಕಾರ ರೂಪಕರಚಿತ ವಿದ್ಯೆಯಲಿ ॥
ಅಮಿತ ಸೌಖ್ಯ ಕಥಾವಿನೋದದ ।
ಸಮತೆಯಲಿ ಭಾರತಿಕಳಾವಿ ।
ಭ್ರಮಕೆ ಗುರುವೆನಲೊಲಿಸಿ ಮೆಚ್ಚಿಸಿದರು ಮುನೀಶ್ವರನ ॥ ೧೩೬ ॥

ಬಳಿಕ ಸಕಲೇಂದ್ರಿಯಗಳುಬ್ಬಟೆ ।
ಬಲಿದುವಿವರುಪಚಾರದಲಿ ಹಿಂ ।
ದುಳಿದುದುಗ್ರತಪಃ ಪ್ರಭಾವದ ಬೆಳಗು ನಿಮಿಷದಲಿ ॥
ಅಲಗನುಗಿದನು ಮದನ ಮಂದಾ ।
ನಿಲನು ಹುರಿಗಟ್ಟಿದನು ಕೈಚ ।
ಪ್ಪಳಿಯಲೊದರಿದನಾ ವಸಂತನು ಮುನಿಪನಿದಿರೆನಲಿ ॥ ೧೩೭ ॥

ಬಿದ್ದನಬಲಾಜನದ ಬಲೆಯೊಳ ।
ಗೊದ್ದುಕೊಳುತ ಮುನೀಂದ್ರನಂಗಜ ।
ನುದ್ದುರುಟುತನಕಾರು ಸರಿಸುರನರಭುಜಂಗರಲಿ ॥
ತಿದ್ದಿತಾತನ ತಪ ಸುಮಾಯೆಯ ।
ಮದ್ದಿನಲಿ ಮರುಳಾಗಿ ಮದನನ ।
ಹೊದ್ದಿದನು ಹೊಡಕರಿಸಲರಿಯದೆ ಭೂಪಕೇಳೆಂದ ॥ ೧೩೮ ॥

(೧೩೫) ಅಲರು-ಹೂಗಳು, ಕಣೆಯು-ಬಾಣಗಳು ಯಾರಿಗೋ ಅವನು (ಬ. ವ್ರೀ.)-ಅಲರು ಗಣೆಯು (ಮನ್ಮಥ)

(೧೩೬) ಭರತಾಗಮ-ಭರತಾಚಾರ್ಯನೆಂಬುವನು ಬರೆದಿರುವ ನಾಟ್ಯಶಾಸ್ತ್ರ.

(೧೩೭) ಉಗ್ರತಪಃಪ್ರಭಾವದ ಬೆಳಗುನಿಮಿಷದಲಿ ಹಿಂದುಳಿದುದು-ಕ್ರೂರವಾದ ತಪೋಮಹಿಮೆಯ ಬೆಳಕು ಸ್ವಲ್ಪಕಾಲದಲ್ಲಿಯೇ ಕಡಿಮೆಯಾಯ್ತು.

(೧೩೮) ಆತನ ತಪಸು ಮಾಯೆಯುಮದ್ದಿನಲಿ ತಿದ್ದಿತು-ಮೋಹವೆಂಬ ಔಷಧದಿಂದ ತಪಸ್ವಿಯ ಸ್ಥಿತಿಯು ಬದಲಾಯಿಸಿತು, ಎಂದರೆ ತಪಸ್ಸು ನಿಂತುಹೋಗಿ ಕಾಮವಿಕಾರಕ್ಕೊಳಗಾದನೆಂಬ ಭಾವವು.

ಮೆಚ್ಚಿ ಮರುಳಾದಾ ಮುನೀಂದ್ರನ ।
ನುಚ್ಚತಂದರು ತರುಣಿಯರು ಬಳಿ ।
ಕಚ್ಚಿರಿಯ ಕೇಳರಸ ಮೇಘಗಳ ಭ್ರಮಂಡಲವ ॥
ಮುಚ್ಚಿಕೊಂಡುವು ಮುರಿದು ನೇಸರು ।
ಗಿಚ್ಚಿನ ಖಿಳಾಂಬುಧಿಯ ಜಲವನು ।
ಕಚ್ಚಿತಂದುಗುಳಿದುವು ರೋಮಪಾಂಘ್ರಿಯಸುಭೂಮಿಯಲಿ ॥೧೨೯ ॥

ಅರಳಿ ತರಸನ ವದನಲಕ್ಷ್ಮಿಯ ।
ಸಿರಿ ವಿಶಾಲದಲಿರ್ದನುಮಹೀ ।
ಶ್ವರನುಮುನಿಪನ ಬರವಿನಲಿ ಬಳಿಕಾನರಾಧಿಪನ ॥
ಧರೆಯಜನ ಸಂತೋಷಮಯ ಸಾ ।
ಗರದೊಳದ್ದುದು ಹೇಳಲೇನದ ।
ನರಸ ಕರಸಾ ಮುನಿಯಸಿದ್ಧಿಗ ಸಾಧ್ಯ ವೇನೆಂದ ॥ ೧೩೦ ॥

ಪರಮಹರುಷದಲಾ ಮುನೀಂದ್ರನ ।
ನುರುತರೋತ್ಸವದಿಂದ ಲಾಪುರ ।
ದರಸ ನಿದಿಗೊರ್ಂಡೊಯ್ದು ಕೊಟ್ಟನು ತನ್ನನಂದನೆಯ ॥
ಹರನು ಮಾದೇವಿಯರ ಪೋಲ್ಮನಿ ।
ವರನು ಶಾಂತಾದೇವಿ ಸಹಿತಾ ।
ಧರಣಿಪನ ಭವನದಲಿ ಬೆಳಗಿದನಧಿಕತೇಜದಲಿ ॥ ॥ ೧೩೧ ॥

ಬರಡು ಹಯನಹುದುಡಿದ ನೀರಸ ।
ತರು ಚಿಗುರ್ವುವು ಬಂಜೆ ಗರ್ಭವ ।
ಧರಿಸುವಳು ಧನಧಾನ್ಯ ಗೋಧನ ಸಂಪದಾದಿಗಳು ॥
ಭರಿತ ವಾಗಿಹುವಾಮುನಿಪ ನಿಹ ।
ಧರಣಿಯಲಿ ನೀನಾಮುನೀಂದ್ರನ ।
ಬರಿಸಿ *ಕ್ರತುವನು ನಡಿಸಿದರೆ ಸುತರಹರು ನಿನಗಂದ ॥ ೧೩೨ ॥

(೧೨೯) ನೇಸರುಗಿಚ್ಚಿಂ + ಅಖಿಳಾಂಬುಧಿಯ, ಮೇಘಗಳು ಅಭ್ರಮಂಡಲವ ಮುಚ್ಚಿಕೊಂಡುವು. (ಮೇಘಗಳು) ನೇಸರುಗಿಚ್ಚಿಂ ಅಖಿಳಾಂಬುಧಿಯ ಜಲವನು ಕಚ್ಚಿ ತಂದು ರೋಮಪಾಂಘ್ರಿಯಸುಭೂಮಿಯಲ್ಲಿ ಉಗುಳಿದುವು, ಎಂದನ್ವಯವು.

(೧೩೦) ಅನ್ವಯ-ಮುನಿಪನ ಬರವಿನಲಿ ಅರಸನ ವದನ ಅರಳಿತು; ಮಹೀಶ್ವರನು, ಲಕ್ಷ್ಮಿಯ ಸಿರಿವಿಶಾಲದಲಿರ್ದನು-ದೊರೆಯು ವಿಸ್ತಾರವಾದ ಸಂಪತ್ತನ್ನು ಹೊಂದುತ್ತಿದ್ದನು.

(೧೩೧) ಹರನೂ + ಉಮಾದೇವಿಯೂ-ಹರನುಮಾದೇವಿಯರು (ದ್ವಂದ್ವ) ತನ್ನ ನಂದನೆಯ-ತನ್ನ ಮಗಳಾದ ಶಾಂತಾದೇವಿಯನ್ನು.

(೧೩೨) ಪಯ-ಎಂದರೆ ಹಸು, ಇಲ್ಲಿ ಪಕಾರಕ್ಕೆ ಹಕಾರಾದೇಶವುಬಂದು 'ಹಯ' ಎಂದಾಗಿದೆ.

## ಆರನೆಯಸಂಧಿ.

ಸೂಚನೆ । ಭೂಮಿಪತಿ ದಶರಥನು ಸುತಕಾ ।
ವ್ಯಾಮಹಾಧ್ವರ ಕೆಂದು ತಂದನು ।
ರೋಮಪಾದನೃಪಾಲನ ಳಿಯನನ ಖಿಲವಿಭವದಲಿ ॥

ಧರಣಿಜಾ ಸುತೆ ಕೇಳ್ಸುಮಂತ್ರನ ।
ವರ ವಚೋಭಿಪ್ರಾಯವನು ನಿಜ ।
ಗುರು ವಸಿಷ್ಟಂಗ ರುಹಿ ತನ್ಮುನಿವರ ನನುಜ್ಞೆಯಲಿ ॥
ಪರಮಋಷಿ ವೈಭಾಂಡಕನ ನ ।
ಧ್ವರಕೆ ತಹ ನೇಮವನು ಪಡೆದತಿ ।
ಹರುಷದಲಿ ಹರಿದಶ್ವಕುಲನುದ್ಯೋಗವನನಾದ ॥ ೧೩೩ ॥

ನೆಗಳ್ದ* ಕಾರ್ಯಸ್ಥಿತಿಗೆ ಲಿಖಿತಾ ।
ಳಿಗಳ ನು ಡುಗೊರೆಸಹಿತ ಲರಸಾ ।
ಳುಗಳ ಕೈಯಲಿ ಕಳುಹಿದರು ನೃಪರೋಮಪಾದಂಗೆ
ತೆಗಿಸಿದನು ಬಳಿಕುತ್ತಮದ ತೊಡ ।
ವುಗಳ ದಿವ್ಯದುಕೂಲ ರತ್ನಾ ।
ಳಿಗಳ ನನುಪಮಗಜಹಯಾದಿಸಮಸ್ತ ವಸ್ತುಗಳ ॥ ॥ ೧೩೪ ॥

ಭಾರಿಸಿದ ಬಲುಹೆಗ್ಗರೆಯ ಬಂಡಿಗ ।
ಳೋರಣಿಸಿದುವು ಪಯಣದಲಿ ಕ ।
ರ್ಪೂರ ಕಸ್ತುರಿ ಕುಂಕುಮದ ಪೆಟ್ಟಿಗೆಯ ಸಾಲಿನಲಿ ॥
ಊರ ಹೊರವಳಯದಲಿ ಗುಡಿ ಗೂ ।
ಡಾರ ಹೊಯ್ದುವು ಶುಭಮುಹೂರ್ತದ ।
ವಾರನಕ್ಷತ್ರದಲಿ ದಶರಥರಾಯ ಹೊರವಂಟ ॥ ೧೩೫ ॥

(೧೩೩) ಪರಮ + ಋಷಿ = ಪರಮರ್ಷಿ, ಎಂದು ಗುಣಸಂಧಿಯಾಗಬೇಕಾಗಿತ್ತು. ಇಲ್ಲಿ ವಿಸಂಧಿಕಾರ್ಯವು ಬಾರದೆ ಪ್ರಕೃತಿಭಾವವು ಬಂದಿದೆ. ವೈಭಾಂಡಕ - ವಿಭಾಂಡಕಋಷಿಯ ಮಗ, ಹರಿತ್ - ಹಸುರುಬಣ್ಣವುಳ್ಳ, ಅಶ್ವ - ಕುದುರೆಗಳುಳ್ಳವನು - ಹರಿದಶ್ವ (ಸೂರ್ಯ)

(೧೩೪) ಉಡುವ + ಕೊರೆ = ಉಡುಗೊರೆ (ಗಮಕ)

(೧೩೫) ಓರಣ, ಎಂಬ ಕನ್ನಡ ನಾಮವಾಚಕದಮೇಲೆ 'ಇಸು' ಪ್ರತ್ಯಯವುಸೇರಿ 'ಓರಣಿಸು' ಎಂಬ ಧಾತುವಾಗಿದೆ. ಗೂಡಾರ - ದ, ಗೂಢಾಗಾರ - ತ.

ಸುಳಿದು ವಾರತಿ ಮುಂದೆ ವಿಪ್ರರ ।
ಕಳಕಳದ ಮಂತ್ರಾಕ್ಷತೆಯ ಕೈ ।
ಕೊಳುತ ಮಂಗಳಪಾಠಕರ ಬಹುವಾದ್ಯಘೋಷದಲಿ ॥
ಘಳಿಗೆವಟ್ಟಲ ಜೀವಕೇಂದ್ರ ।
ಸ್ಥಳದ ಶುಭಲಗ್ನದಲಿ ಭೂಪತಿ
ಹೊಳಲ ಹೊರವಂಟನು ಸುಮಂತ್ರಾದಿಗಳ ಗಡಣದಲಿ ॥ ೧೩೬ ॥

ಮಣಿಮಯದ ಮುಕ್ತಾಫಲದ ಕೇ ।
ವಣದ ಕನಕದ ದಡ್ಡಿ ಬಿಗಿದಂ ।
ದಣವ ನೇರಿದ ರರಸಿಯರು ಮೂವರು ಮಹೀಪತಿಯ ॥
ಕುಣಿವ ಕುದುರೆಯ ಹಣ್ಣಿ ದುರುವಾ ।
ರಣ ಘಟಾಳಿಯ ತೇರುಗಳ ತಿಂ ।
ಥಿಣಿಯ ತೆರಳಿಕೆಯಿಂದ ತೆರಳಿದ ನಾಮಹೀಪಾಲ ॥ ೧೩೭ ॥

ತಳಿತ ಪಾಲ್ಮರನೇರಿ ಪಿಂಗಲಿ ।
ಬಲಿದು ಬಾಯ್ಗೊಂಡುವು ಸರಾಗದಿ ।
ನೊಲಿದು ದಂಪತಿ ಕಾರನಿತ್ತುವು ಕರಿಯಹಕ್ಕಿಗಳು ॥
ಸುಳಿದ ವೆಡದಿ ವಿಹಂಗ ಬಲದಲಿ ।
ನಲಿಯೆ ಸೂಚಿತ ಪುತ್ರಲಾಭದ ।
ಫಲವಿಶೇಷಿತ ಶಕುನ ಹಿಗ್ಗಿಸಿ ತವನಿಪಾಲಕನ ॥ ೧೩೮ ॥

(೧೩೬) ಗಡಣ-ಧ್ವ, ಘಟನ-ತ್ವ. ಘಳಿಗೆವಟ್ಟಲ-ಒಂದು ಬಟ್ಟಲಿನಕೆಳಗೆ ಕೆಲವು ರಂದ್ರಗಳನ್ನು ಮಾಡಿ ಅದನ್ನು ನೀರುತುಂಬಿದ ಪಾತ್ರೆಯೊಂದರಲ್ಲಿ ತೇಲಬಿಡುವುದು, ಆ ರಂದ್ರಗಳಮೂಲಕ ಸ್ವಲ್ಪಸ್ವಲ್ಪವಾಗಿ ನೀರುತುಂಬುತ್ತ ಬಂದು ಆ ಬಟ್ಟಲುನೀರಿನಲ್ಲಿ ಮುಳುಗಿಕೊಂಡ ಕೂಡಲೆ ಒಂದುಗಳಿಗೆ ಆಯ್ತೆಂದು ತಿಳಿದುಕೊಳ್ಳುವುದು. ಇದರಲ್ಲಿ ಕಾಲಪ್ರಮಾಣವು ತಪ್ಪಿಲ್ಲದೆ ಗೊತ್ತಾಗುವುದು. ಈ ಬಟ್ಟಲಿಗೆ ಘಳಿಗೆವಟ್ಟಲೆಂದು ಹೆಸರು. ಪೂರ್ವದಲ್ಲಿ ಘಡಿಯಾರಕ್ಕೆ ಬದಲಾಗಿ ಇದನ್ನು ಉಪಯೋಗಿಸಿ ಒಳ್ಳೆಯ ಮುಹೂರ್ತಗಳನ್ನು ಕಂಡುಹಿಡಿಯುತ್ತಿದ್ದರು. ಜೀವಕೇಂದ್ರ-ಲಗ್ನಕ್ಕೆ ೪-೭-೧೦ನೆಯ ಸ್ಥಾನಗಳಿಗೆ ಕೇಂದ್ರವೆಂದು ಸಂಜ್ಞೆ. ಈ ಕೇಂದ್ರಸ್ಥಾನಗಳಲ್ಲಿ ಗುರುವಿದ್ದರೆ ಆ ಮುಹೂರ್ತವು ಶುಭಕರವಾದುದೆಂದು ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿದೆ.

(೧೩೭) ಕೇವಣ-ದ್ಭ, ಜೀವಣ-ತ್ಸ, ವಾರಣಘಟಾಳಿ-ಆನೆಯಹಿಂಡಿನ ಸಾಲು.

(೧೩೮) ಪಾಲ್ಮರ-ಹಾಲುಳ್ಳಮರ (ಆಲ, ಅತ್ತಿ, ಅರಳಿ, ಹಿಪ್ಪೆ, ಈ ನಾಲ್ಕು.) ಭಾವಾರ್ಥ-ಹಾಲಹಕ್ಕಿಯು ಹಾಲ್ಮರಗಳಲ್ಲಿ ಕುಳಿತು ಸರಾಗವಾಗಿ ಕೂಗುವುದು, ಕರಿಯಹಕ್ಕಿಗಳು ಜೋಡಿಯಾಗಿಕೂಗುವುದು, ಹಕ್ಕಿಗಳು ಬಲಥಿಂದ ಎಡಕ್ಕೆ ಬರುವುದು, ಈಮೂರು ಶುಭಶಕುನಗಳು.

ಹರುಷಪುಳಕದ ಹರಿಹಿನಲಿ ಹಯ ।
ಕರಿವರೂಥಪದಾತಿ ಬಲಸಹಿ ।
ತರಿ ದಿಶಾಪಟಮಲ್ಲ ಬಂದನು ಪಯಣಗತಿಗಳಲಿ ॥
ಪರ ಮಹೀತಳದ ಖಿಲಜನದು ।
ಬ್ಬರದ ದರುಶನ ಕಾಣಿಕೆಯ ನನು ।
ಕರಿಸುತ ನುಪಮವಿಷಯ ವೀಧಿಯನೋಡುತೈತಂದ ॥ ೧೩೯ ॥

ಹೇಳಲೇನದ ನಂಗಧರಣೀ ।
ಪಾಲನವನಿಯ ಸಿರಿಯ ಹೊಗಳಲು ।
ಶೂಲಿಗಳವಲ್ಲೆನಲು ಶೋಭಿಸಿ ತಂದು ಸೊಗಸಿನಲಿ ॥
ಶೈಲವೇ ಸುರಶೈಲ ಭೂರುಹ ।
ಜಾಲವೇ ಸುರಭೂಜ ಲಲಿತ ಲ ।
ತಾಳಿಯೋ ಸುರಲತೆ ಸುಧೇನುಗ ಳೈದೆ ಸುರಧೇನು ॥ ೧೪೦ ॥

ವರ ವಸಂತನ ಬೀಡೊ ಮನ್ಮಥ ।
ಧರಣಿಪನ ದೆಖ್ಖಾಳ ಭೂಮಿಯೊ ।
ಪರಿಮಳಿತ ಪವಮಾನ ನಾಡುಂಬೊಲನೊ ಚಂದ್ರಮನ ॥
ಹರವರಿಯೊ ವನದೇವತೆಯ ವಿ ।
ಸ್ತರ ವಿನೋದ ವಿಹಾರ ಕೇಳೀ ।
ನಿರತಿಶಯ ನಿಜಧರಣಿಯೋ ಯೆನೆ ಮೆರೆದುದಾ ಭೂಮಿ॥ ೧೪೧ ॥

ನಗರಖರ್ವಟ ಖೇಟಿಗಳ ಹೆಂ ।
ಪುಗಳ ಶಾಖಾನಗರಗಳ ಸೊಂ ।
ಪುಗಳ ಸುಗ್ರಾಮಾಗ್ರಹಾರವ್ರಜ ದಲಂಪುಗಳ ॥

(೧೩೯ ಅರಿದಿಶಾಪಟಮಲ್ಲ-ಶತ್ರುಗಳನ್ನು ನಾನಾದಿಕ್ಕುಗಳಿಗೂ ಓಡಿಸಿರುವ ಶೂರನು; ವಿಷಯವೀಧಿ-ದೇಶದಬೀದಿ.

(೧೪೦) ಶೂಲಾಯುಧವನ್ನು ಧರಿಸಿದವನು-ಶೂಲಿ (ಈಶ್ವರ) ಅದನು + ಅಂಗಧರಣೀಪಾಲ ಅಂಗರಾಜನ ರಾಜ್ಯದಲ್ಲಿರುವ ಸಸ್ಯಗಳೂ ಪ್ರಾಣಿಗಳೂ ದೇವಲೋಕದಲ್ಲಿರುವವುಗಳಂತೆ ಶ್ರೇಷ್ಠತರವಾದುವುಗಳೆನ್ನಿಸಿಕೊಂಡಿದ್ದುವು ಎಂದು ಭಾವವು.

(೧೪೧) ಮನಸ್-ಮನಸ್ಸನ್ನು, ಮಥ-ಕಡೆಯತಕ್ಕವನು-ಮನ್ಮಥ; ಭೂಮಿ-ತ್ಸ, ಬುವಿ-ದ್ಭ.

(೧೪೨) ತ್ಸ-ಕೇಟಮು, ದ್ಭ, ಕೇರಿ, ಖರ್ವಟಖೇಟ; ಹೆಂಪು, ಸೊಂಪು, ಅಲಂಪು; ದ್ರಾಕ್ಷಿ ಇಕ್ಷು, ಕಿತ್ತಳೆ, ಈ ಸ್ಥಳಗಳಲ್ಲಿ ಒಂದೇ ವ್ಯಂಜನವು ಅನೇಕಾವೃತ್ತಿ ಬಂದಿರುವುದರಿಂದ ವೃತ್ತ್ಯನು

ತೆಗೆದ ತೋರಿಕಾಲುವೆಗಳು ದ್ರಾ ।
ನಗಳ ಕಳವು ದ್ರಾಕ್ಷೆಧವಳೇ ।
ಕ್ಷುಗಳ ವನವೀಥಿಗಳ ನೀಕ್ಷಿಸುತರಸ ನಡೆತಂದ ॥ ೧೪೨ ॥

ಅರರೆ ಶಿವಶಿವ ಸಕಲಸಿರಿಯಲಿ ।
ಮೆರೆವು ದುರೆ ತಾ ಋಷ್ಯಶೃಂಗನ ।
ಪರಮ ಮಹಿಮೆಯಲಾ ಮಹೀತಳ ವೆನುತ ನರನಾಥ ॥
ಶಿರವನೊಲೆಯುತ ರೋಮಪಾದನ ।
ಸಿರಿಯಕೊಂಡಾಡುತ ಸುಮಿತ್ರನ ।
ಪುರಕೆ ಬಂದನು ಕೇಳಿದ್ಯೆ ಕಾಕುಸ್ಥ ನೃಪಸೂನು ॥ ೧೪೩ ॥

ರಾಯರಾಜಶಿರೋಮಣಿಯ ಕಟ ।
ಕಾಯಬಿಟ್ಟುದು ಬಳಸಿಕೊಟ್ಟಗೆ ।
ಲಾಯ ಗುಡಿ ಗೂಡಾರ ಸಹಿತ ಪುರೋಪ ಕಂಠದಲಿ ॥
ಆ ಯಶಃಪರಿ ಪೂರ್ಣತೇಜನ ।
ಮೇಯ ನನುಪಮ ರೋಮಪಾದನು ।
ಜೇಯ ದಶರಥನೃಪ ನಿದಿರ್ಗೊಂಡೊಯ್ದು ನರಮನೆಗೆ ॥ ೧೪೪ ॥

ಹೇಳಲೇನದ ನಂದಿನುತ್ಸವ ।
ದೇಳಿಗೆಯ ವೈಭವವನು ಭಯನೃ ।
ಪಾಲಕರ ಸೌಹಾರ್ದ ದನುಬಂಧದ ಸಘಾಡಿಕೆಯ ॥
ಬಾಲೆಯರ ಹೊಂದಳಿಗೆಗಳ ಪಸು ।
*ಗೂಳುಗಳ ಪಸರಿಕೆಯ ಮಣಿದೀ ।
ಪಾಳಿ ಸುಳಿದುವು ಬಿಸಜಬಾಂಧವ ಕುಲಜ ನಿದಿರಿನಲಿ ॥ ೧೪೫ ॥

ಪ್ರಾಸವೆಂಬ ಶಬ್ದಾಲಂಕಾರವಿದೆ. ಪಿರಿದರಭಾವ-ಪೆಂಪು, ಪಕಾರಕ್ಕೆ ಹಕಾರಾದೇಶವುಬಂದು ಹೆಂಪು ಎಂದಾಗಿದೆ (ತದ್ಧಿತಭಾವನಾಮ.)

(೧೪೩) ಈ ಅಂಗರಾಜ್ಯವು ಋಷ್ಯಶೃಂಗಮುನಿಯ ಮಹಾತ್ಮ್ಯೆಯಿಂದಲೇ ಇಂತಹ ಐಶ್ವರ್ಯದಿಂದ ಮೆರೆಯುತ್ತಿರುವುದೆಂದು ದಶರಥನು ತಲೆದೂಗುತ್ತ ಬಂದನು.

(೧೪೪) ತೇಜನು, ಅಮೇಯನು, ಅನುಪಮ ರೋಮಪಾದನು, ಜೇಯದಶರಥನ; ನೃಪನ ಎಂದುಪದಚ್ಛೇದವು. ಕಟಕಾಯ-ಸೈನ್ಯದವಿಸ್ತಾರವು.

(೧೪೫) ಅನ್ವಯ:-ಉಭಯ………ಸಘಾಡಿಕೆಯ ಅಂದಿನುತ್ಸವದೇಳಿಗೆಯ ವೈಭವವನು ಅದನು ಹೇಳಲೇನು? ಬಿಸಜಬಾಂಧವಕುಲಜನ ಇದಿರಿನಲಿ ಬಾಲೆಯರ………ದೀಪಾಳಿಗಳು ಸುಳಿದುವು; ಪೂರ್ವದಲ್ಲಿ ಸ್ತ್ರೀಯರು ಚಿನ್ನದಅನ್ನವನ್ನೂ, ದೀಪಗಳನ್ನೂ ತಟ್ಟೆಯಲ್ಲಿತಂದು ದೃಷ್ಟಿಪರಿಹಾರಕ್ಕಾ, ರಾಜಮಹಾರಾಜರಿಗೂ ಆರತಿಯನ್ನು ಬೆಳಗುವ ಪದ್ಧತಿಇತ್ತು. ಬಿಸ-ದಂಟಿನಿಂದ, ಜ-ಹುಟ್ಟಿದುದು (ಕಮಲ) ಅದಕ್ಕೆ ಬಾಂಧವ-(ಸೂರ್ಯ)

ಉಪಚರಿಸಿದನು ಬಳಿಕ ರಾಜಾ ।
ಧಿಪನ ನವರಾಜೋಪಚಾರದ ।
ವಿಪುಳಸತ್ಕಾರದಲಿ ನಿರುಪಮ ರೋಮಪಾದ ನೃಪ ॥
ಅಪರಿಮಿತ ಸಂತೋಷದಲಿ ಭೂ ।
ಮಿಪನ ಗಮನ ವನರಿದು ತಂದನು ।
ತಪನ ಕುಲಜನ ಮುನಿಯು ಮಂದಿರಕಾಗಿನಲವಿನಲಿ ॥ ೧೪೬ ॥

ಅರಸದಶರಥ ನಾವಿಭಾಂಡಕ ।
ವರ ಕುಮಾರನ ಚರಣದಲಿ ತ ।
ನ್ನರಸಿಯರು ಸಹ ದೈನ್ಯವೃತ್ತಿಯ ಭಕ್ತಿಭಾವದಲಿ ॥
ಉರುಳುವ ಶ್ರುಕಣಾ ಳಿಗಳ ಕಾ ।
ಹುರತೆಯಲಿ ವ್ಯೆಯಿಕ್ಕಿದನು ಸುತ ।
ವಿರಹಿತನ ವಂಶಚ್ಯುತನ ನುದ್ಧರಿಸಬೇಕೆಂದು ॥ ॥ ೧೪೭ ॥

ಸುತವಿನುತ ಕಾಮ್ಯಾಧ್ವರದ ಸ ।
ತ್ಕ್ರತುವ ಕೈಕೊಂಡೆನು ಭವತ್ಕೃಪೆ ।
ಯತಿಶಯವು ತನಗಾಗೆ ತಾನೀ ಜಗಕೆ ಧನ್ಯನಲ ॥
ಸುತ ವಿಹೀನ ನುದ್ಧರಿಸಿ ಸಂ ।
ತತಿಯ ಕರುಣಿಸ ಬೇಕೆನುತ ಮುನಿ ।
ಪತಿಯ ಪಧಪದ್ಮದಲಿ ಮಗುಳಿಳುಹಿದನು ಮಣಿಶಿರವ ॥ ೧೪೮ ॥

ಕರುಣರಸ ದುಬ್ಬರದ ಲರಸನ ।
ಶಿರವ ನೆಗಹಿ ವರೋಕ್ತಿಯಲಿ ಮುನಿ ।
ಹರಸಿ ಸಂತಾನಾಭಿವೃದ್ಧಿಯ ಸಾರಸೌಖ್ಯದಲಿ ॥
ಅರಸನನು ಮನ್ನಿಸಿ ಮನಃಪರಿ ।
ಸರದ ಖೇದವ ಬಿಡಿಸಿ ಕಾಮ್ಯಾ ।
ಧ್ವರಕೆ ಬಹೆವೆಂ ದಭಯವಿತ್ತನು ಋಷ್ಯಶೃಂಗಮುನಿ ॥ ೧೪೯ ॥

(೧೪೬) ಅನ್ವಯ-ರೋಮಪಾದನೃಪ ಅಪರಿಮಿತಸಂತೋಷದಲಿ (ಬಂದಿರುವ) ಭೂಮಿಪನ ಗಮನವನರಿದು, ತಪನಕುಲಜನ ಮುನಿಯು ಮಂದಿರಕಾಗಿ ನಲವಿನಲಿ ತಂದನು.

(೧೪೭) ಕಾಳ್ಪುರ-ಎಂಬ ಶಬ್ದದಿಂದ ಉತ್ತರಮಾರ್ಗದಲ್ಲಿ ಕಾಹುರ, ಎಂದಾಗಿ ಭಾವಾರ್ಥದಲ್ಲಿ 'ತೆ' ಎಂಬ ಪ್ರತ್ಯಯವುಸೇರಿ ಕಾಹುರತೆ ಎಂದಾಯ್ತು.

(೧೪೮) ಸುತರಿಂದ + ವಿಹೀನ-ಸುತವಿಹೀನ(ತೃ. ತ)ಮಣಿಗಳಿಂದ(ಕೂಡಿದ) + ಶಿರ-ಮಣಿಶಿರ (.ಬ ಮ. ಕರ್ಮ. ಸ)

(೧೪೯) ಮನಃಪರಿಸರದಖೇದವ-ಮನಸ್ಸನ್ನು ಆವರಿಸಿರುವ ದುಃಖವನ್ನು, ಬರ್ಪೆವು-ಎಂಬುದಕ್ಕೆ ಉತ್ತರಮಾರ್ಗದಲ್ಲಿ ಬಹೆವು ಎಂದಾಗಿದೆ ಅಭಯಮಂ + ಇತ್ತನು (ದ್ವಿ. ಸ)

ವೀರ ಕೇಳ್ಕೈ ನಿಮ್ಮ ದಶರಥ ।
ಧಾರಿಣೀಶಂಗ ಭಿನವದ ಬೀ ।
ಡಾರ ವಾಯ್ತುರೆ ತಿಂಗಳಿದ್ದನು ಮೇಲೆ ತತ್ಪುರದಿ ॥
ಧಾರಿಣೀಶನ ನುಚಿತ ವಚನಾ ।
ಸಾರದಲಿ ಸರ್ವಾಭರಣ ಮದ ।
ವಾರಣಾಶ್ವ ವರೂಥ ವಸನಗಳಿಂದ ಮನ್ನಿಸಿದ ॥ ೧೫೦ ॥

ಕರಿಸಿ ಮಂತ್ರಿನಿಯೋಗಿಗಳ ನಾ ।
ಪುರಜನಂಗಳ ನುಡುಗೊರೆಗಳಲಿ ।
ಹಿರಿದು ಮನ್ನಿಸಿ ರೋಮಪಾದ ಮಹಾಮಹೀಪತಿಯು ॥
ಪರಮ ಸತ್ಕಾರವನು ಕೈಕೊಂ ।
ಡರಸ ಮುನಿಪತಿಸಹಿತ ಯೋಧ್ಯಾ ।
ಪುರಕೆ ಬಂದನು ಬಹುಳವಿಭವದ ಲಖಿಳಜನ ನಲಿಯೆ ೧೫೧ ॥

ಮುನಿಪತಿಯು ನವನೀಶ ಮುನಿಭಾ ।
ವನೆಯಲೇ ಪೂಜಿಸಿ ಬಳಿಕ್ಕರ ।
ಮನೆಯ ನಿಕಟ ಪ್ರಾಂತನಲಿ ಬೀಡಾರವನು ರಚಿಸಿ ॥
ಮುನಿವಸಿಷ್ಠನ ಕರಿಸಿದನು ವರ ।
ಮುನಿವಸಿಷ್ಠನ ತನ್ನ ನೀಂದ್ರನ ।
ವಿನುತ ವಚನಾ ನುಜ್ಞೆಯಲಿ ಕೈಕೊಂಡ ನಧ್ವರವ ೧೫೨ ॥

(೧೫೦) ಉಚಿತವಚನಾಸಾರದಲಿ-ತಕ್ಕ ಉಪಚಾರೋಕ್ತಿಗಳ ಧಾರೆಯಿಂದ, (ಅನೇಕ ಉಪಚಾರಗಳಿಂದ).

(೧೫೧) ಕರಿಸು ಎಂಬ ಉಕಾರಾಂತಧಾತುವಿಗೆ 'ದು' ಎಂಬ ಪ್ರತ್ಯಯವು ಸೇರಿ-ಕರಿಸಿ ಎಂದಾಯ್ತು.

(೧೫೨) ನಿಕಟವಾದಪ್ರಾಂತ-ನಿಕಟಪ್ರಾಂತ (ವಿ. ಪೂರ್ವ. ಕ); ಮುನಿಯಾದ ವಸಿಷ್ಠ-ಮುನಿವಸಿಷ್ಠ (ವಿ. ಪೂರ್ವ. ಕ); ಬಳಿಕ್ಕ-ಇದಕ್ಕೆ ಬಳಿಕ, ಬಳಿಕೆ, ಬಳಿಕಂ, ಬಳಿಕ್ಕಂ ಎಂಬ ರೂಪಾಂತರಗಳಿವೆ.

## ಏಳನೆಯಸಂಧಿ.

ಸೂಚನೆ ॥ ಭುವನಜನ ಭುಲ್ಲವಿಸೆ ನಿರ್ಜರ ।
ನಿವಹಪತಿ ಪರಿಣಮಿಸೆ ಯಜ್ಞ ।
ಪ್ರವರದಲಿ ದಶರಥನು ಪಡೆದನು ಪುತ್ರಪಿಂಡಕವ ॥

ಧರಣಿಜಾಸುತ ಕೇಳು ದಶರಥ ।
ಧರಣಿಪತಿ ಕರಿಸಿದನು ನಾನಾ ।
ಧರಣಿಪಾಲರ ಧರ್ಮನಿಷ್ಠ ವಸಿಷ್ಠ ನಾಜ್ಞೆಯಲಿ ॥
ವರುಷವರುಷದ ವರ್ತನೆಯ ವಿ ।
ಸ್ತರದ ವಸ್ತೂತ್ಕರವ ನವರಲಿ ।
ತರಿಸಿದನು ವರಪುತ್ರಕಾಮೇಷ್ಟಿಯ ಮಹಾಧ್ವರಕೆ ॥ ೧೫೩

ಕಾಣೆ ನಿನಶಶಿಕುಲದ ರಾಜ ।
ಶ್ರೇಣಿಯಲಿ ತಾ ಬಳಿಕ ದಶರಥ ।
*ಕ್ಷೋಣಿಪಂ ಗೆಣೆಯಹ ನೃಪಾಲರನಖಿಲರಾಯರಲಿ ॥
ಕಾಣಿಕೆಯ ತಂದಿತ್ತ ರಾಗೀ ।
ರ್ವಾಣಪತಿನರರಾಜರುದಿತ ಕೃ ।
ಪಾಣ ತೇಜೋವಿಭವ ವೆಂತುಟೊ ನಿಮ್ಮ ದಶರಥನ ॥ ೧೫೪

ಪುರವಹೊಗಿದುದು ದಿಲ್ಲವಾ ಸುರ ।
ನರಭುಜಂಗ ಮರಿತ್ತಕಪ್ಪದ ।
ವರ ಸುವರ್ಣ ಸುರತ್ನ ಕನ್ಯಾವಸನ ವಸ್ತುಗಳ ॥
ಸರಯುವಿನ ತೀರದಲಿ ಯೋಜನ ।
ವೆರಡರಳತೆಯ ವಿಶ್ವ ಕರ್ಮೋ ।
ದ್ಧರಣ ರಮ್ಯಾಗಾರದಲಿ ಬಿಡಿಸಿದನು ಭೂಪಾಲ ॥ ೧೫೫

(೧೫೩) ವರುಷವರುಷದವರ್ತನೆಯು-ಪ್ರತಿವರ್ಷದಲ್ಲಿಯೂ ಅಧಿರಾಜರು ಒಪ್ಪಿಸಬೇಕಾದ ವಿಸ್ತರದವಸ್ತೂತ್ಕರವನು-ಕಪ್ಪಕಾಣಿಕೆಮೊದಲಾದ ಪದಾರ್ಥಗಳಸಮೂಹವನ್ನು.

(೧೫೪) ಕ್ಷೋಣಿ-ಭೂಮಿಯನ್ನು, ಪ-ಪಾಲಿಸತಕ್ಕವನು, ಕ್ಷೋಣಿಪ(ದೊರೆ), ಗೀರ್ವಾಣಪತಿ.. ದಶರಥನ,-ದೇವತೆಗಳರಾಜನಾದ ಇಂದ್ರನೂ, ಮನುಷ್ಯರಿಗೆ ಒಡೆಯರಾಗಿದ್ದ ಅನೇಕ ರಾಜರೂ ದಶರಥ ರಾಜನಿಗೆ ಕಾಣಿಕೆಗಳನ್ನು ತಂದೊಪ್ಪಿಸಿದರು. ಆದಕಾರಣ ದಶರಥನ ಖಡ್ಗಪ್ರಭಾವವು ಇಷ್ಟರಮಟ್ಟಿಗೆ [illegible]ವೆನ್ನು ಹೇಳುವುದು ಸಾಧ್ಯವಲ್ಲ. ಸ್ವರ್ಗಮರ್ತ್ಯಲೋಕಗಳಲ್ಲಿ ಅವನನ್ನು ಪ್ರತಿಭಟಿಸತಕ್ಕವರ ಯಾರೂ ಇರ ಲಿಲ್ಲ ವೆಂಬ ಭಾವವು.

(೧೫೫) ವಿಶ್ವಕರ್ಮೋದ್ಧರಣ-ವಿಶ್ವಕರ್ಮನಿಂದ ನಿರ್ಮಾಣಮಾಡಲ್ಪಟ್ಟ, ದೇವತೆಗಳ ಬಡಗಿ ವಿಶ್ವಕರ್ಮನೆಂದುಹೆಸರು. ರಾಕ್ಷಸರಬಡಗಿ ಮಯನು.

ತೆಗಿಸಿದನು ಬಳಿಕಿನಕುಲದ ಪೀ ।
ಳಿಗೆಯ ನೃಪರಾರ್ಜಿಸಿದ ನಾನಾ ।
ಯುಗಯುಗಂಗಳ ನಾಣೆಯಂಗಳ ನಖಿಳರತ್ನಗಳ ॥
ನಗರ ದುಪಕಂಠದಲಿ ಕೋಟಿಯ ।
ಬಿಗಿಸಿ ಬಿಡಿಸಿದ ನಧ್ವರಕೆ ಸಲು ।
ವ ಗಣಿತಾಖಿಲ ವಸ್ತುಗಳ ನೆರಹಿದನು ನರನಾಥ ॥ ೧೫೬ ॥

ವರಸುವರ್ಣ ಸುರತ್ನಸರ್ವಾ ।
ಭರಣ ಭವನಂಗಳಿಗೆ ಗಾವುದ ।
ವೆರಡರಲಿ ಹವಣಿಸಿತು ನಿಖಿಳಾಂಬರಸುಗಂಧಗಳ ॥
ಇರವು ಗಾವುದಮೂರರಲಿ ಕರಿ ।
ತುರಗ ಕನ್ಯಾಧೇನು ಮುಖ್ಯಾ ।
ಧ್ವರದ ದಾನದ್ರವ್ಯಕಾಯ್ತೇಳರ ಸಮಾಪ್ತಿಯಲಿ ॥ ೧೫೭ ॥
ಪರಿಕಲಿತ ನಾನಾಫಲದ ಪರಿ ।
ಪರಿಯ ಧಾನ್ಯವ್ರಜಕೆ ಗುಡಶ ।
ರ್ಕರೆಗೆ ಸಂಭಾರಕ್ಕೆ ತೆರಹಾಯ್ತೆಂಟರಳತಿಯಲಿ ॥
ವರದವಜ್ರದ ಗಾರೆಗಳ ಹೊ ।
ಕ್ಕರಣೆಗಳ ಸಾಲುಗಳ ಯೋಜನ ।
ವೆರಡರಲಿ ಘೃತತೈಲ ದುಗ್ಧಾದಿಗಳಿಗೆಡೆಯಾಯ್ತು ॥ ೧೫೮ ॥

ತರುಣ ಕೇಳ್ ಹನ್ನೆರಡು ಯೋಜನ ।
ವರೆಯ ಭೋಜನಶಾಲೆಗಳು ವಿ ।
ಸ್ತರಿಸಿದುವು ಬಾಣಸದ ಭವನಂಗಳು ಸುವೀಥಿಯಲಿ ॥

(೧೫೬) ಯಾಗಕ್ಕೆ ಬಹುದ್ರವ್ಯವು ಬೇಕಾಗಿದ್ದುದರಿಂದ ತನ್ನಲ್ಲಿಸಿದ್ಧವಾಗಿರುವ ದ್ರವ್ಯವು ಸಾಲದೆ, ಸೂರ್ಯವಂಶದ ಪೂರ್ವರಾಜರು ಕೂಡಿಟ್ಟಿದ್ದ ಆಯಾಕಾಲದ ನಾಣ್ಯಗಳೆಲ್ಲವನ್ನೂ ತೆಗೆಯಿಸಿದನು

(೧೫೭) ಅನ್ವಯ-ವರಸುವರ್ಣ.........ಭವನಂಗಳಿಗೆ, (ಇರವು) ಗಾವುದವೆರಡರಲ್ಲಿ, ಹವಣಿಸಿತು. ನಿಖಿಳಾಂಬರಸುಗಂಧಗಳ ಇರವು, ಗಾವುದಮೂರರಲಿ(ಹವಣಿಸಿತು). ಕರಿತುರಗ... ದ್ರವ್ಯಕ್ಕೆ. ಇರ್ + ಅವು-ಭಾವಾರ್ಥದಲ್ಲಿ ಅವು ಎಂಬಪ್ರತ್ಯಯವುಸೇರಿ-ಇರವು ಎಂದಾಯ್ತು.

(೧೫೮) ತ್ಸ-ಗುಡ; ಧ್ವ-ಗುಳ, ಹೊಕ್ಕರಣೆ-ದ್ಬ, ಪುಷ್ಕರಣಿ-ತ್ಸ; ತಿಲ-ಎಳ್ಳು, ಅದರಿಂದಾದುದು-ತೈಲ (ಎಣ್ಣೆ)

(೧೫೯) ಹನ್ನೆರಡುಯೋಜನವರೆಯು-ಹನ್ನೆರಡು ಯೋಜನದ ಎಲ್ಲೆಯು, ವರೆ ಎಂಬ ಶಬ್ದಕ್ಕೆ ಸೀಮೆಯೆಂದು ಅರ್ಥ.

ಪರಿಪರಿಯವಹ ಕಾಯಿ ಮೇಲೋ ।
ಗರದ ಮಧುರಾಮ್ಲಾದಿ ಲವಣೋ ।
ತ್ಕರ ಕಟುದ್ರವ್ಯಾದಿಗಳಿ ಗಾಯ್ತನಿತ ರೊತ್ತಿನಲಿ ॥ ೧೫೯ ॥
ಪರುಠವಿಸಿದರು ವಿವಿಧಗವ್ಯದ ।
ಸರಸಿಗಳ ಸಂವೇಶವಲಿ ಕೊ ।
ಪ್ಪರಿಗೆ ಯಂತ್ರದ್ರೋಣಿಗಳ ರಾಟಾಳಸೂತ್ರಗಳ ॥
ನಿರತಿಶಯ ಯಜ್ಞೋಪಕರಣದ ।
ಪರಿಪರಿಯ ಸಂಭಾರಚಯ ಗೋ ।
ಚರಿಸಿದುವು ಗುರುವರವಸಿಷ್ಠ ಮುನೀಂದ್ರನಾಜ್ಞೆಯಲಿ ॥ ೧೬೦ ॥
ಬರೆಯಿಸಿತು ಬಳಿಕೋಲೆ ಮಣಿಹಾ ।
ರರಿಗೆ ಹೇಳಿಕೆಯಾಯ್ತು ಶಿಷ್ಟರ ।
ಪರುಠವಿಸಿ ಕಳುಹಿದನು ಪಾವುಡ ಸಹಿತ ಪಾರ್ಥಿವರ ॥
ಪುರಗಳಿಗೆ ಕೇಕಯಧರಾಧೀ ।
ಶ್ವರಗೆ ಕಾಶೀಪತಿಗೆ ನಿಮಿಕುಲ ।
ದರಸನಿಗೆ ಮಗಧನಿಗೆ ನಿರುಪಮ ರೋಮಪಾದಂಗೆ ॥ ೧೬೧ ॥
ಉಳಿದ ಚತುರಂಭೋಧಿವೃತ ಭೂ ।
ತಳದ ಭೂಪಾಲರಿಗೆ ದೂತರ ।
ಕಳುಹಿದನು ಕಳುಹಿದನು ಋಷಿಗಳಿಗತ್ರಿ ಮೊದಲಾದ ॥
ಇಳೆಯೊಳುಳ್ಳ ಸಮಸ್ತ ಮುನಿಸಂ ।
ಕುಳಕೆ ಸದ್ವಿನಯಾಭಿನಮಿತಾಂ ।
ಜಳಿಯ ಭಯಭಕ್ತಿಯಲಿ ಭೂಪತಿ ಬಿನ್ನವತ್ತಳೆಯ ॥ ೧೬೨ ॥

ಪಾಕಶಾದಭವನಂಗಳು ವಿಸ್ತರಿಸಿದುವು ಅನಿತರೊತ್ತಿನಲಿ, ಪರಿಪರಿಯ.........ಪ್ರಪ್ಪರಿಗಳಿಗೆ (ಸ್ಥಳವು) ಆಯ್ತು, ಎಂದನ್ವಯವು.

(೧೬೦) ಗೋಸಂಬಂಧವಾದುದು-ಗವ್ಯ (ಹಾಲು, ಮೊಸರು, ತುಪ್ಪ ಮೊದಲಾದುದು). ಸರಸಿ-ದ್ಧ, ತ್ತ-ಸರಸ್; ದ್ರೋಣಿ-ತ್ಸ, ದೋಣಿ-ದ್ಭ; ವಶಿಷ್ಠ-ಇಂದ್ರಿಯ ನಿಗ್ರಹಮಾಡಿದವನು (ವಶಿಷ್ಠ) ಯಜ್ಞ-ತ್ಸ, ಜನ್ನ-ದ್ಭ.

(೧೬೧) ಪಾವುಡಸಹಿತ-ವಸ್ತ್ರಗಳೊಡನೆ-ಲಗ್ನಪತ್ರಿಕೆಗಳನ್ನು ಕಳುಹಿಸಿಕೊಡುವಾಗ ಉಡು ಗೊರೆಯನ್ನು ಕಳುಹಿ ಕೊಡುವುದು ಪೂರ್ವಸಂಪ್ರದಾಯವು.

(೧೬೨) ಭೂಪತಿ ಉಳಿದ.........ಭೂಪಾಲರಿಗೆ ದೂತರ ಕಳುಹಿದನು, ಅತ್ರಿ ಮೊದಲಾದ......... ಸಂಕುಳಕೆ .........ಭಯಭಕ್ತಿಯಲಿ ಬಿನ್ನವತ್ತಳೆಯ ಕಳುಹಿದನು, ಎಂದನ್ವಯವು.

ದ್ಭ-ಬಿನ್ನವತ್ತಳೆ, ತ್ಸ-ವಿಜ್ಞಾಪನಾಪತ್ರಿಕಾ.

ಬಳಿಕ ನೆಲೆಶೋಧಿಸಿತು ಸವದ ।
ಸ್ಥಳಕೆ ಸುಮುಹೂರ್ತದಲಿ ವೈದಿಕ ।
ವಿಳಸದಲಿ ವಿಧಿವಿಹಿತದಲಿ ಸರಯುವಿನ ತೀರದಲಿ ॥
ನಿಳಯುಗಳು ನಿರ್ಮಿಸಿದು ವಧ್ವರ ।
ಲಲಿತ ಶಾಲಾವಳಿಯ ಸೌಧಾ ।
ವಳಿಯ ಸಂರಂಭದಲಿ ಶಶಿಸೂರ್ಯ ಪ್ರಭಾನ್ವಿತದ ॥ ೧೬೩ ॥

ಕೇಳಿದೈ ಕುಶಬಳಿಕ ಭೋಜನ ।
ಶಾಲೆಯಂ ತರ್ವೇದಿ ಪತ್ನೀ ।
ಶಾಲೆ ಮುಖಶಾಲಾದಿ ನಾನಾ ವಿಧದ ಶಾಲೆಗಳ ॥
ಸಾಲು ಮೆರೆದುವು ಸೊಗಸಿದುವು ಸಂ ।
ಸ್ಥೂಲತರ ವೇದಿಗಳು ವಿಮುಳ ಪಿ ।
ಶಾಲ ವಿಪ್ರ ಸದಸ್ಸುಗಳು ಸಭೆಗಳು ಧರಾಧಿಪರ ॥ ೧೬೪ ॥

ಚಾರುತರ ಮುಖವೆರಡರ ಮುಳಾ ।
ಗಾರ ಮಂಟಪವಳಯದಲಿ ಕ ।
ರ್ಪೂರ ಧೂಳಿಸಿತಿಕ್ಕೆಲದ ಮಾಲೆಗಳು ಮೌಕ್ತಿಕದ ॥
ತೋರಣಗಳು ಸ್ಫುರಿಸಿದುವು ಬಿಂ ।
ಗಾರಿಬಿಗಿದುವು ಬಹುಳಕದಳೀ ।
ಸಾರದಲಿ ಸಂಭ್ರಮಿಸಿದುವು ಸೌಧಾಳಿ ನಾಲ್ದೆಸೆಯ ॥ ೧೬೫ ॥

ತಳಿತ ಪಲ್ಲವ ಸತ್ತಿಗೆಯ ಹೊಂ ।
ಗಲಶಗಳ ಹೊದರೆದ್ದ ಝಲ್ಲರಿ ।
ಗಳ ವಿಚಿತ್ರಾಂಬರದ ಮುತ್ತಿನಮೇಲುಕಟ್ಟುಗಳ ॥

(೧೬೩) ಶೋಧಿಸಿತು, ನಿರ್ಮಿಸಿದುವು; ಎಂಬ ಕ್ರಿಯಾಪದಗಳು ಇಲ್ಲಿ ಕರ್ತ್ರರ್ಥಗಳಲ್ಲ, ಕರ್ಮಾರ್ಥದಲ್ಲಿ ಪ್ರಯೋಗಿಸಲ್ಪಟ್ಟವೆ. ಬಳಿಕ ಸವದ.........ತೀರದಲಿ ।ನೆಲೆಶೋಧಿಸಿತು,-ಒಳ್ಳೆಯಲಗ್ನದಲ್ಲಿ ವೇದೋಕ್ತಕ್ರಮದಿಂದ ಯಜ್ಞಶಾಲೆಯನ್ನು ಕಟ್ಟುವುದಕ್ಕಾಗಿ ಭೂಮಿಯನ್ನು ಶೋಧಿಸಿದರು.

(೧೬೪) ಸಾಲುಮೆರೆದುವು-ಇಲ್ಲಿ ಬಗೆಬಗೆಯುಮನೆಗಳ ಅನೇಕಸಾಲುಗಳಿರುವುದರಿಂದ ಒಂದೇ ಸಾಲಲ್ಲವಾಗಿ ಬಹುವಚನಕ್ರಿಯಾಪದವು ಬಂದಿದೆ. (ಸಾಲುಗಳು ಮೆರೆದುವು) ಎಂಬರ್ಥವು.

(೧೬೫) ಮುಖವೆರಡರ-ಅಶ್ವಮೇಧ ಮತ್ತು ಪುತ್ರಕಾಮೇಷ್ಟಿ ಎಂಬೆರಡು ಯಜ್ಞಗಳ, ಅಮಳ + ಅಗಾರ = ಅಮಳಾಗಾರ; ಧೂಳನ + ಇಸು = ಧೂಳಿಸು-ಎರಚಲ್ಪಡು, ದ್ವ-ದಿಂಗಾಡಿ, ತ್ಸ-ಭೃಂಗಾರ;

(೧೬೬) ತಳಿರ್ + ದ = ತಳಿರ್ತ; ಎಂದು ರೂಪವಾಗುವುದು. ಉತ್ತರಮಾರ್ಗದಲ್ಲಿ 'ತಳಿತ' ಎಂದಾಗಿದೆ. ಈ ಪದ್ಯದಲ್ಲಿ ರಂಜಿಸಿದುವು, ಎಂಬಕ್ರಿಯೆಗೆ ಕರ್ತೃಪದವಿಲ್ಲದುದರಿಂದ 'ಸೌಧಗಳು' ಎಂದು ಅಧ್ಯಾಹಾರಮಾಡಿಕೊಳ್ಳಬೇಕು.

ನೆಲೆನೆಲೆಯ ಲೋವೆಗಳ ಮುಕ್ತಾ ।
ಫಲದ ಸಡಕಿನ ಸೂಸಕದ ಲಂ ।
ಬಳದ ಲಳಿಗಳ ಲಹರಿಯಲಿ ರಂಜಿಸಿದುವನವರತ ॥ ೧೬೬ ॥

ಸವೆದು ವೀಪರಿ ಸಪ್ತತಂತು ।
ಪ್ರವರ ದಧಿಕೃತರಚಿತ ನಾನಾ ।
ಭುವನ ಭೂಮಿದೇವ ಭೂಭುಜ ವೈಶ್ಯ ಶೂದ್ರರಿಗೆ ॥
ವಿವಿಧ ವರ್ಣಾಶ್ರಮರಿ ಗಾದುವು ।
ಭವನ ಬಹಿರಾವರಣದಲಿ ಮುಖ ।
ಸವನ ಸಾಧನ ವಸ್ತುಚಯ ಸೊಗಸಿದುವು ನಿಮಿಷದಲಿ ॥ ೧೬೭ ॥

ಕೇಳಿಸಿತು ಬಳಿಕಖಿಲ ಪೃಥ್ವೀ ।
ಪಾಲ ಪಙ್ಕ್ತಿಯೊ ಳಶ್ವಮೇಧ ವಿ ।
ಶಾಲ ಸುತಕಾಮೇಷ್ಟಿ ಯ ಧ್ವರವಾರ್ತೆ ನಿಮಿಷದಲಿ ॥
ಮೇಲು ಮೇಲುಬ್ಬರದ ಗಮನದ ।
ಜಾಳಿಯಲಿ ಬರುತಿರ್ದುದಂಬುಧಿ ।
ಮೇಲೆ ಯಂತರ್ವಿಷಯದ ವನೀಪಾಲಸಂದೋಹ ॥ ೧೬೮ ॥

ಜನಕ ಕಾಶೀರಾಜ ಕೇಕಯ ।
ಜನಪನಂಗಾಧೀಶಮಗಧಾ ।
ವನಿಯ ಪತಿ ಮಾದ್ರೀಶ ಮಾಳವ ಮರುಮಹೀಪಾಲ ॥
ವಿನುತ ಘೂರ್ಜರ ಗೌಳ ಕೇರಳ ।
ಜನಪದಾದಿಸಮಸ್ತನೃಪರೊ ।
ಗ್ಗಿನಲಿ ಬಂದರು ಭಾಸ್ಕರಾನ್ವಯ ನಮಳಪುರವರಕೆ ॥ ೧೬೯ ॥

(೧೬೭) ಸಪ್ತತಂತುಪ್ರವರದಧಿಕೃತರಚಿತ-ಸಪ್ತತಂತು ಪ್ರವರದ + ಅಧಿಕೃತ + ರಚಿತ; ಶ್ರೇಷ್ಠವಾದ ಯಜ್ಞದ ಅಧಿಕಾರಿಗಳಿಂದ ನಿರ್ಮಿಸಲ್ಪಟ್ಟದ್ದು. ಮುಖಸವನ-ಯಜ್ಞದಲ್ಲಿ ಪ್ರಾಥಮಿಕವಾದ ಹೋಮ.

(೧೬೮) ಅಂಬುಧಿ-ಸಮುದ್ರವೇ, ವೇಲೆ-ಮೇರೆಯಾಗಿರುವದು, (ಭೂಮಿ) ಅಂತರ್ವಿಷಯದ-ದೇಶಗಳಲ್ಲಿರುವ.

(೧೬೯) ಮಾದ್ರೀಶ-ಮದ್ರದೇಶದ ದೊರೆ; ಭಾಸ್-ಕಾಂತಿಯನ್ನು, ಕರ-ಉಂಟುಮಾಡುವವನು ಭಾಸ್ಕರ (ಸೂರ್ಯ) ಪುರಗಳಲ್ಲಿ ವರ-ಪುರವರ(ಸ. ತ.)

ಲಾಳ ಚೋಳವರಾಳ ವರಬಂ ।
ಗಾಳ ಬಾಹ್ಲಿಕ ಭೋಜವರ ಖಾಂ ।
ಚಾಳ ಪುಷ್ಕರ ಪಾರಿಯಾತ್ರ ಕರೂಷಕಾಂಭೋಜ ॥
ಕೌಳವಾಂಧ್ರ ಕಳಿಂಗಕುರು ನೇ ।
ಪಾಳನಿಷಧ ವಿದರ್ಭ ಧರಣೀ ।
ಪಾಳಕತಿ ಸಂದಣಿಸಿದುದು ಸಾಕೇತನಗರಿಯಲಿ ॥ ೧೭೦ ॥

ಕುರುಮಹೀತಳದಮರ ಭಾರತ ।
ವರುಷದನುಪಮ ರಮ್ಯಕದ ಹರಿ ।
ವರುಷವಿಷಯವಿಳಾವೃತದ ಕಿಂಪುರುಷಮಂಡಲದ ॥
ನರಪತಿಗಳೈತಂದರೇ ನ ।
ಚ್ಚರಿಯೊ ದಶರಥಸಾರ್ವ ಭೌಮಕ ।
ನರಸುತನದ ಮಹಾಮಹಿಮೆಯನು ಕುಶನೆ ಕೇಳೆಂದ ॥ ೧೭೧ ॥

ನೆರೆದರೈ ಬಳಿಕತ್ರಿ ಕಣ್ವಾಂ ।
ಗಿರಸಕಾಶ್ಯಪ ಕುಶಿಕಸುತಸುರ ।
ಗುರು ತನುದ್ಭವ ಗಾರ್ಗ್ಯ ಗೌತಮ ಜಹ್ನುಜಾಬಾಲಿ ॥
ಹರಿತ ಮಾರ್ಕಂಡೇಯ ಮೈತ್ರಾ ।
ವರುಣಿ ಮುದ್ಗಲ ಮುಖ್ಯಮುನಿ ಪಾ ।
ಲರುಗಳಾಸೂರ್ಯಾನ್ವಯನ ಸಾಕೇತನಗರಿಯಲಿ ॥ ೧೭೨ ॥

ಚ್ಯವನ ದತ್ತಾತ್ರೇಯ ಭೃಗುಸಂ ।
ಭವ ಸುತೀಕ್ಷ್ಣ ದೀರ್ಘತಪ ಗಾ ।
ಲವ ಮತಂಗನು ವತ್ಸಜೈಮಿನಿ ಕಂಕನುಪಮನ್ಯು ॥

(೧೭೦) ಕರೂಷ-ಇದೊಂದುದೇಶ; ಇದಕ್ಕೆ ಕರೂಶ, ಎಂದು ಹೆಸರುಂಟು; ಸಾಕೇತನಗರಿ-ಅಯೋಧ್ಯಾಪುರ;

(೧೭೧) ವರ್ಷ-ಎಂದರೆ ಜಂಬೂದ್ವೀಪದ ರಾಜ್ಯಭಾಗಗಳು. ಇವು-ನಾಭಿ, ಕಿಂಪುರುಷ. ಹರಿ, ಇಳಾವೃತ, ರಮ್ಯಕ, ಹಿರಣ್ಯ ,ಕುರು, ಭದ್ರಾಶ್ವ, ಕೇತುಮಾಲ ಈ ಯೊಂಬತ್ತು. ಇವುಗಳ ರಾಜರು ಜಂಬೂದ್ವೀಪದರಾಜಕುಲಕ್ಕೆ ಸೇರಿದ ಮುಖ್ಯರಾಜರು, ಸರ್ವಭೂಮಿ-ಭೂಮಂಡಲ, ಅದಕ್ಕೆ ಒಡೆಯನಾದವನು-ಸಾರ್ವಭೌಮ (ಚಕ್ರವರ್ತಿ)

(೧೭೨) ಕುಶಿಕಸುತ-ಕುಶಿಕಮುನಿಯಮಗ(ವಿಶ್ವಾಮಿತ್ರ) ಮಿತ್ರಾ ವರುಣನಮಗ-ಮೈತ್ರಾವರುಣಿ(ಅಗಸ್ತ್ಯ)

(೧೭೩) ಭೃಗು-ಭೃಗುವಿನ,ಸಂಭವ-ಮಗನು-ಭಾರ್ಗವ(ಪರಶುರಾಮ, ಅಥವಾ ಶೌನಕ.

ರವಿ ಪಿತಾಮಹ ಮುನಿ ಮೃಕಂಡು ।
ಪ್ರವರ ಶೌನಕಮುಖ್ಯ ಮುನಿ ಪುಂ ।
ಗವರು ಬಂದರು ವರತಪೋಧನಗಣದ ಗಡಣವಲಿ ॥ ೧೭೩ ॥

ವಿವಿಧ ವಿದ್ವಜ್ಜನ ಸುಮಾಂತ್ರಿಕ ।
ನಿವಹ ಗಾಯಕ ಕಥನ ನರ್ತಕ ।
ಕವಿ ವಿದೂಷಕ ವಾದಿ ವಾಗ್ಮಿ ಮಹೇಂದ್ರಜಾಲಕರು ॥
ನವ ವಿನೋದ ವಿದಗ್ಧ ಜಟಿವೈ ।
ಷ್ಣವ ಕಪಾಲಿಕ ಬೌದ್ಧಮುಖ್ಯ ।
ಪ್ರವರ ದಾನಾರ್ಥಿಗಳು ನೆರೆದರು ವಾಜಿಮೇಧದಲಿ ॥ ೧೭೪ ॥

ಜಗದ ಜನಪದದ ರ್ಥಿಗಳು ಶಿ ।
ಲ್ಪಿಗರು ಸರಸ ಸರೀಸೃಪ ಗ್ರಾ ।
ಹಿಗಳು ವಾಮನ ಬಧಿರ ಮೂಕರನಾಥ ರಂಧಕರು ॥
ಹೊಗಳಿಕೆಯ ಪರಿಪರಿಯ ಕೈವಾ ।
ರಿಗಳು ನೆರೆದರು ನಿಮ್ಮಯೋಧ್ಯಾ ।
ನಗರದಲಿ ರಾಜೇಂದ್ರಚಂದ್ರಮ ನಶ್ವಮೇಧದಲಿ ॥ ೧೭೫ ॥

ತರುಣ! ಕೇಳೈ ತುರಗಮೇಧಾ ।
ಧ್ವರದ ಮೇಲಾರೈಕೆನಡೆದುದು ॥
ಪರಮಋಷಿ ಜಾಬಾಲಿ ಮುಖ್ಯಮುನೀಶ ಮಾನ್ಯತೆಯ ॥
ಪರುಠವಣೆ ವಿಜಯಂಗೆ ಸೇರಿತು ।
ಧರಣಿಯಮರರ ದಕ್ಷಿಣೆಯ ವಿ ।
ಸ್ತರಣದೊಡೆತನ ಸಂದುದಧ್ವರದಲಿ ಸುಮಂತ್ರಂಗೆ ॥ ೧೭೬ ॥

(೧೭೪) ನವವಿನೋದವಿದಗ್ಧ-ಹೊಸಹೊಸಚಮತ್ಕಾರಗಳನ್ನು ತೋರಿಸುವುದರಲ್ಲಿ ಪಂಡಿತ,

(೧೭೫) ತ್ವ-ಮೂಕ, ಧ್ವ-ಮೂಗ; ಸರೀಸೃಪ-ತೆವಳುತ್ತಾ ನಡೆವುದು (ಹಾವು) ರಾಜೇಂದ್ರನು+ಚಂದ್ರಮನಂತೆ-ರಾಜೇಂದ್ರಚಂದ್ರಮ (ಉ. ಉ. ಕರ್ಮ. ಸ)

(೧೭೬) ತುರಗ-ಕುದುರೆಯನ್ನು ಮೇಧ-(ಹೋಮಕ್ಕಾಗಿ) ಕೊಂದು ಮಾಡುವ ಯಜ್ಞ-ಅಶ್ವಮೇಧ. ಪರಮ+ಋಷಿ,=ಪರಮರ್ಷಿ; ಯಣ್‌ಸಂಧಿಯಾಗಬೇಕಾಗಿತ್ತು' ವಿಕಲ್ಪವಾದುದರಿಂದ ಪ್ರಕೃತಿಭಾವವು ಬಂದಿದೆ.

ಕರೆಕರೆದು ಭೋಜನಕೆ ಭೂವಿಬಾ ।
ಸುರರನಿರಿಸಿ ಸುಗಂಧಮಾಲ್ಯಾಂ ।
ಬರ ಸಮರ್ಪಣೆಗಾದುದೊಡೆತನವಾ ಜಯಂತಂಗೆ ॥
ನೆರೆದ ಯಾಚಕ ಜನವ ಕರೆದುಪ ।
ಚರಿಸಿ ಮನ್ನಿಸುವನಿತು ದೃಷ್ಟಿಯ ।
ಪರಿವಶಕೆ ಸಂದುದು ವಸಿಷ್ಠಮುನೀಂದ್ರನಾಜ್ಞೆಯಲಿ ॥ ೧೭೭ ॥

ಬಯಸಿ ಬೇಡಿದ ವಿವಿಧವಸ್ತು ।
ಪ್ರಯಕೆ ಭಾರಕನಾದನಾಕೇ ।
ಕಯ ನೃಪಾಲಕಸುತ ಯುಧಾಜಿತು ಯಜ್ಞವಾಟದಲಿ ॥
ನಿಯತ ದಧಿಘೃತ ದುಗ್ಧ ಗುಡ ಸಂ ।
ಚಯದ ಸಂಭಾರಾದಿ ರಸನಿ ।
ರ್ಣಯಕೆ ಕಟ್ಟಧಿಕಾರ ಸಿದ್ಧಾರ್ಥಂಗೆ ನೆಲೆಯಾಯ್ತು ॥ ೧೭೮ ॥

ಹೆಸರೆನಿಪ ನಾನಾದಿಗಂತದ ।
ವಸುಮತೀಶರನುಚಿತವೃತ್ತಿಯ ।
ಲೊಸಗೆ ವಡಿಸುವ ಪರುಠವಣೆ ರೋಮಾಂಘ್ರಿಭೂವರನ ॥
ವಶಕೆ ಸಂದುದು ಸಕಲಸೇನಾ ।
ವಿಸರ ವಿವಿಧಪ್ರಜೆಗಳನು ಮ ।
ನ್ನಿಸುವ ಕಟ್ಟಧಿಕಾರವಾಯಿತು ಮಗಧಭೂಪತಿಗೆ ॥ ೧೭೯ ॥

ಆದುದನುಪಮ ಮಂತ್ರಿಗಳಿ ಗುಳಿ ।
ದಾದ ಸೇವೆಯ ಪರುಠವಣೆ ಮೇ ।
ಲಾದು ದಧಿವಾಸನ ನೃಪಂಗಾಯ್ತಾಗಮೋಕ್ತದಲಿ ॥

(೧೭೭) ದೃಷ್ಟಿ-ದಶರಥನ ಅರಮನೆಯ ಅಧಿಕಾರಿಗಳಲ್ಲೊಬ್ಬನು. ಕರೆಕರೆದು-ಆಸಕ್ತಿಯಲ್ಲಿ ದ್ವಿರುಕ್ತಿ.

(೧೭೮) ಯಜ್ಞವಾಟ-ಯಜ್ಞಮಂಟಪ, ವಾಟ-ಮಾರ್ಗ, ಜಗುಲಿ, ಬೇಲಿ, ದೇಹಭೇದ, ಮಂಟಪ, ಇವು ನಾನಾರ್ಥಗಳು. ಕಡಿದು + ಅಧಿಕಾರ-ಕಟ್ಟಧಿಕಾರ.

(೧೭೯) ರೋಮಾಂಘ್ರಿಭೂವರ-ರೋಮಪಾದ ಮಹಾರಾಜ. ಒಸಗೆಯಂ + ಪಡಿಸು - ಒಸಗೆಪಡಿಸು. (ಕ್ರಿ,ಸ)

(೧೮೦) ಅಧಿವಾಸನ-ದುರ್ಗಾಪೂಜೆ, ಯಜ್ಞ ಮೊದಲಾದ ಕರ್ಮಗಳನ್ನು ಪ್ರಾರಂಭ ಮಾಡುವುದಕ್ಕೆ ಪೂರ್ವದಿನದಲ್ಲಿ ಅರಿಸಿನ,ಗಂಧ ಮೊದಲಾದ ೨೭ ಮಂಗಳದ್ರವ್ಯಗಳನ್ನು ಸ್ಪರ್ಶಮಾಡುವುದು-

ಆದಿನಾರಾಯಣನ ಶ್ರುತಿಸಂ ।
ವಾದ ಪಾರಾಯಣನ ಸುಜನಾ ।
ಹ್ಲಾದ ಸುಖಸಂಪೂರಣನ ನೊಲಿದರ್ಚಿಸಿದ ಭೂಪ ॥ ೧೮೦ ॥

ತರುಣ ಕೇಳ್ಕರುದಿನದ ಲಮೃತೋ ।
ತ್ಕರ ಶುಭೋದಯ ಲಗ್ನದಲಿ ವಿ ।
ಸ್ತರ ಮಹಾಮಂತ್ರಾದಿ ಪೂರಿತವಿವಿಧ ವಿಭವದಲಿ ॥
ಅರಸಿಯರು ಸಹಿತುಲಿವ ಮಂಗಳ ।
ಕರದ ತೂರ್ಯತ್ರಯದ ಲಿಭಕಂ ।
ಧರದ ಲೈತಂದಿಳಿದು ಹೊಕ್ಕನು ಯಜ್ಞಮಂಟಪವ ॥ ೧೮೧ ॥

ಕರಿಸಿದನು ಬಳಿಕಖಿಳ ಪೃಥ್ವೀ ।
ಶ್ವರರಿ ಗನುಪಮ ತುರಗಮೇಧಾ ।
ಧ್ವರದ ಶಾಲಾವರಣ ಸೌಧಾವಳಿಯ ವಳಯದಲಿ ॥
ಹರುಷದಲಿ ಕುಳ್ಳಿದರು ಹರಿವಿ ।
ಷ್ಟರಗಳಲಿ ಮಣಿಬಂಧುರದ ವಿ ।
ಸ್ತರದ ತತ್ಕಾಲೋಚಿತದ ವಿನಿಯೋಗಿ ಜನಸಹಿತ ॥ ೧೮೨

ಸಂದಣಿಸಿದುದು ಸಕಲಮುನಿಜನ ।
ವೃಂದವಾಕ್ರತುಕರ್ಮ ಶಾಸ್ತ್ರ ।
ಚ್ಛಾಂದಸಾಗಮ ಪರಿಣತರು ಪರಿಚಾರಕವ್ರಾತ ॥
ಬಂದು ದಾಕ್ಷಣ ಸಕಲ ಸಾಧನ ।
ವೃಂದವಾ ಕ್ರತುಶಾಲೆ ಸೊಗಸಾ ।
ಯ್ತಂದಿ ನಂಬುಜಗರ್ಭ ನಾರಂಭಿಸಿದ ಮಖದಂತೆ ॥ ೧೮೩ ॥

ಇದಕ್ಕಾಗಿ ಮಂತ್ರಗಳೂ, ವಿಧಿಯೂ ಇವೆ. ಈ ವಿಧದ ಸಂಸ್ಕಾರಕ್ಕೆ ಅಧಿವಾಸನ ಎಂದು ಹೆಸರು. ಶ್ರುತಿಸಂವಾದ ಪಾರಾಯಣನ-ವೇದಪಠನೆಯಲ್ಲಿ ಆಸಕ್ತನಾಗಿರುವ.

(೧೮೧) ನೃತ್ತಗೀತವಾದ್ಯ, ಈ ಮೂರು ಸೇರಿದರೆ ತೂರ್ಯತ್ರಯವೆಂದು ಸಂಜ್ಞೆ, ಅಮೃತ-ತ್ಸ, ಅಮರ್ಮ-ದ್ಧ, ತ್ಸ-ಯಜ್ಞ, ದ್ಧ-ಜನ್ಮ; ತ್ಸ-ಮಂಟಪ, ದ್ಧ-ಮಂಡಪಿ.

(೧೮೨) ಕುಳ್ಳಿರ್ದರ್ ಎಂಬುದು ದಕ್ಷಿಣಮಾರ್ಗದ ಕನ್ನಡ, ಇದಕ್ಕೆ ಉತ್ತರಮಾರ್ಗದಲ್ಲಿ ಕುಳ್ಳಿದರು ಎಂದಾಗಿದೆ.

(೧೮೩) ಅಂಬುಜ-ಕಮಲವು- ಗರ್ಭ-ಗರ್ಭವು ಯಾರಿಗೋ ಅವನು (ಬ್ರಹ್ಮ). ಸಂದಣಿ + ಇಸು-ಸಂದಣಿ ಎಂಬ ಕನ್ನಡ ನಾಮವಾಚಕದಮೇಲೆ ಇಸು ಪ್ರತ್ಯಯವುಸೇರಿ ಹೊಸ ಧಾತುವಾಗಿದೆ.

ಕೇಳಿದೈ ರಘುವಂಶಲಕ್ಷ್ಮೀ ।
ಲೋಲಸುತ ಬಳಿಕಾ ಮಹಾಧ್ವರ ।
ಶಾಲೆಯಲಿ ವರ ವಾಮದೇವ ವಸಿಷ್ಠ ರುಚಿತದಲಿ ॥
ಬಾಲಶಶಿಧರ ಸನ್ನಿಭನ ಮುನಿ ।
ಜಾಲಚಂಡಪ್ರಭನ ಶಾಂತಾ ।
ಬಾಲಿಕೆಯ ವಲ್ಲಭನ ಮನ್ನಿಸಿದರು ನಯೋಕ್ತಿಯಲಿ ೧೮೪

ಎಸೆದುದ ಧ್ವರವೆರಡರ ಭಿಮುಖ ।
ವಸತಿಯು ಭಿವಳಯದಲಿ ಸಂವಾ ।
ದಿಸಿದ ಸಕಲ ದ್ರವ್ಯದಲಿ ಮುನಿವರನ ನುಜ್ಞೆಯಲಿ ॥
ಮಿಸುಪ ಕಾಂಚನ ಪಾತ್ರೆಗಳ ಪರಿ ।
ವಿಸರ ದಮಳ ಸುವರ್ಣ ಕುಂಭ ।
ಪ್ರಸರದಲಿ ತದ್ವಿಧಿ ವಿಹಿತ ಯಜ್ಞೋಪಕರಣದಲಿ ॥ ೧೮೫ ॥

ವರಕುಶ ಸ್ಥಂಡಿಲ ವುಲೂಖಲ ।
ಚರು ಪುರೋಡಾಶಾಜ್ಯ ದರ್ಭಾಂ ।
ಕುರ ಸುವರ್ಣದ್ರೋಣ ಸೃಕ್ಸ್ರುವ ವ್ರೀಹಿ* ತಿಲಸಾಜ್ಯ ॥
ಬರುಹಿಯಿಧ್ಮ ಸಮಿತ್ಸ್ರತಾನಾ ।
ವರಣಹುತ ಪತ್ರಾದಿ ಮುಖಪರಿ ।
ಕರವ ಮೇಳೈಸಿದರು ತತ್ಕ್ರತುಕುಂಡವಲಯದಲಿ ॥ ೧೮೬

ಸುಳಿದು ಬಂದುದು ವಾಜಿ ಭೂಮಂ ।
ಡಲವನನುಪಮ ವೈದಿಕೋಕ್ತದ ।
ವಿಳಸದಲಿ ನೃಪಪತ್ನಿ ಜಾಗರದಲಿ ಮಹಾಧ್ವರದ ॥

(೧೮೪) ಬಾಲಶಶಿಧರಸನ್ನಿಭನ-ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದ ಈಶ್ವರನಿಗೆ ಸಮಾನನಾದ, ಮುನಿಜಾಲಚಂಡಪ್ರಭನ-ಋಷಿಗಳಗುಂಪಿಗೆ ಸೂರ್ಯನಂತಿರುವ (ಪ್ರಕಾಶಮಾನನಾದ)

(೧೮೫) ಅಧ್ವರವೆರಡರ-ಅಶ್ವಮೇಧ ಪುತ್ರಕಾಮೇಷ್ಟಿಗಳ.

(೧೮೬) ಪುರೋಡಾಶ-ಯಜ್ಞದಲ್ಲಿ ನೊದಲುಕೊಡುವ ಆಹುತಿವಿಶೇಷ, ಅಕ್ಕಿಯಹಿಟ್ಟನಲ್ಲಿ ರೊಟ್ಟಿಯಂತೆಮಾಡಿದ ಪದಾರ್ಥ. ಸೃಕ್, ಸ್ರುವ-ಇವು ಅಗ್ನಿಯಲ್ಲಿ ಹೋಮಮಾಡುವುದಕ್ಕೆ ತುಂಬಿಕೊಳ್ಳುವ ಮರದಸೌಟುಗಳು, ಬರುಹಿ ರ್ಧ, ತ್ಸ -ಬರ್ಹಿಸ್- ಇದು ಹೋಮಮಾಡುವುದಕ್ಕಾಗಿ ಇರುವ ತುಪ್ಪದಪಾತ್ರೆಯನ್ನು ಇಡುವುದಕ್ಕೆ ಕೆಳಗೆಹಾಸುವ ದರ್ಭೆಗಳಕಟ್ಟು; ಇಧ್ಮ-೨೧ ಸಮಿತ್ತುಗಳನ್ನು ಸೇರಿಸಿರುವ ಕಟ್ಟು. ಸಮಿತ್ಸ್ರತಾನ ಹೋಮಮಾಡುವುದಕ್ಕೆ ಯೋಗ್ಯವಾದ ಅರಳಿಯೇ ಮೊದಲಾದ ಕಡ್ಡಿಗಳ ಸಮೂಹ.

ಬಳಿಯಲಿರ್ದಳು ಲಕ್ಷ್ಮಿಲಕ್ಷ್ಮೀ ।
ನಿಳಯುರಮಲಧ್ಯಾನದಲಿ ವರ ।
ವಿಳಸಿತಾಧ್ವರ ಯೂಪತತಿ ರಂಜಿಸಿದುದಿದಿರಿನಲಿ ॥ ೧೮೭ ॥

ಯೂಪಬದ್ಧ ತುರಂಗ ಪಶು ಮು ।
ಖ್ಯೋಪಪನ್ನ ಸಮಸ್ತ ಪಶು ಸುಮ ।
ದಾಪರಾಗ ಪವಿತ್ರಹುತ ಪರಮಾನ್ನ ಪೃಷದಾಜ್ಯ ॥
ಸೋಪವೀತಾಮಿಕ್ಷೆ ಚರು ಸಮಿ ।
ಧೋಪಚಾರ್ಯಾಗ್ನಿಪ್ರಣೀತಾ ।
ಸ್ಥಾಪಿತಪ್ರಾಗ್ವಂಶದಧ್ವರ ಶಾಲೆ ಚೆಲುವಾಯ್ತು ॥ ೧೮೮ ॥

ಬಳಿಕ ಮಾರ್ಕಂಡೇಯ ಕಾಶ್ಯಪ ।
ಕಲಶಭವ ಚವನಾಂಗಿರಸ ಮುನಿ ।
ತಿಲಕ ಕೌಶಿಕ ಯಾಜ್ಞ್ಯವಲ್ಕ್ಯ ಪ್ರಮುಖಮುನಿಜನವ ॥
ನಿಲಿಸಿದನು ಋತ್ವಿಕ್ಪ್ರಹೋತ ।
ಸ್ಥಳವಿಮಳರುದ್ಗಾತೃಗಳ ಸಂ ।
ಮಿಳಿತಲಲಿತಾಸ್ಥಾನಕದ ಲಜಸೂನು ಹರುಷದಲಿ ॥ ೧೮೯ ॥

ಕರೆದು ಮುನಿಸಾರಂಗ ಶೃಂಗನ ।
ನಿರಿಸಿದನು ಮುನಿ ಪುತ್ರಕಾಮ್ಯಾ ।
ಧ್ವರದ *ಬ್ರಹ್ಮತ್ವಕ್ಕೆ ತುರಗಾಧ್ವರಕೆ ತಾನಾದ ॥
ಪರಮಯಜ್ಞವಿಧಾನ ವಿದಿತೋ ।
ತ್ಕರ *ಶ್ರುತಿಸ್ಮೃತಿ ಸಂಪ್ರಧಾರಣೆ ।
ಗಿರಿಸಿದನು ಪುಸ್ತಕವನಿತ್ತು ವಶಿಷ್ಠ ನಿಜಸುತನ ॥ ೧೯೦ ॥

(೧೮೭) ಯೂಪತತಿ-ಯಜ್ಞದಲ್ಲಿ ಯಜ್ಞಪಶುವನ್ನು ಕಟ್ಟುವುದಕ್ಕಾಗಿ ನೆಟ್ಟಿರುವ ಕಗ್ಗಲಿ ಮೊದಲಾದ ಮರದಕಂಬಗಳ ಗುಂಪು.

(೧೮೮) ಸುಮದ + ಅಪರಾಗ = ಹೂವಿನಧೂಳಿ; ಪೃಷದಾಜ್ಯ - ಪೃಷತ್ - ಮೊಸರಿನಿಂದಕೂಡಿದ, ಆಜ್ಯ - ತುಪ್ಪ; ಆಮಿಕ್ಷೆ - ಕಾದಿರುವಹಾಲಿಗೆ ಮೊಸರನ್ನು ಸೇರಿಸುವುದರಿಂದ ಆಗುವ ಗಟ್ಟಿಯಾದ ಭಾಗ; ಪ್ರಾಗ್ವಂಶ - ಹೋಮದ್ರವ್ಯ ಮೊದಲಾದವುಗಳನ್ನು ಇಡುವುದಕ್ಕಾಗಿ ಕಟ್ಟಿರುವ ಕೊಠಡಿ.

(೧೮೯) ಕಲಶ - ಕುಂಭದಲ್ಲಿ, ಭವ - ಹುಟ್ಟಿದವನು ಕಲಶಭವ (ಅಗಸ್ತ್ಯ), ಋತ್ವಿಕ್ - ಯಜ್ಞದಲ್ಲಿ ಹೋಮವನ್ನು ಮಾಡುವುದಕ್ಕಾಗಿ ಗೊತ್ತುಮಾಡಲ್ಪಟ್ಟಿರುವವನು, ಪ್ರಹೋತ - ಋಗ್ವೇದವನ್ನು ಬಲ್ಲ ಋತ್ವಿಕ್ಕು; ಉದ್ಗಾತೃ - ಸಾಮವೇದವನ್ನು ಬಲ್ಲ ಋತ್ವಿಕ್ಕು; ಅಜಸೂನು - ದಶರಥ.

(೧೯೦) ಅನ್ವಯ:- ಮುನಿ (ವಶಿಷ್ಠ) ಮುನಿಸಾರಂಗಶೃಂಗನನು ಕರೆದು ಪುತ್ರಕಾಮ್ಯಾಧ್ವರದ ಬ್ರಹ್ಮತ್ವಕ್ಕೆ ಇರಿಸಿದನು, ತಾನು ತುರಗಾಧ್ವರಕೆ (ಬ್ರಹ್ಮನು)ಆದ. ತ್ತ - ಪುಸ್ತಕ, ದ್ಧ ಹೊತ್ತಿಗೆ; ಸಾರಂಗಶೃಂಗ - ಋಶ್ಯಶೃಂಗ.

ರಾಜಋಷಿ ಜನಕನನು ಕಾಶೀ ।
ರಾಜನನು ಕೇಕಯ ನೃಪಾಲನ ।
ಯಾಜಮಾನ್ಯದ ಮಾನ್ಯತೆಯಲಾ ಯಜ್ಞ ಶಾಲೆಯಲಿ ॥
ಆ ಜನೇಶ್ವರನಿರಿಸಿ ಮುದದಲಿ ।
ಪೂಜಿಸಿದ ನವರುಗಳ ಬಳಿಕ ಸ ।
ರೋಜಭವನಂಘ್ರಿಯಲಿ ತಾಂ ಚಾಚಿದನುಮಸ್ತಕವ ॥ ೧೯೧ ॥

ಮುನಿ ಸುಪುತ್ರಾವಾಪ್ತಿರಸ್ತೆಂ ।
ದೆನುತ ನೆಗಹಿದನೊಸ*ರ್ವಕರುಣದ ।
ನನೆನಗೆಯ ನಯಸಾರ ವಚನದ ಲರಸನಾ ನನವ ॥
ಜನಪದೀಕ್ಷಿತ ನಾದನಾ ಮುನಿ ।
ವಿನುತ ವಚನದ ಲಾಹವಿರ್ಭೋಗೀ ।
ಜನದ ಬರ್ಹಿರ್ಮುಖರು ನೆರೆದರುಬಹಳ ಹರ್ಷದಲಿ ॥ ೧೯೨ ॥

ದ್ಯುಮಣಿಕುಲ ಕೇಳ್ ಚೈತ್ರ ಸಿತಪಂ ।
ಚಮಿಯ ಉತ್ತರ ಪೂರ್ವವೇದಿಯ ।
ಲಮಳ ಪುಣ್ಯಾಹದ ಮಹಾರಚನೆಯನು ವಿಸ್ತರಿಸಿ ॥
ಅಮಳತರ ಶ್ರು*ತಿಘೋಷದಲಿ ಭೂ ।
ರಮಣ ನಾಕ್ರತುಯಾಜಮಾನ್ಯಾ ।
ಶ್ರಮವ ಕೈಕೊಂಡೆಸೆದನಾ ಮುನಿಜನರ ಮಧ್ಯದಲಿ ॥ ೧೯೩ ॥

ಹೊದೆದ ಹರಿಣಾಜಿನದ ನವನೀ ।
ತದ ವಿಲೇಪದ ಋಷ್ಯಶೃಂಗನ ।
ವಿದಿತ ಕಳಕಳದಮಳಸೂತ್ರದ ಸಂವಿಧಾನದಲಿ ॥

(೧೯೧) ರಾಜನು ಋಷಿಯುಂತೆ-ರಾಜಋಷಿ (ಷ. ಉ. ಕರ್ಮ. ಸ) ಗುಣಸಂಧಿ; ವಿಕಲ್ಪವಾಗಿ 'ಅರ್' ಬರಲಿಲ್ಲ.

(೧೯೨) ಸುಪುತ್ರಾವಾಪ್ತಿರಸ್ತು + ಎಂದು-, ಇಲ್ಲಿ ಸಂಧಿವಿಕಲ್ಪಕ್ಕೆ ೧೬ನೆಯ ಪದ್ಯದ ಟಿಪ್ಪಣಿಯನ್ನು ನೋಡಿ, ನನೆನಗೆ-ಮುಗುಳುನಗೆ, ಸಹುನಗೆ-ಇವು ಪರ್ಯಾಯಪದಗಳು.

(೧೯೩) ದ್ಯು-ಆಕಾಶಕ್ಕೆ, ಮಣಿ-ರತ್ನದಂತಿರುವವನು-ದ್ಯುಮಣಿ (ಸೂರ್ಯ) ಉತ್ತರ ಪೂರ್ವವೇದಿಯಲಿ-ಉತ್ತರ, ಪೂರ್ವದಿಕ್ಕಿನಲ್ಲಿಹಾಕಿರುವ ಹಸೆಜಗುಲಿಯಲ್ಲಿ, ಸಿತಪಂಚಮಿ-ಶುಧ್ಧಪಂಚಮಿ.

(೧೯೪) ಈ ಪದ್ಯದಲ್ಲಿ ಕರ್ತೃಪದವಿಲ್ಲದುದರಿಂದ ದಶರಥನು, ಎಂದು ಅಧ್ಯಾಹಾರಮಾಡಿಕೊಳ್ಳಬೇಕು. ಮಖಪುರುಷಪ್ರತಿಷ್ಠಿತವ-ಯಜ್ಞಪುರುಷನ ಆವಾಹನೆಯನ್ನು.

ಉದಿತಮಂಗಳತೂರ್ಯರವದ ।
ಭ್ಯುದಯದಲಿ ವೇದೋಕ್ತವಿಧಿ ಮಾ ।
ರ್ಗದಲಿ ಮಾಡಿದ ನಮುಳಮುಖ ಪುರುಷ ಪ್ರತಿಷ್ಠಿತವ ॥ ೧೯೪ ॥

ವಿರಚಿತಾಗಮದಿಂದ ದರ್ಭಾಂ ।
ಕುರ ಪರಿಸ್ತರಣಾದಿ ಗಂಧೋ ।
ತ್ಕರ ಸುಪುಷ್ಪಾಕ್ಷತೆಗಳಿಂದರ್ಚಿಸಿದನಾ ಶಿಖಿಯ ॥
ಬರುಹಿಯಿಧ್ಮಸ್ರುವಂಗಳಿಂ ಸ ।
ತ್ಕರಿಸಿ ವಿಧಿಪೂರ್ವಕದಿ ಮುಖಬಂ ।
ಧುರದಲಿಂಧನದಿಂದ ಪುಟಗೊಳಿಸಿದನು ಹುತವಹನ ॥ ೧೯೫ ॥

ಸುತ್ತಲಾಹವನೀಯ ಗಾರುಹ ।
ಪತ್ಯ ದಕ್ಷಿಣ ವಹ್ನಿಗಳ ಮುನಿ ।
ಪೋತ್ತಮರು ಬಳಸಿದರು ತತ್ಕ್ರಮಪರಿಕರಂಗಳಲಿ ॥
ಎತ್ತಿದರು ಹಯಮೇಧಮಖಮೂ ।
ಲೋತ್ಕರದ ಮಂತ್ರಗಳ ವರಸಿಗ ।
ಮೋತ್ಕರದ ತತ್ಪೂರ್ವ ಮೀಮಾಂಸಾಪರಿಶ್ರುತದ ॥ ೧೯೬ ॥

ಇದುವೆ ಸಿದ್ಧಪಿದಲ್ಲ ನಿಶ್ಚಯ ।
ವಿದು ಶ್ರುತಿ ಸ್ಮೃತಿಗಳಲಿ ಬಿಡಿ ಸಾ ।
ಕದುವೆ ಸಾಮಾನ್ಯ ಪ್ರಯೋಗವಿದೀಗ ಶಾಸ್ತ್ರದಲಿ ॥
ವಿದಿತ ವಾಕ್ಯಪರಿಗ್ರಹಣ ವಿಂ ।
ತಿದರ ಮೇಲಿಲ್ಲೆಂಬ ಮುನಿತ ।
ರ್ಕದ ಘಡಾವಣಿ ಘಾಡಿಸಿದುದಾಯಜ್ಞ ಮಂಟಪವ ॥ ೧೯೭ ॥

(೧೯೫) ಪರಿಸ್ತರಣ-೧೬ ದರ್ಭೆಗಳನ್ನು ತೆಗೆದುಕೊಂಡು ದರ್ಭೆಯಿಂದ ಸುತ್ತಿ ಮಾಡಿದ ನಾಲ್ಕು ಕಟ್ಟುಗಳನ್ನು ಅಗ್ನಿಕುಂಡದ ನಾಲ್ಕುದಿಕ್ಕುಗಳಲ್ಲಿಯೂ ಇಡುವುದು-ಒಟ್ಟು ೬೪ದರ್ಭೆಗಳು. ಹುತ-ಹೋಮದ್ರವ್ಯವನ್ನು, ವಹ-ತೆಗೆದುಕೊಳ್ಳತಕ್ಕವನು(ಅಗ್ನಿ)

(೧೯೬) ತ್ರೇತಾಗ್ನಿಗಳು-ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ. ಅಗ್ನಿಗೆ ಆಯಾ ಕರ್ಮಾಂಗವಾಗಿ ಬೇರೆಬೇರೆ ಹೆಸರು ಬರುವುದು. ತತ್ಪೂರ್ವಮೀಮಾಂಸಾಪರಿಶ್ರುತದ-ಪೂರ್ವಮೀಮಾಂಸೆಯಲ್ಲಿ ಪ್ರಸಿದ್ಧವಾಗಿರುವ; ಪೂರ್ವಮೀಮಾಂಸೆಯಲ್ಲಿ ಕರ್ಮವಿಚಾರವನ್ನೂ, ಉತ್ತರಮೀಮಾಂಸೆಯಲ್ಲಿ ಬ್ರಹ್ಮವಿಚಾರವನ್ನೂ ಹೇಳಿದೆ.

(೧೯೭) ವಿದಿತವಾಕ್ಯಸಂಗ್ರಹಣ-ಪ್ರಸಿದ್ಧವಾದ ವಚನವನ್ನು ಗ್ರಾಹ್ಯಮಾಡಿರುವುದು.

ಬಳಿಕ ನಡೆದುದು ಮಂತ್ರತಂತ್ರಾ ।
ವಳಿಗಳಲಿ ತತ್ಸಾಮಗಾನದ ।
ಕಳಕಳದ ನಿಗಮತ್ರಯಂಗಳ ನಿಶ್ಚಯಂಗಳಲಿ ॥
ವಿಳಸದುದ್ಗಾತೃಗಳ ಮಂತ್ರಾ।
ಕಲಿತ ಹೋತ್ರಧ್ವರ್ಯುರ್ಋತ್ವಿಜ ।
ರುಲುಹು ತಲೆದೂಗಿಸಿತು ನಭದ ಹವಿರ್ಭುಜಾವಳಿಯ ॥ ೧೯೮ ॥

ಕ್ರತುಮುಖಸ್ವಾಹಾಯ ಮಾನಾ ।
ಹುತಿಯ ವೌಷಟ್ಕೃತಿಯ ಸರ್ವಾ ।
ಹುತಿಯ ಸಂರಂಭಾತಿಶಯದಲಿ ತಣಿದರ್ಖಿ ಸುರರು ॥
ಶತಮುಖಾದಿ ಸಮಸ್ತ ದೇವ ।
ಪ್ರತತಿ ತೇಗಿತು ತುಷ್ಟಿಯಲಿ ಭೂ ।
ಪತಿಯ ರಾಜಿತ ವಾಜಿಮೇಧದಲಣುಗ ! ಕೇಳೆಂದ ॥ ೧೯೯ ॥

ಬೀಳುವಾಹುತಿಗಳನು ಸವಿದುರಿ ।
ನಾಲಗೆಗಳುಬ್ಬೆದ್ದು ಕುಣಿದುವು ।
ಮೇಲುಹವಿಗಮ್ವಳಿಸಿ ಹರಹಿನಲಗ್ನಿ ಕುಂಡದಲಿ ॥
ಹೇಳಲೇನದ ನಶ್ವಮೇಧದ ।
ಬೇಳುವೆಯ ಸಂಭ್ರಮದ ಧಾಳಾ ।
ಧೂಳಿಯಲಿ ತಿವಿದಾಡಿದುವು ಜಿಹ್ವೆಗಳು ಹುತವಹನ ॥ ೨೦೦ ॥

ಸಿಳಿಸಿಳಿಧ್ವನಿ ಮಸಗಿ ತಿಳಹೆ ।
ಕ್ಕಳಿಸಿದುವು ಝುಮ್ಮೆಂದು ಸಮಿಧಾ ।
ವಳಿಗಳಬ್ಬರಿಸಿದುವು ಛಟಛಟ ಛಟನಿನಾದದಲಿ ॥

(೧೯೮) ಅಧ್ವರ್ಯುರ್-ಯಜುರ್ವೇದವನ್ನು ಓಲ್ಲ ಋತ್ವಿಕ್ಕು; ಹವಿಸ್-ಹೋಮದ್ರವ್ಯವನ್ನು ಭುಜ-ಭಕ್ಷಿಸುವವರು-(ದೇವತೆಗಳು)

(೧೯೯) ಯಜ್ಞದಲ್ಲಿ-ಸ್ವಾಹಾ, ವೌಷಟ್ ಮೊದಲಾದ ಶಬ್ದಗಳನ್ನು ಹೋಮಕಾಲದಲ್ಲಿ ಉಪಯೋಗಿಸಬೇಕೆಂಬ ವಿಧಿಯುಂಟು. ಶತ-ನೂರು, ಮಖ-ಯಜ್ಞಗಳನ್ನು ಮಾಡಿದವನು-ಶತಮಖ (ಇಂದ್ರ).

(೨೦೦) ಉರಿಯೇ-ನಾಲಗೆಗಳು- ಉರಿನಾಲಗೆಗಳು (ಅವ. ಪೂರ್ವ. ಕ) ಅಗ್ನಿ-ತ್ಸ, ಅಗ್ಗಿ-ದ್ಭ; ಕುಂಡ-ತ್ಸ, ಕೊಂಡ-ದ್ಭ; ಅಗ್ನಿಯ ಜಿಹ್ವೆಗಳು (೭)-ಹಿರಣ್ಯಾ, ಕನಕಾ, ರಕ್ತಾ, ಕೃಷ್ಣಾ, ಸುಪ್ರಭಾ, ಅತಿರಿಕ್ತಾ, ಬಹುರೂಪಾ.

ಲಲಿತಘೃತಸಮ್ಮಿಳಿತ ಚರು ಪುಟ ।
ಗೊಳಿಸಿದುದು ಪಶುಹವಿಗೆ ಭುಗಿಲೆಂ ।
ದುಲಿದು ಸವಿದಾಡಿದನು ಹುತವಹನಶ್ವಮೇಧದಲಿ ॥ ೨೦೧ ॥

ತಳಿತುದೋ ಪರಿಮಿಳಿತ ಧೂಮಾ ।
ವಳಿ ವಿಯದ್ಭಾಗದಲಿ ಸುರಸಭೆ ।
ಗಳಲಿ ಸರಸಿಜಸಂಭವನ ಪಟ್ಟಣದಲಾಧ್ರುವನ ॥
ನಿಳಯದಲಿ ಲಂಬಿಸಿತು ಸುಧೆಯುಲಿ ।
ಹೊಳಕೆ ಕೆಟ್ಟಿತು ಸುರಕುಜದ ಹಂ ।
ಬಲನು ಬಿಡಿಸಿತು ಸುರಪಶುವನೇಳಿಸಿತು ನಾಕದಲಿ ॥ ೨೦೨ ॥

ಕುಶನೆ ಕೇಳ್ಳೈ ದಣಿದುದಮರ ।
ಪ್ರಸರವಲ್ಲಿ ಸಮಸ್ತ ಭೂಸುರ ।
ವಿಸರವಿಲ್ಲಿ ಸುಭೋಜನಂಗಳ ಳಧಿಕದಾನದಲಿ ॥
ಕುಶನನುಜ ! ಕೇಳ್ ಸಕಲಜನ ಹರು ।
ಷಿಸಿತು ಹಯಮೇಧದಲಿ ನಡೆದುದು ।
ವಸುಧೆಗಚ್ಚರಿಯೆನಲು ಮಖ ದಶರಥ ಮಹೀಪತಿಯ ॥ ೨೦೩ ॥

ಶ್ರುತಿಯ ಪೂರ್ವೋತ್ತರ ರಹಸ್ಯ ।
ಸ್ಮೃತಿ ಸುಮಾರ್ಗದ ತರ್ಕಶಾಸ್ತ್ರದ ।
ವಿತತ ವಿಮಳಧ್ಯಾನ ಜಡಿದುದು ಮುನಿಸದಸ್ಯರಲಿ ॥
ಶ್ರುತಿ ಸುವಾಕ್ಯವಿನೋದ ಪದ ಪ ।
ದ್ಧತಿ ಸುನರ್ತನವಾದ್ಯಗೀತಾ ।
ಮೃತಲಹರಿ ಸುಳಿಸುಳಿದುದಾಚೆಯ ಲರಸುಹಂತಿಯುಲಿ ॥ ೨೦೪ ॥

(೨೦೧) ಲಲಿತಘೃತಸಮ್ಮಿಳಿತಚರು-ಒಳ್ಳೆಯ ತುಪ್ಪದಿಂದ ಕೂಡಿದ ಅನ್ನ; ಹೋಮಕ್ಕೆ ಉಪಯೋಗಿಸುವ ಅನ್ನಕ್ಕೆ ಚರುವೆಂದು ಸಂಜ್ಞೆ. ತಿಳ=ಎಳ್ಳು.

(೨೦೨) ತಳಿರ್ + ತು = ತಳಿತುರ್ ಎಂಬ ರೂಪವು ಉತ್ತರಮಾರ್ಗದಲ್ಲಿ ರೇಫೆ ಲೋಪವಾದುದರಿಂದ ತಳಿತು ಎಂದಾಗಿದೆ. ಸುಧೆಯುಲಿಹೊಳಕೆಕೆಟ್ಟತು ದೇವತೆಗಳಿಗೆ ಅಮೃತದಲ್ಲಿ ರುಚಿ ತಪ್ಪಿತು. ಸುರಪಶು-ದೇವತೆಗಳ ಹಸು (ಕಾಮಧೇನು). ಕು-ಭೂಮಿಯಲ್ಲಿ, ಜ-ಹುಟ್ಟಿದುದು ಕುಜ (ಮರ).

(೨೦೩) ಜನಶಬ್ದವು ನಪುಂಸಕಲಿಂಗವಾದುದರಿಂದ ಹರುಷಿಸಿತು ಎಂಬ ನಪುಂಸಕಲಿಂಗದ ಕ್ರಿಯೆ ಬಂದಿರುವುದು.

(೨೦೪) ಮುನಿಗಳಾದ ಸದಸ್ಯರು-ಮುನಿಸದಸ್ಯರು (ವಿ. ಪೂರ್ವ. ಕ) ಶ್ರುತಿಸುವಾಕ್ಯವಿನೋದ-ಶಿವಿಗಿಂಪಾದ ಮಾತುಗಳನ್ನಾಡುವುದರಿಂದಾಗುವ ಹರ್ಷ.

ಆದುದೀಪರಿ ಸಕಲ ಸೌರಂ ।
ಭಾದಿ ವೈಭವದಿಂದಲಾ ಸುಕೃ ।
ತೋದಯನ ಹಯಸಪ್ತತಂತು ನಿರಂತರಾಯದಲಿ ॥
ಆದುದಾ ಕಾಮ್ಯಾಧ್ವರವು ಬಳಿ ।
ಕಾ ದಯಾಂಬುಧಿ ಮುನಿವಿಭಾಂಡತ ।
ನೂದಯನ ಮಂತ್ರಾಭಿಪೂರಿತ ವಿಹಿತ ಸಾಂಗದಲಿ ॥ ೨೦೫ ॥

ಕ್ಷಿತಿಸುತಾಸುತ ಕೇಳು ಪೂರ್ಣಾ ।
ಹುತಿಯು ಸಮನಂತರದಲಾ ರವಿ ।
ಶತ ಸುತೇಜೋಮೂರ್ತಿ ಹೊಳೆದುದು ಯಜ್ಞಕುಂಡದಲಿ ॥
ಶತಮುಖ ಪ್ರಮುಖಾದಿ ದೇವ ।
ಪ್ರತತಿಗಳ ಬಿನ್ನಹದಿ ಲಕ್ಷ್ಮೀ ।
ಪತಿಯುವೊಲು ವೈದೋರಿತಾಹವನೀಯ ಮಧ್ಯದಲಿ ॥ ೨೦೬ ॥

ಮಿಸುಪ ಕಾಂಚನ ಪಾತ್ರೆಯಲಿ ಪೂ ।
ರಿಸಿದ ಪರಮಾನ್ನವನು ಬೊಮ್ಮದ ।
ರಸದ ಪರಿಪೂರ್ಣವನು ಸತ್ತ್ವರಜಸ್ತಮೋಗುಣದ ॥
ಎಸಕದಭಿಗತ ಪೂರ್ಣವನು ಸುಮ ।
ನಸರು ಜಯಜಯವೆನಲು ಕರಯುಗ ।
ಬಿಸರುಹದಿನೊಲಿದಿತ್ತುದಾ ನಿಜಮೂರ್ತಿ ದಶರಥಗೆ ॥ ೨೦೭ ॥

ಮೊರೆದುವಮರರ ಭೇರಿ ಸುಮನಸ ।
ತರುಣಿಯರ ಕೈಯಿಂದ ಕುಸುಮೋ ।
ತ್ಕರ ಕದಂಬಕ ಸೂಸಿದವು ಶಿರದಲಿ ಮಹೀಪತಿಯ ॥

(೨೦೫) ಸಕಲ ಸೌರಭಾದಿ ವೈಭವದಿಂದಲಿ-ಉತ್ಸಾಹವೇ ಮೊದಲಾದ ಎಲ್ಲಸಂಭ್ರಮಗಳಿಂದ; ಸುಕೃತದ ಉದಯವು (ಅಭಿವೃದ್ಧಿ) ಯಾರಿಗೋ ಅವನು-ಸುಕೃತೋದಯ (ಬ. ವ್ರೀ.); ಸಪ್ತ-ಏಳು ಮಾತ್ರೆಗಳು ಅಥವಾ ಅಗ್ನಿಯ ಏಳು ನಾಲಗೆಗಳಿಂದ, ತಂತು-ವಿಸ್ತರಿಸಲ್ಪಡುವುದು (ಮಾಡುವುದು)-ಸಪ್ತತಂತು-(ಯಜ್ಞ), ನಿರಂತರಾಯ-ವಿಘ್ನವಿಲ್ಲದುದು.

(೨೦೬) ಪೂರ್ಣಾಹುತಿ-ಹೋಮಗಳೆಲ್ಲವೂ ಮುಗಿದಮೇಲೆ ಕೊನೆಯಲ್ಲಿ ಮಾಡುವ ಹೋಮ; ತೇಜೋಮೂರ್ತಿ-ಕಾಂತಿಯಿಂದಾದ ದೇಹ; ವೈಯು + ತೋರು - ವೈದೋರು (ಕ್ರಿ. ಸ.).

(೨೦೭) ಮಿಸುಪ-ಪ್ರಕಾಶಿಸುವ; ಬೊಮ್ಮದ ರಸದ-ಪರಮಾತ್ಮ ತೇಜಸ್ಸಿನ; ಸತ್ತ್ವ......... ಪೂರ್ಣವನು-ಗುಣತ್ರಯಗಳ ಕಾರ್ಯಶಕ್ತಿಯಿಂದ ತುಂಬಿದ.

ಸುರಮುನಿಗಳುರೆ ಘೋಷಿಸಿದರು ।
ಪ್ಪರದ ಗುಡಿ ನೆಗಹಿದವು ನಗರಾಂ ।
ತರದಲೇನು ಕೃತಾರ್ಥನೋ ದಶರಥಮಹೀಪಾಲ ॥ ೨೦೮ ॥

ಆಡಗಿತಾ ವರಮೂರ್ತಿ ಕುಂಡದ ।
ನಡುವೆ ಬಳಿಕ ಮಹೀಶ ರೋಮದ ।
ಗುಡಿಯ ಪುತ್ರ ಫಲೋದಯದ ಪರಿತೋಷದುಬ್ಬಿನಲಿ ॥
ಮಡದಿಯರು ಮೂವರಿಗೆ ಮುನಿಕುಲ ।
ವೃಡ ವಸಿಷ್ಠನ ನೇಮದಲಿ ವಿಂ ।
ಗಡಿಸಿ ಕೊಟ್ಟನು ನೃಪತಿ ಪರಮೋದನವನುಚಿತದಲಿ ॥ ೨೦೯ ॥

ತರುಣ ಕೇಳ್ಳೈ·ಭಾಗ ನಾಲ್ಕರ ।
ಲೆರಡು ಭಾಗಂಗಳು ಸುಮಿತ್ರಾ ।
ತರುಣಿಗಾದುವು ಸೇರಿದುವು ಪೂರ್ವಾಂಶ ಭಾಗಗಳು ॥
ಹಿರಿಯರಸಿ ಕಿರಿಯರಸಿಯವರಿ ।
ಬ್ಬರಿಗೆ ಮೂವರಿಗಿಂತು ನಾಲ್ಕರ ।
ಪರಿಗಣಿತ ಪರಮಾನ್ನ ಸಂಘಟಿಸಿದುದು ಭಾಗೆಯಲಿ ॥ ೨೧೦ ॥

ನೆನಹು ನಿರ್ವಿಘ್ನದಲಿ ನಡೆದುದು ।
ಮುನಿ ವಸಿಷ್ಠನ ಕರುಣದಲಿ ಬಳಿ ।
ಕನುಪಮಾಧ್ವರದವಭೃಥ ಸ್ನಾನಾವಸಾನದಲಿ ॥
ಮುನಿಗಳಿಗೆ ವಿಪ್ರರಿಗೆ ವಿದ್ವ ।
ಜ್ಜನಕೆ ವಿವಿಧಾಚಾರ್ಯ ಯಾಚಕ ।
ಜನಕೆ ಬೇಡಿದ ಧನವನಿತ್ತನು ತಣಿಯೆ ಧರಣೀಶ ॥ ೨೧೧ ॥

(೨೦೭) ಸುಮನಸ-ದೇವತೆ; ಉತ್ಕರ-ಆಧಿಕ್ಯ; ಕದಂಬಕ-ಸಮೂಹ.

(೨೦೯) ಉಪ್ಪರದ-ಹೆಚ್ಚಾದ; ಗುಡಿ-ಧ್ವಜ; ನೆಗಹಿದುವು-ಎತ್ತಲ್ಪಟ್ಟುವು; ರೋಮದ ಗುಡಿ-ರೋಮಾಂಚರೂಪವಾದ ಧ್ವಜ (ಧ್ವಜಗಳನ್ನು ಎತ್ತಿದಂತೆ ರೋಮಾಂಚವು ಗುಂಪಾಗಿ ಎದ್ದಿತೆಂದು ಭಾವವು); ಮುನಿಕುಲವೃಢ-ಋಷಿಗಳ ಗುಂಪಿಗೆ ಈಶ್ವರನಂತಿರುವ; ಪರಮೋದನ-ಪರಮಾನ್ನ.

(೨೧೦) ಹಿರಿಯರಸಿ-ಕೌಸಲ್ಯೆ; ಕಿರಿಯರಸಿ-ಕೈಕೆಯಿ; ನಾಲ್ಕರ ಪರಿಗಣಿತ-ಎಣಿಸಿ ನಾಲ್ಕು ಭಾಗಮಾಡಿದ, ಭಾಗೆಯಲಿ ವಿಭಾಗಿಸಿ ಕೊಟ್ಟುದರಲ್ಲಿ.

(೨೧೧) ನೆನಹು (ದಶರಥನ) ಇಷ್ಟಾರ್ಥಸಿದ್ಧಿಯು; ಅಧ್ವರದ-ಯಜ್ಞದ; ವಿದ್ವತ್ +
[illegible] ತಣಿಯೆ-ತೃಪ್ತಿಯಾಗುವಂತೆ.

ತಣಿದುದಖಿಲ ಸುವರ್ಣಮಣಿ ಭೂ ।
ಷಣ ಸುಕನ್ಯಾ ಧೇನು ಹಯ ವಾ ।
ರಣ ವರಾಂಬರ ವಿವಿಧ ವಸ್ತು ವ್ರಜದ ದಾನದಲಿ ॥
ತಣಿಯದಾದುದು ಚಿತ್ತವಾ ದಿನ ।
ಮಣಿಕುಲೇಂದ್ರಂಗಮನು ಘನ ವಿತ ।
ರಣದ ಶಕ್ತಿಯದೆಂತೊ ಸೀತಾಸೂನು ಕೇಳೆಂದ ॥ ೨೧೨ ॥

ಅರಸ ನಿಖಿಳ ದಿಗಂತದವನೀ ।
ಶ್ವರರನವರವರುಚಿತ ಮಾನ್ಯದ ।
ಪರುವಿಷಿಯಲುಡುಗೊರೆಗಳಲಿ ವಿವಿಧೋಪಚಾರದಲಿ ॥
ಹಿರಿದು ಮನ್ನಿಸಿ ಕಳುಹಿದನು ಸ ।
ತ್ಕರಿಸಿದನು ಪುರಜನವ ಸಮನಂ ।
ತರದಲೋಕುಳಿಯಾಯ್ತು ನೃಪಕುಲ ಸಾರ್ವಭೌಮಂಗೆ ॥ ೨೧೩ ॥

ಬಳಿಕ ಕನ್ನಡಿ ಕಲಶ ನೃತ್ಯದ ।
ಲಲನೆಯರ ಮಾಂಗಲ್ಯ ವಾದ್ಯದ ।
ಲಲಿತ ಘೋಷದ ಲಾಜೆ ದಧಿ ದೂರ್ವಾಕ್ಷತಾವಳಿಯ ॥
ವಿಲಸದಲಿ ವೈಭವದ ಕಂಚುಕಿ ।
ಗಳ ಗಡಾವಣಿಗಳಲಿ ರಾಜಾ ।
ವಳಿ ಶಿರೋಮಣಿ ಹೊಕ್ಕನನುಪಮ ರಾಜಮಂದಿರವ ॥ ೨೧೪ ॥

## ಎಂಟನೆಯ ಸಂಧಿ.

**ಸೂಚನೆ॥** ರಾಜರಾಜಾಧೀಶನನುಪಮ ।
ರಾಜ ಪರಮೇಶ್ವರನು ಮನುಕ್ಷಿತಿ ।
ರಾಜ ದಶರಥರಾಯ ಪಡೆದನು ಸುತ ಚತುಷ್ಟಯವ ॥

(೨೧೨) ವಾರಣ-ಆನೆ; ವ್ರಜ-ಸಮೂಹ; ದಿನ-ಹಗಲಿಗೆ, ಮಣಿ-ರತ್ನದಂತಿರುವವನು-ದಿನಮಣಿ (ಸೂರ್ಯ); ವಿತರಣ-ದಾನಗುಣ; ಸೂನು-ಮಗ.

(೨೧೩) ಉಚಿತಮಾನ್ಯದ-ತಕ್ಕ ಮರ್ಯಾದೆಗಳ; ಪರುವಿಷಿಯಲಿ-ಕ್ರಮವಾಗಿ; ಉಡುವ+ಕೋರೆ (ವಸ್ತ್ರ)-ಉಡುಗೊರೆ, (ಗಮಕ.)

(೨೧೪) ಲಾಜೆ-ಬತ್ತದ ಅರಳು; ದಧಿ-ಮೊಸರು; ದೂರ್ವಾ-ಗರಿಕೆಯ ಹುಲ್ಲು; ಗಡಾವಣೆ-ಕೋಲಾಹಲ.

ಸೂಚನೆ:-ರಾಜಪರಮೇಶ್ವರನು-ದೊರೆಗಳಲ್ಲಿ ಈಶ್ವರನಂತಿರುವವನು; ಕ್ಷಿತಿ-ಭೂಮಿಗೆ (ಭೂಮಂಡಲಕೆ.ಲ). ರಾಜ-ದೊರೆ (ಚಕ್ರವರ್ತಿ); ಸುತರ+ಚತುಷ್ಟಯ (ನಾಲ್ಕು) (ಷ. ಕ.)

ಪಿಂಡ ಬಲಿದುದು ಬಳಿಕ ಮೂವರು ।
ಹೆಂಡರಿಗೆ ಕುಶ ಕೇಳ್ ನಿಧಾನವ ।
ಕಂಡ ಕಡು ದಾರಿದ್ರ್ಯನುತ್ಸವದಂತೆ ಕೋಸಲದ ॥
ಮುಂಡಲೇಶ್ವರನಿರಲು ಬಳಿಕಲ ।
ಖಂಡ ಚಿನುಮಯನಾದಿ ಲಕ್ಷ್ಮೀ ।
ಗಂಡನೆಸೆದನು ಕೇಳು ಲವ ಕೌಸಲೆಯ ಗರ್ಭದಲಿ ॥ ೨೧೫ ॥

ತೋರಿದುವು ಗರ್ಭಗಳು ಸೂತ್ರದ ।
ತೋರಿಕೆಯ ಮಾಣಿಕ್ಯದವೋಲ್ ವೈ ।
ದೋರಿದುವು ಚಿಹ್ನಂಗಳಂಗದಲಂಗನಾತ್ರಯದ ॥
ಹೇರಿದುವು ಹರುಷವನು ತನು ನಗೆ ।
ದೋರಿದುವು ಮುಖಕಮಲ ಕಾಂತಿಯ ।
ಬೀರಿದುವು ಭುಜಲತೆಗಳಭಿನವ ಗರ್ಭವೇಳ್ಗೆಯಲಿ ॥ ೨೧೬

ನಡು ಪೊದಳ್ದುದು ವರ ವಳಿತ್ರಯ ।
ವಡಗಿದುದು ನಿಜರೋಮರಾಜಿಗ ।
ಳಡರಿದುವು ವೈದೋರಿದುದು ಹೃತ್ತ್ರಿಮಿರ ತವಕದಲಿ ॥

ಪೊಡರ್ವಪೀನ ಪಯೋಧರದ ತುದಿ ।
ಗಡೆಯಲುಕ್ಕಿಡಿಸಿದುದು ರತಿ ಬೆ ।
ಳ್ಪಡರಿದುವು ಮುಖಮಂಡಲಗಳಾ ಮಾನಿನೀತ್ರಯದ ॥ ೨೧೭ ॥

ತುಂಬಿದುವು ನವಮಾಸ ಬಳಿಕ ನಿ ।
ತಂಬಿನಿಯರಿಗೆ ನಿರ್ಮಳಪ್ರತಿ ।
ಬಿಂಬ ಕಾಣಿಸಿತಾದಿ ನಾರಾಯಣನ ಮೂರುತಿಯ ॥

(೨೧೫) ನಿಧಾನ-ನಿಧಿ (ಹೂಳಿಟ್ಟ ಹಣ); ಅಖಂಡ-ಭೇದಿಸುವುದಕ್ಕಾಗದ, ಚಿನುಮಯನು-ಜ್ಞಾನಸ್ವರೂಪನು (ವಿಷ್ಣು).

(೨೧೬) ಗರ್ಭಗಳು...ಕದವೋಲ್ ತೋರಿದುವು ಅಂಗನಾತ್ರಯದ ಅಂಗದಲಿ ಚಿಹ್ನಂಗಳ್ ವೈದೋರಿದುವು ತನು ಹರ್ಷವನು ಹೇರಿದುವು ಮುಖಕಮಲ ನಗೆ ದೋರಿದುವು ಭುಜಲತೆಗಳ್ ಕಾಂತಿಯ ಬೀರಿದುವು ಎಂದನ್ವಯ; ತೋರಿಕೆಯ-ದಪ್ಪವಾದ.

(೨೧೭) ಪೊದಳ್ದುದು-ದಪ್ಪವಾಯ್ತು; ವಳಿತ್ರಯ-ಹೊಟ್ಟೆಯಮೇಲಿರುವ ಮೂರುಪದರಗಳು; ಹೃತ್ತ್ರಿಮಿರ-ಮನಸ್ಸಿನ ಕತ್ತಲೆ (ಅಜ್ಞಾನ); ಪೊಡರ್ವ-ಉಬ್ಬುವ, ಪೀನ-ದಪ್ಪವಾದ, ಉಕ್ಕಿಡಿಸು-ರೆಕ್ಕೆ.

ಅಂಬುಜಾನನೆ ಕೌಸಲೆಯು ಗ ।
ರ್ಭಾಂಬುನಿಧಿಯಲ್ಲಖಿಳ ಸುರರ ಕ ।
ದಂಬ ಬಂದೋಲಗಿಸುತಿರ್ದುದು ದಿವಸ ದಿವಸದಲಿ ॥ ೨೧೮ ॥

ಕಂತು ಸನ್ನಿಭ ಕೇಳು ಮೂವರು ।
ಕಾಂತೆಯರಿಗಾದುದು ಕಡಾ ಸೀ ।
ಮಂತಸೌರಂಭಾತಿಶಯದುಬ್ಬರದ ವಿಭವದಲಿ ॥
ಅಂತರಹಿತನನಪ್ರಮೇಯನ ।
ನಂತ ಗುಣಗಣ ನಿಲಯನ ಲಕ್ಷ್ಮೀ ।
ಕಾಂತನಾ ನೃಪಗೊಲಿದುದಕೆ ಬೆರಗಾದನಬುಜಭವ ॥ ೨೧೯ ॥

ತರಣಿಯೇಕಾದಶದ ದಾನವ ।
ಗುರು ನಿರೀಕ್ಷೆಯಲಿಂದುವಿನ ಶುಭ ।
ಕರದ ದೃಷ್ಟಿಯಲಾಂಗಿರಸ ಸೌಮ್ಯರ ಸುಕೇಂದ್ರದಲಿ ॥
ಪರಮ ಚೈತ್ರದ ಶುದ್ಧ ನವಮಿಯ ।
ವರ ಪುನರ್ವಸು ತಾರೆಯಲಿ ಹರಿ ।
ಯರಸಿ ಬೆಸಲಾದಳು ಭವ ಸ್ಥಿತಿ ಲಯ ವಿವರ್ಜಿತನ ॥ ೨೨೦ ॥

ಮರುದಿವಸ ಪುಷ್ಯದಲಿ ಕೈಕಾ ।
ತರುಣಿ ಪಡೆದಳು ವಿಮಲ ವಿಶ್ವಂ ।
ಭರನ ಶಕ್ತಿತ್ರಯದೊಳೊಂದನು ಶುಭ ಮುಹೂರ್ತದಲಿ ॥
ತರುಣಿ ಕೇಳುಳಿದಂಶವೆರಡನು ।
ನಿರತಿಶಯ ಲಗ್ನದಲಿ ಮಾಗಧೇ ।
ಶ್ವರನ ಸುತೆ ಪಡೆದಳು ಮಖಾನಕ್ಷತ್ರದುದಯದಲಿ ॥ ೨೨೧ ॥

(೨೧೮) ನಿತಂಬಿನಿಯರಿಗೆ-ಸ್ತ್ರೀಯರಿಗೆ, ಆದಿ......ಮೂರುತಿಯ ನಿರ್ಮಳ ಪ್ರತಿಬಿಂಬ ಅಂಬುಜಾನನೆ......ನಿಧಿಯಲ್ಲಿ, ಕಾಣಿಸಿತು-ಸೇರಿ ತೋರಿಬಂದಿತು ; ಕದಂಬ-ಸಮೂಹ.

(೨೧೯) ಕಂತುಸನ್ನಿಭ-ಮನ್ಮಥನಿಗೆ ಸಮಾನನಾದ (ಕುಶನೇ ?); ಕಡಾ-ಅಲ್ಲವೇ? ; ಅಪ್ರಮೇಯನು-ಪ್ರಮಾಣಕ್ಕೆ ಸಿಕ್ಕದವನು

(೨೨೦) ತರಣಿಯೇಕಾದಶದ-ಲಗ್ನಕ್ಕೆ ಹನ್ನೊಂದನೆಯ ಕಡೆಯಲ್ಲಿ ಸೂರ್ಯನಿರುವಾಗ; ದಾನವಗುರು-ಶುಕ್ರ ; ನಿರೀಕ್ಷೆಯಲಿ-ದೃಷ್ಟಿಯಿರುವಾಗ, ಆಂಗಿರಸ-ಬೃಹಸ್ಪತಿ, ಸೌಮ್ಯ-ಸೋಮನ (ಚಂದ್ರನ), ಮಗ (ಬುಧ); ಕೇಂದ್ರ-ಲಗ್ನಕ್ಕೆ ೪,೭,೧೦ ಈ ಸ್ಥಾನಗಳು ; ಬೆಸಲಾದಳು-ಹೆತ್ತಳು; ಭವ.........ತನ-ಉತ್ಪತ್ತಿ ಸ್ಥಿತಿ ನಾಶಗಳಿಲ್ಲದವನನ್ನು (ವಿಷ್ಣುವನ್ನು).

(೨೨೧) ವಿಶ್ವ-ಪ್ರಪಂಚವನ್ನು, ಭರ-ಧರಿಸಿರುವವನು. ವಿಶ್ವಂಭರ (ವಿಷ್ಣು); ಶಕ್ತಿತ್ರಯ-ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ-ಈ ಮೂರು; ಮಗಧೇಶ್ವರನ ಸುತೆ- ಸುಮಿತ್ರೆ.

ಘೋರನಬ್ಬರಿಸಿದುವು ದಿವಿಜರ ।
ಭೇರಿಗಳು ದಿವದವನಿಯರಸುಗ ।
ಳೂರೊಳಗೆ ಗುಡಿ ಕಟ್ಟಿದುವು ಕುಡಿಯಿಟ್ಟ ಹರುಷದಲಿ ॥
ವೀರ ದಶರಥ ಸಾರ್ವಭೌಮನ ।
ಪಾರ ಸಂತೋಷಾಂಬುನಿಧಿ ಮಿಗೆ ।
ಮೀರಿದಪ್ಪಿದುದಾದಿನಾರಾಯಣನ ಜನನದಲಿ ॥ ೨೨೨ ॥

ಆದುದವರಿಗೆ ಬಳಿಕ ಲೌಕಿಕ ।
ವೈದಿಕದ ವೈಭವಗಳಲಿ ಭ ।
ದ್ರೋದಯದ ಭವಕರ್ಮವಾಚಕ ಕರ್ಮದೂರರಿಗೆ ॥
ಮೇದಿನೀಸುರ ಮುಖ್ಯ ನಾನಾ ।
ಮೇದಿನಿಯ ಯಾಚಕರು ಸಿರಿಯನು ।
ಸಾಧಿಸಿದರಾ ಸಾರ್ವಭೌಮನ ಬಹಳ ದಾನದಲಿ ॥ ೨೨೩ ॥

ದಿವಸ ಹನ್ನೆರಡರಲಿ ಮಹದು ।
ತ್ಸವದಲಾದುವು ನಾಮಕರಣ ।
ಪ್ರವರವಾ ನಾಲ್ವರಿಗೆ ಗುಣ ನಾಮಂಗಳಲಿ ಬಳಿಕ ॥
ಅವನಿಜಾಸುತ ಕೇಳಿದೈ ನಿ ।
ಮ್ಮವನಿಜೆಯ ರಮಣಂಗೆ ರಾಮಾ ।
ಖ್ಯವನು ವಿಸ್ತರಿಸಿದರು ವೈದಿಕ ಕರ್ಮ ವಿಹಿತದಲಿ ॥ ೨೨೪ ॥

ಭರತ ಲಕ್ಷ್ಮಣದೇವ ಸಮನಂ ।
ತರದಿ ಶತ್ರುಘ್ನಾಖ್ಯವನು ವಿ ।
ಸ್ತರಿಸಿದರು ಮಿಕ್ಕಾದ ಮೂವರು ರಾಜಪುತ್ರರಿಗೆ ॥

(೨೨೨) ಕುಡಿಯಿಟ್ಟ-ಹೆಚ್ಚಾದ, ದಿವದ ಅವನಿಯ ಅರಸುಗಳ-ಸ್ವರ್ಗದ ದೊರೆಯಾದ ಇಂದ್ರನ, ಭೂಲೋಕದ ರಾಜರ, ಗುಡಿ-ಧ್ವಜ.

(೨೨೩) ಭದ್ರೋದಯದ-ಮಂಗಳಕರವಾದ, ಭವಕರ್ಮವಾಚಕ-ಜಾತಕರ್ಮವೆಂಬ ಹೆಸರು (ಪ್ರಸಿದ್ಧಿಯು), ಮೇದಿನೀ-ಭೂಮಿಯ, ಸುರ-ದೇವತೆ (ಬ್ರಾಹ್ಮಣ), ಕರ್ಮಬದ್ಧರಲ್ಲದಿದ್ದರೂ ಸಾಮಾನ್ಯರಿಗೆ ಅವರು ಹುಟ್ಟಿದರೆಂಬ ಭಾವನೆಯುಂಟಾಗಿತ್ತೆಂಬ ಭಾವವು.

(೨೨೪) ಪ್ರವರ-ಶ್ರೇಷ್ಠ, ಗುಣನಾಮಂಗಳಲಿ- ಅನ್ವರ್ಥನಾಮವನ್ನಿಡುವುದರ ಮೂಲಕ, ರಾಮಾಖ್ಯವನು-ಎಲ್ಲಯೋಗಿಗಳೂ ತನ್ನಲ್ಲಿ ಕ್ರೀಡಿಸುವವನಾದುದರಿಂದ ರಾಮ ಎಂಬ ಹೆಸರನ್ನು.

ಭರಿತ ಭೋಜನ ದಕ್ಷಿಣೆಯುಲಾ ।
ದರಿಸಿದನು ಗುರು ಬಂಧುಜನ ಭೂ ।
ಸುರರ ವಿಟ ಶೂದ್ರಾದಿಗಳನುಚಿತದಲಿ ಭೂಪಾಲ ॥ ೨೨೫ ॥

ಐಸೆ ಮತ್ತೀನೆಲೆ ತಪೋಲ ।
ಕ್ಷ್ಮೀಶ ಕೇಳೀ ರಾಮನಾ ಸ ।
ರ್ವೇಶನೆಂದೇ ನೇಮಿಸಿದೆ ನಮಗಾ ಮಹಾತ್ಮಂಗೆ ॥
ಈಸು ನಿರ್ಬಂಧದಲಿ ಗರ್ಭಾ ।
ವಾಸದೊಳಗಿದ್ದುದಿಸಲೇಕೀ ।
ಯಾಸರಿನ ಭವವೇಕೆನುತ ನುಡಿದರು ವರ ಕುಮಾರಕರು ॥ ೨೨೬ ॥

ನೀವು ಕೇಳುವ ಕೃತವಿವೇಕದ ।
ಠಾವು ತಾನದು ಲೇಸು ಜಗದ ಮ ।
ಹಾ ವಿಭುವಲಾ ವಿಷ್ಣು ವಿಶ್ವವ್ಯಾಪ್ತನಾತಂಗೆ ॥
ಈ ವಿಶೇಷ ವ್ಯವಹರಣೆ ಲೋ ।
ಕಾವಳಿಯ ಸುಜನರನು ಸಂ ।
ಭಾವನೋಚಿತದಿಂದ ಸಲಹಲಿಕಾಯ್ತಲೇ ಎಂದ ॥ ೨೨೭ ॥

ಸುಜನರುಪಹತಿಗೊಡಬಡನು ನಾ ।
ಕಜರ ನಷ್ಟವ ಸೈರಿಸನು ಗೋ ।
ದ್ವಿಜ ಮಹಾಮಖ ಹವ್ಯಕವ್ಯಾದಿಗಳ ವರ್ತನೆಯ ॥
ತ್ಯಜಿಸಲೀಸನಿದೀಗ ಗರುಡ ।
ಧ್ವಜನ ಬಿರುದದರಿಂದ ದುಷ್ಟ ।
ಪ್ರಜೆಯ ಶಿಕ್ಷೆಗೆ ಸುಳಿದನಲ್ಲದೆ ಜನ್ಮವಿಲ್ಲೆಂದ ॥ ೨೨೮ ॥

(೨೨೫) ವಿಟ-ವೈಶ್ಯ, ವಿಟ್-ತ್ಸ., ವಿಟ-ದ್ಭ.

(೨೨೬) ಐಸೆ-ಅಲ್ಲವೆ, ತಪೋಲಕ್ಷ್ಮೀಶ-ತಪವೆಂಬ ಲಕ್ಷ್ಮಿಯ ಪತಿ (ಋಷಿ), ಈಸು-ಇಷ್ಟು, ಆಸರಿನ-ಕಷ್ಟತರವಾದ, ಭವ-ಹುಟ್ಟುವಿಕೆ (ಜನ್ಮ).

(೨೨೭) ಕೃತವಿವೇಕದ-ಮನಸ್ಸಿನಲ್ಲಿ ವಿಚಾರಮಾಡಿದ, ಠಾವು-ಸಂದರ್ಭ, ಲೇಸು-ತಕ್ಕುದು, ಈ ವಿಶೇಷ ವ್ಯವಹರಣೆ-ತಾನು ಸರ್ವವ್ಯಾಪಕನಾಗಿದ್ದರೂ ಜನ್ಮವನ್ನು ಪಡೆದುದು.

(೨೨೮) ನಾಕ-ಸ್ವರ್ಗದಲ್ಲಿ, ಜ-ಹುಟ್ಟಿದವರು (ದೇವತೆಗಳು), ಮಖ-ಯಜ್ಞ, ಹವ್ಯ-ಯಜ್ಞಾದಿಗಳಲ್ಲಿ ದೇವತೆಗಳಿಗಾಗಿ ಮಾಡುವ ಹೋಮ ಕವ್ಯ-ಪಿತೃಗಳನ್ನು ಕುರಿತು ಮಾಡುವ ಹೋಮ, ವರ್ತನೆ-ನಡೆಯುವಿಕೆ, ತ್ಯಜಿಸಲೀಸನು-ತಪ್ಪುವುದಕ್ಕವಕಾಶವನ್ನು ಕೊಡನು.

ಈತ ಸತ್ತ್ವ ರಜಸ್ತಮೋಗುಣ ।
ದಾತ ವಿಮಲ ಗುಣತ್ರಯುಕ್ತನು ।
ತೀತ ಮಾಯಾಪಾರ ಮಾಯಾ ದೂರ ನೋಡಲಿಕೆ ॥
ಈತನನಿತಿನಿತೆಂದು ಯೋಚನೆ ।
ಗೀತರಲಿ ತಾವಿಲ್ಲ ಸತ್ತ್ವ ಗು ।
ಣಾತಿಶಯವೇ ಪ್ರಾಣಬಂಧಿಹುದಣುಗ ಕೇಳೆಂದ ॥ ೨೨೯ ॥

ಆಹುದು ಮತ್ತೇನಿಳೆಯ ಜನನಿ ।
ಗ್ರಹವಿದಾವವನಿಂದ ಬಳಿಕೀ ।
ಮಹಿಗೆ ಬಂದೆ ನಿರೋಧವಾವುದು ಹೇಳಬೇಕೆನಲು ॥
ವಿಹಿತವೇ ವಿಜ್ಞಪ್ತಿ ನಿಮಗೆಂ ।
ದಹಿತ ಪರಿತೋಷದಲಿ ಮುನಿವರ ।
ನಹಿಮ ಕರ ಕುಲ ಕೀರ್ತಿಕರ ನಂದನರಿಗಿಂತೆಂದ ॥ ೨೩೦

ಎಲೆ ಕುಮಾರರೆ ಕೇಳಿರೈ ಸಿರಿ ।
ನಿಳಯನೋಲಗಕೆಂದು ಮುನಿಕುಲ ।
ತಿಲಕ ಸನಕ ಸನತ್ಕುಮಾರ ಸನಂದನಾದಿಗಳು ॥
ಬಳಿಸಲಿಸೆ ಬಾಗಿಲಲಿ ತಡೆದರು ।
ಬಲಭರಿತ ಜಯವಿಜಯರಾ ನಿ ।
ರ್ಮಳ ಮನೋರಂಜಕರನೊಡ್ಡಿದ ಕೈಯ ಕಂಬಿಯಲಿ ॥ ೨೩೧ ॥

ಪರಮಹಂಸರಿಗಧಿಕ ತೇಜಿ ।
ಷ್ಠರಿಗೆ ತೇಜೋಭಂಗ ಮುಖದನು ।
ಸರಣಿಗೊಂಬುದೆ ಕೋಪದಲಿ ಬಳಿಕವರು ಎಗೆಗೊಳದೆ ॥

(೨೨೯) ಈ ರಾಮನು ಸಾಮಾನ್ಯರಿಗೆ ಮೂರುಗುಣಗಳಿಂದ ಕೂಡಿದವನಾಗಿಯೂ ತಿಳಿಯಬಲ್ಲ ಜ್ಞಾನಿಗಳಿಗೆ ಇವುಗಳನ್ನು ಮೀರಿದವನಾಗಿಯೂ ಕಾಣುವನು; ಹಾಗೆಯೇ ಮಾಯಾಸ್ವರೂಪನಾಗಿಯೂ ಮಾಯೆಗೆ ಸಿಕ್ಕದವನಾಗಿಯೂ ಇರುವನು; ಆದುದರಿಂದ ಇವನ ಮಹಿಮೆ ಅಗಾಧವಾದುದು.

(೨೩೦) ಜನನಿಗ್ರಹವು-ಜನಕ್ಕೆ ಬಾಧೆಯು, ನಿರೋಧ-ಕಷ್ಟವು, ನಿಮಗೆ ವಿಜ್ಞಪ್ತಿ ವಿಹಿತವೇ-ನೀವು ಕೇಳಿಕೊಂಡ ಮಾತು ಯುಕ್ತವಾದುದು, ಅಹಿತ-ನ್ಯೂನತೆಯಿಲ್ಲದ (ಹೆಚ್ಚಾದ), ಹಿಮ-ಶೈತ್ಯವು, ಅ-ಇಲ್ಲದುದು-ಅಹಿಮ (ಉಷ್ಣ) ಅಹಿಮವಾದ + ಕಿರಣವುಳ್ಳವನು-ಅಹಿಮಕರ (ಸೂರ್ಯ).

(೨೩೧) ಸಿರಿ-ಲಕ್ಷ್ಮಿಗೆ, ನಿಲಯ-ಆಶ್ರಯನು (ವಿಷ್ಣು), ಬಳಿಸಲಿಸೆ-ಸಮೀಪಕ್ಕೆ ಬರಲು, ನಿರ್ಮಳಮನೋರಂಜಕರನು-ಪರಿಶುದ್ಧವಾದ ಮನಸ್ಸಿನಿಂದ ಪ್ರಕಾಶಿಸುತ್ತಿರುವವರನ್ನು, ಒಡ್ಡಿದ-ಅಡ್ಡಲಾಗಿಟ್ಟ, ಕಂಬಿ-ಕೋಲು.

ಗುರುಳ ರಿಬ್ಬರಿಗಿತ್ತರತಿ ನಿ ।
ಷ್ಠುರದ ಶಾಪವನಸುರ ವಂಶೋ ।
ತ್ಕರದೊಳಗೆ ಸಂಭವಿಸಿ ನೀವೆಂದಧಿಕ ರೋಷದಲಿ ॥ ೨೩೨ ॥

ಸರಸರಿಸಿ ಬಳಿಕಾ ಮುನೀಂದ್ರರು ।
ಸರಸಿಜಾಕ್ಷನ ದರುಶನಕೆ ಬರ ।
ಬರಲು ಬಳಿಯಲಿ ಬಂದು ದೂರಿದರವರು ಮುನಿವರರ ॥
ಕರದ ಸನ್ನೆಯಲುಭಯ ಕಿಂಕರ ।
ವರರ ಖೇದವ ಸಂತವಿಸಿ ಮುನಿ ।
ವರರನುಚಿತದಲುಪಚರಿಸಿ ಜಯ ವಿಜಯರಿಗೆ ನುಡಿದ ॥ ೨೩೩ ॥

ಮುನಿವಚನವಿದು ಹುಸಿಯದಾಸುರ ।
ಜನನ ತಪ್ಪದು ನಿಮಗೆ ನೀವೇ ।
ಘನೆಯ ಭವದಲಿ ಬಂಧುತನದಲಿ ನಮ್ಮನೈದುವುದು ॥
ಅನುಮತವಿದೊಂದಲ್ಲದಿರೆ ಮೂ ।
ರನೆಯ ಭವದಲರಾತಿ ಕೃತ ಭಾ ।
ವನೆಯಲೈದುವುದೊಂದು ಮತವಿದೆ ಹೇಳಿ ನೀವೆಂದ ॥ ೨೩೪ ॥

ಅರಿವಾವೆಲೆ ದೇವ ಹತ್ತಕೆ ।
ಮೂರು ಕಳಿದುಳಿದಿವೆ ಭವಗಳ ।
ಮೂರು ಜನ್ಮವೆ ಸಾಕು ಹಗೆತನದಿಂದ ಬೇಗದಲಿ ॥
ಸಾರುವೆವು ನಿಮ್ಮಡಿಯ ಸಿರಿಚರ ।
ಣಾರವಿಂದವನೆಂದು ವಿಜ್ಞಾ ।
ನಾರರುದಿಸಿದರಸುರ ವಂಶದಲಧಿಕ ತೇಜದಲಿ ॥ ೨೩೫ ॥

(೨೩೨) ಪರಮಹಂಸರಿಗೆ- ತತ್ತ್ವಜ್ಞಾನವುಳ್ಳ ; ತೇಜಿಷ್ಠರಿಗೆ-ತೇಜಸ್ವಿಗಳಿಗೆ, ತೇಜೋಭಂಗ ಮಾಡದ-ತೇಜೋವಧೆಯನ್ನು ಪಡೆದ ಮಾಡದ, ಅನುಸರಣೆಗೊಂಬುದೆ-ಸಹಿಸಲಿಕೆಯೋಗ್ಯವಾದುವುದೆ ? ಬಗೆಗೊಳದೆ-ಲಕ್ಷ್ಯಮಾಡದೆ.

(೨೩೩) ಸರಸರಿಸಿ-ಸಂಭ್ರಮದಿಂದ (ಬೇಗನೆ), ಸನ್ನೆ-ತ್ಭ. ಸಂಜ್ಞಾ-ಸ. ಉಭಯಕಿಂಕರ-ಸೇವಕರಿಬ್ಬರ.

(೨೩೪) ಅಸುರ-ರಾಕ್ಷಸ ಸಂಬಂಧವಾದ, ಭವ ಜನ್ಮ ; ಬಂಧುತನದಲಿ-ಮಿತ್ರಭಾವದಲ್ಲಿದ್ದು, ಅರಾತಿ ಕೃತಭಾವನೆಯಲಿ-ಶತ್ರುಗಳಾಗಿದ್ದು, ನೀವೇ......ಅನುಮತವಿದೊಂದು ಅಲ್ಲದಿರೆ......ದೊಂದು ಇದೆ ಮತವು ನೀವು ಹೇಳಿ ಎಂದ-ಎಂದನ್ವಯ.

(೨೩೫) ಅರಿವು-ಸಮರ್ಥರಲ್ಲ (ಬಲ್ಲೆವು), ಸಾರುವೆವು-ಸೇರುವೆವು, ನಿಮ್ಮಡಿಯ-ನಿಮ್ಮ (ಅತ್ಯಂತ ಗೌರವವನ್ನು ತೋರ್ಪಡಿಸಲು ನೀವು ಎಂಬುವಕ್ಕೆ ನಿಮ್ಮಪಾದ ಎಂದು ಹೇಳುವುದುಂಟು); ವಿಜ್ಞಾನರರು-ಜ್ಞಾನಾಧಿಕ್ಯವುಳ್ಳವರು.

ಕಂದ ಕೇಳು ಹಿರಣ್ಯ ಲೋಚನ ।
ನೆಂದು ವೀರ ಹಿರಣ್ಯಕಾಸುರ ।
ನೆಂದು ಜನಿಸಿದರೊಂದು ಜನ್ಮದಲವರೊಳಾದಿಯಲಿ ॥
ಕೊಂದನೊಬ್ಬನ ಸೂಕರನ ರೂ ।
ಪಿಂದಲೊಬ್ಬನ ನರಹರಿಯ ರೂ ।
ಪಿಂದ ಲಕ್ಷ್ಮೀಕಾಂತನಹಿತ ಕೃತಾಂತನಂದಿನಲಿ ॥ ೨೩೬ ॥

ಎರಡನೆಯ ಜನ್ಮದಲಿ ಜನಿಸಿದ ।
ಪರಿಯ ಕೇಳ್ಳೈ ಹೇಳುವೆನು ಸರ ।
ಸಿರುಹ ಗರ್ಭನ ಕೇಳಿ ಬಲ್ಲೈ ಶ್ರುತಿಗಳೂಹೆಯಲಿ ॥
ಪರಮ ಮುನಿಪ ಪುಲಸ್ತ್ಯನಾ ಸರ ।
ಸಿರುಹ ಗರ್ಭನ ಮಾನಸದಲವ ।
ತರಿಸಿದನು ತನ್ಮುನಿಪಗಾದನು ವಿಶ್ರವಸು ಬಳಿಕ ॥ ೨೩೭ ॥

ಆ ಮುನಿಗೆ ಕುಲವಧುವಿನಲಿ ಕೀ ।
ರ್ತ್ಯಾಮನೋಹರ ರಾಜರಾಜ ನು ।
ಹಾಮಹಿಮನುದಿಸಿದನು ಸಕಲೈಶ್ವರ್ಯಗಳು ಸಹಿತ ॥
ವ್ಯೋಮಕೇಶನ ಭಕ್ತಿಯಲಿ ನಿ ।
ಸ್ಸೀಮನಾದನು ವಿಶ್ರವಸು ಬಳಿ ।
ಕಾ ಮಗನನೇ ಸಲಹಿಕೊಂಡಿರ್ದನು ಸರಾಗದಲಿ ॥ ೨೩೮ ॥

ತರುಣ ಕೇಳೀಚೆಯಲಿ ಲಂಕಾ ।
ಪುರದ ಸಿರಿ ಸೇರಿದುದಾ ಶಾ ।
ರ್ವರಿಯ ಪರಿಯಟನ ಪ್ರಚಂಡ ಸುಮಾಲ್ಯವಂತಂಗೆ ॥

(೨೩೬) ಹಿರಣ್ಯ ಲೋಚನ-ಹಿರಣ್ಯಾಕ್ಷ, ಹಿರಣ್ಯಕಾಸುರ-ಹಿರಣ್ಯಕಶಿಪು; ಸೂಕರನ-ಹಂದಿಯ (ಮಹಾ ವರಾಹ), ನರಹರಿ-ನರಸಿಂಹ, ಅಹಿತ-ಶತ್ರುಗಳಿಗೆ, ಕೃತಾಂತ-ಯಮನಂತಿರುವವನು, ಕೃತ-ಮಾಡಲ್ಪಟ್ಟ, ಅಂತ-ಕೊನೆ (ನಾಶ) ಉಳ್ಳವನು-ಕೃತಾಂತ (ಯಮ).

(೨೩೭) ಸರಸಿರುಹ-ಕಮಲವು, ಗರ್ಭ-ಗರ್ಭವು (ಉತ್ಪತ್ತಿ ಸ್ಥಾನವು) ಯಾರಿಗೋ ಅವನು (ಬ್ರಹ್ಮ), ಶ್ರುತಿಗಳ ಊಹೆಯಲಿ-ವೇದಗಳನ್ನು ವಿಚಾರ ಮಾಡುವುದರ ಮೂಲಕ.

(೨೩೮) ಕುಲವಧು-ಹೆಂಡತಿ, ಕೀರ್ತಿ + ಆ ಮನೋಹರ (ಯಶ)-ಯಶಸ್ಸಿನಿಂದ ರಮ್ಯನಾದ; ರಾಜರಾಜ-ಕುಬೇರ; ವ್ಯೋಮ-ಆಕಾಶವು, ಕೇಶ-ಕೂದಲುಗಳು ಯಾರಿಗೋ ಅವನು, ವ್ಯೋಮಕೇಶ (ಶಿವ).

ಹರಿಯು ವೈರದಲಳಿದರವರಿ ।
ಬ್ಬರು ಸಹೋದರರಾ ಮಹಾಪುರ ।
ಪುರಹರಪ್ರಿಯಗಾಯ್ತು ವಿಷ್ಣುವಿನಿಂದ ಪೂರ್ವದಲಿ ॥ ೨೩೯ ॥

ಹದನನರಿದಿದ ನೋಡಿ ಬದುಕಿದ ।
ತ್ರಿದಶವೈರಿ ಸುಮಾಲ್ಯವಂತನು ।
ಪದವ ಭಜಿಸಿ ಪುಲಸ್ತ್ಯತನುಜಗೆ ತನ್ನ ನಂದನೆಯ ॥
ಮದುವೆಯನು ಮಾಡಿದನು ಬಳಿಕಾ ।
ಸುದತಿಗಾದರು ಸುತರು ಖಳ ದಶ ।
ವದನನಗ್ರದ ಕುಂಭಕರ್ಣ ನಿಶಾಟರವನಿಯಲಿ ॥ ೨೪೦ ॥

ಅವರು ಜಯವಿಜಯರುಗಳೆರಡನೆ ।
ಯವತರಣದವರೀಗ ಮೇಲುದು ।
ಭವಿಸಿದನು ಹರಿಭಕ್ತಿ ಭೂಷಣ ವರವಿಭೀಷಣನು ॥
ಇವರು ಮೂವರು ಮೇಲೆ ಕೈಕಸಿ ।
ಗವತರಿಸಿದಳು ಮೃತ್ಯು ರಾಕ್ಷಸ ।
ನಿವಹಕಗ್ರದ ಶೂರ್ಪಣಖೆಯೆಂಬವಳು ಕೇಳೆಂದ ॥ ೨೪೧ ॥

ಬಳಿಕ ಮೆಚ್ಚಿಸಿದರು ತಪಸ್ಯ ।
ವಿಸ್ಮಳಿತ ಸಾರಂಭದಲಿ ಶಂಕರ ।
ಸಲಿಲ ಸಂಭವ ಭವರ ಬಹಳಾಯಾಸ ಮಾರ್ಗದಲಿ ॥
ಇಳೆಯ ತಮ್ಮದು ಮಾಡಿಕೊಂಡ ।
ಪ್ಪಳಿಸಿದರು ಮಲಿತರಸುಗಳ ಕೈ ।
ಗೊಳಿಸಿ ಕಾದಿ ಕುಬೇರನನು ಹೊರವಡಿಸಿದರು ಪುರವ ॥ ೨೪೨ ॥

(೨೩೯) ಶರ್ವರಿಯ-ರಾತ್ರಿಯ, ಚರಿಯುಚರ-ಸಂಚರಿಸುವವರು (ರಾಕ್ಷಸರ) ಪ್ರಚಂಡ-ಶೂರನಾದ, ಇಬ್ಬರು-ಪುಲಸ್ತ್ಯ, ವಿಶ್ರವಸು. ಪುರಹರ-ಶೀಘ್ರವಾದ ತ್ರಿಪುರವನ್ನು, ಹರ-ನಾಶಮಾಡಿದವನು (ಈಶ್ವರ) ಅವನ ಪ್ರಿಯ-ಮಿತ್ರ (ಕುಬೇರ).

(೨೪೦) ಇವ ಹದನನು-ಈ ಸಂದರ್ಭವನ್ನು, ತ್ರಿ-ಮೂರಾದ (ಬಾಲ್ಯ, ಯೌವನ, ಕೌಮಾರ), ದಶ-ಅವಸ್ಥೆಗಳುಳ್ಳವರು (ದೇವತೆಗಳು), ಸು-ಉತ್ತಮವಾದ, ದತಿ-ಹಲ್ಲುಳ್ಳವಳು (ಹೆಂಗಸು); ನಿಶಾ-ರಾತ್ರಿಯಲ್ಲಿ, ಅಟ-ಸಂಚರಿಸುವವರು (ರಾಕ್ಷಸರು).

(೨೪೧) ಮೇಲೆ-ಇಬ್ಬರಿಗಿಂತ ಹೆಚ್ಚಾಗಿ, ರಾಕ್ಷಸನಿವಹಕೆ ಮೃತ್ಯು ಅಗ್ರದ ಶೂರ್ಪಣಖೆ; ಮೃತ್ಯು-ತ್ಸ. ಮಿತ್ತು, ಮಿಳ್ತು-ದ್ರ; ಶೂರ್ಪ-ಮೊರದಂತೆ, ನಖ-ಉಗುರುಗಳುಳ್ಳವಳು.

(೨೪೨) ಸಲಿಲ ಸಂಭವ ಭವ-ಬ್ರಹ್ಮ, ಮಲಿತ-ಗರ್ವಿಷ್ಠರಾದ, ಕೈಗೊಳಿಸಿ-ಸೆರೆಹಿಡಿದು; ಪುರವ-ಲಂಕಾಪಟ್ಟಣದಿಂದ, ಇಲ್ಲಿ ಪಂಚಮ್ಯರ್ಥದಲ್ಲಿ ದ್ವಿತೀಯೆ ಬಂದಿದೆ; ಶಂ-ಸುಖವನ್ನು, ಕರ-ಉಂಟುಮಾಡುವವನು-ಶಂಕರ (ಶಿವ).

ಆದುದವರಿಗೆ ಲಂಕೆ ದಿನ ದಿನ ।
ಕಾದುದಖಿಳೈಶ್ವರ್ಯವಭವನ ।
ನೈದಿ ಬದುಕಿದನಾ ಧನೇಶ್ವರ ಮೇಲೆ ಮಯನೆಂಬ ॥
ಆದಿತೇಯ ವಿರೋಧಿ ಸುತೆ ಮಂ ।
ಡೋದರಿಯ ತಂದಿತ್ತನಾ ಕ್ರ ।
ವ್ಯಾದ ಚಕ್ರೇಶಂಗೆ ಹೇಳುವುದೇನು ಬಳಿಕೆಂದ ॥ ೨೪೬ ॥

ಜನಿಸಿದನು ಬಳಿಕವಳ ಗರ್ಭದ ।
ಲನಿಮಿಷೇಂದ್ರ ವಿರೋಧಿ ಸೇರಿದು ।
ವನುಗತದ ಸಿರಿಯುವನ ದೆಸೆಯಿಂದಿಂದ್ರ ವೈಭವದ ॥
ದನುಜ ಮನುಜಾಮರ ಮಹೋರಗ ।
ಜನ ತೃಣಪ್ರತಿಯಾಯ್ತು ದಶ ದಿ ।
ಕ್ಕಿನ ಪುರಾಧಿಪರೆಡೆಗೆ ನಡೆದುದು ದಂಡು ಬಳಿಕೆಂದ ॥ ೨೪೭ ॥

ಕಾದಿದನು ಬಳಿಕ್ಕಾನಲಿ ಗತ !
ಮಾದುದಾತನ ಸೈನ್ಯ ಸೋಲದ ।
ಹಾದಿಯಲಿ ನಿಲಿಸಿದನು ಧನಪನನಾ ಧನೇಶ್ವರನು ॥
ಸಾಧಿಸಿದ ಮಹದೈಶ್ವರಿಯವನು ।
ಸೇದಿಕೊಂಡನು ಪುಷ್ಪಕವ ಮೇ ।
ಲಾ ದುರಾಗ್ರಹಿ ಧಾಳಿಯಿಟ್ಟನು ಧೂರ್ಜಟಿಯ ಗಿರಿಗೆ ॥ ॥ ೨೪೮ ॥

ತಡೆದುದಾಗಿರಿ ಗರುವ ಭಟನು ।
ಗ್ಗಡದ ದಿವ್ಯ ವಿಮಾನವನು ಖಳ ।
ಕಿಡಿ ಮಸಗೆ ಕಿತ್ತೆತ್ತಿದನು ಮೃತ್ಯುಂಜಯನ ಗಿರಿಯ ॥

(೨೪೬) ಅಭವ-ಜನ್ಮವಿಲ್ಲದವನು (ಈಶ್ವರ), ಮಯ-ಇವನು ರಾಕ್ಷಸರ ಬಡಗಿ; ಅದಿತಿಯ ಮಕ್ಕಳು-ಆದಿತೇಯರು (ದೇವತೆಗಳು) ಅವರಿಗೆ ವಿರೋಧಿ-ಶತ್ರು (ರಾಕ್ಷಸ), ಕ್ರವ್ಯ-ಮಾಂಸ ವಸ್ತು, ಅದ-ತಿನ್ನುವವರು-ಕ್ರವ್ಯಾದ (ರಾಕ್ಷಸರು), ಚಕ್ರೇಶ-ಚಕ್ರವರ್ತಿ.

(೨೪೭) ಅನಿಮಿಷ-ರೆಪ್ಪೆಗಳಿಲ್ಲದವರು ಅವರಿಗೆ ಇಂದ್ರ-ಒಡೆಯ (ಇಂದ್ರ) ಅವನ ವಿರೋಧಿ-ಶತ್ರು (ಇಂದ್ರಜಿತ್ತು), ತೃಣಪ್ರತಿ-ಹುಲ್ಲಿಗೆ ಸಮ.

(೨೪೮) ಗತವಾದುದು-ನಾಶವಾಯ್ತು; ಸೋಲದ-ಅಪಜಯದ; ಸೇದಿಕೊಂಡನು-ಕಿತ್ತುಕೊಂಡನು; ದುರಾಗ್ರಹಿ-ಕೆಟ್ಟ ಕೋಪವುಳ್ಳವನು, ಧಾಳಿಯಿಟ್ಟನು-ದಂಡೆತ್ತಿಹೋದನು, ಧೂರ್ಜಟಿ ಜಡೆಯಭಾರವುಳ್ಳವನು (ಶಿವ).

ಮೃಡನರಿದು ನಗುತೊತ್ತಲಾ ಗಿರಿ ।
ಯಡಿಯಲೇ ಕೈಸಿಕ್ಕಿ ಜಗ ನಡು ॥
ನಡುಗಲೊದರಿದನವನು ವರ್ಷ ಸಹಸ್ರ ಪರ್ಯಂತ ॥ ೨೬೬ ॥

ಬಿಡಿಸಿದನು ಬಂದಜನು ಮೊಮ್ಮನು ।
ಹಡೆದ ಮೃಗಸಿವನೆಂದು ವಂದಿಸಿ ।
ಮೃಡಗೆ ಬಳಿಕವ ಭಜಿಸಿದನು ಬಾಲೇಂದುಶೇಖರನ ॥
ಪಡೆದನಾಯುಷ್ಯವನು ತನ್ನಲಿ ।
ಕೆಡದ ಮಹದೈಶ್ವರ್ಯವನು ಬಲು ।
ಬಿಡುಗವನು ವರ ಚಂದ್ರಹಾಸಕವೆಂಬ ನಾಮಕದ ॥ ೨೬೭ ॥

ದೃಢತರದ ಸಂಪಾಯ್ತು ಸಿರಿಯಾ ।
ಯ್ತೆಡೆವರಿಯದುಬ್ಬರದ ಶೌರ್ಯದ ।
ಕಡಲು ಕೈವಶವಾದುದೆಂಬುಮ್ಮಹದ ಗರ್ವದಲಿ ॥
ಒಡನೆ ಧಾಳಿಯ ಸಿಕ್ಕಿ ಶಕ್ರನ ।
ತುಡುಕಿ ತೇಜವ ಕೊಂಡು ವಹ್ನಿಯ ।
ನೆಡಹಿ ರಾಣಿಪೆ ದಳವುಳಿಸಿದನು ಧರ್ಮರಾಜನಲಿ ॥ ೨೬೮ ॥

ಕಾಳಗಕೆ ನೆರೆದಖಿಳ ದೂತರ ।
ಧೂಳಿಗೆದರಿದು ಮೃತ್ಯುವಿನ ಗೋ ।
ನಾಳಿಯಲಿ ಚಾಚಿದನು ಚೌಪಟ ಚಂದ್ರಹಾಸಕವ ॥
ಕಾಲನಡುಗಿದನನಿತರಲಿ ದಿ ।
ಕ್ಪಾಲತನವನು ಬಿಸುಟ ನಿರುತಿಯ ।
ಮೇಲೆ ಮೇಲಲ್ಲಿಂದ ನಡೆದಾಕರಿಸಿದನು ಧನವ ॥ ೨೬೯ ॥

(೨೬೬) ಗರುವ-ಬಲಿಷ್ಠನಾದ, ಉಗ್ರ ದ್ವ, ಉತ್ಕಟ-ತ್ಸ.; ಗಿರಿಯ-(ಕೈಲಾಸ) ಪರ್ವತವನ್ನು; ಮೃತ್ಯು-ಯಮನನ್ನು. ಜಯ-ಜಯಿಸಿದವನು (ಈಶ್ವರ).

(೨೬೭) ಮೊಮ್ಮನು-ಮೊಮ್ಮಗನು (ವಿಶ್ರವಸ್ಸು), ಮೃಡ-(ಪ್ರಳಯಕಾಲದಲ್ಲಿ ಲೋಕವನ್ನು) ಮೃಧಪಡಿಸುವವನು (ಈಶ್ವರ); ಬಾಲೇಂದು-ಬಾಲ ಚಂದ್ರನು, ಶೇಖರ-ತಲೆಯಲ್ಲಿ ಯಾರಿಗೋ ಅವನು (ಬ. ವ್ರೀ); ಆಯುಷ್ಯ-ತ್ಸ., ಆಯುಸ-ದ್ವ.

(೨೬೮) ಎಡೆಯಿಂ+ಪರಿಯದ-ಎಡೆವರಿಯದ (ಕ್ರಿ. ಸ.)-ಶಾಶ್ವತವಾದ: ಉಮ್ಮಹ-ಮದ; ಶಕ್ರ-ಇಂದ್ರ, ತುಡುಕಿ-ಹಿಡಿದು, ವಹ್ನಿ-ಅಗ್ನಿ; ದಳವುಳಿಸು-ಸೂರೆಮಾಡು.

(೨೬೯) ಧೂಳಿಗೆದರಿದು-ಪುಡಿಪುಡಿಮಾಡಿ ಹರಡಿ, ಗೋನಾಳಿ-ಕೊರಲು; ಚೌಪಟ-ದ್ವ, ಚತುಷ್ಪಥ-ತ್ಸ.; ಚೌಪಟ-ನಾಲ್ಕುದಾರಿ ಕೂಡುವ ಸ್ಥಳ; (ಇಲ್ಲಿ ಶ್ರೇಷ್ಠವಾದ ಎಂಬರ್ಥ.; ಆಕರಿಸಿದನು-ಬಾಚಿಕೊಂಡನು.

ವರುಣ ಬಳಿಕೀ ಹದನ ಕೇಳುತ ।
ಶರಣು ಪೊಕ್ಕನು ಕಾಯಬೇಹುದು ।
ಹರಣವನು ನೀನೆಂದು ಕೊಟ್ಟನು ಸಕಲ ವಸ್ತುಗಳ ॥
ಕರುಣದಲಿ ಬಿಟ್ಟಾತನನು ಮುಂ ।
ದರುಣ ಪಟ ಪರಿಧಾನ ಶೌರ್ಯಾ ।
ಭರಣ ಧಾಳಿಯನಿಕ್ಕಲೋಡಿದನನಿಲ ಭೀತಿಯಲಿ ॥ ೨೫೦ ॥

ಗೆಲಿದು ನಾನಾ ಲೋಕಪಾಲಕ ।
ರೊಳು ಧನವನೆರೆ ಕವರಿಕೊಂಡಿಳಿ ।
ದಿಳೆಯ ರಾಯರ ಬಾಯ್ಗಳಲಿ ಬೆರಳಿಡಿಸಿ ಶರಧಿಗಳ ॥
ವಳಯದಖಿಳ ದ್ವೀಪ ಪತಿಗಳ ।
ತಲೆಗಳನು ಹೊಡೆದಲ್ಲಿ ತನ್ನ ।
ಗ್ಗಳೆಯ ಭೃತ್ಯರನಿರಿಸಿ ಬಂದನು ಮರುತನೃಪನೆಡೆಗೆ ॥ ೨೫೧ ॥

ಆ ಮರುತ್ತನ ಯಜ್ಞಕೈತಂ ।
ದಾ ಮರುದ್ಗಣ ಮುನಿಜನಂಗಳ ।
ತೋಮರದ ತೋಟಿಯಲಿ ಕೆದರಿದ ಕದನ ಕೇಳಿಯಲಿ ।
ಆ ಮಹೀಶನ ಗೆಲಿದು ನಿಮ್ಮಯ ।
ತಾಮರಸ ಸಖ ಕುಲದಯೋಧ್ಯಾ ।
ಭೂಮಿಪತಿಯನರಣ್ಯನಲಿ ತೊಡಗಿದನು ಸಂಗರವ ॥ ೨೫೨ ॥

ಕಾದಿದನು ಸಮಪಾಳಿಯಲಿ ಹದಿ ।
ನೈದು ದಿನಪರಿಯಂತ ಸೋಲವು ।
ಮೇದಿನೀಶಂಗಾಗದಿರೆ ಮಾಯಾಭಿಯೋಗದಲಿ ॥
ಕಾದು ಕೊಂದನು ತನ್ನೃಪನ ಬಳಿ ।
ಕಾದುದಗ್ಗದ ಶಾಪವಾತನಿ ।
ನಾ ದಶಗ್ರೀವಂಗೆ ರಾಕ್ಷಸ ಸಾರ್ವಭೌಮಂಗೆ ೨೫೩ ॥

(೨೫೦) ಅರುಣಪಟ ಪರಿಧಾನ-ಕೆಂಪು ಬಟ್ಟೆಯನ್ನುಟ್ಟಿರುವ;

(೨೫೧) ನೆರೆ-ಚೆನ್ನಾಗಿ, ಕವರಿಕೊಂಡು-ಕಿತ್ತುಕೊಂಡು; ಬಾಯ್ಗಳಲಿ ಬೆರಳಿಡಿಸಿ--ಭಯಪಡಿಸಿ; ದ್ವೀಪ-ತ್ಸ., ದೀವ-ದ್ಭ.

(೨೫೨) ಮರುದ್ಗಣ-ದೇವತೆಗಳ ಗುಂಪು, ತೋಮರ-ಕಬ್ಬಿಣದ ತಲೆಯುಳ್ಳ ಮೂರುಮೊಳವಿರುವ ಕೆಂಪು ಬಣ್ಣದ ಮರದ ದೊಣ್ಣೆ; ತೋಟಿ-ಕಲಹ.

(೨೫೩) ಸಮಪಾಳಿಯಲಿ-ಸಮಾನವಾದ ಪರಾಕ್ರಮದಿಂದ; ಮಾಯಾಭಿಯೋಗ-ಮಾಯೆಯನ್ನು ಉಪಯೋಗಿಸುವುದು (ಮರೆಯಾಗಿ ನಿಂತು ಯುದ್ಧಮಾಡುವುದು); ಗ್ರೀವ-ಕೊರಳು.

ಕ್ಷಿತಿಸುತಾ ಸುತ ಕೇಳು ರಾಕ್ಷಸ ।
ಪತಿ ಬಳಿಕ ಬರುತಿರಲು ವೇದಾ ।
ವತಿಯು ಕಂಡನು ಸೋತನಾ ಕಾಮಿನಿಯ ರೂಪಿಂಗೆ ॥
ಸತಿಗೆ ಬಳಿಕದು ಸಲುವುದೇ ರಘು ।
ಪತಿಯ ಕೈಯಲಿ ರಣ ಮುಖದಲುಪ ।
ಹತಿ ನಿನಗೆ ಬರಲೆನುತ ಹೊಕ್ಕಳು ಹವ್ಯವಾಹನನ ॥ ೨೫೪ ॥

ಬಂದನಲ್ಲಿಂ ಮೇಲೆ ಜಯಮುಖ ।
ದಿಂದ ಲಂಕಾಪುರಿಗೆ ಸೇರಿತು ।
ಮುಂದಿ ಹಿಂದಣ ರಾಕ್ಷಸೇಂದ್ರರ ಬಳಿಯ ಭಟರುಗಳು ॥
ಕೊಂದ ಸುರ ನರ ಪತಿಗಳ ಬಲಾ ।
ವೃಂದ ಷೋಡಶ ಲಕ್ಷ ಭೋಗಕೆ ।
ಸಂದರಾ ದಿನಕಾ ನಿಶಾಚರ ಸಾರ್ವಭೌಮಂಗೆ ॥ ೨೫೫ ॥

ಗಿರಿಗಳಂಜುವುವಿವನ ಕಾಣುತ ।
ಶರಧಿಗಳನವ ಹೇಳದಿರು ಶಂ ।
ಕರ ಸರೋಜಾಸನ ಸುರೇಂದ್ರಾದಿಗಳ ಕಂಪನವ ॥
ತರುಣ ಹೇಳುವುದೇನು ದಾನವ ।
ಹರನ ಹವಣೇನರಿಯುನೀ ವಿ
ಕ್ಕರಿಗಳೀ ದಶಶಿರನ ಮಣಿಸಲು ತಕ್ಕರಿಲ್ಲೆಂದ ॥ ೨೫೬ ॥

ಕ್ರತುಗಳಡಗಿದುವಖಿಳ ಸುರರಾ ।
ಹುತಿಗಳುಕ್ಕುಡಿಸಿದುವು ಕಾಮ್ಯ ।
ಪ್ರತತಿಯೋಸರಿಸಿದುವು ಧಾರ್ಮಿಕರಳ್ಳೆ ಬಾರಿದುವು ॥
ಕ್ಷಿತಿಗೆ ಹೊರೆ ಬಲವಾಯ್ತು ಬದುಕುವ ।
ಗತಿಯ ಕಾಣದೆ ಸಕಲ ದೇವ ।
ಪ್ರತತಿ ನೆರೆದೈತಂದು ಕಂಡುದು ಕಮಲಸಂಭವನ ॥ ೨೫೭ ॥

(೨೫೪) ರಘು-ದ್ಭ., ರೂಪ-ತ್ಸ.; ಹವ್ಯ-ಹೋಮಮಾಡಿದ ಪದಾರ್ಥಗಳನ್ನು, ವಾಹನ-ತೆಗೆದುಕೊಂಡು ಹೋಗುವವನು (ಅಗ್ನಿ.)

(೨೫೫) ವೃಂದ-ಸಮೂಹ; ವೃಂದ-ತ್ಸ., ಬಿಂದ-ದ್ಭ.

(೨೫೬) ದಾನವ-ರಾಕ್ಷಸರನ್ನು, ಹರ-ಕೊಲ್ಲುವವನು (ವಿಷ್ಣು) ಹವಣ್-ದ್ಭ., ಪ್ರಮಾಣ-ತ್ಸ.; ಹವಣ-(ಸಾಮರ್ಥ್ಯದ) ಅಳತೆಯನ್ನು; ಏನರಿಯನು-ಏನೆಂದು ಕಾಣನು (ಲಕ್ಷ್ಯ ಮಾಡನು); ಮಣಿಸಲು-ಬಗ್ಗಿಸಲು.

(೨೫೭) ಉಕ್ಕುಡಿಸು-ಶಕ್ತಿ ಹೀನವಾಗು; ಕಾಮ್ಯಪ್ರತತಿ-ಕಾಮ್ಯವ್ರತಗಳ ಗುಂಪು; ಓಸರಿಸು-ನಿಂತುಹೋಗು; ಅಳ್ಳೆ-ಪಕ್ಕೆ; ಬಾರಿದುವು-ಹೊಡೆದುಕೊಂಡವು.

ಆತನಾದೂರಿಂದ ನಮುಚಿ ವಿ ।
ಘಾತಿ ಮುಖ್ಯ ಸಮಸ್ತ ಸುರ ಸಂ ।
ಜಾತ ಸಹಿತೈದಿದನು ವಿಬುಧವಿರೋಧಿ ಮರ್ದನನ ॥
ಭೂತಮಯ ಪಂಚಕನ ತತ ನಿ ।
ರ್ಧೂತ ದುರಿತ ಘರಟ್ಟ ಭಯ ಜೀ ।
ಮೂತ ಪಟಲ ಸಮೀರಣನ ದುಸ್ತರ ಮಹಾಂಬುಧಿಯ ॥ ೨೫೮ ॥

ಅಬ್ಬರಿಸಿ ತೆರೆ ಮುಸುಗಿ ಗಗನ ।
ಕುಬ್ಬರಿಸಿ ತಳವುಳಲ ನೊಗೆದೊಡ ।
ನುಬ್ಬರಿಸಿ ಹೊಡಹೊಡಕರಿಸಿ ಭೋರೆನುತ ಭೋರ್ಗರೆವ ॥
ಬೊಬ್ಬುಳಿಯ ಬೆಳ್ನೊರೆಗಳಟ್ಟುಳಿ ।
ಯೊಬ್ಬುಳಿಯನುರವಣಿಸುತುರವಣಿ ।
ಗೊಬ್ಬಿನಲಿ ಮದವೇರಿ ಪಾಲ್ಗಡಲೆಸೆದುದಿದಿರಿನಲಿ ॥ ೨೫೯ ॥

ಉಳಿದುದೆಡೆಯಿಲ್ಲದೆ ನಭೋಮಂ ।
ಡಳಮಹಾದೇವೀತ ಮುಳಿದೊಡೆ ।
ವಿಳಯದಲಿ ಬೆಚ್ಚುವುದಲಾ ಬ್ರಹ್ಮಾಂಡ ಘುಟವೆನುತ ॥
ಒಲೆದು ಮೌಳಿಯನಬುಜಭವನಾ ।
ಜಲನಿಧಿಗೆ ಕೈಮುಗಿದು ಬಟ್ಟೆಯ ।
ಗೆಲಿದು ಬರುಹಿರ್ಮುಖರು ಸಹಿತೊಳಹೊಕ್ಕನಂಬುಧಿಯ ॥ ೨೬೦ ॥

ಕೇಳಿದೈಯೆಲೆ ರಾಜಸೂನು ಘ ।
ಣಾಳಿಧರನ ಶರೀರ ಶಯನನ ।
ಕಾಲಧರ್ಮ ಕ್ರಿಯೆ ಗತಾಗತದೂರನನುಪಮನ ॥

**(೨೫೮) ನಮುಚಿ ವಿಘಾತಿ**-ನಮುಚಿಯೆಂಬ ರಾಕ್ಷಸನನ್ನು ಕೊಂದವನು (ಇಂದ್ರ); **ವಿಬುಧ-ದೇವತೆಗಳ, ವಿರೋಧಿ-ಶತ್ರು** (ರಾಕ್ಷಸ) : **ತತ**-ವಿಸ್ತಾರವಾಗಿ, **ನಿರ್ಧೂತ**-ನಾಶವಾದ ಲ್ಪಟ್ಟ, **ದುರಿತ**-ಪಾಪವೆಂಬ, **ಘರಟ್ಟ**-ಬೀಸುವ ಕಲ್ಲುಳ್ಳ, ಭಯ... ರಣನ-ಅಂಜಿಕೆಯೆಂಬ ಮೋಡಗಳ ಗುಂಪಿಗೆ ಬಿರುಗಾಳಿಯಂತಿರುವವನ (ವಿಷ್ಣುವಿನ)

**(೨೫೯) ಬೊಬ್ಬುಳಿ**-ನೀರಮೇಲಣ ಗುಳ್ಳೆ; **ಅಟ್ಟುಳಿಯ**-ಗುಂಪಿನ, 'ಒಬ್ಬುಳಿ-ಸೇರುವಿಕೆ, **ಉರವಣಿಸುತ**-ರೇಗುತ್ತ; **ಉರವಣಿಗೊಬ್ಬಿನಲಿ**-ಹೆಚ್ಚುತ್ತಿರುವಗರ್ವದಿಂದ; ಬಿಳಿದು + ನೊರೆ-ಬಿಳ್ನೊರೆ(ವಿಪೂರ್ವ. ಕ)

**(೨೬೦) ಒಲೆದು**-ಅಲ್ಲಾಡಿಸಿ, **ಬಟ್ಟೆಯ ಗೆಲಿದು**-ಮಾರ್ಗವನ್ನು ಕಳೆದು, **ಬರ್ಹಿ**-ಅಗ್ನಿಯು, **ಮುಂಖರು**-ಮುಖವು ಯಾರಿಗೋ ಅವರು-ಅಗ್ನಿಯಲ್ಲಿ ಹೋಮಮಾಡಿದ ಹವಿಸ್ಸುಗಳಿಂದ ತೃಪ್ತಿಯನ್ನು ಪಡೆವರು (ದೇವತೆಗಳು).

ಆಲಯವು ಹದಿನಾರು ಲಕ್ಷದ ।
ಮೇಲೆ ಸಾವಿರ ಯೋಜನವು ಬಳಿ ।
ಕೋಲಗದ ಸಂಭ್ರಮವ ಹೊಗಳುವೆನೇನ ತಾನೆಂದ ॥ ೨೬೧ ॥

ಉಸಿರಲೇನದ ಕೋಟಿ ಸಂಖ್ಯೆಯು ।
ಬಿಸುರಹಾಸನರಿದ್ದರನುರ ।
ಪ್ರಸರವಿದ್ದುದು ದಿವ್ಯಋಷಿಗಣವಿದ್ದುದಪರಿಮಿತ ॥
ವಸು ದಿಶಾಧಿಪ ರುದ್ರಗಣ ಸುಮ ।
ನಸ ವಧೂ ನಿಕುರುಂಬವಿದ್ದುದು ।
ನೊಸಲ ಕೈಗಳಲಾದಿನಾರಾಯಣನ ಬಳಸಿನಲಿ ॥ ೨೬೨ ॥

ವರ ಸರಸ್ವತಿ ಶಕ್ತಿ ಮಾಹೇ ।
ಶ್ವರಿ ಮಹಾ ಗಾಯತ್ರಿ ವಿಶ್ವಂ ।
ಭರಿ ಕುಮಾರಿ ವರಾಹಿ ವೈಷ್ಣವಿ ದುರ್ಗಿ ಚಾಮುಂಡಿ ॥
ಪರಮ ಸತಿ ಸಾವಿತ್ರಿ ಸಂಧ್ಯಾ ।
ತರುಣಿ ಮೊದಲಾದಖಿಳ ದೇವಿಯು ।
ರಿರವು ಕಾಣಿಸಿತಾದಿಲಕ್ಷ್ಮಿಯ ಸುತ್ತ ವಳಯದಲಿ ॥ ೨೬೩ ॥

ಉಳಿವುದೊಂದೇ ವಸ್ತು ಕಲ್ಪಂ ।
ಗಳಲಿ ಕಮಲ ಭವಾಮರೇಂದ್ರಾ ।
ವಳಿಗಳಡಗುವುದಾ ಮಹಾತ್ಮನ ಮನದ ನೆನಹಿನಲಿ ॥
ತೊಲಗಿ ದೂರದೊಳಿದ್ದು ಮೆಲ್ಲನೆ ।
ಸುಳಿದರೀ ಬ್ರಹ್ಮಾದಿ ದೇವರು ।
ನಳಿನ ನಾಭನ ಮಹಿಮೆಗಾವುದು ಸೀಮೆ ಕೇಳೆಂದ ॥ ೨೬೪ ॥

(೨೬೧) ಫಣಾಳಿ-ಹೆಡೆಗಳ ಗುಂಪನ್ನು, ಧರ-ಧರಿಸಿದವನು (ಆದಿಶೇಷ), ಕಾಲ...ದೂರದ ಹಿಂದೆ ಕಳೆದ ಅಥವಾ ಮುಂದೆ ಬರುವ ಕಾಲ, ನಡೆವಳಿಕೆ, ಕಾರ್ಯ, ಇವುಗಳಿಗೆ ಸಿಕ್ಕದೆ ಇರುವವನನ್ನು.

(೨೬೨) ವಸು-ಧರಾ, ಧ್ರುವಾ, ಸೋಮ, ಅಪ, ಅಗ್ನಿ, ಪ್ರಭಂಜನ, ಪ್ರತ್ಯೂಷ, ಪ್ರಭಾಸ, ಈ ಎಂಟು ವಸುಗಳು, ನೊಸಲ ಕೈಗಳಲಿ-ಹಣೆಗಳಲ್ಲಿ ಕೈ ಮುಗಿದುಕೊಂಡು.

(೨೬೩) ಪರಮ ಸತಿ-ಮಹಾ ಪತಿವ್ರತೆಯಾದ, ಅಖಿಳ ದೇವಿಯರ-ಎಲ್ಲ ಶಕ್ತಿಗಳೆ.

(೨೬೪) ಕಲ್ಪಂಗಳಲಿ ಒಂದೇ ವಸ್ತು ಉಳಿವುದು, ಕಮಲ..ಡಗುವುದು, ನೆನಹಿನಲಿ ಸ್ಮರಣೆಯಲ್ಲಿ (ಸ್ಮರಿಸಿಕೊಂಡ ಮಾತ್ರಕ್ಕೆ), ತೊಲಗಿ-ಆ ವಿಷ್ಣುವಿನ ದೇಹದಿಂದೀಚೆಗೆ ಹೊರಟು; ಸೀಮೆ-ಅವಧಿ (ಎಲ್ಲೆ, ಮೇರೆ).

ನಾರದನ ಸಂಗೀತವಪ್ಸರ ।
ನಾರಿಯರ ನರ್ತನ ಶ್ರುತಿ ಸ್ಮೃತಿ ।
ಯಾರುಭಟೆಯುಗ್ಗಡಣೆ ಪೌರಾಣ ಪ್ರಬಂಧಗಳ
ಸಾರತರ ಸಮ್ಮೋಹನದ ಕೈ ।
ವಾರ ಕೇಳಿಸಿತಬುಜಭವ ಬ್ಬಿ ।
ದಾರಕರು ಜಯುಯೆಂದು ಹೊಗಳಿತು ಸಕರ ಸುರಕಟಕ ॥ ೨೬೫ ॥

ದೇವ ಜಯ ಜಯು ಸಕಲ ದೇವರ ।
ದೇವ ಜಯು ಶ್ರುತಿಕೋಟಿ ಕನ್ಯಾ ।
ಶ್ರೀವರನೆ ಜಯು ಜಯು ಜನಾರ್ದನ ಭಕ್ತಸುರಧೇನು ॥
ದೇವ ರಿಪುಕುಲ ವಿಪಿನ ಪಟುತರ ।
ಪಾವಕಾಖಿಳ ಲೋಕರಕ್ಷಕ ।
ದೇವ ರಕ್ಷಿಸು ನಮ್ಮನೆನುತೆಡೆಗೆಡೆದುದಮರ ಗಣ ॥ ೨೬೬ ॥

ನೊಂದೆವಾವೆಲೆ ದೇವ ಸುರಕುಲ ।
ಬಂದಿಗಾರನ ಕೈಯುಲಕಟಾ ।
ತಂದೆ ನೀನೆಮಗಲ್ಲವೇ ನಿಗಮಾಗಮೋಕ್ತದಲಿ ।
ನೊಂದ ನೋವನು ಪರಿಹರಿಸಿ ಕೃಪೆ ।
ಯಿಂದ ಸಲಹುವ ದೇವರಾರೆಮ ।
ಗೆಂದು ಮೇಘಧ್ವಾನದಲಿ ಮೊರೆಯಿಟ್ಟುದಮರಗಣ ॥ ೨೬೭ ॥

ಕೇಳಿದನು ಕಡು ದೂರುಕಾರರ ।
ನಾಲಗೆಯ ರಚಿತೋಕ್ತಿಯನು ಕರು ।
ಣಾಳುಗಳ ಬಲ್ಲಿದನು ನಿದ್ರಾಯೋಗ ಮುದ್ರೆಯಲಿ ॥

(೨೬೫) ಆರುಭಟೆಯುಗ್ಗಡಣೆ-ಕೂಗಿ ಉಗ್ಗಡಿಸುವಿಕೆ, ಪ್ರಬಂಧಗಳ-ಕಥೆಗಳ, ಕೈವಾರ-ಶಬ್ದ; ಬ್ಬಿರುದಾರಕರು-ದೇವತೆಗಳು; ಕಟಕ-ಸೇನೆ.

(೨೬೬) ಶ್ರುತಿಕೋಟಿ-ಅನೇಕ ವೇದಗಳೆಂಬ, ಕನ್ಯಾ ಶ್ರೀ-ಲಕ್ಷ್ಮೀದೇವಿಯ, ವರ-ಪತಿ (ವಿಷ್ಣು); ಜನ-(ದುಷ್ಟ)ಜನವನ್ನು, ಅರ್ದನ-ಶಿಕ್ಷಿಸುವವನು; ಸುರ-ದೇವತೆಗಳ, ಧೇನು-ಹಸು (ಕಾಮಧೇನು); ದೇವರಿಪು...ಪಾವಕ-ರಾಕ್ಷಸರ ಸಮೂಹಕ್ಕೆ ಬಲವಾದ ಅಗ್ನಿಯಂತಿರುವ, ಎಡೆಗೆಡೆದುದು-ನಮಸ್ಕರಿಸಿತು.

(೨೬೭) ಸುರಕುಲ ಬಂದಿಗಾರನ-ದೇವತೆಗಳ ಗುಂಪನ್ನು ಸೆರೆಹಿಡಿದ (ರಾವಣನ); ಮೇಘಧ್ವಾನದಲಿ-ಗುಡುಗಿನ ಶಬ್ದದಿಂದ; ಮೊರೆಯಿಟ್ಟುದು-ಕೂಗಿಕೊಂಡಿತು.

ಆಲಿಗಳನರಲಿಚುತ ನಗೆಗಳ ।
ಮಾಲೆಗಳ ತೆರಳಿಚುತ ಕರೆ ಕ ।
ಟ್ಟಾಳಿಗದ ಕಾತುರರನೆಂದನು ಹರಿ ಸುಪರ್ಣಂಗೆ ॥ ೨೬೮ ॥

ಬಂದನಾಗ ಸುಪರ್ಣ ಸುಮನಸ ।
ವೃಂದದೆಡೆಗಾ ಕಮಲಭವ ಸಂ ।
ಕ್ರಂದನಾದಿ ಸಮಸ್ತ ಸುರಜನ ಮುನಿಜನವ್ರಜವ ॥
ತಂದು ನಿಲಿಸಿದನಬುಜನಾಭನ ।
ಮುಂದೆ ಕುಸುಮಾಂಜಲಿಗಳಲಿ ಮುದ ।
ದಿಂದ ವೈಯಿಕ್ಕಿದರು ಭಯರಸ ಭರಿತ ಭಕ್ತಿಯಲಿ ॥ ೨೬೯ ॥

ಜಯ ಜಯ ಶ್ರೀಕಾಂತ ಲೋಕ ।
ತ್ರಯ ಕೃಪಾಕರ ಭಕ್ತವತ್ಸಲ ।
ಜಯ ಜಯಾಚ್ಯುತ ಜಯ ಸುರಾರ್ಚಿತ ಸಕಲ ಗುಣನಿಲಯ ॥
ಜಯ ಜಗದ್ವಲ್ಲಭ ಜಗನ್ಮಯ ।
ಜಯ ಜಗದ್ರಕ್ಷಕ ಜನಾರ್ದನ ।
ಭಯವಿದೂರನೆ ದೇವ ಸಲಹೆನುತಿರ್ದುದಮರಗಣ ॥ ೨೭೦ ॥

ದೇವ ಕಾರುಣ್ಯಾಂಬುನಿಧಿ ಭೂ ।
ದೇವ ಸುಜನ ಜನೈಕವತ್ಸಲ ।
ದೇವ ದೇವೇಶ ಪ್ರಸಾದ ಸ್ನಿಗ್ಧ ಮುಖ ಕಮಲ ॥
ದೇವ ಲಕ್ಷ್ಮೀಕಾಂತ ವರ ರಾ ।
ಜೀವ ಲೋಚನ ಸುಜನ ಜನ ಕರು ।
ಣಾವಲಂಬನ ಕಾಯಬೇಕೆಂದೊದರಿತಮರಗಣ ॥ ೨೭೧ ॥

(೨೬೮) ನಿದ್ರಾಯೋಗ ಮುದ್ರೆ-ನಿದ್ರೆಯಿಂದ ಕೂಡಿದ ರೀತಿ, ಆಲಿಗಳನು-ಕಣ್ಣುಗಳನ್ನು, ಅರಲಿಚುತ-ತೆರೆಯುತ್ತಾ, ಕಡಿದು ಊಳಿಗ-ಹೆಚ್ಚಾದ ಸೇವೆ; ಕಾತುರರನು-ಶೀಘ್ರವಾಗಿ ನಡೆಯಿಸುವವರನ್ನು, ಸು-ಒಳ್ಳೆ, ಪರ್ಣ-ಗರಿಗಳುಳ್ಳವನು (ಗರುಡ)

(೨೬೯) ಸುಮನಸ ವೃಂದ-ದೇವತೆಗಳಗುಂಪು; ಅಬುಜ-ಕಮಲದಂತೆ, ನಾಭ-ಹೊಕ್ಕಳುಳ್ಳವನು (ವಿಷ್ಣು); ಕುಸುಮಯುಕ್ತವಾದ+ ಅಂಜಲಿ-ಕುಸುಮಾಂಜಲಿ (ಉ. ಮ. ಕ. ಧಾ.)-ಹೂಗಳಿಂದ ಕೂಡಿದ ಬೊಗಸೆ.

(೨೭೦) ಲೋಕಗಳ ತ್ರಯ-ಲೋಕತ್ರಯ (ಷ.ತ.); ಲೋಕತ್ರಯದ ಕೃಪಾಕರ (ಷ ತ ) ಜಗತ್+ಮಯ ಜಗನ್ಮಯ (ಅನುನಾಸಿಕ ಸಂಧಿ)

(೨೭೧) ಅಂಬು-ನೀರಿಗೆ, ನಿಧಿ-ಆಶ್ರಯವಾದುದು-ಅಂಬುನಿಧಿ (ಸಮುದ್ರ;) ಪ್ರಸಾದಸ್ನಿಗ್ಧ ಮುಖಕಮಲ-ಪರಿಶುದ್ಧವಾಗಿಯೂ ಸ್ನೇಹಸೂಚಕವಾಗಿಯೂ ಇರುವ ಮುಖಪದ್ಮವುಳ್ಳ; ಅಮರ-ಮರಣವಿಲ್ಲದವರು (ದೇವತೆಗಳು).

ಎದ್ದು ಬಿನ್ನೈಸಿದನು ಕಮಲದ ।
ಗದ್ದುಗೆಯ ಪರಮೇಷ್ಠಿ ದೈತ್ಯವಿ ।
ಮರ್ದನನೆ ಚಿತ್ತಾವಧಾನ ಕೃಪಾಬ್ಧಿಯವಧಾನ ॥
ತಿದ್ದಿತೆಮ್ಮಯ ದೆಸೆ ದಶಾನನ ।
ನುದ್ದುರುಟು ತನದಿಂದ ನಾವ್ ಬಂ ।
ದಿದ್ದ ಹದನಿದು ಜೀಯ ರಕ್ಷಿಸಬೇಹುದೆಮಗೆಂದ ॥ ೨೭೨ ॥

ಶಿಶು ವಿದೀ ಜಗವೀ ಜಯುತ್ತ್ರಯು ।
ನಸಿಯುತಿದೆ ಬಾಲ್ಯದಲಿ ನೆರೆ ರ ।
ಕ್ಷಿಸುವ ದೇವರ ಕಾಣೆನಖಿಳಾಮ್ನಾಯ ದೃಷ್ಟಿಯಲಿ ॥
ಉಸಿರಲಮ್ಮೆನು ಜೀಯ ಸುರರಾ ।
ಯಸವ ಚಿತ್ತವಿಸುರ್ವರೆಯಲು ।
ಬ್ಬಸವನವಧರಿಸೆಮಗೆ ಬಂದಿಹ ವಿಧಿಯ ಕೇಳೆಂದ ॥ ೨೭೩ ॥

ಮರುಳುತನದಿಂದಾ ದಶಾಸ್ಯಗೆ ।
ವರವನಿತ್ತೆನು ದೇವ ತಾನದ ।
ಪರಿಹರಿಸುವೊಡಶಕ್ತ ಭಕ್ತಾಧೀನ ನೀನೆಂಬ ।
ಬಿರುದು ಮೆರೆವುದು ಜೀಯ ಜೀವನ ।
ಹೊರೆಯಲರಿಯೆವು ವೈರಿ ದಶಕಂ ॥
ಧರನುಪದ್ರವದಲಿ ಕೃಪಾಂಭೋನಿಧಿಯೆ ಕೇಳೆಂದ ॥ ೨೭೪ ॥

ಬರೆಯ ಬಲ್ಲೆನು ಬರೆದ ಲಿಖಿತವ ।
ನೊರಸಲರಿಯೆನು ಜಗದ ಭಾಳಾಂ ।
ತರದಲೀ ಸಚರಾಚರದ ತತ್ಕರ್ಮ ಫಲವಿದು ॥

(೨೭೨) ಪರಮೇಷ್ಠಿ-ಬ್ರಹ್ಮನು; ತಿದ್ದಿತು-ವ್ಯತ್ಯಾಸವಾಯ್ತು, ದೆಸೆ-ಅವಸ್ಥೆಯು; ದೆಸೆ-ದ್ಭ. ದಶಾ-ಹ್ಹ.; ಉದ್ದುರುಟುತನ-ತುಂಟತನ,

(೨೭೩) ನಸಿಯುತಿದೆ-ನಾಶವಾಗುತ್ತಿದೆ; ಆಮ್ನಾಯ-ವೇದ; ಅಖಿಳಾಮ್ನಾಯ ದೃಷ್ಟಿಯಲಿ-ಪೂರ್ಣವಾದ ಜ್ಞಾನದೃಷ್ಟಿಯಿಂದ; ಅಮ್ಮೆನು-ಶಕ್ತನಲ್ಲ; ಆಯಸವ-ಆಯಾಸವನ್ನು; ಉರ್ವರೆಯಲಿ-ಭೂಮಿಯಲ್ಲಿ (ಭೂಮಿಗುಂಟಾಗಿರುವ); ಉಬ್ಬಸವನ್ನು-ಸಂಕಟವನ್ನು.

(೨೭೪) ಮರುಳುತನದಿಂದ-ಹುಚ್ಚುತನದಿಂದ (ಅವಿವೇಕದಿಂದ); ದಶ-ಹತ್ತು, ಆಸ್ಯ-ಮುಖಗಳುಳ್ಳವನು-ದಶಾಸ್ಯ (ರಾವಣ); ಜೀವನ ಹೊರೆಯಲು-ಬದುಕಿರಲು.

ಬರೆವೆ ಧ್ರುವನ ಲಲಾಟದಲಿ ಮುಳಿ ।
ದೊರಸಿ ಬಿಸುಟೆ ಹಿರಣ್ಯಕನ ನಿ ।
ರ್ಭರದ ಭಾಳಾಕ್ಷರವ ವಿಧಿಗೆ ವಿಧಾತೃ ನೀನೆಂದ । ೨೭೫ ॥

ಸಿರಿಯುರಸ ಚಿತ್ತೈಸು ಹರಸುವ ।
ಗೊರವನೀ ಶ್ರೀಕಂಠನೀ ಶಚಿ ।
ಯರಸ ಸೇವಕನೀ ಸಮೀರಣಸಖನು ಬಾಣಸಿಗ ॥
ಮರಳಿ ಮಾತೇನೀ ಯಮನು ಕಿಂ ।
ಕರನು ಮಿಕ್ಕಿನ ವರುಣ ವಾಯುಗ ।
ಳಿರವ ಚಿತ್ತೈಸಿದರೆ ಪರಿಹಾಸಕವಲೇ ಎಂದ ॥ ೨೭೬ ॥

ಹುಸಿಯ ನಾಡಲದೇನು ಗುರು ಜೋ ।
ಯಿಸನು ತುಂಬುರ ನಾರದರು ರಂ ।
ಜಿಸುವ ವೈಣಿಕರೀ ಮನೋಜ ವಸಂತರಾ ಖಳನ ॥
ಬೆಸನ ಮಾಡುವ ದೂತರೀ ರವಿ ।
ಶಶಿಗಳೊಪ್ಪುವ ದೀವಟಿಗರೆಲೆ ।
ಯುಸುರಹರ ಚಿತ್ತೈಸುಪಾಧ್ಯರು ನಾವಲೇ ಎಂದ ॥ ೨೭೭ ॥

ಬಿಸಜಗರ್ಭನ ಬಿನ್ನಹಕೆ ಹರಿ ।
ನಸುನಗುತ ಕೃಪೆಯುಲಿ ಕಟಾಕ್ಷದ ।
ರಸುಮೆಯನು ಸೂಸಿದನು ಸುರರ ವಿಷಾದ ರಜನಿಯುಲಿ ॥

(೨೭೫) ಈ ಸಚರಾಚರದ ಜಗದ ಭಾಳಾಂತರದಲಿ ತತ್ಕರ್ಮ ಫಲವಿದಿವು -ರೆ….. ಯೆಂಬ, ಎಂದನ್ವಯವು; ನಾನು ಅವರವರ ಕರ್ಮಾನುಸಾರವಾದ ಫಲಗಳನ್ನು ಲೋಕಕ್ಕೆ ವಿಧಿಸಬಲ್ಲೆನು, ವಿಧಿಸಿದುದನ್ನು ತಪ್ಪಿಸುವ ಸಾಮರ್ಥ್ಯವು ನನಗಿಲ್ಲ. ಇಲ್ಲದುದನ್ನು ಬರೆವುದಕ್ಕೂ ಇದ್ದುದನ್ನು ಕೆಡಿಸುವುದಕ್ಕೂ ನೀನೊಬ್ಬನೇ ಸಮರ್ಥನು, ಎಂದು ಬ್ರಹ್ಮನು ಹೇಳಿದನು; ವಿಧಿಗೆ ವಿಧಾತೃ-ಬ್ರಹ್ಮನಿಗೂ ಬ್ರಹ್ಮನು.

(೨೭೬) ಗೊರವ-ಹೊಗಳುಭಟ್ಟನು; ಸಮೀರಣ ವಾಯುವಿನ, ಸಖ-ಮಿತ್ರ (ಅಗ್ನಿ); ಬಾಣಸಿಗ-ಅಡಿಗೆಯವನು; ಇರವ-ಸ್ಥಿತಿಯನ್ನು.

(೨೭೭) ಜೋಯಿಸ-ದೈ., ಜ್ಯೋತಿಷ್ಕ-ಜ್ಞ.; ಬೆಸನ-ಅಪ್ಪಣೆ (ಸೇವೆ), ಉಪಾಧ್ಯರು-ಪಾಠ ಹೇಳಿ ಕೊಡುವವರು.

ನಸಿದಿರಕ್ಕುಡಿಸಿದಿರಿ ನೊಂದಿರಿ ।
ಜಸವಳಿದಿರನುಗೆಟ್ಟಿರಖಿಳಾ ।
ಯಸಕೆ ಸಂದಿರಿ ಸ್ವೈರಿಸಿದಿರಿನ್ನಂಜ ಬೇಡೆಂದ ॥ ೨೭೮ ॥

ಸರಸಿಜಾಸನ ಕೇಳು ಸಂದುದು ।
ವರವವಗೆ ನಿನ್ನಿಂದ ದನುಜಾ ।
ಮರ ಭುಜಂಗಮುಖ್ಯ ನಾನಾ ದೇವ ಯೋನಿಯಲಿ ॥
ಮರಣ ಭಯವಿಲ್ಲೆಂದು ನೊಂದಿರಿ ।
ಹಿರಿದು ನೀವವನಿಂದ ಮುಂದಣ ।
ಗರಿವಧಾ ಸಮಯಕ್ಕೆ ವಾಯವ ಕೇಳಿ ನೀವೆನ್ನ ॥ ೨೭೯ ॥

ನರರ ರೂಪಿಂದಾವು ವಿಶ್ವಂ ।
ಭರೆಯೊಳವತರಿಸುವೆವು ನೀಂ ವಾ ।
ನರರ ರೂಪಿಂದುದಿಸುವುದು ಧರಣೀತಳಾಗ್ರದಲಿ ॥
ಘುರದೊಳಹಿತ ಖಳೋತ್ತಮನ ದು ।
ರ್ಧರದ ಶಿರಖಂಡನವನೆಮ್ಮಯ ।
ಸರಳ ಮೊನೆಯಲಿ ತೋರಿಸುವೆನಿದ ನಂಬಿ ನೀವೆಂದ ॥ ೨೮೦ ॥

ಎಂದವರ ಬೀಳ್ಕೊಡಲು ಚರಣ ।
ದ್ವಂದ್ವಕಾನತರಾಗಿ ಹರುಷದ ।
ಸಂದಣಿಯ ಸೌರಂಭವಲಿ ಬೀಳ್ಕೊಂಡರಾ ಹರಿಯ ॥
ಕಂದ ಕೇಳ್ಕೈ ಜಾಂಬವನ ರೂ ।
ಪಿಂದ ತೋರಿದನಬ್ಜಭವನ ಪು ।
ರಂದರನು ನೆಲೆಗೊಂಡನಂಗದನಂಗಶೋಭೆಯಲಿ ॥ ೨೮೧ ॥

(೨೭೮) ಬಿನ್ನಹ-ದ್., ವಿಜ್ಞಾಪನಾ-ತ್ಸ.; ರಜನಿ-ಸ್ವ., ರಾತ್ರಿ-ತ್ಸ., ರಜನಿ-ಕಾಂತಿ; ವಿಷಾದ ರಜನಿಯಲಿ-ದುಃಖವೆಂಬ ರಾತ್ರಿಯಲ್ಲಿ (ಕತ್ತಲೆಯಲ್ಲಿ), ಸುರರ ಕಟಾಕ್ಷರ ಸುಮೆಯನು, ಸೂಸಿದನು-ಚೆಲ್ಲಿದನು; ಅಕ್ಕುಡಿಸು ಬಡವಾಗು; ಜಸ-ದ್ಭ., ಯಶಸ್-ತ್ಸ., ಜಸದಿಂ + ಅಳಿ-ಜಸವಳಿ (ಕ್ರಿ. ಸ)., ಜಸವಳಿದಿರಿ- ಅಪಕೀರ್ತಿಯನ್ನು ಹೊಂದಿದಿರಿ; ಅನುಗೆಟ್ಟರಿ ದುಃಸ್ಥಿತಿಯನ್ನು ಪಡೆದಿರಿ; ಸಂದಿರಿ-ಸಿಕ್ಕಿದಿರಿ.

(೨೭೯) ಮುಂದಣ ಎಂಬ ರೂಪವು ಮುಂದಣಗೆ ಎಂದಾಗಿದೆ, ಅರಿವಧಾ ಸಮಯಕ್ಕೆ ಶತ್ರು ಸಂಹಾರ ಸಂದರ್ಭಕ್ಕೆ, ಎನ್ನ-ನನ್ನನ್ನು; ಇಲ್ಲಿ ಕರ್ಮಾರ್ಥದಲ್ಲಿ ಷಷ್ಠಿ.

(೨೮೦) ವಿಶ್ವಂಭರೆ-ಭೂಮಿ; ನೀಂ-ನೀವು; ಅಹಿತ ಖಳೋತ್ತಮನ-ಬಲಿಷ್ಠನಾದ ನೀಚ ಶತ್ರುವಿನ; ದುರ್ಧರದ ಅಸಾಧ್ಯವಾದ; ಸರಳ-ಬಾಣದ.

(೨೮೧) ಚರಣಗಳ + ದ್ವಂದ್ವ-ಚರಣದ್ವಂದ (ಷ. ತ.); ಆನತರಾಗಿ-ನಮಸ್ಕರಿಸಿ: ಪುರಂದರ-ಇಂದ್ರ; ಅಂಗಶೋಭೆಯಲಿ-ದೇಹಕಾಂತಿಯಿಂದ (ದೇಹವನ್ನು ಧರಿಸಿ).

ತರಣಿ ಸುಗ್ರೀವಾಭಿಧಾನವ ।
ಧರಿಸಿ ಜನಿಸಿದನೀ ಚರಾಚರ ।
ಭರಿತ ಭುವನಪ್ರಾಣನಾ ಹನುಮಂತ ರೂಪದಲಿ ॥
ಧರಣಿಯಲಿ ಮೈದೋರಿದನು ಶಂ ।
ಕರನು ವೃಷಭಾಕಾರದಲಿ ಗೋ ।
ಚರಿಸಿದನು ಸುರರಾಜವರ್ಧಕಿ ಬಳಿಕ ನಳನಾಗಿ ॥ ೨೮೩ ॥

ಪವನ ಬಾಂಧವ ನೀಲ ನಾಮ ।
ಪ್ರವರದಲಿ ಜನಿಸಿದನು ಮೈಂದ ।
ದ್ವಿವಿದರಾದರು ಸುರ ಯಮಳರ್ಗ್ಗದ ಪರೇತ ಪತಿ ॥
ಗವಯ ಗಜ ಶರಭಾದಿ ಪಂಚ ।
ಪ್ಲವಗ ರೂಪಿಂದುದಿಸಿದನು ಷಂ ।
ಭವಿಸಿ ಧನ್ವಂತರಿ ಸುಷೇಣಕನಾದನವನಿಯಲಿ ॥ ೨೮೪ ॥

ಉಳಿದ ಸುರಸಂದೋಹ ನಾನಾ ।
ಜಳಧಿಮಧ್ಯ ದ್ವೀಪ ಕುಹರಂ ।
ಗಳಲಿ ಕುಧರಾವಳಿಗಳಲಿ ಬಹು ಕಾನನಂಗಳಲಿ ।
ಬಳಿಕ ಬಲಿಮುಖ ರೂಪುಗಳ ನೆರೆ ।
ತಳೆದರಾಳ್ವನ ನೇಮದಲಿ ಕೇ ।
ಳಲೆ ಕಕುಸ್ಥಜ ಸೂನು ಹರಿಲೀಲಾ ವಿನೋದವನು ॥ ೨೮೫ ॥

ಮಾಯೆ ಮಂಥರೆಯಾಗಿ ದಶರಥ ।
ರಾಯ ಭವನವ ನಾರಿದಳು ಫಣಿ ।
ರಾಯ ಲಕ್ಷ್ಮಣನಾಗಿ ಜನಿಸಿದನಿಂದಿರಾವನಿತೆ ॥

(೨೮೩) ಅಭಿಧಾನ-ಹೆಸರು ಭುವನ - ಲೋಕಕ್ಕೆ, ಪ್ರಾಣ - ಜೀವಸ್ವರೂಪನಾದವನು (ವಾಯು); ವೃಷಭಾಕಾರದಲಿ-ವೃಷಭನೆಂಬ ಕಪಿಯಾಗಿ; ಸುರರಾಜ ವರ್ಧಕಿ-ಇಂದ್ರನ ಬಡಗಿಯವನಾದ ವಿಶ್ವಕರ್ಮನು; ವರ್ಧಕಿ-ತ್ಸ. ಬಡಗಿ-ದ್ಯ.

(೨೮೪) ಪವನ ವಾಯುವಿನ, ಬಾಂಧವ-ಮಿತ್ರನು (ಅಗ್ನಿ), ನಾಮ ಪ್ರವರ-ಶ್ರೇಷ್ಠವಾದ ಹೆಸರು; ಸುರ ಯಮಳರು-ಅಶ್ವಿನೀ ದೇವತೆಗಳಿಬ್ಬರು; ಪರೇತ-ಶವಗಳ, ಪತಿ-ಒಡೆಯ (ಯಮನು).

(೨೮೫) ಕುಹರ-ಮಧ್ಯಭಾಗ; ಕು-ಭೂಮಿಯನ್ನು, ಧರ-ಹೊತ್ತಿರುವುದು, ಕುಧರ (ಬೆಟ್ಟ), ಬಲಿಮುಖ-ಕಪಿ; ಆಳ್ವನ-ಒಡೆಯನಾದ ವಿಷ್ಣುವಿನ.

ರಾಯ ಜನಕನ ಮಗಳೆನಿಸಿ ವಸು ।
ಧಾಯುವತಿಯಿಂದುದಿಸಿದಳು ನಾ ।
ರಾಯಣನು ರೂಹಿಸಿದನನುಪಮ ರಾಮನಾಮದಲಿ ॥ ೨೮೫

ಇದು ಕಣಾ ಜಗದೀಶ್ವರನ ಜನ ।
ನದ ಜಗದ್ವ್ಯಾಪಾರ ಜವನಿಕೆ ।
ಯುದಿಸಿ ತೋರಿದನೆಂಬುದಿದು ಮಿಥ್ಯಾಪ್ರಪಂಚವಲೆ ॥
ತುದಿ ಮೊದಲು ನಡುವೆಂಬ ಲಯದ ।
ಭ್ಯುದಯವೆಂಬ ವಿಕಾರಗಳು ಸೋಂ ।
ಕದ ಸನಾತನಗಾಯ್ತು ಲೀಲೆ ವ[illegible]ಸ್ಯರೂಪಿನಲಿ ॥ ೨೮೬ ॥

ಒಡಲೊಳಬುಜ ಭವಾಂಡ ಕೋಟಿಯ ।
ನಡಗಿಸಿರ್ಪ ಮಹಾಮಹಿಮಗಾ ।
ಯ್ತಡಕ ತೊಟ್ಟಿಲೊಳಮಳ ನಿಗಮಾಳಿಗಳು ಬೆರಗಾಗೆ ॥
ನುಡಿಗಗೋಚರದಮಳ ಬೊಮ್ಮದ ।
ಕಡುಹು ನಿಂದುದು ಜೋಗುಳದಲವ ।
ಗಡದ ದೇವತ್ವಕೆ ಶಿಶುತ್ವದೊಳಾಯ್ತು ನಿರ್ವಾಹ ॥ ೨೮೭ ॥

ಎತ್ತ ಹೋದುದೊ ಹಸಿವು ತೃಷೆ ಹೊಗ ।
ದುತ್ತಮದ ಮಹಿಮಾತಿಶಯ ಹಸಿ ।
ದತ್ತು ಮೊಲೆವಾಲಿಂಗೆ ಸೊಗಸುವುದಿದು ವಿಚಿತ್ರವಲ ॥
ಎತ್ತಲುರ್ವರೆಗಹಿಪತಿಗೆ ವಿಹ ।
ಗೋತ್ತಮಂಗರಿದೆನಿಸಿಕೊಂಬನ ।
ನೆತ್ತಿದರು ವನಿತೆಯರು ಬೆರಗೇನಲ್ಲವೇ ಎಂದ ॥ ೨೮೮ ॥

(೨೮೫) ಫಣ-ಸರ್ಪದ ಹೆಡೆ, ಅವನ್ನುಳ್ಳದ್ದು-ಫಣಿ (ಸರ್ಪ); ಇಂದಿರಾ ವನಿತೆ-ಲಕ್ಷ್ಮೀದೇವಿಯು; ವಸುಧಾ ಯುವತಿ-ಭೂಮಿಯೆಂಬ ಸ್ತ್ರೀ, ರೂಹಿಸಿದನು-ಕಲ್ಪಿಸಿದನು; ರೂಪಿಸು ಎಂಬುದರ ರೂಪಾಂತರ-ರೂಹಿಸು.

(೨೮೬) ಜವನಿಕೆ-ತೆರೆ (ಗುಟ್ಟು); ಜವನಿಕೆ-ದ್ಭ ಯವನಿಕಾ-ತ್ಸ. ಮಿಥ್ಯಾಪ್ರಪಂಚ-ವಿಸ್ತಾರವಾದ ಸುಳ್ಳು; ಸನಾತನಗೆ-ಪುರಾಣ ಪುರುಷನಿಗೆ (ಅನಾದಿಸಿದ್ಧ).

(೨೮೭) ಅಡಕ-ಅಡಗಿಕೊಂಡಿರುವಿಕೆ, ನಿಗಮಾಳಿ-ವೇದಸಮೂಹ; ಅಮಳ ಬೊಮ್ಮದ-ನಿರ್ಮಲವಾದ ಬ್ರಹ್ಮವಸ್ತುವಿನ; ಕಡುಹು-ಶೌರ್ಯವು; ಅವಗಡದ-ಅಸಾಧ್ಯವಾದ; ನಿರ್ವಾಹ-ಪರಿಣಾಮ.

(೨೮೮) ತೃಷೆ ಹೊಗದ-ಬಾಯಾರಿಕೆಯ ಬಾಧೆಯಿಲ್ಲದ, ಉರ್ವರೆಗೆ-ಭೂಮಿಗೆ; ವಿಹ-ಆಕಾಶದಲ್ಲಿ, ಗ-ಸಂಚರಿಸುವುದು-ವಿಗಹ (ಪಕ್ಷಿ), ಅವುಗಳಲ್ಲಿ, ಉತ್ತಮ-ಶ್ರೇಷ್ಠ (ಗರುಡ)

ಜಲರುಹಾಸನ ಮುಖ್ಯ ದಿವಿಜಾ ।
ವಳಿಗಳಿಂದೋಲೈಸಿಕೊಂಬ ।
ಗ್ಗಳದ ವಿಭವದ ದೈವವಾ ನರವಿಭುವಿನೋಲಗದ ॥
ಕೆಳದಿಯರ ಕೈಸನ್ನೆಗಳ ವೈ ।
ವಳಿಯ ಮಾತಿಂಗೇಳ್ವ ಕುಳ್ಳಿರು ।
ವಳವಡಿಕೆ ಬಲ್ಲರಿಗೆ ಬೆರಗೇನಲ್ಲವೇ ಎಂದ ॥ ೨೮೯ ॥

ನೆಲವನಳೆವಂದೀ ಮಹಾ ದಿಗು ।
ವಳಯವೀ ಕುಲಪರ್ವತಗಳೀ ।
ಜಳನಿಧಿಗಳೀ ಗಗನವೀ ಬ್ರಹ್ಮಾಂಡ ಹವಣಿಸದ ॥
ವಿಳಸಿತದ ವಿಭುವಿಂಗೆ ದಟ್ಟಡಿ ।
ಬಳಿಕುನಡೆ ಮೆಲ್ನುಡಿಗಳೆಂಬಿವು ।
ತಿಳಿವವರ ಮನಸಿಂಗೆ ಮರೆವಮಾತಲ್ಲವೇ ಎಂದ ॥ ೨೯೦ ॥

ಜಗದ ಜೀವರ ಯಂತ್ರಮಯದೂ ।
ಹೆಗಳಿನಾಡಿಸಿ ತೋರ್ಪ ನಾಟಕ ।
ಮಗುವತನದಲಿ ಬಾಲಕರ ಕೇಳೀ ಕಲಾಪದಲಿ ॥
ಸೊಗಸುವುದು ಸೋಜಿಗವಲಾ ಶ್ರುತಿ ।
ನಗುವುದಕೆ ಸಂದೇಹವೇನೆಲೆ ।
ಮಗನೆ ಮಾಯಾಚರಿತ ಸೊಬಗೇನಲ್ಲವೇ ಎಂದ ॥ ೨೯೧ ॥

ಆದಿ ಬೊಮ್ಮಕೆ ಮಗುವತನ ಸಂ ।
ಪಾದಿಸಿತ್ತೆಂಬುದು ಮೃಷಾ ಪರಿ ।
ವಾದವಿದು ಬಲ್ಲವರಿಗೆಜ್ಜರ ಮಾತದಂತಿರಲಿ ॥

(೨೮೯) ಸನ್ನೆ-ದ್ಭ., ಸಂಜ್ಞಾ-ತ್ಸ.; ವೈವಳಿಯು-ಅಂಗಚೇಷ್ಟೆಯು; ಅಳವಡಿಕೆ-ಸಿದ್ಧವಾಗಿರುವಿಕೆ; ಬಲ್ಲರಿಗೆ-ಜ್ಞಾನಿಗಳಿಗೆ; ಬೆರಗು-ಆಶ್ಚರ್ಯವು.

(೨೯೦) ಹವಣಿಸದ-ಸಾಲದೆ ಹೋಗಿದ್ದ (ಚಿಕ್ಕದೆಂದೆನಿಸಿದ್ದ); ದಟ್ಟತು+ಅಡಿ-ದಟ್ಟಡಿ (ಹತ್ತಿರ ಹತ್ತಿರವಾಗಿ ಹೆಜ್ಜೆಯಿಡುವುದು; ಬಳಿಕು ನಡೆ-ಬಳುಕುವಂತೆ ನಡೆವುದು; ಮರೆವ+ಮಾತು-ಮರೆವಮಾತು. (ಗಮಕ.)-ಸುಳ್ಳು.

(೨೯೧) ಜೀವರ-ಪ್ರಾಣಿಗಳನ್ನು, ಇಲ್ಲಿ ಕರ್ಮಾರ್ಥದಲ್ಲಿ ಷಷ್ಠಿ; ಯಂತ್ರಮಯದ ಊಹೆಗಳಂ-ಕೀಲುಬೊಂಬೆಗಳ ರೀತಿಯಿಂದ; ಕಲಾಪದಲಿ-ಸಮೂಹದಲ್ಲಿ; ಮಾಯಾಚರಿತ-ಬೋಸಣ ನಡೆವಳಿಕೆ (ಕಪಟ ನಾಟಕವು).

ಮೇದಿನಿಯ ಭಾರಾಪಹರಣ ವಿ .
ನೋದವಿದು ಮಾಯಾ ಪ್ರಪಂಚದ ।
ಹಾದಿಗರಿಗಿದು ಸಿದ್ಧವೆಂದೇ ತೋರುತಿಹುದು ॥ ೨೯೩ ॥

ಅರಿಯ ಬಂದುದೆ ನಿಮಗೆ ಮಾಯೆಯ ।
ಮರೆಯ ಮಾನವನೆಂದು ಮುಗುಳಂ ।
ತರಿಸಲಿಲ್ಲವಲೇ ಮನಸ್ಸಿನ ಸಂಶಯದ ಬೀದಿ ॥
ತೆರಹುಗೊಟ್ಟಿತೆ ನಿಮಗೆನಲುಪದ ।
ಕೆರಗಿದರು ಭಕ್ತಿಯಲಿ ಮುನಿ ಬಳಿ ।
ಕುರುವ ರಘುರಾಜೇಂದ್ರ ಚರಿತವ ಹೇಳಲನುಗೈದ ॥೨೯೪॥

ಹೊಳೆಹೊಳೆವ ನಿಡುಗಂಗಳಿನ ಥಳ ।
ಥಳಿಪ ಕದಪಿನ ಕೋಮಲಾಧರ ।
ದೆಳನಗೆಯ ಬಾಯ್ದೆರೆಯ ಮಿರುಗುವ ದಂತ ಪಙ್ತಿಗಳ ॥
ಸುಳಿಗುರುಳ ಸೊಂಪೊಗೆವ ನೀಲೋ ।
ತ್ಪಲ ನಿಭಾಂಗದ ಮುದ್ದು ವದನದ ।
ಚಲುವ ದೇವರ ದೇವನೆಸೆದನು ಬಾಲಕೇಳಿಯಲಿ ॥ ೨೯೫ ॥

ದಿವಸ ದಿವಸಕೆ ಬಾಲಶಶಿ ಹೆ ।
ಚ್ಚುವವೊಲನುಜರು ಸಹಿತ ಲಕ್ಷ್ಮೀ ।
ಧವನು ಹೆಚ್ಚಿದನಿಳೆಯ ನಾಡಾಡಿಗಳ ನರನಂತೆ ॥
ಅವನಿಜಾಸುತ ಕೇಳು ಮಹದು ।
ತ್ಸವದಲುಪನಯನ ಪ್ರಪಂಚಗೆ ।
ಳವರಿಗಾದುವು ವಿದಿತ ಲೌಕಿಕ ವೈದಿಕಂಗಳಲಿ ॥ ೨೯೬ ॥

(೨೯೩) ಸಂಪಾದಿಸಿತು-ಪ್ರಾಪ್ತವಾಯ್ತು; ಮಾಯಾಪ್ರಪಂಚದ-ಸುಳ್ಳಾದ ಪ್ರವಾಹದ, ಹಾದಿಗರಿಗೆ-ಮಾರ್ಗದಲ್ಲಿ ನಡೆವವರಿಗೆ; ಸಿದ್ಧವು-ನಿಶ್ಚಯವು.

(೨೯೪) ಅಂತರಿಸಲಿಲ್ಲವಲೇ-ತಡೆಯುಂಟಾಗಲಿಲ್ಲವೇ; ತೆರಹುಗೊಟ್ಟಿತೆ-ಅವಕಾಶವನ್ನು ಕೊಟ್ಟಿತೇ; ಉರುವ-ಶ್ರೇಷ್ಠವಾದ; ಅನುಗೈದ-ಪ್ರಾರಂಭಿಸಿದನು.

(೨೯೫) ನಿಡಿದು + ಕಂಗಳು-ನಿಡುಗಂಗಳು (ವಿ. ಪೂರ್ವ. ಕ.); ದಾಯ್ದೆರೆ-ತುಟಿ; ಸುಳಿಗುರುಳ-ಸುಳಿಯಂತೆ ತಿರುಗಿಕೊಂಡಿರುವ ತಲೆಗೂದಲುಳ್ಳ, ನೀಲೋತ್ಪಲನಿಭ-ಕನ್ನೈದಿಲೆಗೆ ಸಮಾನವಾದ; ಮುದ್ದು-ದ್ಬ., ಮುಗ್ಧ-ತ್ಸ.; ಉತ್ಪಲ-ತ್ಸ;. ಉಪ್ಪಳ-ದ್ಬ.

(೨೯೬) ಲಕ್ಷ್ಮೀಧವ-ಲಕ್ಷ್ಮಿಗೆ ಪತಿ; ನಾಡಾಡಿ-ಸಾಮಾನ್ಯ ಮನುಷ್ಯರ; ನರನಂತೆ-ಮಗನ ಹಾಗೆ; ಉಪ-ಸಮೀಪಕ್ಕೆ, ನಯನ (ಉಪದೇಶಮಾಡಲು) ಕರೆದು ಕೊಳ್ಳುವುದು-ಉಪನಯನ.

ಮೇಲೆ ನಿರುಪಮ ವೇದಶಾಸ್ತ್ರ ವಿ ।
ಶಾಲ ವಕ್ತ್ರಗಳಾದರಲ್ಲಿಂ ।
ಮೇಲನುಗ್ರಹವಾಯ್ತು ಮುನಿಪ ವಸಿಷ್ಠನಿಂ ಬಳಿಕ ॥
ನಾಲುವರು ನಂದನರಿಗವನೀ ।
ಪಾಲ ತೇಜೋರಾಶಿ ಮಿಗೆ ಸ ।
ನ್ಮೇಳವಿಸಿದುದು ಮೆರೆದುದವರಭ್ಯುದಯ ದಿನದಿನಕೆ ॥ ೨೯೬ ॥

ವರುಷ ಹದಿನಾರರಲಿ ಗಜ ರಥ ।
ತುರಗದೇರಾಟದಲಿ ಗದೆ ಮು ।
ದ್ಗರ ಕೃಪಾಣ ಶರಾಸನಾದಿ ಸಮಸ್ತ ಶಸ್ತ್ರದಲಿ ॥
ಸರಿ ಸುರೋರಗ ನರರೊಳಿಲ್ಲೆಂ ।
ಬುರುತರ ಪ್ರೌಢಿಗಳಲುಬ್ಬಿಸಿ ।
ದರು ಪುರಂದರ ರಾಜತೇಜದೊಳಖಿಳ ಜನ ಮಾನವ ॥ ೨೯೭ ॥

(೨೯೬) ಅವನೀ ಪಾಲ ತೇಜೋರಾಶಿ-ಕ್ಷಾತ್ರ ತೇಜಸ್ಸು, ಸನ್ಮೇಳವಿಸಿದುದು-ಹೆಚ್ಚಿತು; ಅಭ್ಯುದಯ-ಅಭಿವೃದ್ಧಿ.

(೨೯೭) ಮುದ್ಗರ-ಕಬ್ಬಿಣವನ್ನು ಬಡಿವಹಾರೆ; ಕೃಪಾಣ-ಕತ್ತಿ, ಶರ-ಬಾಣವನ್ನು, ಅಸನ-ಪ್ರಯೋಗಿಸುವುದು-ಬಾಣಾಸನ (ಬಿಲ್ಲು).

# ಒಂಬತ್ತನೆಯ ಸಂಧಿ

ಸೂಚನೆ॥ ರಾಯ ದಶರಥನೆಡೆಗೆ ಮುನಿಕುಲ।
ರಾಯ ಕೌಶಿಕ ಬಂದು ಯಜ್ಞವ।
ಕಾಯಲೊಡಗೊಂಡೊಯ್ದನತಿಬಲ ರಾಮಲಕ್ಷ್ಮಣರ॥

ವಿಮಲಮತಿ ಕುಶ ಕೇಳು ಸಿದ್ಧಾ।
ಶ್ರಮದೊಳಿರ್ದನು ಸಕಲ ಋಷಿ ಕುಲ।
ಕಮಲಮಿತ್ರನು ಮುನಿಪ ವಿಶ್ವಾಮಿತ್ರ ಲೀಲೆಯಲಿ॥
ಅಮರರಿಪು ಮಾರೀಚ ಘನ ವಿ।
ಕ್ರಮ ಸುಬಾಹುಗಳೆಂಬ ರಾಕ್ಷಸ।
ರಮಣರಾ ಮುನಿ ಮುಖಕೆ ಕಂಟಕರಾದರಧ್ವರದಿಗೆ

ಮೌನಿ ಬಳಿಕ ಬಲು ಚಿಂತೆಯಲಿ ಗತ।
ದನುವನವರಿಗೆ ಕಾಣಲರಿಯದೆ।
ವನಜಗರ್ಭನ ಸಾರಿ ಬಿನ್ನಹವಮಾಡಿದನು ಹದನ॥

ಸೂ॥ ಕೌಶಿಕ—ಕುಶಿಕ ರಾಜನ ಮಗ—ವಿಶ್ವಾಮಿತ್ರ, ಒ[redacted]ಂಡೊಯ್ದನು—ಕರೆದುಕೊಂಡು ಹೋದನು.

(೧) ಸಿದ್ಧಾಶ್ರಮ—ವಿಶ್ವಾಮಿತ್ರರು ತಪಸ್ಸುಮಾಡುತ್ತಿದ್ದ [redacted]ವನ, ಕಮಲ ಮಿತ್ರ—ಸೂರ್ಯ, ಅಮರರಿಪು—ದೇವತೆಗಳ ಶತ್ರು, ರಾಕ್ಷಸ ರ[redacted]—ರಾಕ್ಷಸರ ಒಡೆಯರು, ಮಖ—ಯಜ್ಞ, ಕಂಟಕ—ಶತ್ರು (ಮುಳ್ಳು).

(೨) ಅವರಿಗೆ ಗತದ ಅನುವನು ಕಾಣಲರಿಯದೆ—ಆ ರಾಕ್ಷ[redacted]ನ್ನು ನಿವಾರಿಸುವ ಉಪಾಯವನ್ನು ತಿಳಿಯದೆ, ವನಜಗರ್ಭ—ಬ್ರಹ್ಮ, ಹದನ[redacted]ತಿಯನ್ನು,

ಮುನಿಪ ಕೇಳಿದಕೇಕೆ ಭಯ ಗೋ ।
ಮಿನಿಯ ಪತಿ ಗಹ್ವರಿಯ ಭಾರವ ।
ನೊನೆಯಲುದಿಸಿದನಿಹನು ದಶರಥರಾಜ ಭವನದಲಿ ॥೨॥

ಕೊಂಡು ಹೋಗಾ ವಿಬುಧ ರಿಪು ಗಜ ।
ಗಂಡ ಪಂಚಾನನನನಾಹವ ।
ಚಂಡ ಚಟುಳ ಪರಾಕ್ರಮನ ಮಾಯಾ ತ್ರಿವಿಕ್ರಮನ ॥
ಕಂಡ ಬಗೆಯಿದು ಬೇಗ ಹೋಗೆನೆ ।
ಮಂಡೆಯನು ಮಣಿದಿಳಿದನವನೀ ।
ಮಂಡಲಕೆ ಮುದದಿಂದ ವಿಶ್ವಾಮಿತ್ರ ಮುನಿರಾಯ ॥೩॥

ಕರಿಸಿ ಋಷಿವರ್ಗವನು ಮುನಿಜನ ।
ವೆರಸಿ ಸಿದ್ಧಾಶ್ರಮವನುಳಿದು ।
ಬ್ಬರದ ವಿವಿಧ ವನಾಳಿಗಳ ವಿಷಯಾಂತರಾಳದಲಿ ॥
ಗಿರಿ ಸರಿತ್ಸಂಕುಲವ ಕಳಿಕಳಿ ।
ದರಿ ವಿಜಯ ದಶರಥ ಮಹೀಶನ ।
ಧರಣಿಯನು ಸಾರಿದನು ಸಂತೋಷದ ಸಘಾಡದಲಿ ॥೪॥

ಬರಬರಲು ತತ್ಕೋಸಲದ ಗ ।
ಹ್ವರಿ ವಿರಾಜಿಸಿತಮಮ ಹರಹಿನ ।
ಹರಿವ ಹೊಳೆಗಾಲುವೆಯ ಕೆರೆದೊಬುಗಳ ನೀರುಗಳ ॥

ಗೋಮಿನಿ—ಲಕ್ಷ್ಮಿ, ಗಹ್ವರಿ—ಭೂಮಿ, ಒನೆ—(ಕೀರು) ತಗ್ಗಿಸು, ಇಹನು—ಇರುವನು, ದಶರಥರಾಜ—ದಶರಥರಾಯನ, ಭವನ—ಮನೆ.

(೩) ವಿಬುಧ—ದೇವತೆಗಳು, ವಿಬುಧ ರಿಪುಗಳೇ+ಗಜಗಳು (ಅವ. ಪೂರ್ವ. ಕ.) ಗಂಡ—ಕೆನ್ನೆ, ಪಂಚಾನನ—ಸಿಂಹ, ಆಹವಚಂಡ—ಯುದ್ಧದಲ್ಲಿ ಭಯಂಕರನಾದ, ಚಟುಳ—(ಚಲಿಸುತ್ತಿರುವ) ಕಾರ್ಯಕಾರಿಯಾದ, ಮಾಯಾ ತ್ರಿವಿಕ್ರಮ—ಮನುಷ್ಯಾಕಾರವನ್ನು ಎತ್ತಿರುವ ವಿಷ್ಣು, ಕಂಡ—(ನಾನು) ತಿಳಿದ, ಬಗೆ—ರೀತಿ, ಮಂಡೆಯನು ಮಣಿದು—(ತಲೆಯನ್ನು ಬಗ್ಗಿಸಿ), ನಮಸ್ಕರಿಸಿ.

(೪) ಮುನಿಜನದಿಂ+ಬೆರಸಿ (ಕ್ರಿ. ಸ.)—ಋಷಿಗಳೊಡನೆ ಕೂಡಿ, ಉಳಿದು—ಬಿಟ್ಟು, ಉಬ್ಬರ—ಆಧಿಕ್ಯ, ವಿಷಯ—ದೇಶ, ಅಂತರಾಳ—ಮಧ್ಯ, ಸರಿತ್—ನದಿ, ಸಂಕುಲ—ಸಮೂಹ, ಕಳಿಕಳಿದು—ದಾಟಿ, ಅರಿ ವಿಜಯ—ಶತ್ರುಗಳನ್ನು ಜಯಿಸಿದ, ಸಘಾಡ—ಹೆಚ್ಚಿಕೆ.

(೫) ತತ್ಕೋಸಲ—ಆ ಕೋಸಲ ದೇಶ, ಹರಹಿನ—ವಿಸ್ತಾರದಿಂದ, ಕೆರೆದೊಬು—

ತೆರಳಿಕೆಯ ತದ್ಗ್ರಾಮನಿಕರದ ।
ಸಿರಿಯ ಶಾಲಿಯ ವನದ ಬನದು ।
ಬ್ಬರದ ಧವಳೇಕ್ಷುಗಳಲನುಪಮ ನಂದನಂಗಳಲಿ ॥೫॥

ಹಲಸು ಖರ್ಜೂರಾಮ್ರಕುಲ ಮಾ ।
ದಲ ಮಧೂಕ ಕ್ರಮುಕ ದಾಡಿಮ ।
ತಿಲಕ ಕುರವಕ ಜಂಬು ಜಂಬೀರ ಪ್ರಕೀರ್ಣದಲಿ ॥
ನೆಲನ ಕಾಣಿಸದೀಕ್ಷಿಸಿದ ದೆಸೆ ।
ಗಳಲಿ ಹೂದೋಟಗಳ ವನಗಳ ।
ವಳಯದೆಡ ಬಲ ವೀಧಿಯಲಿ ಕಾಣಿಸಿದುದಾ ಮುನಿಗೆ ॥೬॥

ಅಂಗಜಾಂತಕನಾಲಯದವೋಲ್ ।
ಮಂಗಳಾನ್ವಿತಮಯ ಹಿರಣ್ಯಕ ।
ಭಂಗನಂತರ್ಗೃಹದವೊಲು ಲಕ್ಷ್ಮೀ ವಿಳಾಸಮಯ ॥
ತುಂಗ ತೇಜೋಭರಿತ ಪರಮ ಪ ।
ತಂಗ ಮಂಡಲದಂತೆ ಗೋಕುಲ ।
ಸಂಗಮಯವೆನಲಿಸೆದುದಗ್ಗದ ರಾಷ್ಟ್ರ ಕೋಸಲದ ॥೭॥

ಕೆರೆಗಳ ತೂಬು, ತೆರಳಿಕೆ—ಹರಿಯುವಿಕೆ, ನಿಕರ—ಸಮೂಹ, ಶಾಲಿ—ಭತ್ತದ ಪೈರು, ಧವಳೇಕ್ಷು—ಬಿಳಿಯ ಕಬ್ಬು, ಅನುಪಮ—ಸಾಟಿಯಿಲ್ಲದ.

(೬) ಆಮ್ರ—ಮಾವು, ಕುಲ—ಗುಂಪು, ಮಧೂಕ—ಹಿಪ್ಪೆ, ಕ್ರಮುಕ (ಸಂ.)—ಅಡಕೆ, ದಾಡಿಮ—ದಾಳಿಂಬೆ, ತಿಲಕ—ಇಂಗಳದ ಗಿಡ, ಕುರವಕ—ಗೋರಂಟೆ, ಜಂಬು—ನೇರಿಳೆ, ಜಂಬೀರ—ನಿಂಬೆ, ಪ್ರಕೀರ್ಣ—ಸಮೂಹ, ಈಕ್ಷಿಸಿದ ದೆಸೆಗಳಲಿ—ಕಂಡಕಡೆಯಲ್ಲೆಲ್ಲ, ವಳಯ—(ಸುತ್ತು), ಗುಂಪು, ಕಾಣಿಸಿದುದು—ಇಲ್ಲಿ 'ಕೋಸಲ ದೇಶವು' ಎಂಬುದು ಅಧ್ಯಾಹಾರ.

(೭) ಅಂಗಜಾಂತಕ—ಮನ್ಮಥನನ್ನು ನಾಶಮಾಡಿದವನು—ಈಶ್ವರ, ಮಂಗಳಾ (1)—ಪಾರ್ವತಿ, (2) ಶುಭ; ಹಿರಣ್ಯಕ ಭಂಗ—ಹಿರಣ್ಯಾಕ್ಷನನ್ನು ಕೊಂದವನು—ವಿಷ್ಣು, ಅಂತರ್ಗೃಹ—ಒಳಮನೆ, ಲಕ್ಷ್ಮೀ—(1) ಲಕ್ಷ್ಮೀದೇವಿ, (2) ಐಶ್ವರ್ಯ; ತುಂಗ—ಹೆಚ್ಚಾದ, ಭರಿತ—ತುಂಬಿದ, ಪತಂಗ—ಸೂರ್ಯ, ಗೋಕುಲ—(1) ಕಿರಣ ಸಮೂಹ, (2) ಹಸುಗಳ ಗುಂಪು, ಸಂಗ—ಸಂಬಂಧ, ಅಗ್ಗದ—(ಅರ್ಘ, ಸಂ.)—ಶ್ರೇಷ್ಠವಾದ, ಕೋಸಲದ ರಾಷ್ಟ್ರ ಎನಿಸುವುದು.

ಬಂದನಾ ಮುನಿ ನೋಡುತಜ ನೃಪ ।
ನಂದನನ ಲಲಿತಾನುವರ್ತನ ।
ವೃಂದವನು ತಲೆದೂಗುತಡಿಗಡಿಗಧಿಕ ಹರುಷದಲಿ ॥
ತಂದೆ ರಾಜ್ಯವನಾಳನೇ ಪೌ ।
ರಂದರಾವನಿಗಿನಿತು ಸೊಬಗಿ ।
ಲ್ಲೆಂದು ಸಕಲ ಗ್ರಾಮವನು ಕಳಿಕಳಿದು ನಡೆತಂದ ॥೮॥

ಪರಿಧಿ ಪರಿವೃತ ರವಿಯವೋಲ್ ನಿಜ ।
ಪರಿಧಿ ಪರಿವೃತ ನಗರವೆಸೆದುದು ।
ತರುಣ ಕೇಳೈ ಕಂಗಳಿಗೆ ದೂರದಲಿ ಕೌಶಿಕನ ॥
ಮರಕತದ ಮಾಣಿಕದ ಚಾಮೀ ।
ಕರದ ಚಟುಳ ಪ್ರಭೆಯ ಶಾಲಾ ।
ವರಣದಲಿ ಮುಖಶಾಲೆಗಳ ಸೌಧಗಳ ಸೊಂಪಿನಲಿ ॥೯॥

ಮುರಿಮುರಿದ ಕೊತ್ತಳದ ಕೋಟೆಯ ।
ಥರಥರದ ಮುಗಿಲಟ್ಟಳೆಯ ವಿ ।
ಸ್ತರದ ವಿಮಲ ಸ್ಫಟಿಕ ಬಜ್ಜರದಾಳುವೇರಿಗಳ ॥
ಪರಿಪರಿಯ ಮಣಿ ಕನಕಮಯದು ।
ಪ್ಪರಿಗೆಗಳ ಸಾಲಿನಲಿ ಸುರಪನ ।
ಪುರವನಣಕಿಸುತಿರ್ದುದಾ ಸತ್ಯಾವತೀನಗರ ॥೧೦॥

ಹೊಳಲು ಹೊಸರೀತಿಯಲಿ ಮಿಗೆ ಕಂ ।
ಗೊಳಿಸುತಿರ್ದುದು ಮುನಿಪತಿಗೆ ಹೊರ ।
ವಳಲ ರಮ್ಯೋದ್ಯಾನವೆಸೆದುದು ಚೈತ್ರ ರಥದಂತೆ ॥

(೮) ಅಜ ನೃಪ ನಂದನ—ಅಜಮಹಾರಾಜನ ಮಗ—ದಶರಥ, ಲಲಿತ—ಮನೋಹರವಾದ, ಅನುವರ್ತನ—ಪರಿವಾರ, ವೃಂದ—ಸಮೂಹ, ಪೌರಂದರಾವನಿ—ಇಂದ್ರಲೋಕ—ಸ್ವರ್ಗ.

(೯) ಪರಿಧಿ ಪರಿವೃತ—ಪರಿವೇಷ ಕಟ್ಟಿದ, ಗುಡಿಗಟ್ಟಿದ, ಪರಿಧಿ—ಅಗಳ್ತೆ, ದೂರದಲಿ ಕೌಶಿಕನ ಕಂಗಳಿಗೆ, ಮರಕತ—ಪಚ್ಚೆ, ಚಾಮೀಕರ—ಚಿನ್ನ, ಚಟುಳ—ಚಂಚಲವಾದ, ಥಳಥಳಿಸುವ, ಸೌಧ—ಉಪ್ಪರಿಗೆ, ಆವರಣ—ಸುತ್ತುಗೋಡೆ.

(೧೦) ಮುರಿಮುರಿದ—ತಿರುಗಿಸಿರುವ, ಮುಗಿಲಟ್ಟಳೆ—ಮೋಡಗಳನ್ನು ಚಾಚಿಕೊಂಡಿರುವ ಕೋಟೆಯ ಬುರುಜು, ಬಜ್ಜರ—ವಜ್ರ, (ಸಂ.) ಆಳುವೇರಿ—ಕೋಟೆಯ ಗೋಡೆ, ಸತ್ಯಾವತೀ ನಗರ—ಅಯೋಧ್ಯಾಪುರ.

(೧೧) ಹೊಳಲು—ಪಟ್ಟಣ, ಹೊರವಳಲು—ಪಟ್ಟಣದ ಹೊರಭಾಗದ, ಚೈತ್ರ

ತೆರಳಿಕೆಯ ತದ್ಗ್ರಾಮನಿಕರದ ।
ಸಿರಿಯು ಶಾಲಿಯ ವನದ ಬನದು ।
ಬ್ಬರದ ಧವಳೇಕ್ಷುಗಳಲನುಪಮ ನಂದನಂಗಳಲಿ ॥೫॥

ಹಲಸು ಖರ್ಜೂರಾಮ್ರಕುಲ ಮಾ ।
ದಲ ಮಧೂಕ ಕ್ರಮುಕ ದಾಡಿಮ ।
ತಿಲಕ ಕುರವಕ ಜಂಬು ಜಂಬೀರ ಪ್ರಕೀರ್ಣದಲಿ ॥
ನೆಲನ ಕಾಣಿಸದೀಕ್ಷಿಸಿದ ದೆಸೆ ।
ಗಳಲಿ ಹೂದೋಟಗಳ ವನಗಳ ।
ವಳಯದೆಡ ಬಲ ವೀಧಿಯಲಿ ಕಾಣಿಸಿದುದಾ ಮುನಿಗೆ ॥೬॥

ಅಂಗಜಾಂತಕನಾಲಯದವೋಲ್ ।
ಮಂಗಳಾನ್ವಿತಮಯ ಹಿರಣ್ಯಕ ।
ಭಂಗನಂತರ್ಗೃಹದ ವೋಲು ಲಕ್ಷ್ಮೀ ವಿಳಾಸಮಯ ॥
ತುಂಗ ತೇಜೋಭರಿತ ಪರಮ ಪ ।
ತಂಗ ಮಂಡಲದಂತೆ ಗೋಕುಲ ।
ಸಂಗಮಯವೆನಲೆಸೆದುದಗ್ಗದ ರಾಷ್ಟ್ರ ಕೋಸಲದ ॥೭॥

ಕೆರೆಗಳ ತೂಬು, ತೆರಳಿಕೆ—ಹರಿಯುವಿಕೆ, ನಿಕರ—ಸಮೂಹ, ಶಾಲಿ—ಭತ್ತದ ಪೈರು, ಧವಳೇಕ್ಷು—ಬಿಳಿಯ ಕಬ್ಬು, ಅನುಪಮ—ಸಾಟಿಯಿಲ್ಲದ.

(೬) ಆಮ್ರ—ಮಾವು, ಕುಲ—ಗುಂಪು, ಮಧೂಕ—ಹಿಪ್ಪೆ, ಕ್ರಮುಕ (ಸಂ.)—ಅಡಕೆ, ದಾಡಿಮ—ದಾಳಿಂಬೆ, ತಿಲಕ—ಇಂಗಳದ ಗಿಡ, ಕುರವಕ—ಗೋರಂಟಿ, ಜಂಬು—ನೇರಿಳೆ, ಜಂಬೀರ—ನಿಂಬೆ, ಪ್ರಕೀರ್ಣ—ಸಮೂಹ, ಈಕ್ಷಿಸಿದ ದೆಸೆಗಳಲಿ—ಕಂಡಕಡೆಯಲ್ಲೆಲ್ಲ, ವಳಯ—(ಸುತ್ತು), ಗುಂಪು, ಕಾಣಿಸಿದುದು—ಇಲ್ಲಿ 'ಕೋಸಲ ದೇಶವು' ಎಂಬುದು ಅಧ್ಯಾಹಾರ.

(೭) ಅಂಗಜಾಂತಕ—ಮನ್ಮಥನನ್ನು ನಾಶಮಾಡಿದವನು—ಈಶ್ವರ, ಮಂಗಳಾ (1)—ಪಾರ್ವತಿ, (2) ಶುಭ; ಹಿರಣ್ಯಕ ಭಂಗ—ಹಿರಣ್ಯಾಕ್ಷನನ್ನು ಕೊಂದವನು—ವಿಷ್ಣು, ಅಂತರ್ಗೃಹ—ಒಳಮನೆ, ಲಕ್ಷ್ಮೀ—(1) ಲಕ್ಷ್ಮೀದೇವಿ, (2) ಐಶ್ವರ್ಯ; ತುಂಗ—ಉನ್ನತ, ಭರಿತ—ತುಂಬಿದ, ಪತಂಗ—ಸೂರ್ಯ, ಗೋಕುಲ—(1) ಕಿರಣ ಸಮೂಹ, (2) ಹಸುಗಳ ಗುಂಪು, ಸಂಗ—ಸಂಬಂಧ, ಅಗ್ಗದ—(ಅರ್ಘ, ಸಂ.)—ಶ್ರೇಷ್ಠವಾದ, ಕೋಸಲದ ರಾಷ್ಟ್ರ ಎನಿಸುವುದು.

ಬಂದನಾ ಮುನಿ ನೋಡುತಜ ನೃಪ ।
ನಂದನನ ಲಲಿತಾನುವರ್ತನ ।
ವೃಂದವನು ತಲೆದೂಗುತಡಿಗಡಿಗಧಿಕ ಹರುಷದಲಿ ॥
ತಂದೆ ರಾಜ್ಯವನಾಳನೇ ಪೌ ।
ರಂದರಾವನಿಗಿನಿತು ಸೊಬಗಿ ।
ಲ್ಲೆಂದು ಸಕಲ ಗ್ರಾಮವನು ಕಳಿಕಳಿದು ನಡೆತಂದ ॥೮॥

ಪರಿಧಿ ಪರಿವೃತ ರವಿಯವೋಲ್ ನಿಜ ।
ಪರಿಧಿ ಪರಿವೃತ ನಗರವೆಸೆದುದು ।
ತರುಣ ಕೇಳ್ಕೆ ಕಂಗಳಿಗೆ ದೂರದಲಿ ಕೌಶಿಕನ ॥
ಮರಕತದ ಮಾಣಿಕದ ಚಾಮೀ ।
ಕರದ ಚಟುಳ ಪ್ರಭೆಯ ಶಾಲಾ ।
ವರಣದಲಿ ಮುಖಶಾಲೆಗಳ ಸೌಧಗಳ ಸೊಂಪಿನಲಿ ॥೯॥

ಮುರಿಮುರಿದ ಕೊತ್ತಳದ ಕೋಟೆಯ ।
ಥರಥರದ ಮುಗಿಲಟ್ಟಳೆಯ ವಿ ।
ಸ್ತರದ ವಿಮಲ ಸ್ಫಟಿಕ ಬಜ್ಜರದಾಳುವೇರಿಗಳ ॥
ಪರಿಪರಿಯ ಮಣಿ ಕನಕಮಯದು ।
ಪ್ಪರಿಗೆಗಳ ಸಾಲಿನಲಿ ಸುರಪನ ।
ಪುರವನಣಕಿಸುತಿರ್ದುದಾ ಸತ್ಯಾವತೀನಗರ ॥೧೦॥

ಪೊಳಲು ಹೊಸರೀತಿಯಲಿ ಮಿಗೆ ಕಂ ।
ಗೊಳಿಸುತಿರ್ದುದು ಮುನಿಪತಿಗೆ ಹೊರ ।
ವಳಲ ರಮ್ಯೋದ್ಯಾನವೆಸೆದುದು ಚೈತ್ರ ರಥದಂತೆ ॥

(೮) ಅಜ ನೃಪ ನಂದನ—ಅಜಮಹಾರಾಜನ ಮಗ—ದಶರಥ, ಲಲಿತ—ಮನೋಹರವಾದ, ಅನುವರ್ತನ—ಪರಿವಾರ, ವೃಂದ—ಸಮೂಹ, ಪೌರಂದರಾವನಿ—ಇಂದ್ರಲೋಕ—ಸ್ವರ್ಗ.

(೯) ಪರಿಧಿ ಪರಿವೃತ—ಪರಿವೇಷ ಕಟ್ಟಿದ, ಗುಡಿಗಟ್ಟಿದ, ಪರಿಧಿ—ಅಗಳ್ತೆ, ದೂರದಲಿ ಕೌಶಿಕನ ಕಂಗಳಿಗೆ, ಮರಕತ—ಪಚ್ಚೆ, ಚಾಮೀಕರ—ಚಿನ್ನ, ಚಟುಳ—ಚಂಚಲವಾದ, ಥಳಥಳಿಸುವ, ಸೌಧ—ಉಪ್ಪರಿಗೆ, ಆವರಣ—ಸುತ್ತುಗೋಡೆ.

(೧೦) ಮುರಿಮುರಿದ—ತಿರುಗಿಸಿರುವ, ಮುಗಿಲಟ್ಟಳೆ—[illegible] ಚಾಚಿಕೊಂಡಿರುವ ಕೋಟೆಯ ಬುರುಜು, ಬಜ್ಜರ—ವಜ್ರ (ಸಂ.) [illegible]ಯ ಗೋಡೆ, ಸತ್ಯಾವತೀ ನಗರ—ಅಯೋಧ್ಯಾಪುರ.

(೧೧) ಪೊಳಲು—ಪಟ್ಟಣ, ಹೊರವಳಲು—ಪಟ್ಟಣದ ಹೊರಭಾಗದ, [illegible],

ನಲಿವ ಕಿನ್ನರ ಮಿಥುನದಲಿ ಮಿಗೆ ।
ಗಳಹುವರಗಿಳಿವಿಂಡಿನಲಿ ಹೆ ।
ಕ್ಕಳಿಪ ಕೋಗಿಲೆಗಳಲಿ ಮೊರೆವಳಿಕುಳದ ಮೇಳದಲಿ ॥೧೧॥

ಹೊರೆದ ಮಕರಂದದ ತುಷಾರದ ।
ಪರಿಮಳದ ಪಸರಿಕೆಯ ಕುಸುಮೋ ।
ತ್ಕರದ ನಸು ಮಿಡಿಗಾಯಿ ಕಸುಗಾಯ್ ದೋರೆಗಾಯಿಗಳ ॥
ಬಿರಿದೊಗುವ ಬಂಬಲಿನ ಸೋನೆಯ ।
ಸರಿಯ ಪತ್ರ ಫಲಾದಿಗಳ ಬಂ ।
ಧುರದ ಸಾಲ ಪ್ರಮುಖ ಭೂಜದಿನೆಸೆದುದುದ್ಯಾನ ॥೧೨॥

ಬೀಗಿ ಬೆಳೆದೆಳವಳ್ಳಿಗಳ ತಲೆ ।
ದೂಗಿ ತೊನೆವಡಕೆಗಳ ಕೊನೆಯುಲಿ ।
ಬಾಗಿ ಬಳುಕುವ ಬಾಳೆಗಳ ಫಲಭರದ ತೆಂಗುಗಳ ॥
ಸೋಗೆಗಳ ಸುಳಿವುಗಳ ಕಪಿಗಳ ।
ಲಾಗುಗಳ ಲಂಘನೆಯಲೆಸೆದುದು ।
ಪೂಗಣೆಯನಾಡುಂಬೊಲನವೋಲ್ ತತ್ಪುರೋದ್ಯಾನ ॥೧೩॥

ರಥ—ಕುಬೇರನ ಉದ್ಯಾನದ ಹೆಸರು, ಕಿನ್ನರ—ದೇವತೆಗಳ ಒಂದು ಪಂಗಡ, ಮಿಥುನ—ಗಂಡಹೆಂಡಿರ ಜೋಡಿ, ಗಳಹು—ಬಹಳ ಮಾತಾಡು, ಗಿಳಿಯ+ಹಿಂಡು—ಗಿಳಿಗಳ ಗುಂಪು, ಹೆಕ್ಕಳಿಪ—ಹೆಚ್ಚಾಗಿ ಕೂಗುತ್ತಿರುವ, ಮೊರೆ—ಝೇಂಕರಿಸು, ಅಳಿಕುಳ—ತುಂಬಿಗಳ ಗುಂಪು, ಮೇಳ—ಸೇರುವಿಕೆ.

(೧೨) ಹೊರೆದ—ತುಂಬಿದ, ಮಕರಂದ—ಹೂವಿನ ರಸ, ತುಷಾರ—ಹನಿ, ಪಸರಿಕೆ—ವಿಸ್ತಾರ, ಉತ್ಕರ—ಗುಂಪು, ನಸು—ಸ್ವಲ್ಪ, ಮಿಡಿಗಾಯಿ—ಬಹಳ ಸಣ್ಣ ಕಾಯಿ, ಕಸುಗಾಯಿ—ಸ್ವಲ್ಪ ಬಲಿತ ಕಾಯಿ, ಒಗುವ—ಸುರಿವ, ಬಂಬಲು—ಗುಂಪು, ಸೋನೆಸರಿ—ಸಣ್ಣ ಹನಿಯ ಮಳೆ, ಬಂಧುರದ—ಮನೋಹರವಾದ, ಸಾಲ—ಮತ್ತಿಯ ಗಿಡ, ಪ್ರಮುಖ—ಮೊದಲಾದ, ಭೂಜ—ಮರ.

(೧೩) ಬೀಗಿ—ಉಬ್ಬಿ, ಎಳವಳ್ಳಿ—ಎಳೆಯ ಬಳ್ಳಿ, ತೊನೆ—ಅಲ್ಲಾಡು, ಭರ—ತುಂಬು, ಸೋಗೆ—ನವಿಲು, ಸುಳಿವು—ಸುತ್ತಾಟ, ಲಾಗು—ಲಾಗ, ಲಂಘನೆ—ಚಿಮ್ಮಿ ದಾಟು, ಪೂಗಣೆಯ—ಮನ್ಮಥ, ಪೂ+ಕಣೆ ಯಾರಿಗೋ ಅವನು (ಬ. ವ್ರೀ.)—ಹೂಗಳೇ ಬಾಣವಾಗಿ ಉಳ್ಳವನು, ಆಡುವ+ಪೊಲ—ಆಡುಂಬೊಲ (ಕರ್ಮಧಾರಯ)—ಆಡುವ ಬಯಲು.

ಮರಕತದ ನೆಲಗಟ್ಟುಗಳ ಹಿಮ ।
ಕಿರಣ ಕಾಂತದ ನೆಲೆ ನೆಲೆಯ ಬಂ ।
ಧುರದ ಘನ ಸೋಪಾನಗಳ ಕೇಳೀ ಮನೋಹರದ ॥
ಸರಸಿಗಳ ಮಣಿ ಸೌಧಗಳ ವಿ ।
ಸ್ತರದ ವಿವಿಧ ಸುರತ್ನ ಹೇಮೋ ।
ತ್ಕರದ ಕೃತಕಾದ್ರಿಗಳಲೊಪ್ಪಿದುದಾ ಪುರೋದ್ಯಾನ ॥೧೪॥

ಸರಸಿಗಳ ಪುಣ್ಯೋದಕದಲಘ ।
ಮರುಷಣಂ ಗೈದಬ್ಜ ಕುಸುಮೋ ।
ತ್ಕರ ಪರಾಗದ ಲೇಪನಾಂಗದಿನಳಿ ಕದಂಬಕದ ॥
ವರ ಚತುಸ್ಸ್ವರದಮಲ ನಿಗಮೋ ।
ತ್ಕರದ ತದ್ವನ ಸಂಚರದ ಪರಿ ।
ಸರದ ಪಾವನ ಪವನ ಮುನಿಯುಪ್ಪಿದನು ಕೌಶಿಕನ ॥೧೫॥

ಭಾರಿಸಿದ ಸರಣಿ ಶ್ರಮೋದ್ಭವ ।
ವಾರಿ ತನುಗತವಾದುವಂಗ ಮ ।
ನೋರಥದಲುಬ್ಬಿದುದು ವಿಶ್ವಾಮಿತ್ರ ಮುನಿವರನ ॥
ಪೌರಜನವಿಭ ಹಯ ವರೂಥದ ।
ಸಾರಥಿಯ ಪಥವಿಡಿದು ನಗರ ।
ದ್ವಾರವನು ಸಾರಿದನು ಸಂಮೇಳದಲಿ ಮುನಿನಾಥ ॥೧೬॥

(೧೪) ನೆಲಗಟ್ಟು—ನೆಲಕ್ಕೆ ಕಲ್ಲು ಮೊದಲಾದುವನ್ನು ಹಾಸುವುದು, ಹಿಮಕಿರಣ ಕಾಂತ—ಚಂದ್ರಕಾಂತಶಿಲೆ, ನೆಲೆ—ಕೊಠಡಿ, ನೆಲೆ—ಉಪ್ಪರಿಗೆ, ಬಂಧುರ—ಮನೋಹರ, ಘನ—ದೊಡ್ಡ, ಕೇಳೀ—ಆಟ, ಸರಸಿ—ಸರೋವರ, ಸೌಧ—ಉಪ್ಪರಿಗೆಯ ಮನೆ, ಹೇಮೋತ್ಕರ—ಚಿನ್ನದ ರಾಶಿ, ಕೃತಕಾದ್ರಿ—ಕಟ್ಟಿದ ಬೆಟ್ಟ.

(೧೫) ಅಘಮರುಷಣಂಗೈದು — ಪಾಪಪರಿಹಾರವಾಗುವಂತೆ(ಸ್ನಾನ)ಮಾಡಿ ಅಬ್ಜ ........ಲೇಪನಾಂಗದಿಂ—ಕಮಲ ಪುಷ್ಪಗಳ ಧೂಳಿಯನ್ನು (ಭಸ್ಮವನ್ನು) ಮೈಗೆ ಬಳಿದುಕೊಂಡು, ಅಳಿ ಕದಂಬಕ—ತುಂಬಿಯ ಗುಂಪು, ಚತುಸ್ಸ್ವರ—ನಾಲ್ಕು ಬಗೆಯ ದನಿ, ನಿಗಮೋತ್ಕರ—ವೇದಗಳ ಸಮುದಾಯ, ಪರಿಸರ—ಸಮೀಪ ಪ್ರದೇಶ, ಪವನ ಮುನಿ—ಗಾಳಿ ಎಂಬ ಋಷಿ. ರೂಪಕಾಲಂಕಾರ.

(೧೬) ಭಾರಿಸು—ಹೆಚ್ಚಾಗು, ಸರಣಿಶ್ರಮ—ಮಾರ್ಗಾಯಾಸ, ಉದ್ಭವವಾರಿ—ಹುಟ್ಟಿದ (ನೀರು) ಬೆವರು, ತನುಗತ—ದೇಹವನ್ನು ಸೇರಿದುದು, ಅಂಗ—ದೇಹವು, ಮನೋರಥದಲಿ—(ಆಗುವ) ಇಷ್ಟಾರ್ಥಸಿದ್ಧಿಯಿಂದ, ಇಭ—ಆನೆ, ಹಯ—ಕುದುರೆ ವರೂಥ—ತೇರು, ಸಂಮೇಳ—ಗುಂಪು.

ಸಗರರರಂದು ಮಹಾಧ್ವರಾಶ್ವವ ।
ಜಗವೆರಡರಲಿ ನೋಡಿ ಕಾಣದೆ ।
ಬಗೆದಿಳಿಯನಂದಿಳಿದ ವಿತಳದ್ವಾರ ಗೋಪುರದ ॥
ಅಗಳೊ ರವಿಯೆಡೆಯಾಟಕಿಕ್ಕಿದ ।
ಗಗನ ಸೀಮೆಯು ಕೋಟೆಯೋ ಎನು ।
ತಗಡು ರಾಜಮುನೀಂದ್ರ ಹೊಗಳುತ ಹೊಕ್ಕನಾ ಪುರವ ॥೧೭॥

ಪಳುಕಿನರೆಯುಲಿ ಬಿಗಿದ ಬೀದಿಯ ।
ನೆಲನ ನಿಲಯ ಶ್ರೇಣಿಗಳನು ।
ಜ್ವಲಿಪ ಚಂದ್ರೋಪಲದ ಘನ ಸೋಪಾನ ಪಙ್ಕ್ತಿಗಳ ॥
ಬಳಿಬಳಿಯ ಸೌಧಾವಳಿಯ ಹೊಂ ।
ಗಲಸಗಳ ಹೊದರಿನ ಪತಾಕಾ ।
ವಳಿಯ ಪಸರದಿನೆಸೆದುದಾ ಪುರ ಮುನಿಯ ಕಣ್ಮನಕೆ ॥೧೮॥

ಪರಿಪರಿಯ ವಸ್ತೂತ್ಕರದ ವಿ ।
ಸ್ತರದ ವಿವಿಧ ವಣಿಗ್ವರರ ಬಂ ।
ಧುರದ ಬಹಳಿತ ಸೂರ್ಯ ವೀಧಿಯ ಸೋಮ ವೀಧಿಗಳ ॥
ಪುರ ನಿತಂಬಿನಿಯರ ವಿಳಾಸದ ।
ನಿರುಪಮಾಲಯ ವೀಧಿಗಳ ಮುನಿ ।
ವರನು ನೋಡುತ ಬಂದು ಹೊಕ್ಕನು ನೃಪಸಭಾಸ್ಥಳವ ॥೧೯॥

(೧೭) ಸಗರರು—ಸಗರನ ಮಕ್ಕಳು, ಅಧ್ವರ—ಯಜ್ಞ, ಜಗವೆರಡು—ಸ್ವರ್ಗ ಲೋಕ ಭೂಲೋಕಗಳು, ವಿತಳದ್ವಾರ ಗೋಪುರ— ಪಾತಾಳಲೋಕದ ಊರು ಬಾಗಿಲು, ಅಗಳು—ಕಂದಕ, ಬಗೆದು—ಅಗೆದು, ಎಡೆಯಾಟ—ಸಂಚಾರ, ಅಗಡು—ಉಗ್ರ. ಉತ್ಪ್ರೇಕ್ಷಾಲಂಕಾರ.

(೧೮) ಪಳುಕಿನ+ಅರೆ—ಸ್ಫಟಿಕ ಶಿಲೆ ; ಪಳುಕು—ಸ್ಫಟಿಕ (ಸಂ.), ನಿಲಯ—ಮನೆ, ಚಂದ್ರೋಪಲ—ಚಂದ್ರಕಾಂತ ಶಿಲೆ, ಹೊದರು—ಗುಂಪು, ಪತಾಕಾ—ಬಾವುಟ, ಪಸರದಿಂ—ವಿಸ್ತಾರದಿಂದ.

(೧೯) ಉತ್ಕರ—ಸಮೂಹ, ವಣಿಗ್ವರ—ದೊಡ್ಡ ವ್ಯಾಪಾರಿ, ಬಹಳಿತ—[illegible], ಸೋಮ—ಚಂದ್ರ, ನಿತಂಬಿನಿ—ಹೆಂಗಸು.

ಧರಣಿಪತಿ ಮುನಿಸಾರ್ವಭೌಮನ ।
ಬರವ ಕಾಣುತ ಧಿಮ್ಮನುರು ವಿ ।
ಷ್ಟರವನಿಳಿದಿದಿರ್ವಂದು ವಿನಮಿತನಾಗಿ ಕೈಗೊಟ್ಟು ॥
ಅರಮನೆಗೆ ತಂದರ್ಘ್ಯ ಪಾದ್ಯೋ ।
ತ್ಕರವಿಧಾನದಿನಾ ಮುನಿಯನುಪ ।
ಚರಿಸಿ ಬಿಜಯಂಗೈದ ಹದನೇನೆಂದು ಬೆಸಗೊಂಡ ॥೨೦॥

ಬಂದೆವಾವ್ ಕೇಳ್ಬೈ ಸ್ವಕಾರ್ಯದ ।
ಕುಂದು ಹೆಚ್ಚಿನ ಕೊರತೆಗಳು ನಿ ।
ನ್ನಿಂದ ನಮಗೆ ಸುಸೂತ್ರವಹುದೆಂಬೀ ವಿಚಾರದಲಿ ॥
ಇಂದಿನೀ ನೆಲೆಗಾವನೈ ನಿ ।
ನ್ನಿಂದ ತೇಜಿಷ್ಠನು ಮಹೀಶರೊ ।
ಳೆಂದುಕೊಂಡಾಡಿದನು ಮುನಿ ದಶರಥಮಹೀಪತಿಯ ॥೨೧॥

ಜನಪ ಕೇಳ್ಬೈ ಹೇಳಬೇಕೆಂ ।
ಬಿನಿತು ತಾನುಪಚಾರ ನಿನ್ನಯ ।
ಜನಪ ಧರ್ಮದ ಸಕಲನೀತಿಯ ಸಾರಸಂಗ್ರಹವು
ಮನು ಪುರೂರವ ಕಾರ್ತವೀರ್ಯಾ ।
ರ್ಜುನ ಹರಿಶ್ಚಂದ್ರಾದಿ ರಾಯರ ।
ನೆನಹುವನು ಮಾಣಿಸಿತೆ ಮಾತಿನ್ನಾವುದೆಮಗೆಂದ ॥೨೨॥

ಹಸನು ವರ್ಣವಿಭೇದ ಪದ್ಧತಿ ।
ಸಸಿನು ವೈದಿಕ ಕರ್ಮ ನಿನ್ನಲಿ ।
ವಸುಮತೀಪತಿ ಕೇಳು ಜನಪಾಲನೆಯ ಪರಿ ಲೇಸು ।

(೨೦) ಸಾರ್ವಭೌಮ—ಚಕ್ರವರ್ತಿ, ಉರು—ದೊಡ್ಡ, ವಿಷ್ಟರ—ಪೀಠ, ಇದಿರೊಳ್+ಬಂದು, (ಕ್ರಿ. ಸ), ಅರ್ಘ್ಯ—ಕೈ ತೊಳೆವುದಕ್ಕೆ ನೀರು, ಪಾದ್ಯ—ಕಾಲು ತೊಳೆವುದಕ್ಕೆ ನೀರು, ವಿಧಾನ—ರೀತಿ.

(೨೧) ಸುಸೂತ್ರ—ನೇರವಾಗುವುದು, ಇಂದಿನ—ಈ ಕಾಲದ, ಈ ನೆಲೆ—ಈ ಲೋಕ, ನಿನ್ನಿಂದ—ನಿನಗಿಂತ, ತೇಜಿಷ್ಠನು—ತೇಜಸ್ವಿಯು.

(೨೨) ಉಪಚಾರ—ಉಪಚಾರದ ಮಾತು, ಜನಪಧರ್ಮ—ರಾಜಧರ್ಮ, ನೆನಹು—ನೆನಪು, ಮಾಣಿಸಿತೆ—ಬಿಡಿಸಿತೆ—ಎಂದರೆ, ಆ ರಾಜರ ಜ್ಞಾಪಕವು ಬರುತ್ತದೆ.

(೨೩) ಹಸನು—ಉತ್ತಮವಾದುದು, ಸಸಿನು—ತಕ್ಕುದು, ವಸುಮತಿ—ಭೂಮಿ,

ಹುಸಿ ಕವತೆ ಕಳವಳವು ಕೊಲೆ ಕ ।
ರ್ಕಶ ವಿರೋಧೋಪದ್ರವಂಗಳು ।
ಮಿಸುಕಲಮ್ಮವು ನಾವು ಹೇಳುವುದೇನು ನಿನಗೆಂದ ॥೨೩॥

ಅರಸ ಕೇಳ್ಬೈ ಧರ್ಮ ನಾಲುಕು ।
ಚರಣದಲಿ ನಿಂದಿದೆ ಮಹೀ ನಿ ।
ರ್ಜರರ ನಿರುಪಮ ಹವ್ಯ ಕವ್ಯ ಸ್ಥಿತಿ ಸುರೇಶ್ವರನ ॥
ವರ ಸಭಾಮಂಡಲದೊಳಗೆ ವಿ ।
ಸ್ತರಣ ವಾಗಿಹುದಗ್ನಿ ಹೋತ್ರಾ ।
ಚರಿತಕಾವುದು ಕೊರತೆಯೆಲೆ ನರನಾಥ ಕೇಳೆಂದ ॥೨೪॥

ಈಸು ದಿನ ನಿಮ್ಮಗ್ನಿಹೋತ್ರಕೆ ।
ಮಿೂಸಲಳಿಯದೆ ನಡೆದುದೀಗ ವಿ ।
ನಾಶಕರವಾಯ್ತುದರಿನಾದುದು ,ಬರವು ನಮಗೆನಲು ॥
ಐಸಲೇ ನಿಮಗಾದ ಚಿಂತೆಯಿ ।
ದೇಸು ದೊಡ್ಡಿತು ಬೆಸಸಿ ಮಾಡುವೆ ।
ನಾಸೆ ಮಾತಲ್ಲೆಲೆ ಮುನೀಶ್ವರ ನಂಬು ನೀನೆಂದ ॥೨೫॥

ಪೊಡವಿಪತಿ ಕೇಳ್ ನಿಗಮ ನಿಕರಗ ।
ಳೆಡಹಿ ವಾಚಿಸಿದರೆಯು ನಿಮ್ಮಯ ।
ನುಡಿಗೆ ಹೊದ್ದದು ಹಳಿವು ಮನುವಿಡಿದಿಂದು ಪರಿಯಂತ ॥
ನುಡಿದು ನೋಡುವ ನಾವು ನಮ್ಮಯ ।
ನುಡಿಯ ನೀವಾಲಿಸಿದೊಡದು ವೈ ।
ಗೊಡುವ ಭಾಗ್ಯದ ಬೆಳಸಲೇ ನಮಗೆಂದನಾ ಮುನಿಪ ॥೨೬॥

ಪರಿ—ರೀತಿ, ಹುಸಿ—ಸುಳ್ಳು, ಕವತೆ—ಎರಡು ಬಗೆಯುವುದು, ಕರ್ಕಶ—ಕಾಠಿನ್ಯ, ಮಿಸುಕಲಮ್ಮವು—ಚಲಿಸಲಾರವು—ತಲೆದೋರವು.

(೨೪) ಮಹೀನಿರ್ಜರ—ಬ್ರಾಹ್ಮಣ, ಹವ್ಯ—ದೇವತೆಗಳಿಗೆ ಮಾಡುವ ಕಾರ್ಯ, ಕವ್ಯ—ಪಿತೃಕರ್ಮ, ಆಚರಿತ—ಆಚರಣೆ.

(೨೫) ಮಿೂಸಲಳಿಯದೆ—ನಿಯಮ ತಪ್ಪದೆ, ಐಸಲೇ—ಅಲ್ಲವೇ, ಏಸು ದೊಡ್ಡದು—ಎಷ್ಟು ದೊಡ್ಡದು? ಬೆಸಸಿ—ಅಪ್ಪಣೆಕೊಡಿ, ಆಸೆಮಾತು—ಬರಿಯ ಮಾತು.

(೨೬) ನಿಗಮ—ವೇದ, ಎಡಹಿ ವಾಚಿಸಿದರೆಯು—ತಪ್ಪು ಹೇಳಿದರೂ, ಹಳಿವು—ನಿಂದೆ, ಮನುವಿಡಿದು — ಮನುವಿನ ಕಾಲದಿಂದ, ನೋಡುವ— ನೋಡೋಣ, ವೈಗೊಡುವ ಭಾಗ್ಯದ ಬೆಳಸು—ಮೂರ್ತೀಭವಿಸುವ ಐಶ್ವರ್ಯದ ಬೆಳೆ,

ನಾವು ಬೇಡುವ ವಸ್ತು ವಾಹನ ।
ವಾವುದದು ಕೇಳೆರಸ ರಾಘವ ।
ದೇವನನು ಕೊಡು ಕಡೆಯ ಮಾತಿದು ಯಜ್ಞರಕ್ಷಣೆಗೆ ॥
ಭೂವಧೂವರ ಕೇಳಿದೈ ಸಂ ।
ಭಾವನೋಚಿತವಿನಿತಲೇ ಮ ।
ತ್ತಾವುದಕೆ ನಿರ್ಬಂಧಿಸುವರಲ್ಲೆಂದನಾ ಮುನಿಪ ॥೨೭॥

ಎಲೆ ಕುಶಿಕನೆ ಕೇಳ್ ಮುನಿಪನುತ್ತರ ।
ದಲಗು ಬೆನ್ನಲಿ ಮೂಡಿದುದು ಹೆಡ ।
ತಲೆಗೆ ಸಾರ್ದುದು ಜಿಹ್ವೆ ಕಳವಳಿಸಿದುದು ಕರಣಚಯ ॥
ಒಳಗುಗವಿದುದು ತಾಪದಲಿ ಮು ।
ಮ್ಮೃಳಿತನಾದನು ಮುಂದುಗಾಣದೆ ।
ಹಲವನೆಣಿಸುತ ಹರುಷಗೆಟ್ಟಿಂತೆಂದನಾ ಭೂಪ ॥೨೮॥

ಐಸಲೇ ಮುನಿನಾಥ ರಾಮನ ।
ದೈಸರವ ತುತ್ತುಂಬ ಹರೆಯದ ।
ಶೈಶವನ ಕೈಯಿಂದ ಸಲಹಿಸಿಕೊಂಬುದೇ ಯಜನ ॥
ಸೂಸಿದಿರಿ ನೀವ್ ನಗೆಯನಿದಕೇ ।
ನೈಸಲೇ ಮಖ ಪರಿಕರವ ಮೋ ।
ಳೈಸಿ ಮರೆಮಾತೇನು ರಕ್ಷಿಸುವೆನು ಮಹಾಧ್ವರವ ॥೨೯॥

(೨೭) ಆವುದದು—ಯಾವುದೆಂದರೆ, ಸಂಭಾವನೋಚಿತವಿನಿತಲೇ—ನೀನು ನಮಗೆ ಕೊಡಬೇಕಾದ ಬಹುಮಾನಕ್ಕೆ ಅರ್ಹವಾದುದು ಇಷ್ಟೇ ಅಲ್ಲವೆ?, ಆವುದಕ್ಕೆ—ಯಾವುದಕ್ಕೂ.

(೨೮) ಉತ್ತರದಲಗು—ಉತ್ತರವೆಂಬ ಬಾಣವು, ಮೂಡಿದುದು—ಹೊರಟು ಕೊಂಡಿತು, ಹೆಡತಲೆ—ತಲೆಯ ಹಿಂಭಾಗ, ಸಾರ್ದುದು—ಸೇರಿತು (ಸೇದಿಕೊಂಡಿತು), ಜಿಹ್ವೆ—ನಾಲಗೆ, ಕರಣಚಯ—ಇಂದ್ರಿಯಗಳ ಸಮೂಹ, ಒಳಗುಗವಿದುದು—ಒಳಗೆ (ಮನಸ್ಸಿನಲ್ಲಿ) ಕತ್ತಲೆ ಕವಿಯಿತು—ಅಜ್ಞಾನ ಮುಚ್ಚಿಕೊಂಡಿತು, ಮುಮ್ಮೃಳಿತ—ಸತ್ತವ ನಂತೆ ಇರುವವನು, ಹಲವನೆಣಿಸು—ಬಗೆಬಗೆಯಾಗಿ ಚಿಂತಿಸು.

(೨೯) ಐಸಲೇ—ಅಲ್ಲವೇ, ರಾಮನು, ಅದು, ಐಸರವ—ಎಷ್ಟರವನು, ಹರೆಯ—ಪ್ರಾಯ, ಶೈಶವನ—ಬಾಲ್ಯವುಳ್ಳ ರಾಮನ, ಯಜನ—ಯಜ್ಞ, ಸೂಸಿದಿರಿ ನೀವ್ ನಗೆಯ—ನಗೆಗೇಡಾದ ಮಾತನ್ನು ಆಡಿದಿರಿ, ಸೂಸು—ಚೆಲ್ಲು, ಪರಿಕರ—ಸಾಮಗ್ರಿ, ಮೋಳೈಸಿ—ಸೇರಿಸಿ.

ನಗೆಯು ಸೂಸುವೊಡಾವು ಲೋಕದ ।
ಹಗರಣಿಗರೇ ಕೇಳಿದೈ ನೃಪ ।
ಮಗುವು ರಾಘವನೆಂದು ತಪ್ಪಿಸಿ ನುಡಿದ ನುಡಿ ನಿನಗೆ ॥
ನಿಗರವೇ ರಘುನಾಥ ನಾಡಾ ।
ಡಿಗಳ ನರನೇ ಮರುಳಲಾ ನಿ ।
ನ್ನಗಡುತನವನು ಬಲ್ಲೆನದು ಕೊಳ್ಳದು ಕಣಾ ಎಂದ ॥೩೦॥

ಧುರದೊಳಿಂದ್ರನ ಸದೆಬಡಿದೆ ಶಂ ।
ಬರನ ಸಮರವ ಗೆಲಿವೆನೆಂಬೀ ।
ಬಿರುದ ಬಿಡು ಕೇಳರಸ ದಿಗ್ವಿಜಯದ ಪರಾಕ್ರಮದ ॥
ಹುರುಡು ನಿನಗುಂಟೆಂಬರದು ಕೆಲ ।
ಕಿರಲಿ ವೀರ ಸುಬಾಹು ಮಾರೀ ।
ಚರುಗಳಾರೆಂದರಿಯಲಾ ನರನಾಥ ಕೇಳೆಂದ ॥೩೧॥

ಕಳುಹುವಡೆ ನೃಪ ಕೇಳು ರಾಮನ ।
ಕಳುಹು ಕಳುಹದೊಡೆವ್ಮನೀಕ್ಷಣ ।
ಕಳುಹು ಕಾವವರುಂಟು ಯಜ್ಞವನಿಳಿಯೊಳರಸುಗಳು ॥
ಹೊಳದು ನುಡಿವರಸಲ್ಲಸೆಂದಾ ।
ನೊಳಗನರಿಯದೆ ಬಂದೆ ನೀನಿದ ।
ಕಳುಕಲೇತಕೆ ಬಿರುದ ಬಿಸುಟರೆ ತೋಟಿಯೇನೆಂದ ॥೩೨॥

ಮುಸುಡ ಕಂಡೆನು ಹಲವು ಕಾಲಕೆ ।
ಶಿಶುಗಳಿವದಿರ ನಿಮ್ಮ ಕೃಪೆಯಲಿ ।
ಹಸುಳೆಗಳಲಾ ಹರಿಬವನು ನೀವೆಂದ ಹಗೆಗಳಲಿ ॥

(೩೦) ಹಗರಣಿಗ—ಹರಟುವವನು, ನಿಗರವೇ—ಒಳ್ಳೆಯದೆ ? ನಾಡಾಡಿ—ಸಾಮಾನ್ಯ ಮನುಷ್ಯ, ಅಗಡುತನ - ದುಷ್ಟಸ್ವಭಾವ, ಕೊಳ್ಳದು—ನಡೆಯಲಾರದು.

(೩೧) ಧುರ—ಯುದ್ಧ, ಸಮರ—ಯುದ್ಧ, ಹುರುಡು—ಸ್ಪರ್ಧೆ (ಛಲ), ಕೆಲಕಿರಲಿ—ಬೇರೆ ಇರಲಿ.

(೩೨) ಹೊಳದುನುಡಿವ—ತಪ್ಪಿ ಮಾತಾಡುವ, ಒಳಗನರಿಯದೆ—ನಿನ್ನ ಅಂತರಂಗವನ್ನು ತಿಳಿಯದೆ, ಅಳುಕು—ಹೆದರು, ಬಿರುದು—(ಮಾತಿಗೆ ತಪ್ಪುವನಲ್ಲವೆಂಬ) ಬಿರುದು, ತೋಟಿ—ಜಗಳ.

(೩೩) ಮುಸುಡು—ಮುಖ, ಇವದಿರ—ಇವರ, ಹರಿಬ—(ಕೆಲಸ), ಯುದ್ಧ,

ಒಸಗ ಬಲ್ಲರೆ ರತುನವನು ಕೆಡೆ ।
ಬಿಸುಡಿಸಲು ಬೇಡ್ಕೆಯು ರಕ್ಕಸ ।
ರಸಮು ರಣದೊಳಗುಳಿಯೆಬಲ್ಲರೆ ತಂದೆ ಹೇಳೆಂದ ॥೩೩॥

ಉಳಿಯ ಬಲ್ಲರೆ ರಕ್ಕಸರ ಕೊಳು ।
ಗುಳದೊಳಗೆ ಕದನಕ್ಕೆ ಕಂದನ ।
ಕಳುಹಬಹುದೇಯೆಂದು ಕರುಣವ ತೋರಿ ನುಡಿದೆಯಲ
ಉಳಿವುದೀ ನಿಜವಸ್ತುವೀ ಜಗ ।
ದಳಿವಿನಲಿ ಮಿಕ್ಕಾದ ವಸ್ತುಗ ।
ಳಳಿವುವೀತನೊಳೀತನಾರೆಂದರಿಯದಾದೆಯಲ ॥೩೪॥

ಮರುಳರಸ ಕೇಳೀತ ಮಾಯಾ ।
ನರ ಕಣಾ ಮಗನಲ್ಲ ನಿಖಿಳಾ ।
ಮರರ ದೂರಿಂದೀತ ನಿರ್ಮಿತ ತರಣಿವಂಶದಲಿ ॥
ಧರೆಯ ಭಾರವನಿಳುಹಲೆಂದವ ।
ತರಿಸಿದನು ಜಗದಖಿಳ ದೇವರಿ ।
ಗರಸಲಾ ನಿನಗಕಟ ಮಗನೇ ಮರುಳೆ ಹೋಗೆಂದ ॥೩೫॥

ಅಜನ ರೂಪಿಂದಖಿಳ ಲೋಕವ ।
ಸೃಜಿಸುವನು ಸಲಹುವನು ಗರುಡ ।
ಧ್ವಜನ ರೂಪಿಂದಳಿವನಗ್ಗದ ರುದ್ರರೂಪಿನಲಿ ॥
ಭಜಿಸಿ ನೆರೆಯರು ನಾರದಾದ್ಯರು ।
ನಿಜವನೀತನನಿಂತ ನಿನಗಾ ।
ತ್ಮಜನೆ ಹೋಗೆಲೆ ಮರುಳೆ ನೀನಾರೀತನಾರೆಂದ ॥೩೬॥

ಕೆಡೆಬಿಸುಡಿಸು—ಕೆಟ್ಟುಹೋಗುವಂತೆ ಎಸೆ, ಅಸಮ ರಣ—ಅಸದೃಶವಾದ ಯುದ್ಧ.

(೩೪) ಕೊಳುಗುಳ—ಯುದ್ಧ, ನಿಜವಸ್ತು—(ರಾಮನೆಂಬ) ಸಹಜವಾದ ವಸ್ತು, ಅಳಿವು—ನಾಶ, ಮಿಕ್ಕಾದ ವಸ್ತುಗಳು, ಈತನೊಳ್, ಅಳಿವುವು—ಲಯವಾಗುವುವು.

(೩೫) ಮರುಳ—ಹುಚ್ಚ, ಮಾಯಾ ನರ—ಮನುಷ್ಯನಹಾಗೆ ಕಾಣಿಸುವವನು, ದೂರು—ಬಾಧೆ.

(೩೬) ಅಜ—ಬ್ರಹ್ಮ, ಗರುಡಧ್ವಜ—ವಿಷ್ಣು, ಅಳಿವನು—ನಾಶಮಾಡುವನು, ಅಗ್ಗದ—ಶ್ರೇಷ್ಠವಾದ, ನೆರೆಯರು—ಪೂರ್ಣರಾಗರು.

ಈ ಹಸುಳೆ ಹಿಂದಖಿಳ ಯುಗದಲಿ ।
ರೂಹಿಸಿದನುರು ಮತ್ಸ್ಯ ಕೂರ್ಮ ವ ।
ರಾಹ ನರಹರಿ ವಟು ಪರಶುಧರನಾಗಿ ಲೀಲೆಯಲಿ ॥
ಗಾಹು ಬೇರಿಹುದೀಜಗದ ವೈ ।
ಗಾಹಿಗೋಸುಗ ಜನ್ಮವೆಂಬಿವು ।
ಚೋಹವಲ್ಲದೆ ನಿಜ ವಿಚಾರಿಸೆ ಮಗನೆ ನಿನಗೆಂದ ॥೩೭॥

ಕಾಣವೀತನನರಸಿ ನಿಗಮ ।
ಶ್ರೇಣಿಗಳು ಸಿದ್ಧಾಂತವಿದು ಪರ ।
ಮಾಣುಗತನ ಮಹತ್ವವನು ನಿಶ್ಚೈಸಿ ನೆರೆಯವಲಾ ॥
ಸ್ಥಾಣು ಕಮಲಜರರಿಕೆಗಳು ಸ ।
ತ್ರಾಣವೇತರದರಸ ಕೇಳ್ ಸರಿ ।
ಗಾಣೆ ನಿನಗೀ ದೈವ ವೊಲಿದುದಕೆಂದನಾ ಮುನಿಪ ॥೩೮॥

ತಂದೆ ನೀನಹೆನೆಂಬ ಹಮ್ಮನು ।
ತಂದುಕೊಳದಿರು ನಿನ್ನ ಗುರುವಿನ ।
ತಂದೆಯಯ್ಯನು ತಪ್ಪದಿದಕೆಂಬೀಸು ನಿಶ್ಚಯವ ॥
ಹಿಂದು ಮುಂದಕೆ ಕೇಳಿಕೋ ನಾ ।
ವೆಂದ ಮಾತನು ಕುಲವಿಡಿದು ಬಳಿ ।
ಸಂದ ನಿಮ್ಮಯ ಗುರು ವಸಿಷ್ಠನನೆಂದನಾ ಮುನಿಪ ॥೩೯॥

(೩೭) ಅಖಿಳ—ಎಲ್ಲ, ರೂಹಿಸು—ಅವತರಿಸು, ವಟು—ಬ್ರಹ್ಮಚಾರಿ (ವಾಮನ) ಪರಶುಧರ—ಪರಶುರಾಮ, ಗಾಹು—ಮರ್ಮ, ವೈಗಾಹು—ವೈಗಾವಲು, ಚೋಹ—ವೇಷ (ಕೃತ್ರಿಮ).

(೩೮) ಶ್ರೇಣಿ—ಸಾಲು, ಪರಮಾಣುಗತ—ಅತ್ಯಂತ ಸೂಕ್ಷ್ಮ ವಸ್ತುವಿನಲ್ಲಿ ಅಡಗಿರುವವನು, ಸ್ಥಾಣು—ಈಶ್ವರ, ಕಮಲಜ—ಬ್ರಹ್ಮ, ಸ್ಥಾಣು ಕಮಲಜರ ಅರಿಕೆಗಳು ಪರಮಾಣುಗತನ ಮಹತ್ವವನು ನಿಶ್ಚೈಸಿ ನೆರೆಯವಲ—ಎಂದನ್ವಯ, ಅರಿಕೆ—ಜ್ಞಾನ, ಸತ್ರಾಣವೇತರದು—ಅಂತಹವನನ್ನು ರಕ್ಷಣೆಮಾಡುತ್ತೇನೆಂಬುದು ಎಂತಹ ಆಲೋಚನೆ?

(೩೯) ಹಮ್ಮು—ಅಹಂಕಾರ, ನಿನ್ನ ಗುರುವಿನ ತಂದೆಯಯ್ಯನು—ವಸಿಷ್ಠನ ತಂದೆಯಾದ ಬ್ರಹ್ಮನ ತಂದೆಯಾದ ವಿಷ್ಣು, ಸುನಿಶ್ಚಯ—ನಿರ್ಣಯ, ಕುಲವಿಡಿದು ಬಳಿಸಂದ—ವಂಶಪಾರಂಪರ್ಯವಾಗಿ ಬಂದಿರುವ.

ಸೆರೆಗಳೌಕಿದುವಾ ನರೇಂದ್ರನ ।
ಕೊರಳನಾ ಮುನಿನಾಥ ನುಡಿದು ।
ತ್ತರಕೆ ಮಾರುತ್ತರವ ಕಾಣದೆ ಮನದ ಮರುಕದಲಿ ॥
ಗುರು ಮುಖಾಂಬುಜವನು ನಿರೀಕ್ಷಿಸೆ ।
ಬೆರಳಸನ್ನೆಯಲಾ ಮುನಿಪ ನಿ ।
ರ್ಧರಿಸಿದನು ನಿಜವೆಂದು ಕಳುಹಿನ್ನಂಜಬೇಡೆಂದ ।೪೦॥

ಗುರುನಿರೂಪವಲಂಘ್ಯವೆಂದನು ।
ಕರಿಸಿ ಕರೆದನು ಮಗನನೀ ಮುನಿ ।
ವರನ ಕೃಪೆ ನಿನಗಾಯ್ತು ಪಾಲಿಸು ಮುನಿಪನಧ್ವರವ ॥
ತೆರಳು ನೀನೆಂದೆಂಬ ವಚನಾಂ ।
ತರದೊಳೊಸರಿದುವಶ್ರು ಜಲ ನಿ ।
ಬ್ಬರದ ಬೆರಗಿನ ರೀತಿಯೊಳಗಿರ್ದುದು ಸಭಾಸ್ಥಾನ ॥೪೧॥

ನಮಿಸಿ ತಂದೆಗೆ ಗುರು ವಸಿಷ್ಠನ ।
ಸುಮುಖತೆಯ ಹರಕೆಯನು ಕೈಕೊಂ ।
ಡಮಿತ ವಿಕ್ರಮನಿಷುಧಿ ಚಾಪ ಕೃಪಾಣಗಳ ಧರಿಸಿ ॥
ಗಮಿಸಿದನು ಮುನಿಯೊಡನೆ ಹರ್ಷೋ ।
ದ್ಗಮದಲಾತನ ಬೆಂಬಳಿಯಲಾ ।
ಕ್ರಮದಿ ಸೌಮಿತ್ರಿಯು ಸರಾಗದಿ ತ್ವರಿತದಿಂ ಪೊರಟ ॥೪೨॥

ಬೀಳುಕೊಂಡನು ಮುನಿ ಬಳಿಕ ಭೂ ।
ಪಾಲಕನ ಹರುಷದಲಿ ತನ್ನೃಪ ।
ಬಾಲಕರು ಸಹಿತಲ್ಲಿಗಲ್ಲಿಗೆ ನೆರೆದ ಪೌರಜನ ॥

(೪೦) ಸೆರೆ—ನರ, ಔಕಿದುವು—ಬಿಗಿದುಕೊಂಡವು, ಮಾರುತ್ತರ—ಪ್ರತ್ಯುತ್ತರ, ಮರುಕ—ವ್ಯಥೆ, ಗುರು—ವಸಿಷ್ಠ.

(೪೧) ನಿರೂಪ—ಆಜ್ಞೆ, ಅಲಂಘ್ಯ—ಮೀರತಕ್ಕುದಲ್ಲ, ಒಸರು—ಸುರಿ, ಅಶ್ರು ಜಲ—ಕಣ್ಣೀರು, ನಿಬ್ಬರ--ನಿರ್ಭರ(ಸಂ·)—ಹೆಚ್ಚಾದ.

(೪೨) ಸುಮುಖತೆ—ಹಸನ್ಮುಖ, ಹರಕೆ—ಆಶೀರ್ವಾದ, ಇಷುಧಿ—ಬತ್ತಳಿಕೆ, ಚಾಪ—ಬಿಲ್ಲು, ಕೃಪಾಣ—ಕತ್ತಿ, ಹರ್ಷೋದ್ಗಮ—ಹೆಚ್ಚಾದ ಸಂತೋಷ, ಬೆಂಬಳಿಯಲಿ—ಹಿಂದೆ, ಸೌಮಿತ್ರಿ—ಲಕ್ಷ್ಮಣ.

(೪೩) ಅನ್ವಯ—ಮುನಿ ಬಳಿಕ ಹರುಷದಲಿ ತನ್ನೃಪ ಬಾಲಕರು ಸಹಿತ ಭೂಪಾಲಕನ ಬೀಳುಕೊಂಡನು; ಬೀಳುಕೊಂಡನು—ಅಪ್ಪಣೆ ತೆಗೆದುಕೊಂಡು ಹೊರ

ಜಾಳಿಸುವ ಕಂಬನಿಗಳಲಿ ಬಿರು ।
ನಾಲಗೆಯ ಬೈಗುಳಲಿ ಮುನಿಯನು ।
ಕೀಳನುಡಿಯಲಿ ಜಡಿಯುತಿರ್ದುದು ಜರಿದು ಜನಪತಿಯ ॥೪೩॥

ಪುರದ ಹೊರವಂಟಾ ಮುನಿಪನಾ ।
ತರಣಿಕುಲಜರು ಸಹಿತ ಬಂದನು ।
ಸರಯುವೆಂಬ ತರಂಗಿಣಿಗೆ ನಿಜ ಭಾವ ಶುದ್ಧಿಯಲಿ ॥
ಪರಮ ನಿಷ್ಠೆಯಲಾ ಮುನಿಪನಘ ।
ಮರುಷಣಾದಿ ಸಮಸ್ತ ಕರ್ಮಾಂ ।
ತರವ ವಿರಚಿಸಿ ಕೊಟ್ಟನವರಿಬ್ಬರಿಗನುಗ್ರಹವ ॥೪೪॥

ಹರಿ ಹರ ಬ್ರಹ್ಮಾಮರೇಂದ್ರಾ ।
ದ್ಯರ ಹೆಸರ ದಿವ್ಯಾಸ್ತ್ರ ಮಂತ್ರವ ।
ನೊರೆದನಾಚಮುನೀಯ ಸಾಂಗೋಪಾಂಗ ಮುದ್ರೆಯಲಿ ॥
ವರವನಿತ್ತನು ಶಸ್ತ್ರದುಪಸಂ ।
ಹರಣವನು ತನು ರಕ್ಷಣೆಯ ವಿ ।
ಸ್ತರವ ದಿವ್ಯ ತನುತ್ರ ಮಂತ್ರವನಾ ಕುಮಾರರಿಗೆ ॥೪೫॥

ಟಿಸು, ಜಾಳಿಸು—ಹೆಚ್ಚಾಗಿ ಸುರಿಸು, ಬಿಟ್ಟಿತು+ನಾಲಗೆ—ಬಿರುನಾಲಗೆ—ಕಠಿನವಾದ ನಾಲಗೆ (ಕಠಿನೋಕ್ತಿ), ಕೀಳುನುಡಿ—ಸಣ್ಣಮಾತು (ನಿಂದೆ), ಜಡಿ—ಗದರಿಸು

(೪೪) ತರಂಗಿಣಿ—ನದಿ, ಭಾವಶುದ್ಧಿ—ಮನಶ್ಶುದ್ಧಿ, ನಿಷ್ಠೆ—ನಿಯಮ, ಅಘಮರುಷಣ—ಸ್ನಾನ, ಕರ್ಮಾಂತರ—ಇತರ ಕರ್ಮಗಳು.

(೪೫) ಸಾಂಗೋಪಾಂಗ ಮುದ್ರೆ—ಅಂಗಗಳು, ಉಪಾಂಗಗಳು, ಮುದ್ರೆಗಳು ಇವುಗಳೊಡನೆ, ಉಪಸಂಹರಣ—ಅಸ್ತ್ರವನ್ನು ಹಿಂದಕ್ಕೆ ತೆಗೆದುಕೊಳ್ಳುವುದು, ತನುತ್ರ—ಕವಚ.

*

# ಹತ್ತನೆಯ ಸಂಧಿ

ಸೂಚನೆ॥ ತುಂಗ ಭುಜಬಲನಹಿತ ಮದಮಾ।
ತಂಗ ಕಂಠೀರವನು ರಾಮನು।
ಭಂಗದಲಿ ತಾಟಕಿಯ ಗೆಲಿದೊಲಿಸಿದನು ಜಯ ವಧುವ॥

ಕಂದ ಕೇಳೈ ಮುನಿ ಬಳಿಕ ಮುದ।
ದಿಂದ ಸರಯುವ ದಾಂಟಿ ದಶರಥ।
ನಂದನರು ಸಹಿತೈದಿದನು ಘನ ಘೋರ ಕಾನನವ
ದಂದಶೂಕ ಮಹೋಗ್ರ ಖಗ ಮೃಗ।
ದಿಂದ ಮಿಗೆ ಕಪ್ಪಗಿವ ಕತ್ತಲೆ।
ಯಿಂದ ಬೀರಿತು ಭಯವನಾ ರಘುರಾಜ ಪುತ್ರರಿಗೆ ॥೧॥

ಮುನಿಪ ಚಿತ್ತವಿಸೀ ಭಯಂಕರ।
ವನವಿದಾರಾಶ್ರಮವು ಗಮಿಸುವ।
ಡನಿಮಿಷರಿಗಳವಲ್ಲ ಹೆಸರೇನೀ ಮಹಾ ವನದ॥
ಎನ್ನೆ ಸುರೇಂದ್ರನು ಪೂರ್ವದಲಿ ವೃ।
ತ್ರನ ವಿದಾರಿಸೆ ಬಂದುದಾತಗೆ।
ಜನಿತ ಕಲ್ಮಷ ದೋಷವಾ ದಿನ ಕೇಂದನಾ ಮುನಿಪ ॥೨॥

ಕಲುಷಿತವನಪಹರಿಸಲಾಖಂ।
ಡಲನ ಬಳಿಗಜ ಬಂದು ಗಂಗಾ।
ಜಲದಲಭಿಷೇಕವನು ಮಾಡಿದನಾ ಸುರೇಂದ್ರಂಗೆ॥
ಬಳಿಕಲಾ ಜಲವಿಳಿಯಲೀ ವನ।
ಕಲುಷಕಾನನವಾಯ್ತು ಭಾರಿಯ।
ಖಳರಿಗಾಶ್ರಯವಾಯ್ತು ನಮ್ಮಾಶ್ರಮಕೆ ಹಗೆಯಾಯ್ತು ॥೩॥

ಸೂ॥ ತುಂಗ—ಹೆಚ್ಚಾದ, ಮಾತಂಗ—ಆನೆ, ಕಂಠೀರವ—ಸಿಂಹ, ಭಂಗ—ಮುರಿಯುವಿಕೆಯಿಂದ, ಒಲಿಸಿದನು—ಮೆಚ್ಚಿಸಿದನು

(೧) ದಂದಶೂಕ—ಸರ್ಪ, ಕಪ್ಪಗಿವ—ಕಪ್ಪಿನಿಂದ ಭಯಂಕರವಾದ.

(೨) ವನವಿದು ಆರಆಶ್ರಮವು, ಗಮಿಸುವಡೆ—ಹೋಗುವುದಕ್ಕೆ, ಅನಿಮಿಷರು—ದೇವತೆಗಳು, ವಿದಾರಿಸು—(ಸೀಳು) ಕೊಲ್ಲು, ಜನಿತ ಕಲ್ಮಷ ದೋಷ—ಹುಟ್ಟಿದ ಪಾಪದ ದೋಷ (ಬ್ರಹ್ಮಹತ್ಯಾದೋಷ).

(೩) ಕಲುಷಿತ—ಪಾಪ, ಆಖಂಡಲ—ಇಂದ್ರ, ಅಜ—ಬ್ರಹ್ಮ, ಖಳ—ರಾಕ್ಷಸ, ಕಲುಷಕಾನನ—'ಕಲುಷ' ಎಂಬ ಹೆಸರುಳ್ಳ ವನ.

ಈ ವನದೊಳಪ್ರತಿಮರತಿ ವೀ ।
ರಾವತಾರರ ಕಲಿ ಸುಬಾಹು ವಿ ।
ಭಾವರೀಚರ ಘೋರ ಮಾರೀಚಾದಿ ರಾಕ್ಷಸರ ॥
ತಾವು ಬಿರಿಸಿದು ಕೇಳಿದ್ದೈ ರಾ ।
ಜೀವಲೋಚನ ನಿರ್ಭಯಾಂಗದ ।
ಜೀವನವು ದೊರಕಿರಲೆನುತ ನಡೆತಂದನಾ ಮುನಿಪ ॥೪॥

ಸುಳಿದುದಾ ಕಾಂತಾರ ಮಧ್ಯ ।
ಸ್ಥಳದಲಾ ನರಗಂಧ ನಾಸಾ ।
ವಳಯದಲಿ ದೈತೇಯಕುಲದಾಟವಿಕ ತಾಟಕಿಯ ॥
ಸುಳಿವವರು ನರರೆನ್ನ ಪುಣ್ಯದ ।
ಫಲವಲಾ ಮಝು ಭಾಪೆನುತ ಮೈ ।
ಯೊಲವಿನಲಿ ಮನವುಬ್ಬಿ ನಿಂದಿದಳಧಿಕ ಹರ್ಷದಲಿ ॥೫॥

ಹೇಳಲೇನದ ಶಾಕಿನೀಜನ ।
ಜಾಳ ಪಾಯವಧಾರೆನುತ್ತ ಕ ।
ರಾಳಮುಖಿ ನಡೆತಂದಳದ್ಭುತ ರೌದ್ರ ರೂಪಿನಲಿ ॥
ಮೇಲೆ ಸುಳಿವ ಸುರಾಂಗನಾ ಜನ ।
ಜಾಲ ಸಂಚರಿಸುತ್ತ ಬಿದ್ದುದು ।
ತೋಳಗಾಳಿಗೆ ತರುಕದಂಬಕವವಳ ಗಮನದಲಿ ॥೬॥

(೪) ಕಲಿ—ಶೂರ, ವಿಭಾವರೀಚರ—ರಾಕ್ಷಸ, ತಾವು—ಸ್ಥಳ, ಬಿರಿಸಿದು—ಇದು ಕಠಿನವಾದುದು.

(೫) ಕಾಂತಾರ—ಕಾಡು, ಗಂಧ—ವಾಸನೆ, ನಾಸಾವಳಯ—ಮೂಗಿನಭಾಗ, ದೈತೇಯ—ರಾಕ್ಷಸ, ಆಟವಿಕ—ಕಾಡಿನಲ್ಲಿ ಸಂಚರಿಸುವ, ಮಝು ಭಾಪು—ಶಾಬಾಸ್! (ಅನುಕರಣಪದಗಳು), ಮೈಯೊಲವು—ಮೈಯುಬ್ಬು, ನಿಂದಿದಳು—ನಿಂತಿದ್ದಳು, ನರ ಗಂಧ(ವು) ತಾಟಕಿಯ ನಾಸಾವಳಯದಲಿ ಸುಳಿದುದು—ಎಂದನ್ವಯ.

(೬) ಶಾಕಿನೀಜನ—ಒಂದು ಬಗೆಯ ಸ್ತ್ರೀ ಪಿಶಾಚ ಜನ, ಜಾಳ—ಸಮೂಹ, ಪಾಯವಧಾರು—'ಪರಾಕ್' ಎಂಬ ರಾಜಮರ್ಯಾದೆಯನ್ನು ತೋರಿಸುವ ಶಬ್ದ, ಎನುತ್ತ—ಎನ್ನುತ್ತಿರುವಲ್ಲಿ, ಕರಾಳ—ಕ್ರೂರ, ಮೇಲೆ ಸುಳಿವ—ಮೇಲೆ ಸಂಚರಿಸುತ್ತಿರುವ, ಸುರಾಂಗನಾಜನ ಜಾಲ—ದೇವತಾ ಸ್ತ್ರೀ ಸಮೂಹ, ಸಂಚರಿಸುತ್ತ—ನಡೆಯುತ್ತಿರಲಾಗಿ, ತೋಳಗಾಳಿ—ತೋಳು ಬೀಸುವುದರಿಂದ ಹುಟ್ಟಿದ ಗಾಳಿ, ತರು ಕದಂಬಕ—ಮರಗಳ ಗುಂಪು, ಗಮನ—ನಡೆ.

ಜವನ ಜನನಿಯೊ ಮೇಣು ಲಯ ಭೈ ।
ರವನ ಭಗಿನಿಯೊ ವಿಲಯ ಕಾಲದ ।
ಶಿವನ ಶಿಖಿಯೋ ಸತಿಯೊ ಪ್ರಳಯದ ಚಂಡ ನೃತ್ಯವಿನ ॥
ಇವಳ ಕೆಣಕಿದು ಜೀವದಲಿ ಬದು ।
ಕುವರೆ ಹರ ಬ್ರಹ್ಮಾಮರೇಂದ್ರರ ।
ಹವಣ ಹುಸಿಯೆಂದೆಂಬವೋಲ್ ನಡೆತಂದಳಿದಿರಿನಲಿ ॥೭॥

ಅದೆ ಬರವು ತಾಟಕಿಯ ನೋಡೈ ।
ಕದನ ಕರ್ಕಶ ರಾಮ ರಣದ ।
ಭ್ಯುದಯ ಮೊದಲಾರಂಭವಿದು ಭೂಭಾರ ಭಂಜನೆಗೆ ॥
ಹೆದರದಿರು ಚಿತ್ತದಲಿ ಬಾಣವ ।
ಹೆದೆಗೊಳಿಸು ರಕ್ಕಸಿಯ ಹರಣವ ।
ನೊದೆದು ಹಾಯ್ಕೆಂದೆನಲು ನಗುತಿಂತೆಂದನಾ ರಾಮ ॥೮॥

ಹೆಂಗುಸಿವಳಿವಳಸುವನುಚ್ಚುವು ।
ದಂಗವೇ ಕ್ಷತ್ರಿಯರಿಗೆವ್ಮ ಪ ।
ತಂಗ ಕುಲದರಸುಗಳು ನಗದಿಹರೇ ಸುರೇಂದ್ರನಲಿ ॥
ಭಂಗ ಬಡಿಸದೆ ಬಿಡುವುದೇ ಭಟ ।
ರಿಂಗೆ ಬೆಸಸದಿರಿನಿತನೆನೆ ಮುನಿ ।
ಪುಂಗವನು ನಸುನಗುತಲಾ ರಘುನಾಥಗಿಂತೆಂದ ॥೯।

(೭) ಜವ—ಯಮ(ಸಂ.), ಲಯಭೈರವ—ಪ್ರಳಯಕಾಲದ ರುದ್ರ, ಭಗಿನಿ—ಸಹೋದರಿ, ಶಿವನ ಶಿಖಿ—ಈಶ್ವರನ ಕಣ್ಣಿನಲ್ಲಿರುವ ಬೆಂಕಿ, ಚಂಡ—ಭಯಂಕರವಾದ, ಸತಿ—ಹೆಂಡತಿ, ಕೆಣಕಿದು—ರೇಗಿಸಿ, ಹವಣ — ಪ್ರಮಾಣ (ಸಂ.) — ಸಾಮರ್ಥ್ಯ, ಹುಸಿ— ಸುಳ್ಳು.

(೮) ತಾಟಕಿಯ ಬರವು ಅದೆ ನೋಡೈ, ಕರ್ಕಶ—ಕಠಿನ, ರಾಮ—ರಾಮನೇ! ಅಭ್ಯುದಯ—ಏಳಿಗೆ, ಭಂಜನೆ—ಮುರಿವುದು, ರಣದಭ್ಯುದಯ(ಕ್ಕೆ) ಮೊದಲು, ಭೂಭಾರ ಭಂಜನೆಗೆ ಇದು ಆರಂಭ; ಹೆದೆಗೊಳಿಸು—(ಬಾಣವನ್ನು) ಬಿಲ್ಲಿನ ಹಗ್ಗಕ್ಕೆ ಸೇರಿಸು, ಹರಣ—ಪ್ರಾಣ (ಸಂ.) ಒದೆದು—ಒದ್ದು, ಹಾಯ್ಕು—ಹಾಕು.

(೯) ಅಸು—ಪ್ರಾಣ, ಉಚ್ಚು—ತೆಗೆ, ಅಂಗ—ಧರ್ಮ, ನೀತಿ; ಪತಂಗ—ಸೂರ್ಯ, ಸುರೇಂದ್ರನಲಿ ಭಂಗಬಡಿಸದೆ ಬಿಡುವುದೇ ಭಟರಿಂಗೆ—(ಸ್ತ್ರೀವಧೆಯು) ಯುದ್ಧ ವೀರರಿಗೆ ಸುರೇಂದ್ರನಲ್ಲಿ ಅಪಮಾನವನ್ನು ಮಾಡದೆ ಬಿಡುವುದೇ?

ಎಲೆ ಕಕುತ್ಸ್ಥಜ ಕೇಳು ಲೋಕವ ।
ಹಿಳಿದಳಿವಳಂದದಲಿ ಹಿಂದಣ ।
ಬಲಿಯ ತಂಗಿ ಬಳಿಕ್ಕ ದೂರಾಯ್ತುವಳ ದೆಸೆಯಿಂದ ॥
ಬಲವಿರೋಧಿಗೆ ಕೇಳಿದ್ವೈ ಕಡು ।
ಗಲಿಯ ಗೆಲಿದನು ಶಕ್ರನವಳನು ।
ಕೊಲೆಗೆ ಕೊಕ್ಕರಿಸಿದನೆ ಕಾಲಗ್ರೀವ ಮೃತ್ಯುವಿನ ॥೧೦॥

ಧರೆಗೆ ಕಂಟಕರಾದವರ ಸಂ ।
ಹರಿಸುವುದೆ ನೃಪನೀತಿ ಸುಜನರ ।
ನಿರತಿಶಯ ರಕ್ಷಿಸುವುದೇ ಕ್ಷತ್ರಿಯರ ಧರ್ಮ್ಮಕಣಾ ॥
ನಿರುತವಿದು ಪರಮಾರ್ಥದಲಿ ಸಂ ।
ಹರಿಸು ಸಂದೇಹವನು ಮನದೊಳ ।
ಗಿರಿಸದೀ ರಕ್ಕಸಿಯನೆಲೆ ರಘುನಾಥ ಕೇಳೆಂದ ॥೧೧॥

ಮುಟ್ಟವಿಸಿ ಬಹ ರಕ್ಕಸಿಯನಡ ।
ಗಟ್ಟಿ ನಿಂದನು ಮುಂದೆ ಸೆಣಸಲು ।
ಬೆಟ್ಟದಿದಿರಲಿ ಸುಳಿವ ಸಿಡಿಲಂದದಲಿ ಗರ್ಜಿಸುತ ॥
ಇಟ್ಟಣಿಸಿ ನಗುತವಳು ರಾಮನ ।
ನೊಟ್ಟವಿಸಿ ಮುಂಬರಿದು ಮುನಿಪನ ।
ತೊಟ್ಟಳಿಕೆಯಲಿ ಚಾಚಿದಳು ಚಾಪಳ ಚಪೇಟಕವ ॥೧೨॥

(೧೦) ಕಕುತ್ಸ್ಥಜ—ಕಕುಸ್ಥರಾಜನ ವಂಶದಲ್ಲಿ ಹುಟ್ಟಿದವನು—ರಾಮ, ಬಲಿಯ ತಂಗಿ—ಮಂಥರೆಯು, ಹಿಳಿದಳು—ಹಿಂಡಿದಳು, ಬಳಿಕ್ಕ—ಬಳಿಕ, ದೂರಾಯ್ತು—ದೂರು ಮುಟ್ಟಿತು, ಬಲ ವಿರೋಧಿ—ಇಂದ್ರ, ಕಡುಗಲಿಯು—ಬಹಳ ಶೂರನಾದ, ಶಕ್ರ — ಇಂದ್ರ, ಕಾಲಗ್ರೀವ — ಈಶ್ವರನು, ಮೃತ್ಯುವಿನ ಕೊಲೆಗೆ ಕೊಕ್ಕರಿಸಿದನೆ—ಮೃತ್ಯುದೇವತೆಯನ್ನು ಕೊಲ್ಲಲು ಹಿಂದೆಗೆದನೇ?

(೧೧) ನಿರತಿಶಯ—ಹೆಚ್ಚಾಗಿ, ನಿರುತ—ನಿಶ್ಚಯ, ಪರಮಾರ್ಥ—ಮುಖ್ಯಾರ್ಥ.

(೧೨) ಮುಟ್ಟವಿಸಿ—ಸಮೀಪಿಸಿ, ಅಡಗಟ್ಟು—ಅಡ್ಡಹಾಕಿ, ಸೆಣಸು—ಹೋರಾಡು, ಬೆಟ್ಟದ ಇದಿರಲಿ, ಇಟ್ಟಣಿಸಿ—ಹೆಚ್ಚಾಗಿ, ಒಟ್ಟವಿಸಿ—ಸ್ತಂಭಿಸಿ, ಅಳಿಕೆ—ಹಣೆ, ಚಾಪಳ—ತ್ವರೆಯಿಂದ ಕೂಡಿದ, ಚಪೇಟಕ—ಚಾಚಿದ ಅಂಗೈ.

ತೊಲಗು ತೊತ್ತಿನ ಮಗಳೆ ಮುಟ್ಟದಿ ।
ರಳೆಯ ವಿಬುಧರ ನಿನ್ನ ಗಂಟಲ ।
ಬಲವ ಬಿಡಿಸುವ ಮೃತ್ಯುವಿದೆ ನೋಡಿತ್ತ ತಿರುಗೆನುತ ॥
ಹೊಳೆವ ಹೊಂಬರೆಹದ ಸುರೇಖೆಯ ।
ತಳಪದಸ್ತ್ರದಲವಳ ಹಸ್ತವು ।
ಕಳಚಲೆಚ್ಚನು ಭೂತಗಣ ಬಿರಿತೋಡೆ ಭೀತಿಯಲಿ ॥೧೩॥

ಸಿಡಿದು ಹಾರಿದ ಹಸ್ತದುರುಬೆಗೆ ।
ಬುಡಸಹಿತ ಬಲುಮರ ಧರಾತಳ ।
ಕುಡಿದು ಬಿದ್ದುದು ಕರದ ಖಂಡನದರುಣ ವಾರಿಯಲಿ ॥
ಗಿಡ ಲತಾಳಿ ವಸಂತದಲಿ ತಳಿ ।
ರೊಡೆದಶೋಕೆಯ ಧಾತಿನಗಲಕೆ ।
ಪಡೆದುವಮರ ವಿಮಾನತತಿ ಕೆಂಪಾದುದಭ್ರದಲಿ ॥೧೪॥

ತರುಣ ಕೇಳೈ ಬಳಿಕಲಾ ಖಳ ।
ತರುಣಿ ತವಕದಲಬ್ಬರಿಸುತು ।
ಬ್ಬರದ ಕೋಪದಲೆಡದ ಕೈಯಲಿ ಜಡಿಯುತಾಯುಧವ ॥
ಘರಿಘರನೆ ಹಲುಗಡಿದು ನೋಡಾ ।
ತರುವಲಿಯು ಸಾಹಸವನೆನುತಾ ।
ಸುರದ ವೀರಾವೇಶದಲಿ ಜಡಿದಿಟ್ಟಳಿನಕುಲನ ॥೧೫॥

(೧೩) ಹೊಂಬರೆಹ—ಚಿನ್ನದ ಅಕ್ಷರ, ಸುರೇಖೆ—ಒಳ್ಳೆಯ ಗೆರೆ, ತಳಪದ—ಕಾಂತಿಯುಳ್ಳ, ಅಸ್ತ್ರ—ಬಾಣ, ಕಳಚಲ್—ಕಳಚುವಂತೆ, ಬಿರಿತು—ಬೆದರಿ.

(೧೪) ಉರುಬೆ—ವೇಗ, ಬಲುಮರ—ದೊಡ್ಡಮರ, ಕರ—ಕೈ, ಉಡಿ—ಮುರಿ, ಅರುಣವಾರಿ—ರಕ್ತ, ಲತಾಳಿ—ಲತೆಗಳ ಗುಂಪು, ತಳಿರೊಡೆದ—ಚಿಗುರು ಬಿಟ್ಟಿರುವ, ಅಶೋಕೆಯ, ಧಾತಿನ—ಧಾತುವಿನ—ಕೆಂಪು ಬಣ್ಣದ, ಅಗಲಕೆ—ವಿಸ್ತಾರವನ್ನು.

(೧೫) ತವಕ—ತ್ವರೆ, ತರುವಲಿ—ಹುಡುಗಿ, ಅಸುರದ—ಕ್ರೂರವಾದ, ಇನಕುಲನ—ರಾಮನನ್ನು, ಜಡಿದು—ಗದರಿಸಿ, ಇಟ್ಟಳು—ಹೊಡೆದಳು.

ಅವಳ ಶೂಲದ ಶಿಖಿಯುಲಾ ವನ ।
ನಿವಹ ಸೀಕರಿಯಾಯ್ತು ತಾರೆಗ ।
ಳವನಿಗುದುರಿದುವರಳಿ ತಪಿಸಿತು ಬಿಂಬ ದಿನಮಣಿಯ ॥
ಅವನಿ ಹೊಗೆದುದು ಸಕಲ ಮುನಿ ವಟು ।
ನಿವಹ ಹಾ ಎಂದೊದರಿತಿದ ನಿ ।
ಮ್ಮವರು ಕೇಳುವರೇ ವಿಚಿತ್ರವ ಕೇಳಿ ನೀವೆಂದ ॥೧೬॥

ಶೂಲವಿದ್ದುದು ನಭದಿ ಲಯುದ ಕ ।
ಪಾಲ ಹಸ್ತನ ಕರದಲಾಕೆಯ ।
ತೋಳು ಕಾಣಿಸಿತಾ ಕೃತಾಂತನ ಬಳಿಯ ಮುಸಲವೆನೆ ॥
ಹೇಳಲೇನದನವಳು ಮೇಘದ ।
ಜಾಳಿಯಲಿ ಮಳೆಗರೆದಳರುಣ ಜ ।
ಲಾಳಿ ಹೊನಲಿಡಲಬ್ಬರಿಸುತಾಸುರ ವಿಕಾರದಲಿ ॥೧೭॥

ಆವ ಬಲು ಬಿಲು ಜಾಣತನದ ಮ ।
ಹಾ ವಿಚಿತ್ರ ಪ್ರೌಢಿಯೋ ಓಟ ।
ದೇವನಲ್ಲಾ ಮೇಲೆ ದೈತ್ಯಾಂತಕನಲಾ ರಣಕೆ ॥
ಆವುದರಿದಿವಗೆಂದು ಗಗನದ ।
ದೇವತತಿ ಕೊಂಡಾಡೆ ಸಲೆ ಘನ ।
ರಾವದಲಿ ನೆಲಕುರುಳಲೆಚ್ಚನು ಘೋರ ತಾಟಕಿಯ ॥೧೮॥

(೧೬) ಶೂಲ—ಶೂಲಾಯುಧ, ಶಿಖಿ—ಬೆಂಕಿ, ವನ ನಿವಹ—ಕಾಡಿನ ಸಮೂಹ, ಸೀಕರಿ—ಕರಿಕು, ತಾರೆ—ನಕ್ಷತ್ರ, ಅರಳಿ—ವಿಸ್ತಾರವಾಗಿ, ಬಿಂಬ ದಿನಮಣಿಯು—ಸೂರ್ಯಬಿಂಬ, ಹೊಗೆದುದು—ಹೊತ್ತಿ ಹೊಗೆ ಹೊರಟಿತು, ಒದರಿತು—ಕೂಗಿಕೊಂಡಿತು, ಕೇಳುವರೇ—ಲಕ್ಷ್ಯಮಾಡುವರೇ?

(೧೭) ನಭ—ಆಕಾಶ, ಲಯುದ—ಪ್ರಳಯುದ, ಕಪಾಲ ಹಸ್ತ—ಬ್ರಹ್ಮನ ತಲೆಬುರುಡೆಯನ್ನು ಕೈಯಲ್ಲಿ ಧರಿಸಿದವನು—ಈಶ್ವರ, ಕೃತಾಂತ—ಯಮ, ಮುಸಲ—ಒನಕೆ, ಜಾಳಿ—ರೀತಿ(?), ಹೊನಲಿಡಲು—ಪ್ರವಹಿಸುವಂತೆ, ಅಸುರ—ರಾಕ್ಷಸರೀತಿಯಾದ. ಉತ್ಪ್ರೇಕ್ಷಾಲಂಕಾರ.

(೧೮) ಅಲ್ಲಾ—ಅಲ್ಲವೇ, ದೈತ್ಯಾಂತಕ—ವಿಷ್ಣು, ಅರಿದು—ಅಸಾಧ್ಯ, ಘನರಾವ—ಮೇಘದ ಶಬ್ದ (ಗುಡುಗು), ಉರುಳಲು—ಉರುಳುವಂತೆ, ಎಚ್ಚನು—ಬಾಣದಿಂದ ಹೊಡೆದನು.

ಕೆಡೆದುದಾ ತಲೆ ರಕ್ತ ಮುಂಡದೊ ।
ಳೊಡೆದು ಹಾಯ್ದುದು ಬಳಲಿ ನೆಲಕೋ ।
ಗರ್ಗಡಿಸಿತವಳ ಶರೀರ ಹೊರಳಿತು ಜಾವ ಪರಿಯಂತ ॥
ಹೊಡೆದುದಮರರ ಭೇರಿ ಹೂವಿನ ।
ನಿಡುಸರವ ಸೋನೆಗಳ ದಿವಿಜರ ।
ಮಡದಿಯರು ಸೂಸಿದರು ರಘುಕುಲನುತ್ತಮಾಂಗದಲಿ ॥೧೯॥

ಪುಳಕ ಚಯದುಬ್ಬಿನಲಿ ಮುನಿಕುಲ ।
ತಿಲಕ ಬಿಗಿಯುಪ್ಪಿದನು ನೀಲೋ ।
ತ್ಪಲ ನಿಭಾಂಗನ ನಿಖಿಳ ದೇವೋತ್ತಮನ ನಿರುಪಮನ ॥
ನಳಿನ ನಾಭನ ಮಂಗಳ ಶ್ರೀ ।
ನಿಳಯ ತೊರವೆಯ ರಾಯನನು ಹೆ ।
ಕ್ಕಳವ ಹರುಷದಲುಬ್ಬಿಕೊಂಡಾಡಿತು ಮುನಿಸ್ತೋಮ ॥೨೦॥

(೧೯) ರಕ್ತ—ರಕ್ತವು, ಒಡೆದು—ಭೇದಿಸಿಕೊಂಡು, ಓಗರ್ಗಡಿಸು—ಗುಡ್ಡೆಯಾಗಿ ಬೀಳು, ನಿಡುಸರ—ಉದ್ದವಾದ ಮಾಲೆ, ಸೋನೆಗಳ—ಮಳೆಯನ್ನು, ಉತ್ತಮಾಂಗ—ತಲೆ.

(೨೦) ಪುಳಕ ಚಯದ—ರೋಮಾಂಚದ, ನೀಲೋತ್ಪಲ ನಿಭಾಂಗ—ಕನ್ನೈದಿಲೆಯಂತೆ ಕಪ್ಪಾದ ದೇಹವುಳ್ಳವನು, ನಳಿನ ನಾಭ—ಹೊಕ್ಕುಳಲ್ಲಿ ಕಮಲವುಳ್ಳವನು, ಮಂಗಳ ಶ್ರೀನಿಳಯ—ಶುಭ ಸಂಪತ್ತಿಗೆ ಮನೆಯಾದ, ಹೆಕ್ಕಳ—ಹೆಚ್ಚಾದ.

*

# ಹನ್ನೊಂದನೆಯ ಸಂಧಿ

ಸೂಚನೆ॥ ಧುರದೊಳಸುರ ಸುಬಾಹು ಮಾರೀ।
ಚರನು ಗೆಲಿದು ಮುನೀಂದ್ರನಮಳಾ।
ಧ್ವರವ ರಕ್ಷಿಸಿ ಪಡೆದನುನ್ನತ ಕೀರ್ತಿಯನು ರಾಮ ॥

ಕಳಿದರಿವರಿಲಿ ಕೇಳು ಕುಶ ತ।
ತ್ಕಲುಷ ಕಾಂತಾರವನು ತನ್ಮುನಿ।
ತಿಲಕ ಹೊಕ್ಕನು ಬಳಿಕ ಘನ ಪಾವನ ತಪೋವನವ ॥
ಲಲಿತ ಪುಣ್ಯ ಮಹೀಜ ಕುಲ ಮಂ।
ಜುಳ ಲತಾ ಸೌರಭ್ಯ ಕುಸುಮೋ।
ಚ್ಚಲಿತ ಕಲಿತ ಸಮೀರ ನುತ ವಿಶ್ರುತ ಮಹಾ ವನವ

ಶ್ರುತಿಗಳುಚ್ಚರಣೆಗಳ ಪಿಕ ಸಂ।
ತತಿಯ ಸೋಪನ್ಯಾಸಮಯ ವಿ।
ಶ್ರುತ ಶುಕಾಳಿಯ ಸಕಲ ಶಾಸ್ತ್ರ ಧ್ವನಿಯ ಕಿನ್ನರರ ॥
ನುತ ತಪೋನುಷ್ಠಾನ ವಿಧಿ ಸಂ।
ಸ್ಥಿತ ವನೇಚರ ಚಯದ ಶೋಭಾ।
ನ್ವಿತ ತಪೋವನ ಕಣ್ಗೆ ಕೌತುಕವಾಯ್ತು ರಘುವರನ

ಕೇಳಿದನು ರಘುವಂಶ ಲಕ್ಷ್ಮೀ।
ಲೋಲನೀ ವನವಾರದೆಂದು ವಿ।
ಶಾಲ ವಿಜ್ಞನ ವಿನುತ ವಿಶ್ವಾಮಿತ್ರ ಮುನಿವರನ ॥

ಸೂ॥ ಧುರ—ಯುದ್ಧ, ಅಧ್ವರ—ಯಜ್ಞ.

(೧) ಕಳಿದರು—ಬಿಟ್ಟು ಹೊರಟರು, ಕಲುಷ—ಕಲ್ಮಷವುಳ್ಳ, ಕಾಂತಾರ—ಅಡವಿ, ಲಲಿತ—ಕೋಮಲವಾದ, ಮಹೀಜ ಕುಲ—ಮರಗಳ ಗುಂಪು, ಮಂಜುಳ ಲತಾ—ಮನೋಹರವಾದ ಬಳ್ಳಿಗಳ, ಸೌರಭ್ಯ—ಸುವಾಸನೆಯಿಂದ ಕೂಡಿದ, ಕುಸುಮೋಚ್ಚಲಿತ— ಹೂಗಳಿಂದ ಎದ್ದ, ಕಲಿತ — ಕೂಡಿಕೊಂಡಿರುವ, ಸಮೀರ—ಗಾಳಿ, ವಿಶ್ರುತ—ಪ್ರಖ್ಯಾತಿಹೊಂದಿದ.

(೨) ಶ್ರುತಿ—ವೇದ, ಪಿಕ—ಕೋಗಿಲೆ, ಸೋಪನ್ಯಾಸ ಮಯ—ಉಪನ್ಯಾಸಗಳಿಂದ ಕೂಡಿದ, ಸಂಸ್ಥಿತ— ನೆಲಸಿರುವ, ವನೇಚರ ಚಯ—ತಪಸ್ವಿಗಳ ಗುಂಪು, ಕೌತುಕ—ಆಶ್ಚರ್ಯ.

(೩) ವಿಜ್ಞ—ಪಂಡಿತ, ನಿರೋಧದ ಬೇಳುವೆಯ—(ಬಲಿಚಕ್ರವರ್ತಿಯ) ಯಜ್ಞ

ಹೇಳಿದನು ಬಳಿಕಲಿ ನಿರೋಧದ ।
ಬೇಳುವೆಯು ಸುರ ವಲ್ಲಭನ ಕ ।
ಟ್ಬೊಳಿಗದ ಕಶ್ಯಪ ಮುನೀಂದ್ರನ ಪೂರ್ವ ಸಂಗತಿಯ ॥೩॥

ರಾಮ ಕೇಳಿದರಿಂದಲದಿತೀ ।
ಭಾಮಿನಿಗೆ ಜನಿಸಿದನು ಹರಿ ವರ ।
ವಾಮನಾಕೃತಿಯಿಂದ ದೈತ್ಯ ಬಲೀಂದ್ರನಧ್ವರದ ॥
ಹೋಮವನು ಕೆಡಿಸಿದನು ಬಳಿಕೀ ।
ಭೂಮಿಯನು ಕೊಂಡಾಗಳಾ ಸು ।
ತ್ರಾಮಗೊಡರಿಚಿದಂದವನು ವಿರಚಿಸಿದನಾ ಮುನಿಪ ॥೪॥

ವನವಿದೆಮಗಾಯ್ತೆಂದು ಕಶ್ಯಪ ।
ಮುನಿಯ ವಚನದಿನೆಲೆ ಮಹೀಪತಿ ।
ತನುಜ ಕೇಳ್ ತಪವಿಾ ತಪೋವನದೊಳಗೆ ಸಿದ್ಧಿಪುದು ॥
ಎನುತ ಮುನಿ ಹೊಕ್ಕನು ತಪೋವನ ।
ವಿನುತ ಶಾಲಾಂತರವನಾ ಕ್ಷಣ ।
ಮುನಿಜನಂಗಳ ಕರಿಸಿದನು ನಾನಾ ತಪೋಧನರ ॥೫॥

ನೆರಹಿದನು ಮಖಸಾಧನದ ಪರಿ ।
ಪರಿಯ ಸಕಲ ದ್ರವ್ಯವನು ವಿ ।
ಸ್ತರಣವಾದುವು ಯಜ್ಞಶಾಲಾ ವೀಧಿಗಳು ಬಳಿಕ ॥
ಚರು ಪುರೋಡಾಶಾಜ್ಯ ದರ್ಭಾಗ್ರಂ ।
ಕುರ ಸಮಿತ್ಕುಶ ತಿಲಗಳಲಿ ಗೋ ।
ಚರಿಸಿತಾಹವನೀಯ ಲೌಕಿಕ ವೈದಿಕೋಕ್ತಿಯಲಿ ॥೬॥

ವನ್ನು ತಡೆದುದನ್ನು, ಸುರ ವಲ್ಲಭ—ಇಂದ್ರ, ಕಟ್ಬೊಳಿಗ—ಹೆಚ್ಚಾದ ಸೇವೆ

(೪) ಅದಿತೀ—ಅದಿತಿಯೆಂಬ, ಭಾಮಿನಿ—ಹೆಂಗಸು, ಸುತ್ರಾಮ—ಇಂದ್ರ, ಒಡರಿಚು—ಉಂಟುಮಾಡು, ಕೊಡು ; ವಿರಚಿಸಿದನು—ತಿಳಿಯಹೇಳಿದನು.

(೫) ಕಶ್ಯಪಮುನಿಯ ವಚನದಿ ವನವಿದು ಎಮಗಾಯ್ತು, ಮಹೀಪತಿ ತನುಜ—ರಾಮನೇ! ಸಿದ್ಧಿಪುದು—ಫಲಿಸುವುದು, ಶಾಲಾಂತರ—ಯಜ್ಞ ಶಾಲೆಯೊಳಗಣ ಭಾಗ, ತಪೋಧನ—ತಪಸ್ಸೇ ಹಣವಾಗಿ ಉಳ್ಳವನು—ಋಷಿ.

(೬) ನೆರಹು—ಕೂಡಿಸು, ವಿಸ್ತರಣ—ವಿಶಾಲ, ಚರು—ಅನ್ನ, ಪುರೋಡಾಶ—ಹುರಿದ ಹಿಟ್ಟು ಮೊದಲಾದವುಗಳಿಂದ ಹೋಮಕ್ಕಾಗಿ ಮಾಡಿದ ಉಂಡೆ; ದರ್ಭಾಗ್ರಂಕುರ—ಅಗ್ರ ದರ್ಭೆ, ಸಮಿತ್—ಸಮಿತ್ತು, ಕಟ್ಟಿಗೆ ; ಕುಶ—ದರ್ಭೆ, ಆಹವನೀಯ—ಅಗ್ನಿಯ ಒಂದು ಭೇದ.

ಕರಿಸಿದನು ಮುನಿನಾಥ ಬಳಿಕ ।
ಧ್ವರಿಗಳನು ಋತ್ವಿಜರನಧ್ವರ ।
ಪರಮ ವೈಭವದಿಂದ ನಡೆದುದು ದಿನ ಚತುಷ್ಟಯದ ॥
ಬರಿಸಿದನು ಬರ್ಹಿರ್ಮುಖರನು ।
ಬ್ಬರದ ಹೋಮದ ಧೂಮವಿತ್ತಲು ।
ನೆರೆಯುತಿರ್ದರು ರಕ್ಕಸರು ಬೇರೊಂದು ಠಾವಿನಲಿ ॥೭॥

ನಡೆಯುತಿರ್ದುದು ಹೋಮವೀಯು ।
ಗ್ಗಡದ ಸುರ ಸಂದೋಹ ತವಕಿಸಿ ।
ತೊಡನೊಡನೆ ಗುಮ್ಮಿದುದು ಗಾವಳಿ ಗಗನ ವಳಯದಲಿ ॥
ತುಡುಗುಣಿಗಳವದಿರು ನಭೋಗ್ರಕೆ ।
ಸಿಡಿದು ಹವಿಗೊಂಬಮರ ನಿಕರದ ।
ಹೆಡಕ ಬಾರಿಸಿ ಬಾಚುತಿರ್ದರು ಬಾಯ ತುತ್ತುಗಳ ॥೮॥

ಬೊಬ್ಬೆಯಾದುದು ಬಳಿಕ ಸುಮನಸ ।
ರೊಬ್ಬುಳಿಯ ಚೂಣಿಯಲಿ ಮುನಿಗಳು ।
ಬೆಬ್ಬಳಿಸಿದರು ಬಿಸುಟರಾಹುತಿಗಳನು ದೆಸೆದೆಸೆಗೆ ॥
ಇಬ್ಬರಿವರಾ ಮುನಿಗಳುಪಹತಿ ।
ಯುಬ್ಬೆಯನು ಸೈರಿಸುವರೇ ಬಿಡ ।
ದೆಬ್ಬಿಸಿದರಂಬುಗಳನಾ ರಾಕ್ಷಸ ಕದಂಬದಲಿ ॥೯॥

(೭) ಅಧ್ವರಿ—ಹೋಮ ಮಾಡುವವನು, ಋತ್ವಿಜ—ಮಂತ್ರವನ್ನು ಹೇಳುವವನು, ದಿನ ಚತುಷ್ಟಯದ—ನಾಲ್ಕು ದಿನಗಳ, ಅಧ್ವರ—ಯಜ್ಞ, ಬರ್ಹಿರ್ಮುಖರು—ದೇವತೆಗಳು, ಧೂಮ—ಹೊಗೆ, ಇತ್ತಲು (ನೆರೆಯುತಿರ್ದುದು—ಎಂದು ಅಧ್ಯಾಹಾರ).

(೮) ಉಗ್ಗಡ — ಉತ್ಕಟ (ಸಂ.) ಅಧಿಕ, ತವಕಿಸಿತು—ಸಡಗರಪಟ್ಟಿತು, ಗುಮ್ಮು—ನುಗ್ಗು, ಗಾವಳಿ—ಗದ್ದಲ, ತುಡುಗುಣಿಗಳು—ಕದ್ದು ಬಾಚಿ ತಿನ್ನುವವರು, ಅವದಿರು—ಅವರು (ಎಂದರೆ, ರಾಕ್ಷಸರು), ನಭೋಗ್ರ—ಆಕಾಶದ ತುದಿ, ಸಿಡಿದು—ಹಾರಿ, ಹವಿಗೊಂಬ—ಹೋಮ ದ್ರವ್ಯವನ್ನು ತೆಗೆದುಕೊಳ್ಳುವ, ಹೆಡಕು—ಹೆಕ್ಕತ್ತು, ಬಾರಿಸಿ—ಹೊಡೆದು.

(೯) ಬೊಬ್ಬೆ—ಗದ್ದಲ, ಸುಮನಸರು—ದೇವತೆಗಳು, ಒಬ್ಬುಳಿ—ಗುಂಪು, ಚೂಣಿ—ಮುಂಭಾಗ, ಬೆಬ್ಬಳಿಸು—ಗಾಬರಿಪಡು, ಇಬ್ಬರಿವರು—ರಾಮ ಲಕ್ಷ್ಮಣರು, ಉಪಹತಿ—ಕೇಡು, ಉಬ್ಬೆ—ಹೆಚ್ಚಿಕೆ, ಅಂಬು—ಬಾಣ, ಕದಂಬ—ಸಮೂಹ.

ಅಣುಗ ಕೇಳ್ಕೈ ನಿಮ್ಮವರ ಮಾ।
ರ್ಗಣಗಗಳುಬ್ಬರಿಸಿದುವು ಗಗನಾಂ।
ಗಣವನಬ್ಬರಿಸಿದುವು ಹರಿ ವರುಣಾದಿ ನಿಜಗಾಳರ॥
ಉಣಿಸಿಗಡಹಾಯ್ವಸುರರಟ್ಟಿಯ।
ಕುಣಿಸಿದುವು ಕಡಿದವರನಮರರ।
ನುಣಿಸಿದುವು ನಲಿದಾಡಿಸಿದುವಾ ನಾರದಾದಿಗಳ ॥೧೦॥

ಎಲೆಲೆ ಕಣೆಗಳಿವೆಲ್ಲಿಯವು ಕ।
ಗ್ಗೊಲೆಯ ಕಾಹುರರಾರೊ ಹೊಯ್ ಹೊಯ್।
ತಲೆಯ ಕಡಿ ಕೊಲ್ಲೆನುತ ಕವಿದುದು ಕೂಡೆ ಖಳನಿಕರ॥
ತಲೆಗೆದರಿ ತೆಗೆದೋಡುವವರಾ।
ವಳಿಯನುರೆ ಸದೆಬಡಿದು ಸರಿಸದ।
ಲಿಳಿದರಧ್ವರದೆಡೆಗೆ ಖಡ್ಗದ ಕೈಯ ನೆಗಹಿನಲಿ ॥೧೧॥

ಕೆದರಿತಧ್ವರ್ಯ್ವಾದಿ ಋತ್ವಿಜ।
ರದುಭುತದ ಭೀತಿಯಲಿ ಗಡ್ಡದ।
ಮುದುಕರಲುಗುವ ತಲೆಯ ಕೈಕಾಲುಗಳ ಕಂಪನದ॥
ಬೆದರಿನಲಿ ಬಿಸುಟಾಹುತಿಗಳನು।
ಗದಗದಿಸಿ ಕಂಗೆಟ್ಟು ಹಾಯ್ದುದು।
ಹೊದಿಕೆ ದಂಡ ಕಮಂಡಲುವ ಬಿಟ್ಟಖಿಳ ದೆಸೆದೆಸೆಗೆ ॥೧೨॥

(೧೦) ಅಣುಗ— ಹುಡುಗ, ಮಾರ್ಗಣ—ಬಾಣ, ಗಗನಾಂಗಣ—ಆಕಾಶ, ಉಬ್ಬರಿಸು—ತುಂಬು, ಉಣಿಸಿಗೆ—ಊಟಕ್ಕೆ—ಹವಿರ್ಭಾಗಕ್ಕೆ, ಅಡಹಾಯ್ವ—ಅಡ್ಡಿಬರುವ, ಅಸುರರ, ಅಟ್ಟಿ—ಮುಂಡ, ಅಂಗಣ—ಪ್ರದೇಶ, ನಲಿ—ಸಂತೋಷಿಸು.

(೧೧) ಕಗ್ಗೊಲೆ— ಕಠಿನವಾದ ಕೊಲೆ, ಕಾಹುರರು—ಗಲಿಬಿಲಿಯನ್ನುಂಟು ಮಾಡುವವರು, ಸರಿಸ—ಎದುರು, ನೆಗಹು—ಎತ್ತುವಿಕೆ.

(೧೨) ಅಧ್ವರ್ಯು—ಹೋಮಮಾಡುವವನು, ಅದುಭುತ—ಅದ್ಭುತ (ಸಂ.), ಅಲುಗುವ — ನಡುಗುವ, ಗದಗದಿಸಿ — ನಡುಗಿ, ಕಮಂಡಲು — ನೀರಿನಪಾತ್ರೆ, ಹಾಯ್ದುದು—ಓಡಿಹೋದರು.

ಕವಕವಿಸಿ ನಗುತಿಬ್ಬರಾ ಮುನಿ ।
ನಿವಹಕಭಯವ ಕೊಡುತ ಸಂಧಿಸಿ ।
ಸವರಿದರು ಸವ್ಯಾಪಸವ್ಯದಲೌಕುವತಿಬಲರ ॥
ಜವನ ಕವತೆಯೊ ಮೇಣು ಲಯಭೈ ।
ರವನ ಕಾಲ್ದುಳಿಯೋ ಎನಲು ನಿ ।
ಮ್ಮವರು ಮೆರೆದರು ಕಲಿಕೆಗಳ ಕೌತುಕದ ರಣ ರಸದಿ ॥೧೩॥

ಶಿಶುಗಳೇನವರಮಮ ಮಾಯಾ ।
ಶಿಶುಗಳಲ್ಲಾ ಕೇಳಿರೈ ಸಲೆ ।
ಸಸಿದ ತಲೆಗಳು ಮುಸುಕಿತಭ್ರದ್ಯೋತ ಮಂಡಲವ ॥
ಬಸಿದು ಬಿದ್ದ ಕದಂಬದಲಿ ಹೆಣ ।
ವಿಸರವಾದುದು ನೆಲವಿದೆಲ್ಲಿಯ ।
ವಿಷಮ ವೀರರೊ ಮಝು ಎನುತ ಮಾರೀಚ ಬೆರಗಾದ ॥೧೪॥

ಇವರಿದಾರೋ ಶಕ್ರ ಶಿಖಿ ಯಮ ।
ಪವನ ಧನದೇಶಾನರೊಳಗೀ ।
ಹವಣಿನಘಟರ ಕಾಣೆನಾಹವದಂಗ ಲೇಸೆನುತ ॥
ರವಿಯ ಬಿಂಬಕೆ ಲಂಬಿಸುವ ರಾ ।
ಹುವಿನವೋಲು ಸುಬಾಹು ಕಲಿ ರಾ ।
ಘವನ ಸರಿಸದೊಳೌಕಿ ಕರೆದನು ಸರಳ ಸರಿವಳೆಯ ॥೧೫॥

(೧೩) ಕವಕವಿಸಿ—ಕಿಲಕಿಲನೆ, ಸವರಿದರು—ಕತ್ತರಿಸಿದರು, ಸವ್ಯ-ಎಡ, ಅಪಸವ್ಯ—ಬಲ, ಔಕುವ—ಒತ್ತಿಬರುವ, ಕವತೆ—ಬಾಚುವುದು, ಅಪಹರಿಸುವುದು; ಲಯಭೈರವ—ಪ್ರಳಯಕಾಲದ ರುದ್ರ, ಕಾಲ್ದುಳಿ—ಕಾಲ ತುಳಿತ, ಕಲಿಕೆ—ಚಾತುರ್ಯ, ರಣರಸ—ಯುದ್ಧಾಸಕ್ತಿ.

(೧೪) ಮಾಯಾಶಿಶುಗಳಲ್ಲಾ—ಮಾಯಾಶಿಶುಗಳಲ್ಲವೇ?, ಸಸಿದ—ಕತ್ತರಿಸಿದ, ಅಭ್ರದ್ಯೋತ—ಸೂರ್ಯ, ಬಸಿದು—ಸೋರಿ, ಕದಂಬ—ಮಿಶ್ರ, ಹೆಣ ವಿಸರವಾದುದು—ಶವಮಯವಾಯ್ತು, ಇದೆಲ್ಲಿಯ ವಿಷಮ ವೀರರೊ—ಇವರು ಎಲ್ಲಿಂದಬಂದ ಕ್ರೂರರಾದ ಶೂರರೊ!, ಮಝು—ಭಲಾ!

(೧೫) ಶಿಖಿ—ಅಗ್ನಿ, ಧನದ—ಕುಬೇರ, ಹವಣಿನ—ಪ್ರಮಾಣವುಳ್ಳ(ಸಮವಾದ), ಅಘಟರು — ಪರಾಕ್ರಮಶಾಲಿಗಳು, ಅಂಗ — ರೀತಿ, ಲಂಬಿಸು — ಬಾಚಿಕೊಳ್ಳು, ಸುಬಾಹು—ಸುಬಾಹು ಎಂಬ ಹೆಸರಿನ ರಾಕ್ಷಸ, ಸರಿಸ—ಎದುರು, ಸರಳು—ಬಾಣ, ಸರಿವಳೆ—ಜಡಿಮಳೆ.

ತಪನ ಕುಲಜರು ಕೇಳಿರೈ ರಣ ।
ನಿಪುಣನಲ್ಲಾ ರಾಮನಾ ಕೋ ।
ಣಪನ ಕೋದಂಡವನು ಖಂಡಿಸಿದನು ಶರಾಳಿಯಲಿ ॥
ಕುಪಿತ ಖಳ ಬಳಿಕುಬ್ಬಿ ದಿವಿಜಾ ।
ಧಿಪತಿ ದತ್ತ ಮಹಾಯುಧದಲಾ ।
ಕಪಟ ನಾಟಕ ಸೂತ್ರಧಾರನನಿಟ್ಟು ಬೊಬ್ಬಿರಿದ ॥೧೬॥

ಭುಗಿ ಭುಗಿಲು ಭುಗಿಲೆಂದು ಭೋರ್ಗರೆ ।
ದುಗುಳಿದುದು ಬಲುಗಿಡಿಯುನುರಿ ನಾ ।
ಲಗೆಯು ನಿಗುರಿನಲಲಗುಗಳು ಬಳಿಕಾ ಮಹಾಯುಧವ ॥
ಬಗೆವನೇ ನಿಮ್ಮಯ್ಯ ನಗುತಾ ।
ಶುಗಸಖಾಸ್ತ್ರದಲರಿಯೆ ಕೈದುವ ।
ನಗಲಿಸುತ ಕೊಂಡಡರಿತಂಬರಕವನ ಮಸ್ತಕವ ॥೧೭॥

ದಿಂಡು ಗೆಡೆದುದು ನೆಲಕೆ ರಕ್ಕಸ ।
ದಿಂಡೆಯುನ ರೌಕುಳದ ರಕ್ತದ ।
ಮುಂಡವೀ ಕೌತುಕವನಾ ಮಾರೀಚ ದೂರದಲಿ ॥
ಕಂಡು ತಾಪಸ ವೇಷವನು ಕೈ ।
ಕೊಂಡು ಕೊಲೆಗಂಘವಿಸಿ ಕದನೋ ।
ದ್ದಂಡ ರಾಮನ ಬಳಿಗೆ ಬಂದನು ದೈನ್ಯಭಾವದಲಿ ॥೧೮॥

(೧೬) ತಪನ—ಸೂರ್ಯ, ಕೋಣಪ—ರಾಕ್ಷಸ, ಕುಪಿತ—ಕೋಪಿಷ್ಠನಾದ, ದಿವಿಜಾಧಿಪತಿ—ಇಂದ್ರ,(?) ಕಪಟ ನಾಟಕ ಸೂತ್ರಧಾರ—ಮೋಸದ ನಾಟಕವನ್ನು ನಡೆಯಿಸುವವನು, ವಿಷ್ಣು.

(೧೭) ನಿಗುರು—ಉಬ್ಬು, ಅಲಗು—ಬಾಣ, ಬಗೆವನೇ-ಲಕ್ಷ್ಯಮಾಡುವನೇ? ಆಶುಗಸಖಾಸ್ತ್ರ—ಆಶು—ಬೇಗನೆ, ಗ—ಸಂಚರಿಸುವವನು (ವಾಯು), ಅವನ, ಸಖ—ಸ್ನೇಹಿತ(ಅಗ್ನಿ), ಅವನ, ಅಸ್ತ್ರ—ಬಾಣ (ಅಗ್ನೇಯಾಸ್ತ್ರ); ಅರಿಯೆ—ಕತ್ತರಿಸಲು, ಕೈದು—ಆಯುಧ, ಅಗಲಿಸುತ—(ಶರೀರದಿಂದ) ಬೇರೆ ಮಾಡುತ್ತ, ಕೊಂಡು, ಅಡರಿತು—ಏರಿತು.

(೧೮) ದಿಂಡುಗೆಡೆ—ಕತ್ತರಿಸಿ ಬೀಳು, ರಕ್ಕಸ ದಿಂಡೆಯು—ಕೊಬ್ಬಿದ ರಾಕ್ಷಸ, ರೌಕುಳ—ಭಯಂಕರ, ಕೌತುಕ—ಆಶ್ಚರ್ಯ, ಅಂಘವಿಸು—ಉದ್ದೇಶಿಸು, ಕದನೋದ್ದಂಡ—ಯುದ್ಧದಲ್ಲಿ ನಿಪುಣ.

ಕಾದುಕೊಳ್ಳೈ ರಾಜಸೂನು ಮ ।
ಹಾ ದಯಾಂಬುಧಿ ರಕ್ಷಿಸೈ ಕರು ।
ಣೋದಯನೆ ವಿಪ್ರಪ್ರಿಯನೆ ಧಾರ್ಮಿಕನೆ ಗುಣಯುತನೆ ॥
ಈ ದುರುಳ ದೈತೇಯರಸುಗೊಳ ।
ಲೈದೆ ಬರುತಿಹರೆಂದು ಬಹ ಮಾ ।
ಯಾ ದುರಾತ್ಮನ ಕಂಡು ಮುನಿ ಕಾಕುತ್ಸ್ಥಗಿಂತೆಂದ ॥೧೯॥

ತೊಡು ಮಹಾಸ್ತ್ರವನಿವಗೆ ಕಪಟದ ।
ತೊಡಹದವನಿವ ವಿಪ್ರನಲ್ಲಿವ ।
ಮೃಡ ಸರೋಜ ಭವಾದ್ಯರನು ಲೆಕ್ಕಿಸುವನಲ್ಲ ಕಣಾ ॥
ಕೆಡಹುವನು ಮಾಯೆಯಲಿ ಮಲೆತು ।
ಗ್ಗಡದ ವೀರರನಿವನ ತಲೆಯನು ।
ಕಡಿದು ಹಾಯ್ಕೆಂದೊದರಿದನು ಬೇಗದಲಿ ಮುನಿನಾಥ ॥೨೦॥

ಆದರೆಯು ಬಾಹ್ಯವನು ಮರೆಗೊಂ।
ಡೈದಿದರ ವಧಿಸುವುದು ಲೌಕಿಕ ।
ವೈದಿಕದ ಮತವಲ್ಲ ಮನುಕುಲದವರ ಪಥವಲ್ಲ ॥
ಹೋದ ಮೆಯ್ಯಲಿ ಹೋಗಲೆನುತ ಕೃ ।
ಪೋದಯನು ನಗುತನಿಲ ಶರದಿಂ ।
ದೂಧಿದನು ಜಲನಿಧಿಯ ತೆಂಕಣ ತೀರಕಾ ಖಳನ ॥೨೧॥

(೧೯) ಸೂನು—ಮಗ, ಕರುಣೋದಯ—ದಯಾಶಾಲಿ, ದೈತೇಯ—ರಾಕ್ಷಸ, ಅಸುಗೊಳಲು—ಪ್ರಾಣವನ್ನಪಹರಿಸಲು, (ಕೊಲ್ಲಲು).

(೨೦) ಇವಗೆ, ಮಹಾಸ್ತ್ರವನು, ತೊಡು, ತೊಡಹದವನು—ವೇಷಧಾರಿಯವನು, ಮೃಡ—ಈಶ್ವರ, ಮಲೆತು—ಗರ್ವವನ್ನು ಹೊಂದಿ, ಒದರು—ಕೂಗಿಹೇಳು.

(೨೧) ಬಾಹ್ಯವನು ಮರೆಗೊಂಡು—ಹೊರಗಿನ ರೂಪವನ್ನು (ಸ್ವಸ್ವರೂಪವನ್ನು) ಮರೆಮಾಚಿ, ಅನಿಲಶರ—ವಾಯುವ್ಯಾಸ್ತ್ರ, ತೆಂಕಣ—ದಕ್ಷಿಣದಿಕ್ಕಿನ.

ಬಳಿ ಸರಳ ಸಂಧಾನದಲಿ ಬಳಿ ।
ಕುಳುಕಲಿನ ರಕ್ಕಸರ ಜವ ಪುರ।
ದೊಳಗೆ ಹೊಗಿಸಿದನೊಡನೆ ಹವ್ಯ ಸುಭೋಜನಕೆ ಸುರರ ॥
ನಿಲಿಸಿದನು ನಿರ್ವಿಘ್ನದಲಿ ಮುನಿ ।
ತಿಲಕನಧ್ವರ ಸಾಂಗವಾದುದು ।
ಸುಲಭವಾಯ್ತವಭೃಥ ಮಹೋತ್ಸವವಾ ಮುನೀಂದ್ರಂಗೆ ॥೨೨॥

ಮುನಿಗಳುತ್ಸಾಹಿಸಿದರಬುಜಾ ।
ಸನ ಹರೇಂದ್ರಾದಿಗಳು ಜಯ ಜಯ ।
ನಿನದದಲಿ ಸೂಸಿದರು ಸುಮ್ಮಾನದಲಿ ಹೂ ಮಳೆಯ ॥
ತನು ಪುಳಕದುಬ್ಬುಗಳ್ಳಲಾಲಿಂ।
ಗನವ ಮಾಡಿದನೊಲಿದು ತೊರವೆಯ ।
ವಿನುತ ವೀರಾಗ್ರಣಿಯ ವಿಶ್ವಾಮಿತ್ರ ಮುನಿರಾಯ ॥೨೩॥

(೨೨) ಬಳಿ ಸರಳ—ಜೊತೆಯಲ್ಲಿದ್ದ (ಮತ್ತೊಂದು) ಬಾಣದ, ಉಳುಕಲಿನ — ಮಿಕ್ಕ, ಅವಭೃಥ—ಯಜ್ಞದ ಕೊನೆಯಲ್ಲಿ ಮಾಡಬೇಕಾದ ಸ್ನಾನ.

(೨೩) ಅಬುಜಾಸನ—ಬ್ರಹ್ಮ, ನಿನದ—ಧ್ವನಿ, ಸುಮ್ಮಾನ—ಸಂತೋಷ, ಉಬ್ಬು—ಹೆಚ್ಚಿಕೆ

# ಹನ್ನೆರಡನೆಯ ಸಂಧಿ

ಸೂಚನೆ॥ ನೆರೆದರಖಿಳ ದಿಗಂತದವನೀ।
ಶ್ವರರು ವಿಶ್ವಾಮಿತ್ರ ಮುನಿ ರಘು।
ವರರು ಸಹಿತೈತಂದನವನಿಜೆಯ ಸ್ವಯಂವರಕೆ॥

ಕೇಳಿದೈ ಕುಶ ಬಳಿಕ ರಘುನೃಪ।
ಬಾಲಕರಿಗಾ ಕುಶಿಕ ನಂದನ।
ಕೋಲ ಗುರುವಾದನು ಕಣಾ ಕೇಳೈ ಕುಶಾನುಜನೆ॥
ಭಾಳನೇತ್ರನ ವರದಿ ಗರುಡಿಯ।
ಜಾಳಿಯೆನಿತುಂಟನಿತನಿವರಲಿ।
ಮೇಳವಿಸಿದನು ಮೇಲೆ ತಿಂಗಳು ದಿವಸಕೀ ಮುನಿಪ ॥೧॥

ಕಲಿತರಿವರಾ ಮುನಿಯ ಶಿಕ್ಷೆಯ।
ಸುಲಭತೆಯಲಖಿಳಾಸ್ತ್ರ ಶಸ್ತ್ರದ।
ವಿಲಸದಭಿರಂಜನೆಯನಲ್ಲಿಂ ಮೇಲೆ ಮುನಿಪತಿಯ॥
ಬಳಿಗೆ ಬಂದರು ಜನಕ ಭೂಪನ।
ಬಳಿಯ-ಮಣಿಹಾರರು ಮಹಾ ಮಂ।
ಗಳೆಯ ವಿಮಳ ವಿವಾಹ ಪತ್ರಿಕೆ ಸಹಿತ ವಹಿಲದಲಿ ॥೨॥

ಪರಮ ಹರುಷದಲಾ ಮುನಿಪನಾ।
ದರಿಸಿ ಬಳಿಕ ವಿದೇಹ ಭೂಪನ।
ಚರರ ಕಳುಹಿಸಿ ಮನದೊಳನುವರಿಸಿದನು ಜಾನಕಿಯ॥

ಸೂ॥ ಅಖಿಳ ದಿಗಂತದ—ಎಲ್ಲದಿಕ್ಕುಗಳ ಕೊನೆಯ ವರೆಗೂ ಇರುವ, (ಸಮಸ್ತ ದೇಶಗಳ), ಅವನಿಜೆ—ಸೀತಾದೇವಿ.

(೧) ಕುಶಿಕ ನಂದನ—ವಿಶ್ವಾಮಿತ್ರನು, ಕೋಲ ಗುರು—ಬಾಣದ ಗುರು (ಧನುರ್ವಿದ್ಯಾಶಿಕ್ಷಕ), ಭಾಳನೇತ್ರ—ಈಶ್ವರ, ಗರುಡಿ—ಖುರಳಿ(ಸಂ.), ಜಾಳಿ—ಸಾಧನೆಯ ವರಸೆ, ಮೇಳವಿಸು—ಕೂಡಿಸು, (ಹೇಳಿಕೊಡು).

(೨) ಅಭಿರಂಜನೆ—ಮೆಚ್ಚಿಸುವಿಕೆ, ಅಲ್ಲಿಂಮೇಲೆ—ಆಮೇಲೆ, ಮಣಿಹಾರ—ರಾಜದೂತ, ವಹಿಲ—ಬೇಗ.

(೩) ಅನುವರಿಸು—ಸಂಕಲ್ಪಮಾಡು, ನರ ಚರಿತ್ರದ—ಮನುಷ್ಯರಂತೆ ನಡೆವಳಿ

ನರ ಚರಿತ್ರದ ರಾಮಚಂದ್ರಗೆ ।
ಪರಿಣಯುವ ಮಾಳ್ಪುಜ್ಜುಗವ ನಿ ।
ರ್ಧರಿಸಿ ಪಯಣೋದ್ಯೋಗ ಮನನಾದನು ಸರಾಗದಲಿ ॥೩॥

ಶುಭ ಮುಹೂರ್ತದೊಳಾ ತಪೋಧನ ।
ವಿಭು ಸರಾಗದಲರ್ಕ ವಂಶ ।
ಪ್ರಭವರೊಳಗೊಡಗೂಡಿ ಹೊರವಂಟನು ನಿಜಾಶ್ರಮುವ ॥
ಇಭ ಶರಭ ಶಾರ್ದೂಲ ಹರಿ ಸೈ ।
ರಿಭ ಕುರಂಗ ವರಾಹ ಸೇವಿತ ।
ದಭಿನವದ ಕಾನನವ ಕಳಿದೈದಿದರು ಕೌಶಿಕೆಯ ॥೪॥

ಆ ಮಹಾನದಿ ಮೆರೆದುದುಭಯುದ ।
ಸೀಮೆಗಳನೊದೆದುರು ತರಂಗ ।
ಸ್ತೋಮುದುಬ್ಬರದಬ್ಬರದ ಸಲಿಲ ಪ್ರವಾಹದಲಿ ॥
ತಾಮರಸ ಕಲ್ಹಾರ ಕೈರವ ।
ಕೋಮಲ ದ್ರುಮ ಷಂಡ ಗುಲ್ಮ ಲ ।
ತಾ ಮರಾಳ ರಥಾಂಗ ಬಕ ಕಾರಂಡ ಶೋಭೆಯಲಿ ॥೫॥

ಕೇಳಿದರೆ ಹೇಳಿದನು ಮುನಿ ಮುಖ ।
ಪಾಲಕಂಗೆ ತದೀಯ ನದಿಯ ಸು ।
ಮೂಲ ಚರಿತದ ಸಂಗತಿಯ ಕುಶಿಕ ಕ್ಷಿತೀಶ್ವರನ ॥

ಯುಳ್ಳ, ಪರಿಣಯು—ಮದುವೆ, ಉಜ್ಜುಗ—ಉದ್ಯೋಗ(ಸಂ.)—ಪ್ರಯತ್ನ, ಸರಾಗದಲಿ—ಪ್ರೀತಿಯಿಂದ.

(೪) ತಪೋಧನ ವಿಭು—ಋಷಿಶ್ರೇಷ್ಠ, ಪ್ರಭವ—ಹುಟ್ಟಿದವನು, ಇಭ—ಆನೆ, ಶಾರ್ದೂಲ—ಹುಲಿ, ಹರಿ—ಸಿಂಹ, ಸೈರಿಭ—ಕಾಡುಕೋಣ, ಕುರಂಗ—ಜಿಂಕೆ, ವರಾಹ—ಹಂದಿ, ಸೇವಿತದ—ಆಶ್ರಯುವಾದ (ಹಕ್ಕೆ), ಕೌಶಿಕೆ—ಕೌಶಿಕಾ ನದಿ

(೫) ಉಭಯುದ ಸೀಮೆ—ನದಿಯ ಎರಡು ದಡಗಳ ಎಲ್ಲೆ, ತಾಮರಸ—ಕಮಲ, ಕಲ್ಹಾರ—ಸೌಗಂಧಿಕಾ ಪುಷ್ಪ, ಕೈರವ—ಬಿಳಿಯ ಕಮಲ, ದ್ರುಮ ಷಂಡ—ಮರಗಳ ಗುಂಪು, ಗುಲ್ಮ—ಪೊದರು, ಮರಾಳ—ಹಂಸ, ರಥಾಂಗ—ಚಕ್ರವಾಕ, ಕಾರಂಡ—ನೀರ ಹಕ್ಕಿ.

(೬) ಮುಖ ಪಾಲಕ—ಯಜ್ಞರಕ್ಷಕನಾದ ರಾಮ, ತದೀಯ ನದಿ—ಆನದಿ, ಮೂಲ

ಸ್ಥೂಲ ವಂಶ ಪರಂಪರೆಯು ಭೂ ।
ಪಾಲಕರ ಜನನವನು ತನ್ನಾವಿ ।
ಶಾಲ ಚರಿತವನಾ ನದಿಯನುತ್ತರಿಸಿದನು ಬಳಿಕ ॥೬॥

ಕ್ಷೋಣಿಜಾಸುತ ಕೇಳು ವಿಪಿನ ।
ಶ್ರೇಣಿಗಳ ಕೆಲ ಕೆಲವ ಕಳೆದ ।
ಕ್ಷೀಣ ಶೌರ್‍ಯರು ಸಹಿತ ಬರೆ ಮುಂದೊಂದು ತಾಣದಲಿ ॥
ಸ್ಥಾಣು ವಿಕಟ ಜಟಾ ಕಲಿತ ಗೀ ।
ರ್ವಾಣ ನದಿಗೆಣೆಯೆನಿಪ ನಿರುಪಮ ।
ಶೋಣ ಭದ್ರೆಯ ಕಂಡು ಕೌಶಿಕ ಮುನಿಯ ಬೆಸಗೊಂಡ ॥೭॥

ಈ ವಿಪುಳ ನದ ರಾಜನನ್ವಯ ।
ವಾವುದೆನೆ ಕೌಶಿಕಿಗೆ ಗಂಡನು ।
ಭಾವನೆಮಗಹನೀ ತರುಣಿ ನದಿಯಾಗೆ ನದನಾದ ॥
ದೇವ ರಾಘವ ಕೇಳೆನುತ ಮುನಿ ।
ನಾವೆಯಿಂದುತ್ತರಿಸಿ ಹಲವು ವ ।
ನಾವಳಿಯ ಕಳೆದೈದಿದರು ಗಂಗಾ ತರಂಗಿಣಿಯ ॥೮॥

ಶ್ರುತಿ ಸಮಾಜ ತರಂಗಮಯ ಪೂ ।
ರಿತ ಸುಧೋಪಮ ಸಲಿಲ ಸಂ ।
ಭೃತ ಸುಮುಕ್ತಾ ಫಲ ನಿಭೋತ್ಕರ ಸೈಕತಾಳಿಮಯ ॥

ಚರಿತ—ಪ್ರಾರಂಭದ ಕಥೆ, ಉತ್ತರಿಸು—ದಾಟು.

(೭) ಕ್ಷೋಣಿಜಾ ಸುತ—ಸೀತೆಯ ಮಗ, ವಿಪಿನ—ಕಾಡು, ಅಕ್ಷೀಣ—ಕೊರತೆಯಿಲ್ಲದ, ಸ್ಥಾಣು ವಿಕಟ ಜಟಾಕಲಿತ ಗೀರ್ವಾಣ ನದಿ—ಈಶ್ವರನ ಘೋರವಾದ ಜಡೆಯಿಂದ ಹುಟ್ಟಿಬಿಟ್ಟ ದೇವನದಿ (ಗಂಗೆ), ಎಣೆ—ಸಮಾನ.

(೮) ವಿಪುಳ—ವಿಸ್ತಾರವಾದ, ನದ ರಾಜ—ಶ್ರೇಷ್ಠವಾದ ಗಂಡು ನದಿ, ಅನ್ವಯ—ವಂಶ, (ಪಶ್ಚಿಮವಾಹಿನಿಯಾಗಿ ಹರಿದು ಪಶ್ಚಿಮ ಸಮುದ್ರಕ್ಕೆ ಸೇರುವ ನದಿಗೆ ನದವೆಂಬ ಸಂಜ್ಞೆ), ತರಂಗಿಣಿ—ನದಿ.

(೯) ಶ್ರುತಿ ಸಮಾಜ ತರಂಗಮಯ— ವೇದಸಮೂಹದಂತಿರುವ ಅಲೆಗಳಿಂದ ಕೂಡಿರುವುದರಿಂದಲೂ, ಪೂರಿತ ಸುಧೋಪಮ ಸಲಿಲ ಸಂಭೃತ — ತುಂಬಿರುವ ಅಮೃತದಂತಿರುವ ನೀರಿನಿಂದ ಕೂಡಿರುವುದರಿಂದಲೂ, ಸುಮುಕ್ತಾ ಫಲ ನಿಭೋತ್ಕರ ಸೈಕತಾಳಿಮಯ — ಮುತ್ತಿನ ರಾಶಿಯೆಂಬ ಮಳಲ ರಾಶಿಯಿಂದಲೂ, ಕೃತ ಜಗತಿ

ಕೃತ ಜಗತಿ ಪಾವನಮಯ ಪ್ರ ।
ಚ್ಯುತ ಭವಾಖಿಲ ದುರಿತಮಯ ಶೋ ।
ಭಿತೆಯ ಸುಮನಸ್ತುತೆಯ ಕಂಡನು ರಾಮ ಜಾಹ್ನವಿಯ ॥೯॥

ಹರಿಪದಾಬ್ಜ ಪರಾಗ ಪೂರಿತ ।
ಪರಿಮಳಾಲಂಕೃತೆಯ ಶಶಿ ಶೇ ।
ಖರ ಜಟಾ ತಟ ಪಟಲ ಪುಟ ಸಂಘಟಿತ ವಿಸ್ಫುಟೆಯ ॥
ಸುರ ನರೋರಗ ಭುವನ ಪಾವನ ।
ತರ ಚರಿತ್ರೆಯನಜ ನಿಜೋನ್ನತ ।
ಕರ ಕಮಂಡಲು ಮಂಡಿತೆಯ ಕಂಡನು ರಘು ಪ್ರಭವ ॥೧೦॥

ಎಲೆ ಮುನೀಶ್ವರ ನದಿಗಳೊಳಗ ।
ಗ್ಗಳದ ನದಿಯೆಂಬಂತೆ ಮತಿ ನೆರೆ ।
ನಿಲುಕುತಿದೆ ಚಿತ್ತದಲಿ ಮುನಿ ಕೇಳೀ ಮಹಾನದಿಯ ॥
ವಿಳಸದಭಿರಂಜಕದ ಜನನ ।
ಸ್ಥಳವಿಡಿದು ಬಂದಾ ಪ್ರಸಂಗವ ।
ತಿಳುಹ ಬೇಕೆನೆ ಬಳಿಕ ವಿಶ್ವಾಮಿತ್ರನಿಂತೆಂದ ॥೧೧॥

ಪಾವನಮಯ — ಲೋಕವನ್ನು ಪರಿಶುದ್ಧಮಾಡುತ್ತಿರುವುದರಿಂದಲೂ, ಪ್ರಚ್ಯುತ ಭವಾಖಿಲ ದುರಿತಮಯ—ನಾಶಮಾಡಲ್ಪಟ್ಟ ಸಂಸಾರದುಃಖವೇ ಮೊದಲಾದ ಪಾಪಗಳುಳ್ಳದ್ದರಿಂದಲೂ, ಶೋಭಿತೆಯ—ಪ್ರಕಾಶಮಾನಳಾದ, ಸುಮನಸ್ತುತೆಯ—ದೇವತೆಗಳಿಂದ ಹೊಗಳಿಸಿಕೊಳ್ಳುವ, ಜಾಹ್ನವಿಯ—ಗಂಗೆಯನ್ನು (ಜಹ್ನು ಋಷಿಯ ಕಿವಿಯಿಂದ ಹೊರಟುದು).

(೧೦) ಹರಿ......ಕೃತೆಯ—ವಿಷ್ಣುವಿನ ಪಾದ ಕಮಲದ ಧೂಳಿಯ ಸುವಾಸನೆಯಿಂದ ಅಲಂಕಾರವನ್ನು ಪಡೆದ, (ಗಂಗೆಯು ವಿಷ್ಣುವಿನ ಪಾದದಲ್ಲಿ ಹುಟ್ಟಿದಳೆಂದು ಪುರಾಣ ಪ್ರಸಿದ್ಧಿ), ಶಶಿ... . ವಿಸ್ಫುಟೆಯ—ಈಶ್ವರನ ಜಡೆಯ ಗುಂಪಿನಲ್ಲಿ ಸೇರಿ ಕಾಣಿಸಿಕೊಳ್ಳುವ, ಸುರ . ...ಚರಿತ್ರೆಯನು—ಮೂರುಲೋಕಗಳನ್ನೂ ಪರಿಶುದ್ಧಮಾಡುವ ನಡೆವಳಿಯುಳ್ಳ, ಅಜ......ಮಂಡಿತೆಯ—ಬ್ರಹ್ಮನ ಕೈಯಲ್ಲಿರುವ ಕಮಂಡಲುವಿನಲ್ಲಿ ಸೇರಿದ (ಗಂಗೆಯನ್ನು), ಉನ್ನತ— ಮೇಲಕ್ಕೆತ್ತಿದ.

(೧೧) ಮತಿ ನೆರೆ ನಿಲುಕುತಿದೆ—ನನ್ನ ಮನಸ್ಸಿಗೆ ಚೆನ್ನಾಗಿ ತೋರುತ್ತಿದೆ, ಜನನ ಸ್ಥಳವಿಡಿದು—ಹುಟ್ಟಿದ ಸ್ಥಳ ಮೊದಲ್ಗೊಂಡು(ಮೂಲದಿಂದ ಪ್ರಾರಂಭಮಾಡಿಕೊಂಡು).

ತರುಣ ಕೇಳಾದಿಯಲಿ ಸಗರನ ।
ಸಿರಿಗೆ ಸೇರದೆ ಶಕ್ರನಾ ಕ್ರತು ।
ತುರಗವನು ಕದ್ದೊಯ್ದು ಕಪಿಲ ಮುನೀಂದ್ರನೊತ್ತಿನಲಿ ॥
ಇರಿಸಿದನು ಪಾತಾಳದಲಿ ಬಳಿ ।
ಕರಸಿ ಕಂಡರು ಸಗರ ನಂದನ ।
ರುರಿಯಲದ್ದರು ಮುನಿಯ ಧಿಕ್ಕರಣೆಯ ವಿಘಾತಿಯಲಿ ॥೧೨॥

ಧಗಧಗಿಸಿದರುವತ್ತು ಸಾವಿರ ।
ಸಗರರನು ಸಂಸ್ಕಾರ ಮುಖದಲಿ ।
ತೆಗೆಯಲೋಸುಗ ತಪದಲಿದ್ದನು ಕಮಲಗರ್ಭಂಗೆ ॥
ಮಿಗೆ ಭಗೀರಥನಿಳುಹಿದನು ಸುರ ।
ಜಗತಿಯಿಂ ಪಾತಾಳಕೀ ತ್ರೈ ।
ಜಗಕೆ ಮಾತೆ ಕಣಾ ಹರೀಶ ವಿಧಾತೃ ಹೊರತಾಗಿ ॥೧೩॥

ರಾಮ ಕೇಳೀ ವ್ಯೋಮ ನದಿಯ ಮ ।
ಹಾ ಮಹಿಮೆಗವಧಿಯನು ಕಾಣೆನು ।
ಸೋಮಧರನೇ ಬಲ್ಲನಲ್ಲದೆ ಬೇರೆ ಮಾತೇನು ॥
ಕಾಮಿಸಿದ ಫಲವಹುದು ನೆನೆದರಿ ।
ಗೀ ಮರುತ್ಪಥಗಾಮಿನಿಯನೆನು ।
ತಾ ಮುನಿಪ ಬರೆ ಸೊಗಸಿದುದು ಸುಮತಿಯ ಜನಸ್ಥಾನ ॥೧೪॥

(೧೨) ಶಕ್ರನು—ಇಂದ್ರನು, ಸಗರನ ಸಿರಿಗೆ, ಸೇರದೆ—ಸೈರಿಸದೆ, ಕ್ರತು ತುರಗ—ಯಜ್ಞದ ಕುದುರೆ, ಒತ್ತಿನಲಿ—ಪಕ್ಕದಲ್ಲಿ, ಅದ್ದರು—ಮುಳುಗಿದರು, ಧಿಕ್ಕರಣೆಯ ವಿಘಾತಿ—ತಿರಸ್ಕರಿಸಿದುದರಿಂದುಂಟಾದ ಕೇಡು.

(೧೩) ಸಂಸ್ಕಾರ ಮುಖದಲಿ—ಉತ್ತರ ಕ್ರಿಯಾ ಪೂರ್ವಕವಾಗಿ, ಕಮಲ ಗರ್ಭಂಗೆ—ಬ್ರಹ್ಮನನ್ನು ಕುರಿತು, ತಪದಲಿದ್ದನು—ತಪಸ್ಸುಮಾಡುತ್ತಿದ್ದನು, ಸುರ ಜಗತಿ—ದೇವ ಲೋಕ, ವಿಧಾತೃ—ಬ್ರಹ್ಮ.

(೧೪) ವ್ಯೋಮ—ಆಕಾಶ, ಅವಧಿ—ಪಾರ, ಎಲ್ಲೆ, ಮಿತಿ; ಸೋಮಧರ—ಈಶ್ವರ, ಮರುತ್ಪಥ ಗಾಮಿನಿ—ಆಕಾಶದಲ್ಲಿ ಹರಿವ ನದಿ, (ಗಂಗೆ); ಸೊಗಸಿದುದು—ಸೊಗಸಾಗಿ ಕಂಡುಬಂದಿತು, ಜನಸ್ಥಾನ—ದಂಡಕಾರಣ್ಯದ ಒಂದುಭಾಗದ ಹೆಸರು.

ನಗರವಿದು ತಾನಾರದೆಂದಾ ।
ಗಗನ ಮಣಿ ಕುಲ ಕೇಳಿ ಹೇಳಿದ ।
ನಘ ವಿದೂರಕನರಿಯುಮಾನ್ವಯದರಸು ಸೃಂಜಯನ ॥
ನಗರವಿದು ತಾ ರಾಮ ಕೇಳೀ ।
ನಗರದಧಿಪತಿ ದಶರಥನ ದಾ ।
ಯಿಗನು ಧರೆಯಿದು ನಮಗೆ ಸಲುವುದೆನುತ್ತ ನಡೆತಂದ ॥೧೫॥

ನೋಡುತಾ ನಗರವನು ಮಿಗೆ ಕೊಂ ।
ಡಾಡುತಾ ರಾಷ್ಟ್ರವನು ಪಥಿಕರು ।
ಗೂಡಿ ಬರುತಿರೆ ಕಾಣಿಸಿದುದಾಶ್ರಮವು ಗೌತಮನ ॥
ಮೂಡದಬುಜದ ಸರಸಿಯಂತಿನ ।
ನಾಡದಂಬರದಂತೆ ಜೋಕೆಯ ।
ಜೋಡೊಡೆದ ವ್ರತದಂತೆ ಬನವಿರೆ ಕಂಡು ಬೆಸಗೊಂಡ ॥೧೬॥

ಇದು ಕಣಾ ರಘುನಾಥ ಕೇಳ್ ಪೂ ।
ರ್ವದಲಿ ಗೌತಮನೆಂಬ ಮುನಿಪನ ।
ಸದನವಾ ಮುನಿಸತಿಗೆ ಮನವಿಕ್ಕಿದನು ಸುರನಾಥ ॥
ಮದನನಾಗೊಳ್ಳಿದನು ಸಂಭೋ ।
ಗದಲಿ ಸಿಲುಕಿದನಿಂದ್ರನಾತನ ।
ಸದೆದುದೀ ಮುನಿಶಾಪ ರೂಪಾಯ್ತಂಗವಬಲೆಯರ ॥೧೭॥

ಪರವಧೂ ವ್ಯಸನದಲಿ ಕೆಡರಾ ।
ರರಸ ರಾಘವ ಕೇಳು ಕೆಟ್ಟುದು ।
ಪುರುಷತನವಿಂದ್ರಂಗಹಲ್ಯಾದೇವಿ ಶಿಲೆಯಾಗಿ ॥

(೧೫) ಗಗನ ಮಣಿ—ಸೂರ್ಯ, ಅಘ—ಪಾಪ, ಅರಿಯುಮ—ಆರ್ಯಮಾ(ಸಂ.) ಸೂರ್ಯ, ದಾಯಿಗ—ಜ್ಞಾತಿ, ಸಲುವುದು—ಸೇರುವುದು.

(೧೬) ಪಥಿಕರುಗೂಡಿ — ಪ್ರಯಾಣಿಕರೊಡನೆ ಸೇರಿ, ಮೂಡದಬುಜದ — ಕಮಲವು ಹುಟ್ಟದಿರುವ, ಇನನಾಡದ — ಸೂರ್ಯನು ಸಂಚರಿಸದ, ಜೋಕೆಯ ಜೋಡೊಡೆದ—ನಿಯಮವನ್ನನುಸರಿಸದ.

(೧೭) ಸದನ-ವಾಸಸ್ಥಾನ (ಆಶ್ರಮ), ಆರ್ಗೆ—ಯಾರಿಗೆ ತಾನೆ, ಈ ಮುನಿ ಶಾಪ ಆತನ ಸದೆದುದು—ಗೌತಮನ ಶಾಪವು ಇಂದ್ರನನ್ನು ಹೊಡೆಯಿತು, ರೂಪು— (ಇಂದ್ರನ) ಆಕೃತಿಯು, ಅಬಲೆಯರ ಅಂಗವಾಯ್ತು.

(೧೮) ಪ್ರಸ್ತರ—ಕಲ್ಲು, ಆ ಸತಿ ಇದೀಗ ಆ ಪ್ರಸ್ತರವು, ರಾಮಾಂಘ್ರಿ ರಜವು—

ಧರಿಸಿದಳು ನಿಜತನುವನಾ ಪ್ರ ।
ಸ್ತರವಿದೀಗಾ ಸತಿಯೆನುತ ಹ ।
ತ್ತಿರಕೆ ಬರೆ ರಾಮಾಂಘ್ರಿ ರಜವಾವರಿಸಿತಾ ಶಿಲೆಯ ॥೧೮॥

ಗುರು ಕಟಾಕ್ಷ ನಿರೀಕ್ಷೆಯಲಿ ದು ।
ಸ್ತರ ಭವಾಂಬುಧಿಯರೆವವೋಲೀ ।
ಖರಕಿರಣನೀಕ್ಷಣದೊಳಡಗುವ ತಿಮಿರ ಲತೆಯಂತೆ ॥
ಪರಮ ಪುರುಷನ ದೃಷ್ಟಿಪಾತದೊ ।
ಳಿರದೆ ಸಂಚಿತ ಸಕಲ ದುಷ್ಕೃತ ।
ಹರಿದುದಿಸಿದಳು ಶಿಲೆಯ ಮಧ್ಯದೊಳಬಲೆ ಗೌತಮನ ॥೧೯॥

ನರ ವಿನೋದ ವಿಚಿತ್ರ ಲೀಲಾ ।
ಚರಿತ ವಿಷ್ಣು ತ್ರಾಹಿ ವಿಶ್ವಂ ।
ಭರ ಭವಾರಿ ತ್ರಾಹಿ ಸರ್ವೇಶ್ವರ ಶಿವ ತ್ರಾಹಿ ॥
ಕ್ಷರ ರಹಿತನಕ್ಷಯನನಾಹತ ।
ಹರ ವಿರಿಂಚಾತ್ಮಕ ಪರಾಪರ ।
ಪರಮ ಗುಣನಿಧಿ ಜಯ ಜಯೆಂಧೆರಗಿದಳು ಚರಣದಲಿ ॥೨೦॥

ನೆನೆದೊಡಖಿಳ ಭವಾಂತರಂಗಳ ।
ನೆನೆಯ ಬಾರದ ಘೋರಪಾತಕ ।
ಜಿನುಗುವುದು ತಾನೆಂಬ ಶ್ರುತಿಮತ ಸಿದ್ಧವಾದುದಲಾ ॥

**ರಾಮನ ಪಾದಧೂಳಿ.**

(೧೯) ದುಸ್ತರ—ದಾಟಲಸಾಧ್ಯ, ಭವಾಂಬುಧಿ—ಸಂಸಾರವೆಂಬ ಸಮುದ್ರ, ಭವವೇ+ಅಂಬುಧಿ (ಅವ. ಪೂರ್ವ. ಕ.), ಅರೆವ—ಬತ್ತುವ, ಖರಕಿರಣ—ತೀಕ್ಷ್ಣವಾದ ಕಿರಣವುಳ್ಳವನು (ಸೂರ್ಯ), ಈಕ್ಷಣ—ನೋಟ, ತಿಮಿರ ಲತೆ—ಕತ್ತಲೆಯೆಂಬ ಬಳ್ಳಿ, ದೃಷ್ಟಿಪಾತ—ನೋಟದ ಬೀಳುವಿಕೆ, ಸಂಚಿತ—ಕೂಡಿಬಂದ.

(೨೦) ನರವಿನೋದ—ಮನುಷ್ಯರ ವಿನೋದಕ್ಕಾಗಿ, ತ್ರಾಹಿ—ಕಾಪಾಡು, ವಿಶ್ವಂಭರ—ಪ್ರಪಂಚವನ್ನೆಲ್ಲ ಹೊತ್ತುಕೊಂಡು ರಕ್ಷಿಸುತ್ತಿರುವವನು, ಭವಾರಿ—ಸಂಸಾರ (ದುಃಖಕ್ಕೆ) ಶತ್ರು, ಶಿವ—ಮಂಗಳಕರ, ಕ್ಷರ—ನಾಶ, ಅನಾಹತ—ಬಾಧಿಸಲ್ಪಡದವನು, ವಿರಿಂಚ—ಬ್ರಹ್ಮ, ಪರಾಪರ—ಶ್ರೇಷ್ಠನು ಮತ್ತು ಲೋಕವೆಲ್ಲಕ್ಕಿಂತಲೂ ಬೇರೆಯಾದವನು.

(೨೧) ಭವಾಂತರ—ಜನ್ಮಾಂತರ, ಜಿನುಗು—ಸೋರು (ನಾಶವಾಗು), ನೆನಹು-

ನೆನಹದಲ್ಲದೆ ನಿನ್ನ ಪದ ದರು ।
ಶನದ ಭಾಗ್ಯವು ತನ್ನೊಳಾದುದು ।
ಘನ ಮಹಿಮ ನಮೋಯೆನುತ ಕೈಮುಗಿದಿರ್ದಳಾ ಕಾಂತೆ ॥೨೧॥

ಲಲನೆಯಿೂಕೆಯುದಾರೆನಲು ಮುನಿ ।
ತಿಲಕ ಬಳಿಕಾ ಜ್ಞಾನಮಯ ನಿ ।
ರ್ಮಳ ಸದಾನಂದೈಕ ರೂಪಂಗಧಿಕ ಹರ್ಷದಲಿ ॥
ತಿಳುಹಿದನು ತತ್ಸತಿಯ ಶಕ್ರನ ।
ಕಲಷ ಕೃತ ಸಂಗತಿಯನಾವುದು ।
ಸುಲಭವಾಗದದುಂಟೆ ನಿನ್ನ ಕೃಪೋದಯದೊಳೆಂದ ॥೨೨॥

ಬಂದನಾ ಸಮಯದಲಿ ಗೌತಮ ।
ನಿಂದಿರೇಶನ ಮನುಜ ವೇಷನ ।
ಸಂದ ಸಮ್ಯಜ್ಞಾನ ಮುಖದಲಿ ನಮಿಸೆ ಬಳಿಕವರು ॥
ಒಂದು ಗೂಡಿ ಕೃತಾರ್ಥರವರಿ ।
ನ್ನೊಂದು ಕೌಶಿಕನವರನಾ ವನ ।
ಮಂದಿರದಲೇ ನಿಲಿಸಿ ಬಂದನು ಮಿಥಿಲೆಗೊಲವಿನಲಿ ॥೨೩॥

ಮುನಿಯ ಬರವನು ಕೇಳ್ದು ಮಿಥಿಲಾ ।
ವನಿಯ ಪತಿ ಮಹದುತ್ಸವದಲಾ ।
ಮುನಿಯ ನಿದಿರ್ಗೊಂಡೈದೆ ಸತ್ಕರಿಸಿದನು ಭಕ್ತಿಯಲಿ ॥
ತನುಜ ಕೇಳ್ಳೈ ಬಳಿಕ ಗೌತಮ ।
ತನುಜ ರಾಜ ಪುರೋಹಿತನು ತ ।
ಜ್ಜನಪಗೊರೆದನು ವಿಮಳ ವಿಶ್ವಾಮಿತ್ರ ಸಂಗತಿಯ ॥೨೪॥

ನೆನಹು, ಅದು ಅಲ್ಲದೆ, ನಮೋ—ನಮಸ್ಕಾರ.

(೨೨) ಅಜ್ಞಾನ......ರೂಪಂಗೆ — ಜ್ಞಾನ ನೈರ್ಮಲ್ಯ ಸಂತೋಷಗಳೇ ರೂಪವಾಗಿ ಉಳ್ಳವನಿಗೆ, ಕಲುಷ—ಪಾಪ.

(೨೩) ಇಂದಿರೇಶ—ಲಕ್ಷ್ಮೀಪತಿ (ರಾಮ), ಸಂದ—ಉಂಟಾದ, ಸಮ್ಯಜ್ಞಾನ—ತತ್ತ್ವಜ್ಞಾನ.

(೨೪) ಮಿಥಿಲಾವನಿಯ ಪತಿ—ಜನಕ, ಮಹದುತ್ಸವ — ಮಹಾತ್ಮರಿಗುಂಟಾಗುವ ಸಂತೋಷ, ರಾಜಪುರೋಹಿತ—ಶತಾನಂದ.

ವರ ವಸಿಷ್ಠ ವಿವಾದವನು ಭೂ ।
ವರ ಋಷೀಶ್ವರನಾದ ಬಹುಳಾ ।
ಶ್ಚರಿಯದುಗ್ರ ತಪಃ ಪ್ರಭಾವವನಾ ತ್ರಿಶಂಕುವಿಗೆ ॥
ಸುರಪುರವ ಬೇರಭ್ರದಲಿ ವಿ ।
ಸ್ತರಿಸಿದಾಖ್ಯಾನವನು ಜನಕಂ ।
ಗೊರೆದು ಕೊಂಡಾಡಿದನು ಕೌಶಿಕನನು ಶತಾನಂದ ॥೨೫॥

ಮುನಿಗೆ ಬೀಡಿಕೆಯಾಯ್ತು ಮಿಕ್ಕಿನ ।
ಮುನಿಗಳೈತಂದರು ಸಮಸ್ತಾ ।
ವನಿಯ ನೃಪರೊಗ್ಗಾಯ್ತು ವೈದೇಹ ನಗರದಲಿ ॥
ವಿನುತ ಮಖ ಮಂಟಪ ವಿರಾಜಿಸಿ ।
ತನುಪಮಾಧ್ವರ ಪರಿಕರದ ಸಾ ।
ಧನವ ಮೇಳೈಸಿದನು ದೀಕ್ಷಿತನಾದನಾ ಜನಕ ॥೨೬॥

ಕುಶನೆ ಕೇಳೈ ನಿಮ್ಮ ಮುತ್ತಯ ।
ದಶರಥನು ಮಾಡಿದ ಮಹಾಧ್ವರ ।
ದೆಸಕಕಿದು ಹೊಯ್‌ಕಯ್ಯೆನಲು ಮಾಡಿದನು ಸತ್ಕ್ರತುವ ॥
ಕುಶನನುಜ ಕೇಳ್ ನಿಮ್ಮ ಪಿತನ ।
ಶ್ವಶುರನಲ್ಲಿಂ ಮೇಲೆ ಯೌವನ ।
ದೆಸಕ ತಲೆದೋರಿದುದ ಕಂಡನು ನಿಮ್ಮ ಜನನಿಯಲಿ ॥೨೭॥

ನಾರದನ ಪೂರ್ವದ ವಚೋ ವಿ ।
ಸ್ತಾರದಾಭಿಪ್ರಾಯವರಿದು ಕು ।
ಮಾರಿಗುಚಿತೋದ್ವಾಹ ವೈಭವದಾ ಸ್ವಯಂವರಕೆ ॥

(೨೫) ಭೂವರ—ದೊರೆಯಾದ ವಿಶ್ವಾಮಿತ್ರನು, ಸುರಪುರವ ಬೇರಭ್ರದಲಿ—ಆಕಾಶದಲ್ಲಿ ಮತ್ತೊಂದು ಸ್ವರ್ಗವನ್ನು, ಆಖ್ಯಾನ—ಕಥೆ.

(೨೬) ಬೀಡಿಕೆ—ಬಿಡಾರ, ಒಗ್ಗು—ಸಮೂಹ, ಮಖ ಮಂಟಪ—ಯಜ್ಞಶಾಲೆ, ಪರಿಕರದ ಸಾಧನ—ಸಾಮಗ್ರಿಗಳ ಅನುಕೂಲ್ಯ, ಮೇಳೈಸು—ಕೂಡಿಸು.

(೨೭) ಮುತ್ತಯ—ತಂದೆಯ ತಂದೆ, ಎಸಕ—ಕಾರ್ಯ, ಹೊಯ್‌ಕಯ್—ಸಮಾನ, ಪಿತನ—ತಂದೆಯ, ಶ್ವಶುರಂ—ಮಾವನು,(ಜನಕನು); ಅಲ್ಲಿಂಮೇಲೆ—ಅದರ ಮೇಲೆ, ಎಸಕ—(ಕಾರ್ಯ), ಗುರುತು.

(೨೮) ಉಚಿತೋದ್ವಾಹ ವೈಭವದ—ಮದುವೆಗೆ ತಕ್ಕ ವಿಭವವುಳ್ಳ, ಭೂರಿ ಭುವ

ಭೂರಿ ಭುವನದ ಭಾಗಧೇಯದ ।
ಭೂರಮಣರನು ಬರಿಸಿದನು ಮಿತಿ ।
ಮೀರೆಯಿಲ್ಲದೆ ನೃಪರು ನೆರೆದರು ಜನಕ ನಗರಿಯಲಿ ॥೨೮॥

ಅಂಗ ಮರು ಕಾಂಭೋಜ ಸಿಂಧು ಕ ।
ಳಿಂಗ ಬರ್ಬರ ಚೀನ ಖೋಟ ತು ।
ರಂಗಮುಖ ಕರ್ಪರ ಕರೂಷ ವರಾಳ ನೇಪಾಳ ॥
ವಂಗ ಕೇಕಯ ಗೌಳ ಗುಜ್ಜರ ।
ಸಿಂಗಳಾಂಧ್ರ ದ್ರವಿಡ ಮುಖ್ಯ ಧ ।
ರಾಂಗನಾ ವಲ್ಲಭರು ಸಂದಣಿಸಿದರಸಂಖ್ಯಾತ ॥೨೯॥

ಪುರದ ಬಹಿರಾವರಣ ಸೀಮಾಂ ।
ತರದ ಸಂವೇಶದಲಿ ಬೀಡಾ ।
ಯ್ತರಸು ಮನ್ನೆಯ ಮಂಡಲೇಶ್ವರ ಸಾರ್ವಭೌಮರಿಗೆ ॥
ದೊರೆಗಳಿಗೆ ದೋರ್ವಳರಿಗವನೀ ।
ಸುರರಿಗಾ ವಿಟ್ ಶೂದ್ರ ಮೊದಲಾ ।
ದರಿಗೆ ಮಿಕ್ಕಿನ ವಿವಿಧ ವರ್ಣಾಶ್ರಮ ಜನಂಗಳಿಗೆ ॥೩೦॥

ನಗರವಿದ್ದುದು ಶರಧಿ ಸುತ್ತಿದ ।
ನಗದವೋಲ್ ನಾನಾ ದಿಗಂತದ ।
ಬಗೆಯ ಭಾರಿಯ ಬಹಳ ನರ ಸಾಗರದ ಮಧ್ಯದಲಿ ॥
ಸೊಗಸಿದುದು ಬಳಿಕಿತ್ತ ಜನಕನ ।
ಮಗಳ ವಿಮಳೋದ್ವಾಹ ವೈಭವ ।
ದೊಗುಮಿಗೆಯ ಸಂರಂಭದತಿಶಯಮಖಿಳ ರಚನೆಯಲಿ ॥೩೧॥

ನದ ಭಾಗಧೇಯದ—ಎಲ್ಲಾ ಪ್ರಪಂಚದ ಐಶ್ವರ್ಯಶಾಲಿಗಳಾದ.

(೨೯) ಧರಾಂಗನಾವಲ್ಲಭ—ದೊರೆ, ಅಸಂಖ್ಯಾತ—ಲೆಕ್ಕವಿಲ್ಲದಷ್ಟು.

(೩೦) ಬಹಿರಾವರಣ—ಹೊರಗಿನ ಪ್ರಾಕಾರ, ಸೀಮೆ—ಎಲ್ಲೆ, ಸಂವೇಶ—ಸನ್ನಿವೇಶ, ಬೀಡು—ವಾಸಸ್ಥಳ, ಮನ್ನೆಯ—ಮಾನ್ಯರಾದ, ಮಂಡಲೇಶ್ವರ—ದೇಶಾಧಿಕಾರಿ, ಸಾರ್ವಭೌಮ—ಚಕ್ರವರ್ತಿ, ದೋರ್ವಳ—ಭುಜಬಲವುಳ್ಳವರು (ಕ್ಷತ್ರಿಯ), ವಿಟ್—ವೈಶ್ಯ.

(೩೧) ನರಸಾಗರ—ಮನುಷ್ಯರೆಂಬ ಸಮುದ್ರ, ಉದ್ವಾಹ—ಮದುವೆ, ಒಗುಮಿಗೆಯ—ಹೆಚ್ಚಾದ, ಸಂರಂಭ—ಸಡಗರ.

# ಪರಿಪೂರನೆಯ ಸಂಧಿ

**ಸೂಚನೆ || ವಿರಚಿಸಿದರುದ್ವಾಹ ಶೋಭಾ |**

**ಕರದಲಂಕಾರದಲಿ ಮಿಥಿಲಾ |**

**ಪುರವನಖಿಳ ವಿಚಿತ್ರ ವಿಭವದ ವಿವಿಧ ರಚನೆಯಲಿ ||**

ಕೇಳಿದೈ ಕುಶ ನೆರೆದ ಪೃಥ್ವೀ |
ಪಾಲರಿಗೆ ವಿಪ್ರರಿಗೆ ಮಣಿಮಯ |
ದಾಲಯಂಗಳು ಸಮೆದುವೈಗಾವುದಗಳಳತೆಯಲಿ ||
ಕೇಳು ಲವ ತದ್ವಳಯದಲಿ ಪರಿ |
ಪಾಳಿಯಾಯ್ತುಳಿದಖಿಳ ಸೇನಾ |
ಜಾಲಕವರವರುತ್ತಮಾಧಮ ಮಧ್ಯಮಂಗಳಲಿ || ೧ ||

ಬಲಿದುದಸಿತಕೆ ಕೋಟೆ ಪರಿಘಾ |
ವಳಯ ರಚನೆಯಲಾಳುವೇರಿಯ |
ಹುಲಿಮುಖದ ಮುಗಿಲಟ್ಟಳೆಯ ಸಾಲುಗಳ ಸೊಗಸಿನಲಿ ||

**ಸೂ || ವಿರಚಿಸಿದರು - ಅಲಂಕರಿಸಿದರು, ಉದ್ವಾಹ ಶೋಭಾಕರದ - ಮದುವೆಯ ಕಳೆಯನ್ನು ತೋರ್ಪಡಿಸುವ.**

**(೧) ಸಮೆದುವು - ಕಟ್ಟಲ್ಪಟ್ಟುವು, ಐಗಾವುದ - ಐದು+ಗಾವುದ, ತದ್ವಳಯದಲಿ - ಅದರ ಬಳಿಯೊಳಗೆ, ಪರಿಪಾಳಿ - ಪರಿಪಾಟಿ (ಸಂ.) - ಕ್ರಮ.**

**(೨) ಬಲಿದುದು - ಕಟ್ಟಲ್ಪಟ್ಟಿತು, ಪರಿಘಾ ವಳಯ - ಅಗಳ್ತೆಯ ಸುತ್ತು, ಆಳುವೇರಿ - ಸ್ಥಳ್ಯ ಏರಿ, ಮುಗಿಲಟ್ಟಳೆ - ಮೋಡವನ್ನು ಮುಟ್ಟುವಂತೆ ತೋರುವ ಕೋಟೆಯ ಮೇಲಣ ಬುರುಜು, ಅಸದಳ - ಅಸಾಧ್ಯ.**

ಬಲು ಭಟರ ಕಾಹಿನಲಿ ಸುರರಿಗೆ |
ನಿಲುಕಲಸದಳವೆಂಬವೊಲ್ ಕಂ |
ಗೊಳಿಸಿದುದು ಬಳಿಕಾ ಸ್ವಯಂವರ ಭದ್ರ ಮಣಿ ಭವನ || ೨ ||

ರಚಿಸಿದರು ಬಳಿಕೆಡೆಗೆಡೆಗೆ ಮಣಿ |
ಖಚಿತ ದರ್ಪಣ ಕಲಶ ಕುಶಲೋ |
ಪಚಿತ ವಿದ್ರುಮ ವಿಳಸಿತಾಳಂಕಾರ ತೋರಣದಾ ||
ಪ್ರಚುರತರದುಪ್ಪರಿಗೆಗಳ ಹಿಮ |
ರುಚಿಯ ವೀಧಿಯ ಸೂರ್ಯ ವೀಧಿಯ |
ನಚಳ ಸಂಪದದಿಕ್ಕೆಯೆನೆ ಮಿಥಿಲಾ ಮಹಾಪುರದ || ೩ ||

ಗುಡಿಯ ಪಲ್ಲವ ಝಲ್ಲರಿಯ ಬೆಳು |
ಗೊಡೆಯ ಮಿಳಿರ್ವ ಪತಾಕೆಗಳ ಪರಿ |
ವಿಡಿಯ ಮುತ್ತಿನ ಸೂಸಕದ ಸಡಕುಗಳ ಸೀಗುರಿಯ ||
ಇಡಿದ ಮಣಿಮಯ ಕಲಶದಿಂದೆಸೆ |
ವೆಡ ಬಲದ ಸೌಧಗಳಲವನಿಯ |
ತೊಡಿಗೆಯೆನೆ ರಂಜಿಸಿತು ಪುರವಾ ಜನಕ ಭೂಪತಿಯ || ೪ ||

ಹೊರೆದ ಕತ್ತುರಿ ಸಾರಣೆಯ ನವ |
ಪರಿಮಳದ ಪನ್ನೀರ ಚಳೆಯದ |
ಪರಿಸರದ ಕುಂಕುಮದ ನಿಡುಗಾರಣೆಯ ಕಪ್ಪುರದ ||

ಕಾಹಿನಲಿ - ಕಾವಲಿನಿಂದ, ಕಂಗೊಳಿಸಿದುದು - ಪ್ರಕಾಶಿಸಿತು, ಭದ್ರ - ಮಂಗಳಕರವಾದ, ಭವನ - ಮನೆ.

(೩) ಕುಶಲೋಪಚಿತ - ಚಮತ್ಕಾರದಿಂದ ಕೂಡಿಸಲ್ಪಟ್ಟ, ವಿದ್ರುಮ - ಹವಳ, ಪ್ರಚುರತರ - ಪ್ರಕಟವಾಗಿ ತೋರುವ, ಹಿಮರುಚಿಯ ವೀಧಿಯ ಸೂರ್ಯವೀಧಿಯನು - ಉತ್ತರ ದಕ್ಷಿಣ ಮತ್ತು ಪೂರ್ವ ಪಶ್ಚಿಮವಾಗಿರುವ ದೊಡ್ಡ ಬೀದಿಗಳನ್ನು, ಹಿಮ ರುಚಿ - (ಮಂಜಿನ ಕಿರಣವುಳ್ಳವನು) - ಚಂದ್ರ, ಇಕ್ಕೆ - ನೆಲೆ.

(೪) ಗುಡಿ - ಧ್ವಜ, ಪಲ್ಲವ - ಚಿಗುರು, ಝಲ್ಲರಿ - ಝಾಲರು, ಬೆಳುಗೊಡೆ - ಬಿಳಿಯ ಕೊಡೆ, ಮಿಳಿರ್ವ - ಚಲಿಸುತ್ತಿರುವ, ಪರಿವಿಡಿ ಸಾಲು, ಸೂಸಕ - ಗೊಂಚಲು ಸಡಕು - ಧ್ವಜದ ತುದಿಯಲ್ಲಿಯ ಆಭರಣವಿಶೇಷ, ಸೀಗುರಿ - ಸಣ್ಣ ಚಾಮರ, ಇಡಿದ - ತುಂಬಿದ, ಸೌಧ - ಉಪ್ಪರಿಗೆ, ತೊಡಿಗೆ - ಒಡವೆ

(೫) ಹೊರೆದ - ಬಳಿದ, ಕತ್ತುರಿ - ಕಸ್ತೂರಿ (ಸಂ.), ಸಾರಣೆ - ಸಾರಿಸುವಿಕೆ, ಚಳೆಯ -

ಪರಿ ಪರಿಯು ಕಡೆ ಸಾಲ ಪರಿ ವಿ |
ಸ್ತರದ ಧೂಪದ ಧೂಮ ಗಂಧೋ |
ತ್ಕರ ಸಮುದ್ರದೊಳದ್ದನೊಲ್ಲದೆ ಪಥವ ಪವಮಾನ || ೫ ||

ಇಳಿದುದೋ ಸುರರಾಜ ಭವನ |
ಸ್ಥಳದ ಸಿರಿ ಸೀತಾ ವಿವಾಹೋ |
ಜ್ಜ್ವಲ ಮಹಾ ಮಂಟಪದ ರೂಪವ ಧರಿಸಿ ಧರೆಗೆನಲು ||
ಹೊಳೆವ ಹೇಮ ಸ್ತಂಭ ರಚಿತಾ
ಕಲಿತ ರತ್ನ ಪ್ರಭೆಯ ಚಂದ್ರೋ |
ಪಲದ ಭಿತ್ತಿಯಲೆಸೆದುದಭಿನವ ಭದ್ರ ಮಣಿ ಭವನ || ೬ ||

ಹೇಳಲೇನದ ಮಂಟಪದ ಚೌ |
ಮೂಲೆಯಗಲದ ಲಾಮಚದ ಬ |
ಲ್ಲಾಳದಡ್ಡಿಯ ಬಹಳ ರತ್ನ ವಿತಾನದುಪ್ಪರದ ||
ಮೇಲು ಕಟ್ಟಿನ ಮಲಯಜ ಸ್ತಂ |
ಭಾಳಿಗಳ ಮಣಿ ಪುತ್ರಿಕೆಯ ಸಂ |
ಭಾಳಿಯಲಿ ಸೊಗಸಿದುದು ಚಪ್ಪರವೆರಡು ಯೋಜನದ || ೭ ||

ಬಿಗಿದ ಬಿಂಗಾರಿಗಳ ಮಿಸುನಿಯ |
ಜಗಲಿಗಳ ಮರಕತದ ಸೋಪಾ |
ನಗಳ ಸುತ್ತಣ ಸಾಲಭಂಜಿಕೆಗಳ ವಿಳಾಸದಲಿ ||

ಚಿಮ್ಮುಕಿಸುವುದು, ಪರಿಸರ - ಸಮೀಪ, ಕುಂಕುಮ - ಕೇಸರಿ, ಕಡೆಸಾಲು - ಕೊನೆಯ ಸಾಲಿನ, ಸಿಡುಗಾರಣೆ - ಉದ್ದವಾಗಿ ಎಳೆದ ಗೆರೆ, ಕಪ್ಪುರ - ಕರ್ಪೂರ (ಸಂ.), ಧೂಮ..........ಪವಮಾನ - ಗಾಳಿಯು ಸುವಾಸನೆಯ ಭಾರವನ್ನು ಹೊರಲಾರದೆ ನೆಲವನ್ನು ಹತ್ತಿ ಬೀಸುತ್ತಿದ್ದಿತು (ಎಂದರೆ ಸುವಾಸನೆಯು ಅಷ್ಟು ಹೆಚ್ಚಾಗಿದ್ದಿತು). ಗಂಧೋತ್ಕರ - ವಾಸನೆಯ ಗುಂಪು, ಅದ್ದನು - ಮುಳುಗಿದನು, ಪಥ - (ಗಾಳಿ ಬೀಸುವ) ಮಾರ್ಗ, ಪವಮಾನ - ವಾಯು.

(೬) ಹೇಮ ಸ್ತಂಭ - ಚಿನ್ನದ ಕಂಭ, ರಚಿತಾಕಲಿತ - ಕೆತ್ತಿಸಿರುವುದರಿಂದ ಸೇರಿರುವ, ಚಂದ್ರೋಪಲ - ಚಂದ್ರಕಾಂತ ಶಿಲೆ, ಭಿತ್ತಿ - ಗೋಡೆ.

(೭) ಚೌಮೂಲೆ - ನಾಲ್ಕು ಮೂಲೆ, ಲಾಮಚ - ಲಾಮಂಚ, ಬಲ್ಲಾಳದಡ್ಡಿ - ತಡಿಕೆ, ವಿತಾನ - ಸಮೂಹ, ಉಪ್ಪರ - ಆಧಿಕ್ಯ, ಮಲಯಜ ಸ್ತಂಭ - ಶ್ರೀಗಂಧದ ಕಂಭ, ಪುತ್ರಿಕೆ - ಬೊಂಬೆ, ಸಂಭಾಳಿ - ಗುಂಪು.

(೮) ಬಿಂಗಾರಿ - ಭೃಂಗಾರು (ಸಂ.)—ಚಿನ್ನದ ಗಿಂಡಿ, ಮಿಸುನಿ - ಚಿನ್ನ, ಮರಕತ - ಪಚ್ಚೆ

ಸೊಗಸಿತಾ ಮಂಟಪ ಹಿಮಂತನ |
ಮಗಳ ಮದುವೆಯ ಮಂಟಪಕೆ ತಾಂ
ದ್ವಿಗುಣಮೆನೆ ತೊಳತೊಳಗಿ ಬೆಳಗುವ ಬಹಳ ತೇಜದಲಿ || ೮ ||

ಮಘಮಘಿಪ ಮಲಯಜದ ಸಾರದ |
ಸೊಗಯಿಸುವ ಸರಸಿಗಳ ಪನ್ನೀ |
ರುಗಳ ಹೊಕ್ಕರಣೆಗಳ ಸಾದು ಜವಾದಿ ಕತ್ತುರಿಯ ||
ಜಗಜಗಿಪ ಹೊಂಬೆಸೆದ ರಂಜಣಿ |
ಗೆಗಳ ನವ ಕರ್ಪೂರದ ತವಲಾ |
ಯಿಗಳ ತಿಂಥಿಣಿ ಮೆರೆದುದಲ್ಲಿಯ ಸುತ್ತು ವಳಯದಲಿ || ೯ ||

ತುಡುಕಿ ತೂಳುವ ಸೂತ್ರ ಯಂತ್ರದ |
ಗಡಣದಲಿ ಗತಿಗೊಂಡು ಬೇಡದೆ |
ಕೊಡುವ ಮಣಿ ಪುತ್ರಿಕೆಗಳೆಸೆದುವು ವಿವಿಧ ರಚನೆಯಲಿ ||
ಅಡಕಿ ತುಂಬುವ ಹೇಮ ಘಟದು |
ಗ್ಗಡದ ಹೊಂದೋಣಿಗಳ ಹಂತಿಯ |
ಸಡಗರದ ಸೌರಂಭವೆಸೆದುದು ಸುತ್ತುವಳಯದಲಿ || ೧೦ ||

ಎಸೆದುದನುಪಮ ರಚನೆಯಲಿ ಮಣಿ |
ವಿಸರ ಖಚಿತ ವಿವಾಹ ಕಾಂಚನ |
ವಸತಿ ಬಳಿಕೀ ವಾರ್ತೆಯನು ಕೇಳಿದುದು ಸುರ ಜಾಲ ||
ಪಶುಪತಿ ಬ್ರಹ್ಮೇಂದ್ರ ಶಿಖಿ ಯಮ |
ರಸುರ ವರುಣ ಸಮೀರ ಶಿವಸಖ |
ರೊಸಗೆವರೆಗಳ ಹೊಯ್ಲಿ ಹೊಂದಿದರಂಬರ ಸ್ಥಳವ || ೧೧ ||

ಸೋಪಾನ - ಮೆಟ್ಟಲು, ಸಾಲಭಂಜಿಕೆ - ಬೊಂಬೆ, ಹಿಮಂತನ ಮಗಳು - ಪಾರ್ವತಿ.

(೯) ಸಾರ - ದ್ರವ, ಸರಸಿ - ಸರೋವರ, ಹೊಕ್ಕರಣೆ - ಪುಷ್ಕರಿಣಿ (ಸಂ.) - ಕೊಳ, ಸಾದು - ಪುನುಗು, ಜಗಜಗಿಪ - ಹೊಳೆವ, ಹೊಂಬೆಸದ - ಚಿನ್ನದಿಂದ ಮಾಡಿದ, ರಂಜಣಿಗೆ - ಕರಂಡಿಗೆ, ತವಲಾಯಿ - ತಾಂಬೂಲ, ತಿಂಥಿಣಿ - ಗುಂಪು.

(೧೦) ತುಡುಕಿ ತೂಳುವ - ಹಿಡಿದೆಳೆಯುವ, ಗಡಣ - ಘಟನ (ಸಂ.) - ತಗಲಿಸಿರುವಿಕೆ, ಗತಿಗೊಂಡು - ಚಲನೆಯನ್ನು ಹೊಂದಿ, ಬೇಡದೆ - ಕೇಳದೆ, ರಚನೆ - ಏರ್ಪಾಡು, ಅಡಕಿ - ಕೂಡಿಕೊಂಡು, ಉಗ್ಗಡ - ಉತ್ಕಟ (ಸಂ.) - ಹೆಚ್ಚಾದ, ಹಂತಿ - ಪಙ್ಕ್ತಿ (ಸಂ.), ಸೌರಂಭ - ಸಂಭ್ರಮ.

(೧೧) ವಿಸರ - ಸಮೂಹ, ಖಚಿತ - ಕೆತ್ತಿದ, ವಸತಿ - ಮನೆ, ಪಶುಪತಿ - ಈಶ್ವರ, ಶಿಖಿ - ಅಗ್ನಿ, ಅಸುರ - ನಿರುತಿ, ಸಮೀರ - ವಾಯು, ಶಿವ ಸಖ - ಕುಬೇರ, ಒಸಗೆ + ವರೆ - ಮಂಗಳ ಸೂಚಕವಾದ ವಾದ್ಯ, ಹೊಂದಿದರು - ಸೇರಿದರು,

ತೊಯ್ಸಿದನು ಡಂಗುರವ ಜನಕ ಮ೯|
ಹೀಶನಾ ನೆರೆದಖಿಳ ವಸುಧಾ |
ಧೀಶರರಮನೆಗಳಲಿ ವೈದೇಹಿಯನು ವರಿಸುವೊಡೆ ||
ಈಶ ದತ್ತ ಮಹೋಗ್ರತರ ಬಾ |
ಣಾಸನವ ತೆಗೆದೇರಿಸುವ ಬಲು |
ಸಾಸಿಗರು ಬಹುದೆಂದು ಸೂರ್ಯಾಸ್ತಮಯ ಸಮಯದಲಿ || ೧೨ ||

ಕೇಳಿಸಿದುದಾ ವಿಮಲ ಮನುಕುಲ |
ಮೌಳಿಗಾ ಡಂಗುರದ ಧ್ವನಿ ಮುನಿ |
ಪಾಲಕನನಾ ರಾಮನೀ ವೃತ್ತಾಂತ ವಿವರಣವ ||
ಕೇಳಿದರೆ ಹೇಳಿದನು ಹರಿ ಹರ |
ರಾಳುತನದತಿಶಯವನಾ ದಿವಿ
ಜಾಳಿಯಿಂದಜನಿಂದ ಸಂಘಟವಾದ ಸಂಗತಿಯ || ೧೩ ||

ಆರು ಮಹಿಮೋತ್ತಮರು ಸರಿಮಿಗಿ |
ಲಾರು ಸತ್ವದೊಳೆಂದು ದಿವಿಜರ |
ವೀರ ಭಟರೀಕ್ಷಿಸಿದರಬ್ದ ಸಹಸ್ರ ಪರ್ಯಂತ ||
ಹೋರಿದರು ಸಮರದಲಿ ಸಾಹಸ |
ತೀರದಿರೆ ಬಳಿಕಬ್ಜಭವ ಬೃಂ |
ದಾರಕೋತ್ತಮರೆರಗಿದರು ಹರಿಹರ ಪದಾಬ್ಜದಲಿ || ೧೪ ||

ಮನದ ಸಂಶಯವಡಗಿತಿಬ್ಬರ |
ವಿನುತ ಮೂರ್ತಿಯನೇಕ ಭಾವದ |
ಲನುಕರಿಸಿದರು ವಿಶ್ವರೂಪ ವಿರೂಪಲೋಚನರ |

(೧೨) ಈಶ - ಈಶ್ವರ, ಬಾಣಾಸನ - (ಬಾಣ + ಆಸನ - ಬಾಣ ಪ್ರಯೋಗ ಮಾಡುವುದು)- ಬಿಲ್ಲು, ಏರಿಸುವ - ಹೂಡುವ, ಸಾಸಿಗರು - ಶೂರರು, ಬಹುದು - ಬನ್ನಿರಿ.

(೧೩) ಮನುಕುಲಮೌಳಿ - ಮನು ವಂಶಕ್ಕೆ ತಲೆಯಂತೆ ಇರುವವನು (ಮುಖ್ಯ) - ಶ್ರೀರಾಮ, ಮುನಿ ಪಾಲಕ - (ಋಷಿ ಶ್ರೇಷ್ಠ) - ವಿಶ್ವಾಮಿತ್ರ, ಆಳುತನ - ಪರಾಕ್ರಮ, ದಿವಿಜಾಳಿ - ದೇವತೆಗಳ ಗುಂಪು, ಅಜ - ಬ್ರಹ್ಮ.

(೧೪) ಆರು - ಯಾರು, ಮಹಿಮೋತ್ತಮರು - ಹೆಚ್ಚಾದ ಮಹಿಮೆಯುಳ್ಳವರು, ಅಬ್ದ - ಸಂವತ್ಸರ, ಅಬ್ಜಭವ - ಬ್ರಹ್ಮ, ಬೃಂದಾರಕೋತ್ತಮರು - ದೇವತಾ ಶ್ರೇಷ್ಠರು.

(೧೫) ಮೂರ್ತಿ - ದೇಹ, ಏಕ ಭಾವದಲಿ ಅನುಕರಿಸಿದರು - ಅಭೇದವಾಗಿ ತಿಳಿದರು.

ಧನುವೆರಡು ಬಳಿಕಿದ್ದುವಂದಿನ |
ದಿನದಲಿಬ್ಬರ ವಶದಲವು ಬಳಿ |
ಕಿನಲಿ ಸೇರಿದುವಿಬ್ಬರಿಗೆ ಕೃತಯುಗದ ಸಮಯದಲಿ || ೧೫ ||

ರಾಮ ಕೇಳಾ ಶಾರ್ಙ್ಗಧರನು |
ದ್ದಾಮ ವೈಷ್ಣವ ಚಾಪವದು ಮುನಿ |
ರಾಮಗಾದುದು ಭೃಗುವಿಡಿದು ಜಮದಗ್ನಿಯಿಂ ಬಳಿಕ ||
ಸೋಮಧರ ಕೋದಂಡವದು ನೃಪ |
ಸೋಮ ನಿಮಿ ಮೊದಲಾಗಿ ಬಂದುದು |
ಭೂಮಿಪತಿ ಜನಕಂಗೆ ಕೇಳ್ ಕಾರ್ಮುಕದ ಸಂಗತಿಯ || ೧೬ ||

ಈ ಮಹಾ ಧನು ವ್ಯೆಗೊಡುವುದಾ |
ವ್ಯೋಮಕೇಶಂಗಲ್ಲದಿರೆ ಲ |
ಕ್ಷ್ಮೀ ಮುಖಾಂಬುಜತರಣಿಗೊಲಿವುದು ಮಿಕ್ಕ ನಿರ್ಜರರ ||
ಕ್ಷೆಮೆಗೊದಗುವುದಲ್ಲದಭಿನವ |
ರಾಮನಾಹವ ಭೀಮ ಮಂಗಳ |
ನಾಮ ತೊರವೆಯ ರಾಯ ನರಹರಿಗೆಂದು ಮುನಿ ನುಡಿದ || ೧೭ ||

ವಿಶ್ವರೂಪ - ವಿಷ್ಣು, ವಿರೂಪಲೋಚನ - ಈಶ್ವರ, ಧನುವೆರಡು.........ವಶದಲವು - ವಿಷ್ಣುವಿನಲ್ಲಿ ಒಂದು ಈಶ್ವರನಲ್ಲಿ ಒಂದು ಈ ಎರಡು ಧನಸ್ಸುಗಳು ಆಗ ಅವರ ವಶದಲ್ಲಿದ್ದುವು.

(೧೬) ಶಾರ್ಙ್ಗಧರ - ವಿಷ್ಣು, ಉದ್ದಾಮ - ದೊಡ್ಡದಾದ, ವೈಷ್ಣವ ಚಾಪವು ಅದು ಭೃಗು ವಿಡಿದು ಜಮದಗ್ನಿಯಿಂ ಬಳಿಕ ಮುನಿರಾಮಗಾದುದು-ವೈಷ್ಣವ ಧನಸ್ಸು ಭೃಗು ಋಷಿಗೂ ಬಳಿಕ ಜಮದಗ್ನಿಗೂ ಸಿಕ್ಕಿ ಕೊನೆಗೆ ಪರಶುರಾಮನಿಗೆ ಸಿಕ್ಕಿತು, ಸೋಮಧರ ಕೋದಂಡ - ಈಶ್ವರನ ಬಿಲ್ಲು, ನೃಪ ಸೋಮ ನಿಮಿ - ಚಂದ್ರವಂಶದ ದೊರೆಯಾದ ನಿಮಿ ಚಕ್ರವರ್ತಿ, ಕಾರ್ಮುಕ-ಬಿಲ್ಲು.

(೧೭) ಅನ್ವಯ :—ಈ ಮಹಾಧನು ಆ ವ್ಯೋಮಕೇಶಂಗೆ ವ್ಯೆಗೊಡುವುದು, ಅಲ್ಲದಿರೆ ಅಭಿನವ ರಾಮನು ಆಹವ .....ನರಹರಿಗೆ ಲಕ್ಷ್ಮೀಮುಖಾಂಬುಜ ತರಣಿಗೆ ಒಲಿವುದು ಅದು ಉಳಿದ ನಿರ್ಜರರ ಕ್ಷೆಮೆಗೊದಗುವುದಲ್ಲ ; ವ್ಯೆಗೊಡು - ಸ್ವಾಧೀನವಾಗು, ವ್ಯೋಮಕೇಶ - ಈಶ್ವರ ಲಕ್ಷ್ಮೀ ಮುಖಾಂಬುಜ ತರಣಿ-(ಲಕ್ಷ್ಮೀ ದೇವಿಯ ಮುಖವೆಂಬ ಕಮಲಕ್ಕೆ ಸೂರ್ಯನಂತಿರುವವನು)- ವಿಷ್ಣು, ನಿರ್ಜರರು-ದೇವತೆಗಳು, ಕ್ಷೆಮೆ - ಬಲ, ಅಭಿನವ - (ಹೊಸ), ಆಹವ ಭೀಮ - ಯುದ್ಧದಲ್ಲಿ ಭಯಂಕರ.

# ಹದಿನಾಲ್ಕನೆಯ ಸಂಧಿ

**ಸೂಚನೆ** || ರಾಯ ಜನಕನುದಗ್ರ ಹರ ಚಾ |
ಪಾಯುಧವನೊಡ್ಡಿದನು ಕಮಲ ದ |
ಳಾಯತಾಕ್ಷಿಯ ನಿಲಿಸಿದನು ಬರಿಸಿದನು ಭೂಭುಜರ ||

ಎಲೆ ಕಕುತ್ಸ್ಥಜ ಸೂನು ಕೇಳ್ ಮುನಿ |
ತಿಲಕ ವಿಶ್ವಾಮಿತ್ರನಾ ರಘು |
ಕುಲ ಶಿರೋಮಣಿ ರಾಘವಂಗಾ ಚಾಪ ಸಂಗತಿಯ |
ತಿಳುಹಿದನು ತೀರಿದುದು ತಮದೊ |
ಬ್ಬುಳಿ ತಮಿಸ್ರೆಯ ತಾರಕೆಯ ಮೈ |
ವೆಳಗು ಮಸುಳಿದುವಳಲು ನಿಂದುದು ಚಕ್ಕವಕ್ಕಿಗಳ || ೧ ||

ರಜನಿಯೆಂಬ ಮದೋತ್ಕಟದ ದಿ |
ಗ್ಗಜದ ಕುಂಭಸ್ಥಳಕೆ ಮೋಹಿದ |
ವಿಜಿತ ಬಲನಂಕುಶದ ತಲೆಮಾಣಿಕವಿದೆಂಬಂತೆ ||
ಗಜಗಲಿಸಿತಿನಬಿಂಬ ಮೂಡಲು |
ಗಜರಿದುವು ಬಳಿಕಖಿಳ ವಾದ್ಯ |
ವ್ರಜ ವಿದೇಹ ನೃಪಾಲನುಪ್ಪವಡಿಸಿದನೊಲವಿನಲಿ || ೨ ||

ವಿನುತ ಸಂಧ್ಯಾವಂದನಾದಿಯ |
ನನುಕರಿಸಿ ವಿಶ್ವಂಭರಾಮರ |
ಜನವನುರು ಸನ್ಮಾನ ದಾನಂಗಳಲಿ ಸತ್ಕರಿಸಿ ||

ಸೂ || ಉದಗ್ರ - ದೊಡ್ಡದಾದ, ಕಮಲ ದಳಾಯತಾಕ್ಷಿ - (ಕಮಲದ ಎಸಳಿನಂತೆ ವಿಸ್ತಾರವಾದ ಕಣ್ಣುಗಳುಳ್ಳವಳು) - ಸೀತೆ.

(೧) ಕಕುತ್ಸ್ಥಜ ಸೂನು - ರಾಮನ ಮಗ, ತಮದೊಬ್ಬುಳಿ - ಕತ್ತಲೆಯ ಗುಂಪು, ತಮಿಸ್ರೆ - ರಾತ್ರಿ, ತಾರಕೆ - ನಕ್ಷತ್ರ, ಮೈವೆಳಗು - ದೇಹ ಕಾಂತಿ, ಮಸುಳಿದುವು - ಮಂಕಾಯಿತು, ಅಳಲು - ದುಃಖ, ಚಕ್ಕವಕ್ಕಿ - ಚಕ್ರಪಕ್ಷಿ (ಸಂ.) - ಚಕ್ರವಾಕ.

(೨) ರಜನಿ - ರಾತ್ರಿ, ಮದೋತ್ಕಟ - ಹೆಚ್ಚಾದ ಮದವುಳ್ಳ, ಕುಂಭಸ್ಥಳ - ತಲೆಯ ಮುಂಭಾಗ, ಮೋಹಿದ - ಚುಚ್ಚಿದ, ನೆಟ್ಟ; ವಿಜಿತ ಬಲನ - (ಬಲಾಸುರನನ್ನು ಗೆದ್ದವನ)- ಇಂದ್ರನ, ತಲೆ ಮಾಣಿಕ - ಮುಂಭಾಗಕ್ಕೆ ಕಟ್ಟಿರುವ ರತ್ನ, ಗಜಗಲಿಸು - ಪ್ರಕಾಶಿಸು, ಇನ ಬಿಂಬ-ಸೂರ್ಯಮಂಡಲ, ಗಜರಿದುವು- ಧ್ವನಿಮಾಡಿದುವು, ವಿದೇಹ ನೃಪಾಲ - ಜನಕ, ಉಪ್ಪವಡಿಸು - ಹಾಸಿಗೆಯಿಂದೇಳು.

(೩) ಅನುಕರಿಸು - ನೆರವೇರಿಸು, ವಿಶ್ವಂಭರಾಮರ - ಬ್ರಾಹ್ಮಣ, ಸತ್ಕರಿಸು - ಮರ್ಯಾ

ಅನುಜ ವೀರ ಕುಶಧ್ವಜನು ಸಹಿ |
ತನುಪಮೋತ್ಸವದಿಂದ ನಡೆತಂ|
ದನು ಸ್ವಯಂವರ ಮಂಟಪಕೆ ಮಂತ್ರಿಗಳ ಗಡಣದಲಿ || ೩ ||

ಕರಸಿದನು ಒಳಿಕಖಿಳ ಪೃಥ್ವೀ |
ಶ್ವರರನಾ ಕನ್ಯಾ ಸ್ವಯಂವರ |
ಪರಮ ನಿಳಯಕೆ ಪೂರ್ವ ಸೂಚಿತ ಸಕಲ ಭೂಸುರರು ||
ನೆರೆದರೈ ವಿಪರೀತ ಪೃಥ್ವೀ |
ಶ್ವರರು ಬಳಿಕವರುಚಿತವರಿದಾ |
ದರಿಸಿ ಹರಿವಿಷ್ಟರಗಳಲಿ ಸತ್ಕರಿಸಿದನು ಭೂಪ || ೪ ||

ಜನಪರಾ ಕಾಲೋಚಿತದ ಪರಿ |
ಜನ ಸಹಿತ ಕುಳ್ಳಿದರು ಸಿಂಹಾ |
ಸನಗಳಲಿ ಸೌಹಾರ್ದ ಸೌಖ್ಯದ ಸುಪ್ರಮೋದದಲಿ ||
ತನುಜ ಕೇಳಾ ಸಮಯದಲಿ ರಘು |
ತನುಜರುಗಳೊಡಗೂಡಿ ಬಂದನು |
ವಿನುತ ವಿಶ್ವಾಮಿತ್ರನಾ ಪಾರ್ಥಿವ ಸಭಾಸ್ಥಳಕೆ || ೫ ||

ಸಾಲ ಸೌಧಂಗಳಲಿ ಪೃಥ್ವೀ |
ಪಾಲರಿರ್ದರು ತರಣಿ ಕಿರಣವ |
ನೇಳಿಸುವ ಮಣಿ ಭೂಷಣಂಗಳ ಬಹಳ ತೇಜದಲಿ ||
ಬಾಲರಿವರೊಡಗೂಡಿ ಮುನಿಗಳ |
ಮೇಳದಲಿ ಕುಳ್ಳಿದನು ವಿಪುಲ ವಿ |
ಶಾಲ ವೇದಿಕೆಯಲ್ಲಿ ವಿಶ್ವಾಮಿತ್ರ ಮುನಿರಾಯ || ೬ ||

ಮಾತ್ತು, ಅನುಜ - ತಮ್ಮ

(೪) ಪರಮ ನಿಳಯ-ಶ್ರೇಷ್ಠವಾದ ಮನೆ, ಪೂರ್ವ ಸೂಚಿತ - ಮೊದಲೇ ತಿಳಿಸಿದ್ದ, ವಿಪರೀತ-(ಅತಿ ಹೆಚ್ಚು) - ಬಹಳ, ಹರಿವಿಷ್ಟರ - ಸಿಂಹಾಸನ.

(೫) ಸೌಹಾರ್ದ ಸೌಖ್ಯದ ಸುಪ್ರಮೋದದಲಿ - ಒಬ್ಬರಿಗೊಬ್ಬರು ಸ್ನೇಹವನ್ನು ಹೊಂದಿರುವುದರಿಂದುಂಟಾದ ಸೌಖ್ಯದ ಸಂತೋಷದಿಂದ, ರಘುತನುಜರು - ರಾಮ ಲಕ್ಷ್ಮಣರು, ಪಾರ್ಥಿವ - ದೊರೆ.

(೬) ಸಾಲ ಸೌಧ - ಸಾಲಾಗಿರುವ ಉಪ್ಪರಿಗೆ, ಏಳಿಸುವ - ತಿರಸ್ಕರಿಸುವ, ಬಾಲರ ಇವರ ಒಡಗೂಡಿ, ಮೇಳ - ಜೊತೆ, ವೇದಿಕೆ - ಜಗುಲಿ.

ವರ ಸುಧಾಮನ ಕೈವಿಡಿದು ಬಳಿ |
ಕರಸನುಗ್ಘಡಣೆಯ ನಿನಾದದ |
ಲರಸು ಹಂತಿಯನೋಡುತವರವರುಚಿತ ವೃತ್ತಿಯಲ ||
ಕರವ ಮುಗಿಯುತ ವಿನಮಿತರನಾ |
ಕರಿಸುತವನೀಸುರ ಕದಂಬಕೆ |
ಶಿರವ ಬಾಗುತ ಭದ್ರ ಪೀಠಕೆ ಬಂದನೊಲವಿನಲಿ || ೭ ||

ವಸುಮತೀಶನ ನೇಮದಲಿ ಬಳಿ |
ಕಸಮಲೋಚನ ಚಾಪವನು ಪೂ |
ಜಿಸಿದರಾಗಮ ವಿಧಿ ವಿಹಿತ ವಿವಿಧೋಪಚಾರದಲಿ ||
ಪಶುಪತಿ ಸ್ತವದಿಂದ ವಾದ್ಯದ |
ವಿಷಮ ನಿಸ್ಸ್ವನದಿಂದ ರುಧಿರಾ |
ಮಿಷಗಳೋದನದಿಂದ ಕುರಿ ಕೋಣಗಳ ಒಲಿಗಳಲಿ || ೮ ||

ಬಂದುದಾ ಧನುವಾ ಸ್ವಯಂವರ |
ಮಂದಿರಕೆ ಮುರಜಾನಕ ಧ್ವನಿ |
ಯಿಂದ ಮದನವಿರೋಧಿ ಮಂತ್ರೋಪಾಸ್ತಿಯಲಿ ಬಳಿಕ |
ಇಂದುಧರ ನಾರಾಯಣರಿಗೇ |
ನೆಂದು ತೋರ್ಪುದನರಿಯೆ ವಿಲಯದ |
ದಂದಶೂಕನ ಮೂಡಿಗೆವೊಲಿದ್ದುದು ನೃಪಾಲರಿಗೆ || ೯ ||

(೭) ಉಗ್ಘಡಣೆಯ ನಿನಾದ - ಹೊಗಳು ಭಟ್ಟರು ಉಗ್ಗಡಿಸುವ ಶಬ್ದ, ಅರಸು - ದೊರೆಗಳ ಹಂತಿ - ಪಙ್ಕ್ತಿ (ಸಂ.) - ಸಾಲು, ಆಕರಿಸು - ಆದರಿಸು, ಕದಂಬ - ಗುಂಪು, ಭದ್ರಪೀಠ - ರಾಜಾಸನ.

(೮) ವಸುಮತೀಶ - ದೊರೆ, ಅಸಮಲೋಚನ - ಸಮ ಸಂಖ್ಯೆಯಲ್ಲದ ಕಣ್ಣುಗಳುಳ್ಳವನು (ಮುಕ್ಕಣ್ಣನು) - ಈಶ್ವರ, ಆಗಮ ವಿಧಿ ವಿಹಿತ - ಪೂಜಾಕ್ರಮದಲ್ಲಿ ಹೇಳಲ್ಪಟ್ಟ, ಪಶುಪತಿ - ಈಶ್ವರ ಸ್ತವ - ಸ್ತೋತ್ರ, ವಿಷಮ ನಿಸ್ಸ್ವನ - ಕಠಿನವಾದ ಧ್ವನಿ, ರುಧಿರ - ರಕ್ತ, ಆಮಿಷ - ಮಾಂಸ, ಓದನ - ಅನ್ನ.

(೯) ಮುರಜ - ಮದ್ದಳೆ, ಆನಕ - ತಮಟೆ, ಮದನ ವಿರೋಧಿ - (ಮನ್ಮಥನ ಶತ್ರು) - ಈಶ್ವರ, ಉಪಾಸ್ತಿ - (ಉಪಾಸನೆ) - ಜಪ, ಇಂದುಧರ - ಈಶ್ವರ, ವಿಲಯ - ಪ್ರಳಯ, ದಂದಶೂಕ - ಸರ್ಪ, ಮೂಡಿಗೆ - ಬತ್ತಳಿಕೆ

ಜನಕ ನೃಪ ಬಳಿಕುತ್ಸವದಿ ತ |
ನ್ನನುಜ ವೀರ ಕುಶಧ್ವಜನ ಕರೆ |
ದನುಪಮ ತ್ರೈಲೋಕ್ಯ ಕನ್ಯಾನೂನ ರತ್ನವನು ||
ವನಜಭವ ಭವ ಮುಖ್ಯ ಸುರ ಮಾ |
ನಿನಿಯರಧಿಕ ವಿಳಾಸ ವಿಭ್ರಮ |
ಘನ ಯಶೋ ರತ್ನವನು ತಾ ಹೋಗೆಂದು ನೇಮಿಸಿದ || ೧೦ ||

ಆ ಕುಶಧ್ವಜನಧಿಕ ಹರ್ಷೋ |
ದ್ರೇಕದಲಿ ನಡೆತಂದನಾ ಲೋ |
ಕೈಕ ನಾಥೆಯ ವಿಶ್ವಮಾತೆಯ ಭುವನ ಪೂಜಿತೆಯ ||
ಶ್ರೀ ಕಮಲೆಯೆಡೆಗಂತರಂಗದ |
ಲಾ ಕುಮಾರಿಯ ನಮಿಸಿ ತೋಳ್ಗಳ |
ಲೌಕಿ ತೊಡೆಯಲಿ ಕುಳ್ಳಿರಿಸಿ ಮಾನಸದೊಳಿಂತೆಂಙ || ೧೧ ||

ರಮಣರಿನ್ನಾರಿಹರೊ ಲಕ್ಷ್ಮೀ |
ರಮಣನಲ್ಲದೆ ಮಿಕ್ಕ ಪೃಥ್ವೀ |
ರಮಣರೀ ಕನ್ನಿಕೆಗೆ ಸದೃಶರೆ ಶಿವ ಮಹಾದೇವ ||
ಕಮಲಭವನಿನ್ನಾರನೀಕೆಗೆ |
ಸುಮುಖರನು ಮಾಡುವನೊ ಎನುತಾ |
ಕಮಲಮುಖಿಯರ ಕರೆದು ಸಿಂಗಾರಿಸಲು ನೇಮಿಸಿದ | ೧೨ ||

ತರಿಸಿ ಹೊಸ ಹಸೆವಣೆಯೊಳಗೆ ಕು |
ಳ್ಳಿರಿಸಿ ಕಮಲಾಕ್ಷಿಯುರು ಪೂರಿತ |
ಪರಿಮಳದ ತೈಲವನು ಮೊಗೆದು ಮನೋ— —— ||

(೧೦) ಅನುಪಮ - ಅಸದೃಶವಾದ, ತ್ರೈಲೋಕ್ಯ - ಮೂರು ಲೋಕಗಳಲ್ಲಿಯ, ಕನ್ಯಾ - ಸ್ತ್ರೀಯರಲ್ಲಿ, ಅನೂನ - (ಕೊರತೆ ಇಲ್ಲದ) - ಉತ್ತಮವಾದ, ರತ್ನವನು - (ರತ್ನದಂತಿರುವ) ಸೀತೆಯನ್ನು, ವನಜಭವ - ಬ್ರಹ್ಮ, ಭವ - ಈಶ್ವರ, ಮಾನಿನಿ - ಹೆಂಗಸು, ವಿಳಾಸ ವಿಭ್ರಮ ಘನ ಯಶೋ ರತ್ನ - ಸೊಗಸು, ಸೌಂದರ್ಯ ಇವುಗಳ ಪ್ರಸಿದ್ಧಿಗೆ ರತ್ನದಂತಿರುವ.

(೧೧) ಲೋಕೈಕನಾಥೆ - ಲೋಕಕ್ಕೆಲ್ಲ ಒಬ್ಬಳೇ ಒಡತಿಯಾದ, ವಿಶ್ವಮಾತೆ - ಲೋಕಕ್ಕೆ ತಾಯಿಯಾದ, ಕಮಲೆ - ಲಕ್ಷ್ಮಿ, ಲೌಕಿ - ಅಪ್ಪುಕೆ, ಮಾನಸ - ಮನಸ್ಸು.

(೧೨) ರಮಣ - ಗಂಡ, ಸದೃಶ - ಸಮಾನ, ಕಮಲಭವ - ಬ್ರಹ್ಮ, ಸುಮುಖ - ಅನುಕೂಲ, ಸಿಂಗಾರಿಸು - ಅಲಂಕರಿಸು.

(೧೩) ಹೊಸ ಹಸುಳ ಹಸೆವಣೆ - (ಮಂಗಳಸ್ನಾನಕ್ಕಾಗಿ ಹಾಕುವ ಮಣೆ), ಪೂರಿತ ಪರಿಮಳದ

ಅರಸಿಯಾಗೆಂದೊಸಗೆವರೆಗಳ |
ಭರವಸದ ಸೌರಂಭದಲಿ ನೇ |
ವರಿಸಿದರು ಸೆಳ್ಳುಗುರ್ಗಳಲಿ ಶಶಿಮುಖಿಯ ಸಿರಿ ಮುಡಿಯ || ೧೩ ||

ಧಿರುರೆ ಪಾಯವಧಾರೆನಲು ಸತಿ |
ಯರ ಗಡಣದಲಿ ವಜ್ರಮಣಿ ಬಂ |
ಧುರದ ಹಾವುಗೆಯಿಂದ ಬಂದಳು ಮಜ್ಜನದ ಮನೆಗೆ ||
ತರುಣಿಯರ ಕರ ಕಲಶ ಸಲಿಲೋ |
ತ್ಕರದಿ ಮಜ್ಜನಮಾಡಿ ವಿಮಲಾಂ |
ಬರವನುಟ್ಟೈತಂದಳವನಿಜೆ ಮಾತೃಮಂದಿರಕೆ || ೧೪ ||

ಸ್ಮರನ ಸೌಭಾಗ್ಯದ ಯಶೋ ಮಂ |
ದಿರೆಯ ಮನ್ಮಥ ಬೀಜ ಮಂತ್ರಾ |
ಕ್ಷರೆಯ ಮನಸಿಜ ಶಾಸ್ತ್ರ ಸಾರಸ್ವತೆಯ ಸುಲಲಿತೆಯ ||
ಸುರುಚಿರಾಭರಣಂಗಳಿಂ ವಿ|
ಸ್ತರ ಸುಗಂಧಾಮೋದ ಕುಸುಮೋ|
ತ್ಕರಗಳಿಂದಬಲೆಯರಲಂಕರಿಸಿದರು ಶಶಿಮುಖಿಯ || ೧೫ ||

ಚರಣ ಕಾಂತಿಗಳಿಂದ ನೂಪುರ |
ಗುರು ನಿತಂಬದಿ ಕಾಂಚಿ ಕೋಮಲ |
ಕರದಿ ಕಂಕಣ ಬೆರಳಿನಿಂದುಂಗುರವು ಕೊರಳಿಂದ ||

ತೈಲ - ಸುವಾಸನಾ ದ್ರವ್ಯವನ್ನು ಸೇರಿಸಿದ ಎಣ್ಣೆ, ಮೊಗೆ - ತುಂಬು, ಮನೋಭವನ ಪಿತ - ಮನ್ಮಥನ ತಂದೆ - ವಿಷ್ಣು, ಒಸಗೆವರೆ - ಮಂಗಳ ವಾದ್ಯ, ಭರವಸ - ಆಧಿಕ್ಯ, ನೇವರಿಸು - ನೀವು, ತೀಡು; ಸೆಳ್ಳುಗುರು - ನೀಳವಾಗಿರುವ ಉಗುರು; ಮುಡಿ - ತಲೆಗೂದಲು.

(೧೪) ಧರುರ ಪಾಯವಧಾರು - ರಾಜಮಗಾದೆಯ ಹೊಗಳಿಕೆಯ ಮಾತು, ಬಂಧುರ - ಮನೋಹರ, ಹಾವುಗೆ - ಪಾದರಕ್ಷೆ, ಮಜ್ಜನ - ಸ್ನಾನ.

[illegible] ...... ಮಂದಿರೆ - ಮನ್ಮಥನ ಸಂಪತ್ಕರವಾದ ಕೀರ್ತಿಗೆ ನೆಲೆ, ಮನ್ಮಥ...... ಕ್ಷರೆ - ಮನ್ಮಥನ ಮೂಲಮಂತ್ರಸ್ವರೂಪಗಳು, ಮನಸಿಜ ಶಾಸ್ತ್ರ ಸಾರಸ್ವತೆ - [illegible] ನಾಗಿಂತಿರುವವಳು, ಆಮೋದ - ವಾಸನೆ, ಉತ್ಕರ - ಸಮೂಹ.

[illegible]

ಸರದ ಮುತ್ತುಗಳೋಲೆ ಕದಪಿಂ |
ದಿರದೆ ಮೆರೆದುವು ಸ್ಮರನ ಕರಾಗ್ರ |
ಸ್ಫುರಿತ ಚಾಪ ಕಲಾಪ ಶರದಭಿಮಾನ ದೇವತೆ... || ೧೬ ||

ಹೊಳೆ ಹೊಳೆವ ತನು ಕಾಂತಿಯಲಿ ಗಜ |
ಗಲಿಸಿದುವು ಹೊಂದೊಡವುಗಳು ಥಳ |
ಥಳಿಸಿದುವು ಮುತ್ತುಗಳು ದಂತಪ್ರಭೆಯ ಲಹರಿಯಲಿ ||
ಸುಲಲಿತಾಧರ ರಾಗದಿಂದು |
ಜ್ಜ್ವಲಿಸಿದುವು ಮಾಣಿಕ್ಯ ಚಯವಾ |
ರಳವು ಹೊಗಳುವೊಡಬುಜಗಂಧಿಯ ವಿಪುಳ ವಿಭ್ರಮವ || ೧೭ ||

ಕುಶನೆ ಕೇಳವನಿಜೆಯನಭಿ ವ |
ರ್ಣಿಸುವೊಡೇತರ ಮತಿಗಳೆಮ್ಮವು |
ರಸನೆ ಸಾಸಿರದಹಿಪಗರಿದುಳಿದವರ ಪಾಡೇನು ||
ಕುಶನನುಜ ಕೇಳಾದಿ ವಾರಿಜ |
ವಸತಿಯಲ್ಲಾ ಮೇಲೆ ನಿರುಪಮ |
ಕುಸುಮ ಶರನಂಬಿಕೆಯಲಾ ಕೌತುಕವಿದೇನೆಂದ || ೧೮ ||

ಆದಿ ಮಾಯಾ ಮಹಿಮೆಯನು ಕ್ಷೀ |
ರೋದಧಿಯ ನಂದನೆಯನಗ್ಗದ |
ಮೇದಿನೀ ಸಂಭವೆಯ ನರ ಭಾಮಿನಿಯ ರೂಪಕದ ||

ದೇವತೆ - ಮನ್ಮಥನ ಕೈಯಲ್ಲಿ ಹೊಳೆಯುತ್ತಿರುವ ಧನುರ್ಬಾಣಗಳಿಗಧಿದೇವತೆ ಎಂದರೆ ಅವುಗಳಂತೆ ಎಲ್ಲರನ್ನೂ ಮೋಹಗೊಳಿಸುವವಳು), ಕಲಾಪ - ಸಮೂಹ.

(೧೭) ಹೊಂದೊಡವು - ಚಿನ್ನದ ಒಡವೆ, ಲಹರಿ - ಪ್ರವಾಹ, ಅಧರ - ಕೆಳ ತುಟಿ, ರಾಗ - ಕೆಂಪು ಬಣ್ಣ, ಚಯ - ಗುಂಪು, ಅರಳವು - ಯಾರಿಗೆ, ಸಾಧ್ಯವು, ಅಬುಜಗಂಧಿ - ಕಮಲದ ವಾಸನೆಯುಳ್ಳವಳು, ವಿಪುಳ - (ವಿಸ್ತಾರ)-ಹೆಚ್ಚು, ವಿಭ್ರಮ - ವೈಖರಿ.

(೧೮) ಅವನಿಜೆ - (ಭೂಮಿಯ ಮಗಳು)-ಸೀತೆ, ರಸನೆ ಸಾಸಿರದ ಅಹಿಪಗೆ - ಸಾವಿರ ನಾಲಗೆಗಳುಳ್ಳ ಆದಿಶೇಷನಿಗೆ, ಅರಿದು - ಅಸಾಧ್ಯ, ಆದಿ ವಾರಿಜ ವಸತಿಯಲ್ಲಾ - ಆದಿಲಕ್ಷ್ಮಿಯಲ್ಲವೇ! ವಾರಿಜ ವಸತಿ ಮೇಲೆ - ಮತ್ತು, ಕುಸುಮಶರನ ಅಂಬಿಕೆ - ಮನ್ಮಥನ ತಾಯಿ, ಕೌತುಕ - ಆಶ್ಚರ್ಯ.

(೧೯) ಆದಿ ಮಾಯಾ ಮಹಿಮ - ಆದಿಶಕ್ತಿಯ ಮಾಹಾತ್ಮ್ಯೆಯುಳ್ಳವಳು, ಕ್ಷೀರೋದಧಿ - ಕ್ಷೀರಸಮುದ್ರ, ನಂದನೆ - ಮಗಳು, ಅಗ್ಗದ - ಶ್ರೇಷ್ಠವಾದ, ಸಂಭವೆ - ಹುಟ್ಟಿದವಳು, ಭಾಮಿನಿ -

ಆದಿ ಶಕ್ತಿಯ ಜಾತ ರಹಿತೆಯ |
ವೇದ ಮಾತೆಯ ವಿಷ್ಣುವನಿತೆಯ
ನಾದರದೊಳಬಲೆಯರು ಸಿಂಗರಿಸಿದರು ಹರುಷದಲಿ || ೧೯ ||

ಎತ್ತಿದರು ಬಳಿಕಾರತಿಯ ಹೊಸ |
ಮುತ್ತುಗಳ ಸೇಸೆಯನು ಪತಿಕರಿ |
ಸುತ್ತ ಪರಸಿದರಖಿಳ ವಿಪ್ರ ಸುವಾಸಿನೀ ನಿಕರ ||
ಇತ್ತರವನೀದೇವ ಮಾಂತ್ರಿಕ |
ರುತ್ತಮದ ಜಂಬೀರ ಫಲವನು |
ದಾತ್ತ ಭದ್ರ ಮದೇಭ ಕಂಧರಕಡರಿದಳು ಸೀತೆ || ೨೦

ಒಡನೆ ಚಾಮರ ಸೀಗುರಿಯ ಕ |
ನ್ನಡಿಯ ಕಾಳಂಜಿಯ ಸುಗಂಧದ |
ಹಡಪದಬಲೆಯರೇರಿದರು ಬೆಂಬಳಿಯಲಾ ಗಜದ ||
ಎಡೆ ಬಲದ ಗಜ ತುರಗ ರಥ ವಂ |
ಗಡದ ದಂಡಿಗೆಗಳ ವಿಳಾಸದ |
ಕಡು ಚೆಲುವ ಮುಗುದೆಯರು ಬಳಸಿದರವನಿನಂದನೆಯ || ೨೧

*　　*　　*　　*　　*

ಚಾರುತರ ಮಣಿಮಯದ ಮುಕ್ತಾ |
ಹಾರಗಳ ಥಳಥಳಿಸುವಾ ಶ್ರುತಿ |
ಪೂರಗಳ ಮೂಕುತಿಯ ಮುತ್ತಿನ ಬೊಟ್ಟು ಬೈತಲೆಯ ||

ಹೆಂಗಸು, ಜಾತ ರಹಿತೆ - ಜನ್ಮವಿಲ್ಲದವಳು, ವನಿತೆ - (ಹೆಂಗಸು) - ಹೆಂಡತಿ.

(೨೦) ಸೇಸೆ - ತಲೆಯಮೇಲೆ ಎರಚುವ ಮಂತ್ರಾಕ್ಷತೆ, ಪತಿಕರಿಸು - ಪ್ರೀತಿಸು, ಸುವಾಸಿನಿ - ಗಂಡನುಳ್ಳವಳು, ಇತ್ತರು - ಕೊಟ್ಟರು, ಅವನೀದೇವ - ಬ್ರಾಹ್ಮಣರು, ಮಾಂತ್ರಿಕರು - ಮಂತ್ರಗಳನ್ನು ಕಲ್ತಿರುವವರು, ಜಂಬೀರ ಫಲ - ನಿಂಬೆಯ ಹಣ್ಣು, ಉದಾತ್ತ ಭದ್ರ ಮದೇಭ ಕಂಧರಕೆ - ಶ್ರೇಷ್ಠವಾದ ಮದಸಿದ ಆನೆಯ ಹೆಗಲಿನ ಮೇಲಕ್ಕೆ, ಅಡರು - ಹತ್ತು.

(೨೧) ಸೀಗುರಿ - ಸಣ್ಣ ಚಾಮರ, ಕಾಳಂಜಿ - ಪೀಕದಾನಿ, ಹಡಪ - ಅಡಕೆಲೆಯ ಚೀಲ, ವಂಗಡ - ಗುಂಪು, ದಂಡಿಗೆ - ಪಲ್ಲಕ್ಕಿ, ಮುಗುದೆ - ಮುಗ್ಧಾ (ಸಂ.) - ಸುಂದರಿ.

(೨೨) ಶ್ರುತಿಪೂರ - (ಕರ್ಣಾಭರಣ) ಓಲೆ, [illegible] ಶ್ರೇಷ್ಠವಾದ ಮುತ್ತು [illegible]

ವೀರ ಮುದ್ರಿಕೆ ಕಡಗ ಕಂಕಣ |
ಸಾರತರ ಮಣಿ ಕಾಂಚಿ ನೂಪುರ |
ಭೂರಿ ಭೂಷಣದಂಗನೆಯರೈದಿದರು ಮುಂಗುಡಿಯ || ೨೩ ||

* * * * *

ವಾರಿರುಹ ವದನೆಯರ ವಿಭ್ರಮ |
ಸಾರತರ ಸೊಬಗಿಂಗೆ ಸುಮನೋ |
ನಾರಿಯರು ನಾಚಿದರು ನಳಕೂಬರ ಜಯಂತಕರು ||
ಭಾರಿಸಿದ ಮೋಹಂಗಳಲಿ ಸಂ |
ಸಾರವನು ಬಯಸಿದರು ಸ್ಮರನ ವಿ |
ಕಾರ ವಿಭ್ರಮ ಚೇತವಾಯ್ತುಳಿದಮರ ಸಂದೋಹ || ೨೪ ||

ಸಂದಣಿಸಿತೀ ಪರಿಯ ನಾರೀ |
ವೃಂದವಾ ಜನಕ ಕ್ಷಿತೀಶನ |
ನಂದನೆಯ ಬಳಸಿನಲಿ ಬಹಳ ವಿಶಾಲ ವಿಭವದಲಿ ||
ವಂದಿಗಳ ಹೊಗಳಿಕೆಯ ಸರಭಸ |
ದಿಂದ ಮುಂಗುಡಿಗಹಳೆಗಳ ರವ |
ದಿಂದ ರಾಜಕುಮಾರಿ ಬಂದಳು ರಾಜವೀಧಿಯಲಿ || ೨೫ ||

ಕುಸುಮಶರನುಗ್ಘಡಣೆ ಕೈವಾ |
ರಿಸುವ ಚೈತ್ರನ ಹೊಂಪ ಕೆಲ ಸಾ |
ರಿಸುವ ಬಂಧುರ ಗಂಧ ಮಂದಾನಿಲನ ರಭಸಿಕೆಯ ||

ಕಾಂಚಿ - ಡಾಬು, ಭೂರಿ - ಹೆಚ್ಚಾದ.

(೨೪) ವಾರಿರುಹ - ಕಮಲ, ವಿಭ್ರಮ - ವಿಲಾಸ, ಸಾರತರ - ಶ್ರೇಷ್ಠ, ಸೊಬಗು - ಸೌಭಾಗ್ಯ (ಸಂ.) - ಠೀವಿ, ಸುಮನೋನಾರಿ - ದೇವತಾಸ್ತ್ರೀ, ಭಾರಿಸಿದ - ಹೆಚ್ಚಾದ, ನಳಕೂಬರ - ಕುಬೇರನ ಮಗ, ಜಯಂತ - ಇಂದ್ರನ ಮಗ, ಸ್ಮರ - ಮನ್ಮಥ, ವಿಕಾರ ವಿಭ್ರಮ ಚೇತವಾಯ್ತು - ಚಲನೆ ಹುಟ್ಟಿ ವೈಖರಿಗಳಿಗೆ ಮನಸ್ಸುಳ್ಳದಾಯ್ತು, ಅಮರ ಸಂದೋಹ - ದೇವತೆಗಳ ಗುಂಪು.

(೨೫) ಸಂದಣಿಸು - ಗುಂಪುಸೇರು. ವೃಂದ - ಗುಂಪು, ವಂದಿಗಳು - ಹೊಗಳು ಭಟ್ಟರು, ಕಹಳೆ - ತುತೂರಿ, ರವ - ಶಬ್ದ.

(೨೬) ಕುಸುಮಶರ - (ಹೂಗಳೇ ಬಾಣವಾಗಿ ಉಳ್ಳವನು) - ಮನ್ಮಥ, ಉಗ್ಘಡಣೆ - ಹೊಗಳಿಕೆ, ಕೈವಾರಿಸು - ಹೊಗಳು. ಹೊಂಪು [illegible] ಕೆಲಸಾರಿಸು - ಸಮೀಪಕ್ಕೆ ಸೇರಿಸು. ಬಂಧುರ -

ಶಶಿಯ ಹೊಗಳಿಕೆ ಬಿರುದನುತ್ಸಾ |
ಹಿಸುವ ರತಿಯ ವಿಳಾಸ ಮಿಗೆ ರಾ |
ಣಿಸಲು ನಡೆತಂದಿಳಿದಳಿಭವನು ಸಭೆಯೊಳವನಿಪರ || || ೨೭ ||

ಲವನೆ ಕೇಳ್ವೆ ಜಯ ಜಯೆಂದುದು |
ದಿವಿಜ ಯುವತೀ ಜಾಲ ಬಹಳೋ |
ತ್ಸವವ ಧರಿಸಿದಳಗಜೆ ನಮಿಸಿದಳಬುಜಭವನರಸಿ ||
ಅವನಿಜೆಯ ಸಂದರುಶನವು ಸಂ |
ಭವಿಸಲಮರರು ಭಕ್ತಿ ಭಾವದ |
ಸವಡಿಗೈಗಳಲಿರ್ದರಾನತರಾಗಿ ಗಗನದಲಿ || || ೨೮ ||

ಆನೆಯಿಂದಿಳಿದಾದಿ ಮಾಯಾ |
ಮೂನಿನಿಯ ಮಂಗಳೆಯನಾ ಜನ |
ಕಾನುಜನು ಕೈಗೊಟ್ಟು ತಂದನು ರಾಜ ಸಭೆಯೊಳಗೆ ||
ಆ ನಭದ ನಿಖಿಳಾಮರೌಘ ವಿ |
ಮಾನದಿಂದಿಳಿದೋರಣಿಸಿದುದು |
ಮಾನನಿಧಿ ಬಳಿಕವನಿಜೆಗೆ ತೋರಿಸಿದನವರುಗಳ || ೨೯ ||

ದೇವಿ ನೊಡೀತನು ಭವಾನೀ |
ದೇವಿಯರಸನು ಗುಹ ಗಣಪ ಮು |
ಖ್ಯಾವದಾತ ಪ್ರಮಥ ಗಣವಿದೆ ನೋಡು ನೀನವರ ||
ತೀವಿಕೊಂಡಿದೆ ಮುಂದೆ ವರ ರಾ |
ಜೀವಭವ ಸನಕಾದಿಗಳು ಸುರ |
ದೇವ ಮುಖ್ಯ ಸಮಸ್ತರಿವರನು ನೋಡು ನೀನೆಂದ || ೩೦ ||

ಮನೋಹರ, ಮಂದಾನಿಲ - ಮೆಲ್ಲಗೆ ಬೀಸುವ ಗಾಳಿ, ರಭಸಿಕೆ - ವೇಗ, ಶಶಿ - ಚಂದ್ರ, ಬಿರುದನುತ್ಸಾಹಿಸು - ಬಿರುದನ್ನು ತೋರಿಸಲು ಕುತೂಹಲಪಡು, ಇಭ - ಆನೆ.

(೨೮) ಯುವತೀ ಜಾಲ - ಸ್ತ್ರೀಯರ ಗುಂಪು, ಅಗಜೆ - ಪಾರ್ವತಿ, ಸವಡಿಗೈ - ಜೋಡಿಸಿದ ಎರಡು ಕೈ, ಆನತರು - ತಲೆಯನ್ನು ಬಗ್ಗಿಸಿದವರು.

(೨೯) ಕೈಗೊಟ್ಟು - ಹಸ್ತಲಾಘವವನ್ನು ಕೊಟ್ಟು, ನಭ-ಆಕಾಶ, ಅಮರೌಘ - ದೇವತೆಗಳ ಗುಂಪು, ವಿಮಾನ-ಆಕಾಶ ಯಾನ, ಓರಣಿಸು - ಸಾಲಾಗಿ ನಿಲ್ಲು, ಮಾನ ನಿಧಿ - ಬಹಳ ಮಾನ್ಯನಾದ (ಕುಶಧ್ವಜ).

(೩೦) ಭವಾನೀ ದೇವಿ - ಪಾರ್ವತಿ, ಗುಹ - ಷಣ್ಮುಖ, ಅವದಾತ-ಪರಿಶುದ್ಧ, ಪ್ರಮಥ ಗಣ - ಶಿವನ ಸೈನ್ಯ, ತೀವಿಕೊಂಡು - ತುಂಬಿ, ರಾಜೀವಭವ-ಬ್ರಹ್ಮ, ಸುರದೇವ - ಇಂದ್ರ.

ತರುಣಿ ನೋಡೀಜೆಯಲಿ ರಮ್ಯಕ |
ಹರಿವರುಷ ಕಿಂಪುರುಷ ಭಾರತ |
ವರುಷ ಕುರುವರುಷಾದಿ ನಾನಾ ಧಾರಿಣೀಶ್ವರರು ||
ಹರಿತ ಕಶ್ಯಪ ಕಣ್ವ ಚ್ಯವನಾಂ |
ಗಿರಸ ಕೌಶಿಕ ಮುಖ್ಯ ಮುನಿ ಸಂ |
ತರುಗಳಿದೆ ಮಿಕ್ಕಾದ ನರರಿದೆ ನೋಡು ನೀನವರ || ೩೧ ||

ಇವರೊಳಾರಲಿ ಚಿತ್ತ ನಿನಗುಂ |
ಟವರನಂಗೀಕರಿಸು ನೋಡೀ |
ಭುವನ ಮೂರರ ರೂಪು ಸಿರಿ ಸೌಭಾಗ್ಯ ವಿಕ್ರಮದ ||
ವಿವಿಧ ಗುಣಸಂಪನ್ನರಿದೆಯೆನ |
ಲವರವರ ಹಂತಿಗಳನೊಯ್ಯನೆ |
ನವ ವಿಳಾಸ ಪ್ರೌಢಿಯೊಳು ನೋಡಿದಳು ನಳಿನಾಕ್ಷಿ || ೩೨ ||

ಮಗಳ ಗಂಡನು ಶಿವನು ಬೊಮ್ಮನು |
ಮಗನು ಮಿಕ್ಕಿನ ಸುರರು ಬಂಟರು |
ಬಗೆವೊಡಮಲ ಬ್ರಹ್ಮಋಷಿಗಳು ನಿರ್ಜಿತೇಂದ್ರಿಯ
ಜಗದರಸುಗಳು ನರರು ತೊರವೆಯ |
ನಗರದಧಿಪತಿ ಗಂಡನೆಂಬೊಗು |
ಮಿಗೆಯ ಹರುಷದೊಳಬಲೆ ಬಂದಳು ಜನಕನಿದ್ದೆಡೆಗೆ || ೩೩ ||

(೩೧) ರಮ್ಯಕ, ಹರಿ, ಕಿಂಪುರುಷ, ಭಾರತ, ಕುರು, (ಈ ಐದು) ಇಳಾವೃತ, ಹಿರಣ್ಮಯ ಭದ್ರಾಶ್ವ, ಕೇತುಮೂಲ (ಇವು ನಾಲ್ಕು), ಒಟ್ಟು ಭೂಖಂಡಗಳು ಒಂಭತ್ತು, ಸಂತರು-ಸತ್ಪುರುಷರು.

(೩೨) ಹಂತಿ - ಪಙ್ಕ್ತಿ, ಒಯ್ಯನೆ - ಮೆಲ್ಲಗೆ, ನವ ವಿಳಾಸ ಪ್ರೌಢಿ - ಗಂಭೀರವಾದ ಹೊಸ ರೀತಿ, ನಳಿನ - ಕಮಲ.

(೩೩) ಮಗಳ - ಗಂಗೆಯು, ಬೊಮ್ಮ - ಬ್ರಹ್ಮ, ಬಗೆವೊಡೆ - ಆಲೋಚಿಸಿದರೆ, ಒಗುಮಿಗೆ - ಹೆಚ್ಚಾದ.

## ಹದಿನೈದನೆಯ ಸಂಧಿ.

ಸೂಚನೆ || ಭೂಪತಿ ವ್ರಜ ಗರ್ವ ಸರ್ವ |
ಸ್ವಾಪಹರ ಹರಧನುವನಾ ನರ |
ರೂಪಿನಬುಜಾಂಬಕನು ಗೆಲಿದೊಲಿಸಿದನು ಜಾನಕಿಯ ||

ತರುಣ ಕೇಳಾ ಜನಕ ಭೂಪತಿ |
ಪರಮ ಸಂತೋಷದಲಿ ಸೀತಾ |
ತರುಣಿಯನು ತೆಗೆದಪ್ಪಿಯಂಕದ ಮೇಲೆ ಕುಳ್ಳಿರಿಸಿ ||
ನೆರೆದ ರಾಯರೊಳವನನೀ ಶಶಿ |
ಧರನ ಚಾಪವನೇರಿಸಿದ ಭೂ |
ವರನನೊಲಿಸೆಂದಿತ್ತನಾ ಮಂದಾರ ಮಾಲಿಕೆಯ || ೧ ||

ಬಳಸಿದರು ಬಳಿಕವನಿಜೆಯನೂ |
ರ್ಮಿಳೆ ಮಹಾ ಮಾಂಗಲ್ಯ ಕನ್ಯಾ |
ಕುಲ ಶಿರೋಮಣಿ ಮಾಂಡವಿ ಶ್ರುತಕೀರ್ತಿಯೆಂಬವರು ||
ಹಲವು ಪರಿಚರಿಯಕದ ಸೇವಾ |
ಲಲನೆಯರು ಪರಿವೇಷ್ಟಿಸಿದರು |
ಜ್ವಲ ಸುಕಾಂತಾ ಜನದ ತಿಂಥಿಣಿ ಕಾಣಲಾಯ್ತೆಂದ || ೨ ||

ಅಗಿದು ಹೊಳೆವಕ್ಷಿಗಳ ಮರಿ ಮಿಾ |
ನುಗಳ ವಿಕಸಿತ ವದನ ಕಂಜಾ |
ಳಿಗಳ ಕಂಪಿನ ಭರದ ಭೂರಿಭ್ರಮರ ವಿಭ್ರಮದ ||

ಸೂ|| ವ್ರಜ - ಸಮೂಹ, ಸರ್ವಸ್ವ - ಸಂಪೂರ್ಣವಾದ ಭಾಗ, ಅಪಹರ - ನಾಶಮಾಡುವಿಕೆ, ಅಬುಜಾಂಬಕ - (ಕಮಲನೇತ್ರ - ವಿಷ್ಣು) ರಾಮ, ಒಲಿಸು - ಮೆಚ್ಚಿಸು.

(೧) ಅಂಕ - ತೊಡೆ, ನೆರೆದ ರಾಯರೊಳ್ ಈ ಶಶಿಧರನ ಚಾಪವನು ಏರಿಸಿದ್ದ ಭೂವರನನು ಆವನನು ಒಲಿಸು ಎಂದನ್ವಯ, ಶಶಿಧರ - ಈಶ್ವರ, ಏರಿಸಿದ - ಹದಯನ್ನೇರಿಸು ಕಟ್ಟಿದ, ಭೂವರ - (ಭೂಮಿಯ ಪತಿ) - ದೊರೆ, ಮಂದಾರ - ಕಲ್ಪವೃಕ್ಷದ ಹೂ.

(೨) ಊರ್ಮಿಳೆ - ಸೀತಾದೇವಿಯ ತಂಗಿ, ಮಾಂಡವಿ ಶ್ರುತಕೀರ್ತಿ - ಕುಶಧ್ವಜನ ಪುತ್ರಿಯರು, ಪರಿಚರಿಯಕ - ಶುಶ್ರೂಷೆಮಾಡುವ, ಸೇವಾ ಲಲನೆ - ದಾಸಿ, ಪರಿವೇಷ್ಟಿಸು - ಸುತ್ತಲೂ ಬಳಸಿಕೊಳ್ಳು, ಕಾಂತಾಜನ - ಹೆಂಗಸರು, ತಿಂಥಿಣಿ - ಗುಂಪು.

(೩) ಅಗಿದು - ಹೆದರಿ, ವಿಕಸಿತ - ಅರಳಿದ, ಕಂಜಾಳಿ - ಕಮಲಗಳ ಗುಂಪು, ಕಂಪಿನ

ಯುಗ ಪಯೋಧರ ಚಕ್ರವಾಕದ |
ನಗೆಯ ಲಾವಣ್ಯಾಂಬು ರಸದು |
ಬ್ಬುಗಳ ಬೊಬ್ಬುಳಿಕೆಗಳ ಕಾಂತಾ ಸರಸಿ ರಂಜಿಸಿತು || ೩ ||

ಮೊಳಗಿದುವು ನಿಸ್ಸಾಳ ತತಿ ನಿಮಿ |
ಕುಲ ಶಿರೋಮಂಡನನ ಸನ್ನೆಯ |
ಲುಲಿವ ಕಂಚುಕಿಗಳ ಘಡಾವಣೆಯಲಿ ನೃಪಾಲ ಚಯ ||
ಗಳದ ಕಪ್ಪಿನ ಗರುವ ದೇವನ |
ಬಲು ಶರಾಸನವಿದ್ದೆಡೆಗೆ ಹೆ |
ಕ್ಕಳಿಸಿ ಹೊದ್ದಿದರುದಿತ ಮದದುಬ್ಬಿನ ವಿಳಾಸದಲಿ || ೪ ||

ಹಾರ ಕುಂಡಲ ಕಟಕ ಮಣಿ ಕೋ |
ಟೀರ ಭಾರದ ಭೂರಿವೆಳಗಿನ |
ಘೋರ ಘೋಷದ ಕಡೆಯ ಹಾರಾವಳಿಯ ಸೊಗಸುಗಳ ||
ಧಾರಿಣೀಶ್ವರರೊಬ್ಬರೊಬ್ಬರು |
ಹೋರಿದರು ಬಿಲ್ಲಿನಲಿ ಬಯಕೆಯ |
ಭಾರಣೆಯ ಬಯಲಾಸೆಯಲಿ ಮೇಣ್ ಬಹು ಪ್ರತಾಪದಲಿ || ೫ ||

ನಿಷಧನಳ್ಳಿಗಳಾಡಿದುವು ಭಾ |
ವಿಸಿತು ಬಳಲಿಕೆ ಚೈದ್ಯ ನೃಪಗು |
ಬ್ಬಸವು ಬಲುಹಾಯ್ತಂಗಪತಿಗೆಚ್ಚರಿಕೆ ಬಡವಾಯ್ತು ||

ಭರ - ತಲೆಗೂದಲ ಗುಂಪು, ಭೂರಿ - ಹೆಚ್ಚಾದ, ಭ್ರಮರ - ತುಂಬಿ, ಯುಗ - ಎರಡು. ಬೊಬ್ಬುಳಿಕೆ- ನೀರಮೇಲಿನ ಗುಳ್ಳೆ, ಸರಸಿ - ಸರೋವರ.

(೪) ಮೊಳಗು - ಧ್ವನಿಮಾಡು, ನಿಸ್ಸಾಳ - ಭೇರಿ, ಶಿರೋಮಂಡನ - (ಶಿರೋಭೂಷಣ) - ಶ್ರೇಷ್ಠ, ನಿಮಿಕುಲ ಶಿರೋಮಂಡನ- ಜನಕ, ಉಲಿವ - ಕೂಗುವ, ಕಂಚುಕಿ - ಅರಮನೆಯ ಅಂತಃಪುರದ ಸೇವಕ, ಘಡಾವಣೆ - ಅರ್ಭಟ, ಗಳದ ಕಪ್ಪಿನ ಗರುವ ದೇವ - (ಕೊರಲಲ್ಲಿ ಕಪ್ಪು ಬಣ್ಣವುಳ್ಳ ದೊಡ್ಡ ದೇವರು) - ಈಶ್ವರ, ಶರಾಸನ - ಧನುಸ್ಸು, ಹೆಕ್ಕಳಿಸು - ಉತ್ಸಾಹಗೊಳ್ಳು, ಹೊದ್ದು- ಬಂದು ಸೇರು, ಉದಿತ ಮದ - ಹುಟ್ಟಿದ ಗರ್ವ.

(೫) ಕುಂಡಲ - ಪಚ್ಚೆಯೊಂಟಿ, ಕೋಟೀರ - ಕಿರೀಟ, ಕಡೆಯ - ಕಡಗ, ಧಾರಿಣೀಶ್ವರ - (ಭೂಮಿಗೊಡೆಯ) - ದೊರೆ, ಭಾರಣೆ - ಹೆಚ್ಚಿಕೆ, ಬಯಲಾಸೆ - ವ್ಯರ್ಥವಾದ ಬಯಕೆ.

(೬) ಬಲು ಬಿಲ್ಲ [illegible] ನಿಷಧನಳ್ಳಿ [illegible] ನಡುಗುವವನು [illegible] ಅಳ್ಳೆ - ಪಕ್ಕೆ, ಬಲುಹಾಯ್ತು - ಹೆಚ್ಚಾಯ್ತು, ಅಂಗಪತಿ - ಅಂಗರಾಜ. [illegible]

ವಿಷಮ ವೀರ ಯುಧಾಜಿತುವಿನಾ |
ಯಸವನೇವೇಳುವೆನು ಮಿಕ್ಕಿನ |
ವಸುಮತೀಶರ ಪಙ್ಕ್ತಿಯಲಿ ಬಲು ಬಿಲ್ಲ ಬವರದಲಿ || ೬ ||

ಸೋಳ ಪಿಮ್ಮೆಟ್ಟಿದನು ಹಿಂದಕೆ |
ಲಾಳ ಸರಿದನು ಪಿಂಗಿದನು ಬಂ |
ಗಾಳ ಬೆಂಗೊಟ್ಟೋಡಿದನು ಪಾಂಡ್ಯನು ಪಲಾಯನವ ||
ಓಲಗಿಸಿದನು ಬಾಹ್ಲಿಕನು ಪಾಂ |
ಚಾಲ ಸಿಂಧು ಕಳಿಂಗ ಮರು ನೇ |
ಪಾಳದರಸರು ಸರಸಕೊಳಗಾದರು ಸತೀ ಜನದ || ೭ ||

ಕರೆಕರೆದು ಕಡು ಚಪಳೆಯರು ಚ |
ಪ್ಪರಿಸಿ ನಾಚಿಸಿದರು ನೃಪಾತ್ಮಜೆ |
ಗರಸರಾಗಲು ಬಂದವರ ಮೋರೆಗಳ ನೋಡೆನುತ ||
ಅರ ನಗೆಯ ಬಿರು ನಗೆಯ ನಗೆಗಳ |
ತೊರಳಿಗಳಲಡಬಿದ್ದು ಕರದಾ |
ವರೆಗಳಲಿ ಚಪ್ಪರಿಸಿ ತೆವರಿದರಿಟ್ಟು ಭೂಭುಜರ || ೮ ||

ಕಂಡು ಬಳಿಕಿದನುಳಿದ ಮನ್ನೆಯ |
ಮಂಡಳಿಕ ಸಾವಂತರೇಳದೆ |
ಮಂಡಿಸಿದರಲ್ಲಲ್ಲಿಯೇ ಬಿಲ್ಲಿಗೆ ನಮೋ ಎನುತ ||

ಬಡವಾಯ್ತು - ಜ್ಞಾನ ತಪ್ಪಿತು, ವಿಷಮ ವೀರ - ಮಹಾ ಶೂರ, ಆಯಸ - ಆಯಾಸ (ಸಂ.), ವಸುಮತೀ - (ಧನವನ್ನು ಧರಿಸಿರುವುದು) - ಭೂಮಿ, ಬವರ - ಯುದ್ಧ.

(೭) ಲಾಳ - ಲಾಳ ದೇಶಾಧಿಪತಿ, ಪಿಂಗು - ಹಿಂದಕ್ಕೆ ಹೋಗು, ಬೆಂಗೊಡು - ಹಿಂದಿರುಗಿ. ಓಲಗಿಸು - ಮಾಡು, ಸರಸ - ಹಾಸ್ಯ, ಸತೀಜನ - ಹೆಂಗಸರು.

(೮) ಚಪಳೆಯರು - ಹೆಂಗಸರು, ಚಪ್ಪರಿಸು - ಲೊಚಗುಟ್ಟು, ಅರಸರು - ಗಂಡಂದಿರು, ಬಿರು ನಗೆ - ಗಟ್ಟಿಯಾದ ನಗು, ತೊರಳಿ - ಗುಂಪು, ಅಡಬಿದ್ದು - ಬಿದ್ದುಬಿದ್ದು, ಕರದಾವರೆ - ತಾವರೆ ಯಂತಿರುವ ಕೈ, ಚಪ್ಪರಿಸಿ - ಚಪ್ಪಾಳೆ ತಟ್ಟಿ, ಇಟ್ಟು ತೆವರಿದರು - ಹೊಡೆದಟ್ಟಿದರು.

(೯) ಮನ್ನೆಯ - ಮಾನ್ಯ (ಸಂ.), ಮಂಡಳಿಕ - ಒಂದು ಪ್ರಾಂತದ ಅಧಿಕಾರಿ, ಸಾವಂತ -

ಗಂಡುಗಲಿ ರಾವಣನು ರಾಕ್ಷಸ |
ತಂಡ ಸಹಿತಾ ಸಮಯದಲಿ ನೃಪ |
ಮಂಡಲಿಯ ಬಳಿಗೆಳೆದನನುಪಮ ವರ ವಿಮಾನದಲಿ ॥ ೯ ॥

ಎದ್ದು ನಿಂದಿದುವಮರಗಣವಜ |
ನೆದ್ದು ಹರಸಿದನೀಶನಂಘ್ರಿಗೆ |
ಬಿದ್ದನವನಪ್ಪಿದನು ಸಾರ್ದರು ನೃಪರು ಕೆಲ ಬಲಕೆ ||
ದೊದ್ದೆಗರು ರಕ್ಕಸನ ಕಾಣುತ |
ಕದ್ದು ಹಾಯ್ದರು ಜನಕ ಚಿಂತೆಯು |
ಲದ್ದನವ ನಡೆತಂದನುಗ್ಘಡಣೆಯ ನಿನಾದದಲಿ ॥ ೧೦ ॥

ತೊಡರು ಝುಣ ಝುಣ ರವದ ಸುರರು |
ಗ್ಘಡದ ಬಿರುದಿನ ಬಾವುಲಿಯು ಕೆ |
ಪ್ಪಿಡಿದ ಕಾಯದ ಕುಡಿವರಿದ ದಾಡೆಗಳ ಬೆಳಗುಗಳ ||
ಇಡಿದ ಮಣಿ ಮಕುಟಗಳ ಝುಳಪಿನ |
ಖಡುಗ ಹಸ್ತದ ಶೋಣಿತಾಂಬರ |
ದುಡಿಗೆಯಗ್ಗದ ರಾಯ ರಕ್ಕಸನೈದಿದನು ಧನುವ ॥ ೧೧ ॥

ಬೆದರಿದರು ಕಂಡಿವನ ರೂಪನು |
ಹೊದರುದಲೆಗಳ ಹೊತ್ತ ಜೋಹದ |
ಪದೆದ ಗರ್ವದ ಗಾಢ ಗಮನದ ಭೂತವ್ರೋ ಎಂದು ||
ಸುದತಿಯರು ಗದಗದನೆ ನಡುಗಿದ |
ರದುರಿ ಸಿರಿಮೊಗವನು ಮಹೀಸುತೆ |
ಕೆದರಿದಳು ಹೇರಾಳ ಚಿಂತೆಯಲಿದ್ದನಾ ಜನಕ ॥ ೧೨ ॥

ಸಾಮಂತ (ಸಂ.) - ಅಧಿರಾಜ, ಗಂಡುಗಲಿ - ಶೂರ, ತಂಡ - ಗುಂಪು, ಮಂಡಲಿ - ಗುಂಪು.

(೧೦) ನಿಂದಿದುವು - ನಿಂತಿದ್ದುವು, ಅಜ - ಬ್ರಹ್ಮ, ಈಶ - ಈಶ್ವರ, ಕೆಲಬಲಕೆ - ಪಕ್ಕಗಳಿಗೆ, ದೊದ್ದೆಗರು - ಗುಂಪಿನ ಜನರು, ಅದ್ದನು - ಮುಳುಗಿದ್ದನು

(೧೧) ತೊಡರು - ಬಿರುದಿನ ಸರಪಣಿ, ರವ - ಶಬ್ದ, ಬಾವುಲಿ - ಕಿವಿಯ ಒಡವೆ, ಇಡಿದ - ತುಂಬಿದ, ಕುಡಿವರಿದ - ಮುಂದಕ್ಕೆ ಹೊರಟಿರುವ, ದಾಡೆ - ಕೋರೆಹಲ್ಲು, ಝುಳಪಿನ - ಝಳಪಿಸುತ್ತಿರುವ, ಅಲ್ಲಾಡಿಸುತ್ತಿರುವ; ಶೋಣಿತ - ಕೆಂಪು, ರಾಯ ರಕ್ಕಸ - ರಾಕ್ಷಸ ರಾಜ.

(೧೨) ಹೊದರು - ಪೊದೆ, ಹೊತ್ತ - [illegible] - ಧರಿಸಿರುವ ವೇಷ, ಪದೆದ - (ಪ್ರೀತಿಸಿದ) ಹೊಂದಿದ, ಗಾಢ - ಬಿರುಸಾದ, ಗಮನ - ನಡಿಗೆ, ಅದುರಿ - ಅದುರಿಸಿ, ಸಿರಿಮೊಗ - ಕಾಂತಿಯುಕ್ತ

ಖಳನಿವನು ಪೂರ್ವದಲಿ ರಜತಾ
ಚಲವನಪಗತ ಭೀತಿಯಲಿ ಕರ |
ತಳದಲಗಜೆಯು ಶಿವನು ಸಹಿತೆತ್ತಿದನು ಜಗವರಿಯೆ ||
ಅಳುಕದಿರದೀ ಧನುವಿವಂಗು |
ಜ್ಜ್ವಳ ನಿಮಿರಾಶ್ವರ ವಂಶ ಮುಕುರಕೆ |
ಕಿಲುಬು ದೋರಿತಲೇ ಮಹಾದೇವೆನುತ ಚಿಂತಿಸಿದ || ೧೩ ||

ಧನುವಿದೆಲ್ಲಿಯದೆಲ್ಲಿ ನಾರದ |
ಮುನಿಯ ವಚನವಿದೆಲ್ಲಿ ಮರುಳಾ |
ದೆನು ಮಹೀಶರ ನೆರಹಿ ಮಗುಳಿನ್ನೇನು ಗತಿ ತನಗೆ ||
ವನಜವೆತ್ತಲು ಗರಳಮಯ ಜೀ |
ವನವಿದೆತ್ತಲು ಧೇನುವೆತ್ತಲು |
ಜನಿತ ಕೋಪ ದ್ವೇಷಿಯೆತ್ತಲು ಶಿವಶಿವಾ ಎಂದ || ೧೪ ||

ವಿಪುಳ ಮತಿ ಕುಶ ಕೇಳು ಲಂಕಾ |
ಧಿಪನು ಬಂದನು ಬಿಲ್ಲಡೆಗೆ ನಮ |
ಗುಪಕರಿಸಿದುದಲಾ ಮಹೀಶರ ಗೆಲಿದ ಕೋದಂಡ ||
ಕೃಪೆಯು ಲೇಸೆನುತುನ್ಮನದಿ ಕೋ |
ಣಪ ಕುಲಾಗ್ರಣಿ ಬಯಲ ಮೋಹ |
ದ್ವಿಪವನೇರಿದನರೆ ನಿಮಿಷವಾಸುರ ವಿಕಾರದಲಿ || ೧೫ ||

(೧೩) ಖಳ - ರಾಕ್ಷಸ, ರಜತಾಚಲ - (ಬೆಳ್ಳಿಯ ಬೆಟ್ಟ) - ಕೈಲಾಸ, ಅಪಗತ - ಬಿಟ್ಟು ಹೋದ, ಅಗಜೆ - ಪಾರ್ವತಿ, ಅಳುಕದಿರದು - ಹೆದರದೆ ಇರುವುದಿಲ್ಲ, ಮುಕುರ - ಕನ್ನಡಿ, ಉಜ್ಜ್ವಳ ನಿಮಿ......ದೋರಿತಲೇ - ಪರಿಶುದ್ಧವಾದ ನಿಮಿರಾಜನ ಕುಲಕ್ಕೆ ಕಳಂಕವುಂಟಾಯ್ತು.

(೧೪) ಮರುಳು - ಹುಚ್ಚು, ನೆರಹಿ - ಗುಂಪು ಸೇರಿಸಿ, ಮಗುಳೆ - ಮತ್ತೆ, ಗರಳ - ವಿಷ, ಜೀವನ - ನೀರು, ಧೇನು-ಹಸು, ಜನಿತ ಕೋಪ ದ್ವೇಷಿ - ಕೋಪದಿಂದ ವೈರವನ್ನು ತೋರಿಸುವವನು, ವನಜ......ದ್ವೇಷಿಯೆತ್ತಲು - ವಿಷ ಮಿಶ್ರವಾದ ನೀರಿನಲ್ಲಿ ಕೋಮಲವಾದ ಕಮಲವು ಬೆಳೆಯಲಾರದೆ ಬಾಡಿ ಹೋಗುವಂತೆಯೂ, ಸಾಧುವಾದ ಹಸುವು ಕಟುಕನ ಕೈಗೆ ಸಿಕ್ಕಿ ನಾಶವಾಗುವಂತೆಯೂ ಈ ಕೋಮಲಾಂಗಿಯಾದ ಸೀತೆಯು ಕ್ರೂರನಾದ ಈ ರಾವಣನ ಕೈಗೆ ಸಿಕ್ಕಿ ನಾಶವಾಗುವಳು.

(೧೫) ವಿಪುಳ ಮತಿ - ಬಹು ಬುದ್ಧಿಶಾಲಿ, ನಮಗುಪ ......ಲೇಸೆನುತ - ಈ ಧನುಸ್ಸು ನನ್ನ ಮೇಲೆ ಕೃಪೆ ಇಟ್ಟು ಎಲ್ಲಾ ರಾಜರನ್ನು ಗೆದ್ದು ನನಗುಪಕಾರಮಾಡಿತು (ಇವರಲ್ಲಾರಾದರೂ ಬಿಲ್ಲನ್ನೇರಿಸಿದ್ದರೆ ಸೀತೆಯು ನನಗೆ ಸಿಕ್ಕುತ್ತಿರಲಿಲ್ಲ). ಉನ್ಮನ - [illegible], ಕೋಣಪ - ರಾಕ್ಷಸ, ಬಯಲ ಮೋಹದ್ವಿಪವನೇರಿದನು - ವ್ಯರ್ಥವಾದ ಆಸೆಯೆಂಬ ಆನೆಯನ್ನು ಹತ್ತಿದನು (ಆಸೆಯಿಂದ [illegible]), ಅಸುರ ವಿಕಾರ - ರಾಕ್ಷಸ ಚೇಷ್ಟೆ

ನಿಂದಿದನು ಬಳಿಕವನ ಬಿಲ್ಲಿನ |
ಮುಂದೆ ಬಳಿಸಂದಸುರ ನಿಕರವ |
ಹಿಂದಣಿಗೆ ಹಿಮ್ಮೆಟ್ಟಿಸುತ್ತೀಕ್ಷಿಸುತಲೀಹ ಬಲುವ ||
ಮಂದ ಹಾಸದಲಾ ಕರಾಗ್ರದ |
ಚಂದ್ರಹಾಸವ ಸೂತಗಿತ್ತರ |
ವಿಂದ ವದನೆಯ ನೋಡಿ ಚಾಪಕೆ ನೀಡಿದನು ಕರವ || ೧೬ ||

ನೃಪ ತಿರಸ್ಕಾರಾಪಹಾಸದ |
ಚಪಳೆಯರ ನಗೆಯಡಗಿದುವು ಭೂ |
ಮಿಪರ ಭುಜ ಬಲ ಮಾನಹಾನಿಯ ಕೋಪ ಕೊಂಕಿದುವು ||
ವಿಫಲವಾದುದೆ ಜನಕ ಭೂಪನ |
ತಪದ ಫಲವೆಂದಿಷ್ಟಜನ ನಿ |
ರ್ಲಪಿತ ಚಿಂತಾ ಭರದಲಿದ್ದುದು ಬೆರಳ ಮೂಗಿನಲಿ || ೧೭ ||

ನೋಡಿ ಬಳಿಕಾ ವಿಬುಧ ವಂಶ ವಿ |
ಭಾಡ ಕೈಯಿಕ್ಕಿದನು ನಿಧಿಯನು |
ಕೂಡಿಕೊಂಡಿಹ ಕಾಲ ಸರ್ಪನ ತುಡುಕುವಂದದಲಿ ||
ಗಾಢ ಮುಷ್ಟಿಯೊಳೌಕಿ ಹಿಡಿದ |
ಲ್ಲಾಡಿಸಿದನಾ ಧನುವನದು ಕೈ |
ಗೂಡದಿರೆ ಕೈದೆಗೆದು ಬಾಹಪ್ಪಳಿಸಿ ಬೊಬ್ಬಿರಿದ || ೧೮ ||

ಬಲಿದು ಮಕುಟಾವಳಿಯ ಶೋಣಿತ |
ಪಳಿಯ ರಕ್ಕಸ ದೇಸಿಯಲಿ ಬಿಗಿ |
ದೆಳೆವ ಹಾಹೆಯನೋಜೆಗೊಳಿಸಿಕ್ಕಲಿಸಿ ಪದ ಯುಗವ ||

(೧೬) ಚಂದ್ರಹಾಸ - ಕತ್ತಿ, ಸೂತ - ಸಾರಥಿ, ಅರವಿಂದ - ಕಮಲ.

(೧೭) ನೃಪ ತಿರಸ್ಕಾರ - ದೊರೆಗಳನ್ನು ಅಲ್ಲಗಳೆಯುತ್ತಿದ್ದ, ಭುಜಬಲ ಮಾನಹಾನಿ [illegible] ವೃಥಾ ವಾದುದರಿಂದುಂಟಾದ ಅಪಮಾನ, ಕೊಂಕಿದುವು - (ಬಗ್ಗಿತು) - ಹೋಯ್ತು, ಇಷ್ಟ ಜನ - ಬಂಧುಗಳು, ನಿರ್ಲಪಿತ - ಮಾತಿಲ್ಲದ.

(೧೮) ವಿಬುಧ ವಂಶ ವಿಭಾಡ - ದೇವತೆಗಳ ವಂಶವನ್ನು ನಾಶಮಾಡಿದ, ನಿಧಿ - [illegible] ಕಾಲ ಸರ್ಪ - ಕೃಷ್ಣ ಸರ್ಪ, ತುಡುಕು - ಹಿಡಿ, ಕೈಗೂಡು - ಸ್ವಾಧೀನವಾಗು, ಬಾಹ [illegible] - [illegible].

(೧೯) [illegible]

ಅಳುಕದೆಂದು ಹರಾದ್ರಿಯನು ಕಿ |
ತ್ತಿಳೆಯನಗಲಿಸುವಂತೆ ಬಾಹಾ |
ಲುಳಿತ ಖಳನೆತ್ತಿದನು ನೆಲನಲೆದಾಡಲೆಡಬಲಕೆ || ೧೯ ||

ಒದೆದುಕೊಂಡುದು ಜಲಧಿ ಗರಳವ |
ನುದುಗರಿಸಿದನು ಫಣಿಪ ಕೂರ್ಮನ |
ಹೃದಯ ಬಿಚ್ಚಿತು ಬಿಗುಹು ಸಡಲಿದುದಾ ಕುಲಾದ್ರಿಗಳ ||
ಅದುರಿತಂಬರವಬುಜಜಾಂಡದ |
ತುದಿ ತುರಾರಿಸಿತೀ ದಶಾಸ್ಯನ |
ಪದ ವಿಘಾತಿಗೆ ಪೂತು ಮಝು ಭಾಪೆಂದುದಮರ ಗಣ || ೨೦ ||

ಮೃಡ ಸರೋಜಭವಾದಿ ಸುರರು |
ಗ್ಘಡಿಸೆ ರಕ್ಕಸ ರಾಯನೆತ್ತಿದ |
ನೊಡನೆ ಬೊಬ್ಬಿರಿದವುಕಿದನು ಮೊಳಕಾಲಲಾ ಧನುವಾ ||
ತುಡುಕಿ ತಿರುವ ಸುತೀವ್ರ ಚಾಪದ |
ಹೆಡಕಿಗೊಯ್ದನು ಕೂಡೆ ರಕ್ಕಸ |
ಗಡಣವಾಯ್ತೆಂದಬ್ಬರಿಸಿದುದು ಹರೆಯ ಹೊಯ್ಲಿನಲಿ || ೨೧ ||

ಆಗಲಿವನಹನೆಂದು ಜನಕನ |
ಬೈಗುಳಿನ ಬಾಯ್ಗಳಲಿ ನಗೆಗಳ |
ಬಾಗಿನಲಿ ಲಳಿಯೇರಿತವನೀಪಾಲ ಸಂದೋಹ ||
ತಾಗಿದಂಜಿಕೆಯಿಂದ ಚಿಂತಾ |
ಬಾಗರದೊಳಿದ್ದಳು ವಿದೇಹನ |
ಯಾಗ ಭೂಮಿಯ ಮಗಳು ಮರುಗಿತು ಮಾನಿನೀ ನಿಕರ || ೨೨ ||

ಅಳುಕದೆ - ಹೆದರದೆ, ಕಿತ್ತು + ಇಳೆಯನು + ಅಗಲಿಸುವಂತೆ, ಬಾಹಾ ಲುಳಿತ - ಭುಜದ ಚಳಕವುಳ್ಳ, ಅಲೆದಾಡು - ತೂಗಾಡು.

(೨೦) ಉದುಗರಿಸು - ಕಕ್ಕು, ಫಣಿಪ - ಸರ್ಪರಾಜ, ಕೂರ್ಮ - ಭೂಮಿಯನ್ನು ಹೊತ್ತಿರುವ ಆಮೆ, ಬಿಚ್ಚಿತು - ಒಡೆದುಹೋಯ್ತು, ಬಿಗುಹು - ಬಿಗಿ, ಅಬುಜಜಾಂಡ - ಬ್ರಹ್ಮಾಂಡ, ತುರಾರಿಸಿತು - ಬಿರಿಯಿತು, ದಶಾಸ್ಯ - ರಾವಣ, ವಿಘಾತಿ - ತುಳಿತ.

(೨೧) ಮೃಡ - ಈಶ್ವರ, ತಿರು - ಬಿಲ್ಲಿನ ಹಗ್ಗ, ತೀವ್ರ ಚಾಪ - ಕ್ರೂರವಾದ ಬಿಲ್ಲು, ಹೆಡಕು - ಮೇಲಿನ ತುದಿ, ಆಯ್ತೆಂದು - ಏರಿಸಿದುದಾಯ್ತು ಎಂದು, ಹರೆ - ತಮಟೆ, ಹೊಯ್ಲು - ಹೊಡೆತ.

(೨೨) ಅಹನೆಂದು - (ಅಳಿಯನು) ಆಗುವನೆಂದು, ಬಾಗು - ಹೆಚ್ಚಳ, ಲಳಿ - ಉತ್ಸಾಹ, ಬಾಗರ - ಪ್ರಾಕಾರವಾದ, ಯಾಗ ಭೂಮಿಯ ಮಗಳು - (ಯಜ್ಞಭೂಮಿಯಲ್ಲಿ ಸಿಕ್ಕಿದ ಮಗಳು) - ಸೀತೆ, ಮರುಗು - ದುಃಖಪಡು.

ಅಳುಪಲಾರಂತರವು ಜಗದ |
ಗ್ಗಳದ ದೈವದ ಸೊಮ್ಮಿಗಸುರನ |
ನಿಳಿಕೆಗಂಡುದು ಚಾಪ ಚಪ್ಪರಿಸಿತು ಚಡಾಳಿಕೆಯ ||
ಕಳವಳಿಸಿದುವು ಕರಣ ಕಂಗಳ |
ಬಳಸಿದುದು ಬಲು ತಿಮಿರ ಕಥತಳ |
ವಲುಗಿದುವು ಕಾವರಿಸಿದುವು ಕಾಲ್ಗಳು ದಶಾನನನ || ೨೩ ||

ಉಳಿದುದೈ ಯವಮಾತ್ರಕಾ ಬಿಲು |
ಗೊಲೆಯ ತಿರುವಿನ ಕೂಟ ನೇಲಕೆ |
ನಿಲುಕದಾದುದು ಕೊಂಡ ಗಮನಕೆ ಪರಮ ಪರಿತೋಷ ||
ಫಲಿಸಲರಿಯದ ಕಾರ್ಯದಲಿ ಹಂ |
ಬಲಿದು ಕೆಡುವವನಂತೆ ಕೆಡೆದನು |
ಬಿಲುಸಹಿತ ಬರ್ಹಿರ್ಮುಖರ ವನಿತೆಯರು ಗಹಗಹಿಸೆ || ೨೪ ||

ಕಂಡು ಕಿರುನಗೆಗಳಲಿ ರಾಯರ |
ತಂಡವಿದ್ದುದು ಮಂದ ಹಾಸದ |
ಮಂಡೆಗಳ ಮುರಿವುಗಳ ಮುಸುಕಿನಲಿರ್ದುದಮರ ಗಣ ||
ಗಂಡುಗಲಿ ರಾವಣಗೆ ಬಿಲ್ಲಿನ |
ದಂಡೆಯನು ಹಾಯ್ಕಿದಳೆ ನಿಜ ದೋ |
ರ್ದಂಡದಂಗನೆಯೆನುತ ಗುಹಿಲಿಕ್ಕಿತು ಸತೀ ನಿವಹ || ೨೫ ||

(೨೩) ಅಳುಪಲು - ಆಸೆಪಟ್ಟರೆ, ಆರಂತರ - ಯಾರಿಗೆ ಸಾಧ್ಯ, ಸೊಮ್ಮು - (ಒಡವೆ)-ವಸ್ತು, ಇಳಿಕೆಗಂಡುದು - ಅಲಕ್ಷ್ಯಮಾಡಿತು, ಚಪ್ಪರಿಸು - ಧ್ವನಿಮಾಡು, ಚಡಾಳಿಕೆಯ - ಹೆಚ್ಚಾಗಿ, ಕರಣ - ಇಂದ್ರಿಯಗಳು, ತಿಮಿರ - ಕತ್ತಲೆ, ಕಾವರಿಸು - ತತ್ತರಿಸು.

(೨೪) ಯವ ಮಾತ್ರ - (ಜವೆಯಕಾಳಿನಷ್ಟು)-ಸ್ವಲ್ಪ, ಗೊಲೆ - ಮೇಲಣ ತುದಿ ನಿಲುಕ...... ತೋಷ - ತೆಗೆದುಕೊಂಡ ರಭಸಕ್ಕೆ ತಕ್ಕ ಸಂತೋಷವು ದೊರೆಯದೆ ಹೋಯ್ತು, ಕೆಡೆದನು - ಬಿದ್ದನು, ಬರ್ಹಿರ್ಮುಖರು - (ಅಗ್ನಿಯೇ ಮುಖವಾಗಿ ಉಳ್ಳವರು)-ದೇವತೆಗಳು.

(೨೫) ಮಂಡೆಗಳ ಮುರಿವು - ತಲೆಗಳನ್ನು ತಿರುಗಿಸಿಕೊಳ್ಳುವಿಕೆ, ದಂಡೆ - ಹೂವಿನ ಮಾಲೆ, ದೋರ್ದಂಡ... - ದಂಡದಂತೆ ನೇರವಾಗಿ ಮುಂದರಿರುವ ತೋಳಿನಿಂದ, ಗುಹಿಲಿಕ್ಕು - ... ಹಾಕಿಕೊಂಡು ನಗು, ನಿವಹ - ಗುಂಪು.

ದೆಸೆದೆಸೆಗೆ ಸಿಡಿದುವು ಕಿರೀಟ |
ಪ್ರಸರ ಹರಿದುದು ಹಾರವೆದೆಯಲಿ |
ಬಸವಳಿದು ಬಿಲ್ಲುಗುಳಿಸಿತು ರುಧಿರವನು ವದನಃ
ರಸದ ಲಂಪಟಿಕೆಕ್ಕುವನು ಖಂ |
ಡಿಸಲು ಸಿಲುಕಿದ ನಾಲಗೆಯು ಗರ |
ಗಸದ ನರಿಯವೊಲಿರ್ದನಾ ಬಿಲ್ಲಡಿಯುಲಸುರೇಂದ್ರ || ೨೬ ||

ಹಾಯೆನುತ ಹರಿತಂದು ರಕ್ಕಸ |
ನಾಯಕರು ಪಿಡಿದುಗಿದರಾ ಚಾ |
ಪಾಯುಧವನಂದಸುರ ಬಲ ಮಂದರವನುಗಿವಂತೆ ||
ಬಾಯ ಮಿಡುಕಿನ ಬಳಲಿ ಕಂಗಳಿ |
ನಾಯುವಿನ ತೆಗೆಬಗೆಯ ರಕ್ಕಸ |
ರಾಯನನು ಕೊಂಡೊಯ್ದು ಬೀಸಿದರಾಲವಟ್ಟದಲಿ || ೨೭ ||

ನಳಿನಭವ ಶಂಕರರು ಪೂರ್ವದೊ |
ಳೊಲಿದು ಕೊಟ್ಟವರಂಗಳಿಂದವ |
ನುಳಿದನಲ್ಲದೆ ಬಿಲ್ಲು ಬಿದ್ದಸು ತೊಲಗದವರಾರು ||
ಬಳಿಕ ಕೇಳ್ಕೆ ಕುಶನೆ ಸೀತೆಯ |
ಕಳವಿನಲಿ ಕೊಂಡೊಯ್ವೆನೆಂದವ |
ಬಲಿದ ಲಜ್ಜೆಯಳ್ಕಿದಿದನು ಲಂಕಾ ಮಹಾಪುರವ || ೨೮ ||

ಬಳಿಕ ಜನಕನ ನಂದನೆಯ ಹಂ |
ಬಲಿಸು ಬಿಟ್ಟಡು ನೆರೆದಿಳಾ ಮಂ |
ಡಲದ ರಾಯರು ಬೈದು ಭಂಗಿಸುತಾ ವಿದೇಹಜನ ||

(೨೬) ಪ್ರಸರ - ಸಮೂಹ, ಬಸವಳಿದು - ಸ್ವಾಧೀನ ತಪ್ಪಿ, ರುಧಿರ - ರಕ್ತ, ಲಂಪಟಿಕೆ - ಆಶ್ಯಾಶೆಗೆ, ಇಕ್ಕ್ಕು - ಕಟ್ಟಿನ ಬಲೆ, ಖಂಡಿಸಲು - ಸೀಳಲು, ಗರಗಸದ - ಗರಗಸದ ಕೊಯ್ಯುವ ಬಿರುಕಿನಲ್ಲಿ (ನಾಲಗೆ ಸಿಕ್ಕಿದ).

(೨೭) ಹರಿತಂದು - ಓಡಿಬಂದು, ಉಗಿದರು - ಎಳೆದುಹಾಕಿದರು, ಬಾಯುಮಿಡುಕಿನ - ಅದರುತ್ತಿರುವ ಬಾಯುಳ್ಳ, ಆಯುವಿನ ತೆಗೆಬಗೆಯ - ಜೀವವು ಹೋಗುವುದೋ ಇರುವುದೋ [illegible], ಆಲವಟ್ಟ - ಬೀಸಣಿಗೆ.

(೨೮) [illegible] - [illegible], [illegible] - [illegible], [illegible] - [illegible], [illegible] - [illegible].

(೨೯) ಭಂಗಿಸು - ಅವಮಾನ ಮಾಡು, ವಿದೇಹಜ - [illegible], [illegible] - [illegible]

ಬಲೆಯನೊಡ್ಡಿದನಿವನು ಲುಬ್ಧಕ |
ತಿಲಕನೋ ನೃಪಋಷಿಯೊ ಸಾಕಿವ |
ನೊಳಗೆ ಮಾತೇಕೆನುತ ಮಿಗೆ ಮೊರೆದೆದ್ದರಲ್ಲಲ್ಲಿ || ೨೯

ನಿಲಿಸು ರಾಯರ ನಾರದರ ನುಡಿ |
ಬಳಲಿಕೆಯ ತಂದುದೆ ಮಹಾಧನು |
ಸುಲಭವೇ ಸಾಕಿನ್ನು ಕುಳ್ಳಿರಿಸಿವರನುಚಿತದಲಿ ||
ಎಲೆ ಕುಶಧ್ವಜ ಕೇಳು ಸೀತೆಯ |
ನೊಲಿಸಲೀ ಪಾರ್ಥಿವರು ಯೌವನ |
ಕುಲ ವಿಭವ ವಿಭ್ರಮದೊಳೆಂದನುಜಂಗೆ ನೇಮಿಸಿದ || ೩೦

ಧನು ಪರೀಕ್ಷೆಯ ಗೊಡವೆ ಬೇಡೀ |
ಜನಕಜೆಯನೊಲಿಸುವುದು ಕುಲ ಯೌ |
ವನ ವಿಳಾಸ ವಿಚಿತ್ರ ವೈಭವದಿಂದ ನೀವೆಂದು ||
ಜನಪರಲಿ ಸಾರಿಸಿದ ಸಾಮದ |
ಲನುನಯವನಂಗೀಕರಿಸಿ ನೃಪ |
ಜನ ಸರಾಗದಿನಂತರಿಸಿ ಕುಳ್ಳಿರ್ದುದಲ್ಲಲ್ಲಿ || ೩೧

ಎಲೆ ಕುಶಧ್ವಜ ನಂದನೆಯನಂ |
ದಳವನೇರಿಸಿ ತೋರಿಸೀ ನೃಪ |
ಕುಲ ಶಿರೋಮಣಿಗಳನು ತನ್ನಯ ಮನಕೆ ಹತ್ತುವರ ||
ತಳೆದುಕೊಳಲಿದು ಕೃತ ಸಮಯವಿ |
ನ್ನಲಸಿಕೆಯದೇಕೆಂದು ನುಡಿಯಲು |
ಕಳಕಳವ ಕೇಳ್ದಧಟ ಮುನಿಪತಿ ರಾಮಗಿಂತೆಂದ || ೩೨

ಅಗ್ರೇಸರ, ನೃಪಋಷಿ - ರಾಜರ್ಷಿ, ಮೊರೆ - ಆರ್ಭಟಿಸು.

(೩೦) ವಿಭವ - ಐಶ್ವರ್ಯ, ವಿಭ್ರಮ - ಸೌಂದರ್ಯ.

(೩೧) ಗೊಡವೆ - ತಂಟೆ, ಸಾಮದಲಿ - ಸಮಾಧಾನದ ಮಾತಿನಿಂದ, ಅನುನಯ - [illegible] ಅಂತರಿಸಿ - ಸರಿದು ಕೊಂಡು.

(೩೨) [illegible]

ಅಲಸಿಕೆ - ತಡ, [illegible]

ಏಳು ಸೀತೆಯನೊಲಿಸು ನಡೆ ತೆಗೆ |
ಭಾಳನೇತ್ರನ ಧನುವ ಬೇಗನೆ |
ಮೇಲು ಮೊಗದುಬ್ಬಿನಲಿ ನಿಂದಿರ್ದನು ಸರಾಗದಲಿ ||
ಬಾಲನೇ ನರ ನಾಟಕದ ಸಿರಿ |
ಲೋಲನಲ್ಲಾ ಬೆರಗದೇನು ಏ |
ಕಾಲ ಮತಿ ಕುಶ ಕೇಳು ಬೀಳ್ಕೊಂಡನು ಮುನೀಶ್ವರನ || ೩೩ ||

ವರ ಪಯೋನಿಧಿ ಮಧ್ಯದಿಂದವ |
ತರಿಸುವಮೃತಾಂಶುವಿನವೋಲ್ ಮುನಿ |
ವರರ ಮಧ್ಯದೊಳೆದ್ದನಾ ರಘುನಾಥನೊಲವಿನಲಿ ||
ಪರಮ ವಿಭವಕೆ ವಿಭ್ರಮಕೆ **ಸರ** |
ಸಿರುಹಭವ ಮನ್ಮಥರು ಲೋಕಕೆ |
ದೊರೆಗಳವದಿರ ಪಿತನಲಾ ಪಡಿಗಟ್ಟಲೇನೆಂದ || ೩೪ ||

ಚರಣ ನಖ ದೀಧಿತಿಯ ಪೀತಾಂ |
ಬರದ ದಿವ್ಯ ವಿಭೂಷಣದ ಭಾ |
ಸುರ ಶರೀರದ ಹೊಗರ ಹೊಸ ಜವ್ವನದ ವಿಭ್ರಮದ ||
ಪರಮ ತೇಜೋಮಯನು ಮಾಯಾ |
ನರನು ಬಂದನು ನೆರೆದ ಪೃಥ್ವೀ |
ಶ್ವರ ಸಭಾ ಮಧ್ಯದಲಿ ಬೆರಗಾಗಿರೆ ಸಮಸ್ತ ಜನ || ೩೫ ||

ಸುರರಿಗೀಶ್ವರನಂತೆ ಧರಣೀ |
ಸುರರಿಗಮಲ ಬ್ರಹ್ಮದವೊಲಿತ |
ರರಿಗೆ ರಾಜಕುಮಾರನಂದದಿನಖಿಳ ರಾಯರಿಗೆ ||

(೩೩) ಭಾಳನೇತ್ರ - (ಹಣೆಯಲ್ಲಿ ಕಣ್ಣುಳ್ಳವನು) - ಈಶ್ವರ, ಮೇಲು ಮೊಗದ ಉಬ್ಬಿನಲಿ- ಮುಖವನ್ನು ಮೇಲಕ್ಕೆತ್ತಿಕೊಂಡು ಉತ್ಸಾಹದಿಂದ, ನರ ನಾಟಕದ ಸಿರಿಲೋಲನಲ್ಲಾ-ಮನುಷ್ಯರಂತೆ ನಟನೆ ಮಾಡುತ್ತಿರುವ ವಿಷ್ಣುವಲ್ಲವೇ ! ಬೆರಗೇನು - ಆಶ್ಚರ್ಯವೇನು ? ಬೀಳ್ಕೊಂಡನು - ಅಪ್ಪಣೆಪಡೆದನು.

**(೩೪)** **ಪಯೋನಿಧಿ** - ಸಮುದ್ರ, **ಅಮೃತಾಂಶು** - (**ಅಮೃತ ಕಿರಣವುಳ್ಳವನು**) - **ಚಂದ್ರ, ಸರಸಿರುಹಭವ** - **ಬ್ರಹ್ಮ, ಅವದಿರ** - **ಅವರ, ಪಡಿಗಟ್ಟಲು** - **ಹೋಲಿಸಲು,** ಏನು - ಏನಿದೆ

**(೩೫)** ನಖ ದೀಧಿತಿ - **ಉಗುರುಗಳ ಕಾಂತಿ, ಹೊಗರು - ಕಾಂತಿ.**

ಧರೆಗಧೀಶ್ವರನಾಗಿ ಮಾನಿನಿ |
ಯರಿಗೆ ಮನ್ಮಥನೆಂಬವೊಲ್ ಗೋ |
ಚರಿಸಿದನು ಗರುವಾಯಿಯಲಿ ಗಜ ಗತಿಯ ಗಮನದಲಿ || ೪೭ |

ಈತನಹನವನಿಜೆಗೆ ವರ ರೂ |
ಪಾತಿಶಯದಲಿ ಹರೆಯದಲಿ ಭಾ |
ವಾತಿರೇಕದಲಧಟಿನಲಿ ನಿಜ ರಾಜ ತೇಜದಲಿ ||
ಈತ ಚಾಪವ ಗೆಲಲಿ ಗೆಲದಿರ |
ಲೀತನೇ ಸಾಕೆಂಬ ಘನ ಸಂ |
ಪ್ರೀತಿ ವಚನದೊಳಿರ್ದರಬಲೆಯರಧಿಕ ಹರ್ಷದಲಿ || ೪೮ |

*  *  *  *  *

ಮುಸುಕತಭ್ರುವನಮರ ತತಿ ತಾ |
ಪಸರು ತವಕಿಸಿ ನಿಂದಿದರು ನೆರೆ |
ಮುಸುಕಿಕೊಂಡುದು ಸಕಲ ಪೃಥ್ವೀಪಾಲ ಸಂದೋಹ ||
ಕುಸುಮ ಮಾಲೆಯ ತಿರುಹುತೆತ್ತಿದ |
ಮುಸುಡಿನರೆ ನೋಟದಲಿ ಲಜ್ಜೆಯ |
ಬೆಸುಗೆಯಲಿ ನಡೆ ನೋಡುತಿರ್ದಳು ಸೀತೆ ರಘುಪತಿಯಾ || ೪೯ ||

ಬಂದು ನಿಂದಿದನೀತನಾ ಬಾ |
ಲೇಂದುಧರನೆರಡನೆಯ ಬಲ್ಲಿನ |
ಮುಂದೆ ನಿಂದೀಕ್ಷಿಸಿದನವನೀಸುತೆಯ ಸಿರಿ ಮೊಗವ ||
ಸಂದಣಿಸಿದ ಸಮಸ್ತ ಸುರ ನರ |
ವೃಂದ ಕಂಡುದೊ ಕಾಣದೋ ಪ |
ನೆಂದರಿಯನೇರಿಸಿದ ಧನುವಿದ್ದುದು ಕರಾಗ್ರದಲಿ || ೫೦ ||

(೪೭) ಅಧೀಶ್ವರ - ಒಡೆಯ, ಗರುವಾಯಿ - ಗಾಂಭೀರ್ಯ, ಠೀವಿ ; ಗಮನ - ನಡಿಗೆ.

(೪೮) ಅಹನು - ತಕ್ಕವನಾಗಿರುವನು, ವರ - ಗಂಡ, ಹರೆಯ - ಪ್ರಾಯ, ಭಾವಾತಿರೇಕ - ಹೆಚ್ಚಾದ ಸೊಬಗು, ಘನ - ಹೆಚ್ಚಾದ.

(೪೯) ತವಕಿಸು - ಕುತೂಹಲಪಡು, ಮುಸುಡು - ಮುಖ, ಬೆಸುಗೆ - ಹೊದ್ದಿಕೆ.

(೫೦) ಬಾಲೇಂದುಧರನೆರಡನೆಯ - ಎರಡನೆಯ ಈಶ್ವರನು, ಅಲ್ಲಿ ಸೇರಿದ್ದವರೊಬ್ಬರೂ ರಾಮನು ಧನುಸ್ಸನ್ನು ತೆಗೆದುಕೊಂಡು ಬಗ್ಗಿಸಿ ಹೆದೆಯನ್ನೇರಿಸಿದುದನ್ನು ಕಾಣಲಿಲ್ಲ (ಎಂದರೆ, ಅಷ್ಟು ಬೇಗ ಏರಿಸಿದನು.)

ಎಳೆಯ ಕಬ್ಬಿನ ಕೋಲ ವನ ಕರಿ |
ಕಳಭ ಕರದಲಿ ಮುರಿವವೊಲು ನಿರಿ |
ನಿಳಿಲು ನಿಳಿಲೆಂಬಬ್ಬರಣೆ ಗಬ್ಬರಿಸಿದುದು ದಿಗುತಟವ ||
ಸೆಳೆದನಾಕರ್ಣಾಂತ ಪರಿಯಂ |
ತಲಘು ಒಲ ರಘುನಾಥನಿಕ್ಕಡಿ |
ಗಳೆದುದಾ ಧನುಃ ಒಳಿಕ ಬೆದರಲು ಹೃದಯ ಭಾರ್ಗವನ || ೪೧ ||

ಪಸರಿಸಿದ ಪರಿತೋಷದುಬ್ಬಿನ |
ಮುಸುಡ ಕಾಂತಿಯು ಕಾಂತನಂಘ್ರಿಯ |
ಸಸಿನದಲಿ ಥಾಳಿಸುವ ಕದಪಿನ ಪಾಂಗಿನಗ್ಗಳದ ||
ನಸು ನಗೆಯು ಸಿರಿ ಮೊಗದ ಲಜ್ಜಾ |
ರಸದ ಸೊಬಗಿನ ಸೀತೆ ಸುರಕುಜ |
ಕುಸುಮ ಮಾಲೆಯನಿಕ್ಕಿದಳು ರಘು ರಾಮಚಂದ್ರಂಗೆ || ೪೨ ||

ಉಕ್ಕಿದುದು ಹರೆಗಂಡ ಕಡಲಿನ |
ಹೆಕ್ಕಳದವೊಲು ಹರುಷ ರಸ ಜಲ |
ವುಕ್ಕಿದುದು ಸತ್ಕುಲ ಲತಾಂಕುರ ಜನಕ ಭೂಪತಿಯ ||
ಒಕ್ಕರಂಬುಜದಲರನಮರರು |
ಧಕ್ಕಡೆಯರಾನಕದ ದನಿ ದಶ |
ದಿಕ್ಕನುಬ್ಬಿಸೆ ರಘುಪತಿಯ ಸಿರಿ ಮುಡಿಯ ಸರಿಸದಲಿ || ೪೩ ||

ಉಗಿದಡಾಯುಧ ವೀರ ಸುಭಟಾ |
ಳಿಗಳು ದಶರಥ ಸಾರ್ವಭೌಮನ |
ಮಗನ ಮುಸುಕಿದರಂಗ ರಕ್ಷಣೆಗರಸನಾಜ್ಞೆಯಲಿ ||

**(೪೧)** **ವನ ಕರಿ ಕಳಭ** - ಕಾಡಾನೆಯ ಮರಿ, **ಕರ** - ಸೊಂಡಿಲು, **ಗಬ್ಬರಿಸು** - ವ್ಯಾಪಿಸು, **ದಿಗುತಟ** - ದಿಕ್ಕುಗಳ ಕೊನೆ, **ಆಕರ್ಣಾಂತ ಪರಿಯಂತ** - ಕಿವಿಯ ವರೆಗೂ, **ಇಕ್ಕಡಿಗಳೆದುದು** - ಎರಡು ತುಂಡಾಗಿ ಬಿದ್ದಿತು, **ಭಾರ್ಗವ** - ಪರಶುರಾಮ.

**(೪೨)** **ಸಸಿನ** - ಸಮೀಪ, **ಥಾಳಿಸುವ** - ಹೊಳೆಯುವ, **ಕದಪು** - ಕೆನ್ನೆ, **ಪಾಂಗು** - ರೀತಿ, **ಸುರಕುಜ** - ಕಲ್ಪವೃಕ್ಷ.

**(೪೩)** **ಹೆರಗಂಡ** - ಚಂದ್ರನನ್ನು ನೋಡಿದ, **ಹೆಕ್ಕಳ** - ಉಬ್ಬುವಿಕೆ, **ಅಂಕುರ** - ಮೊಳಕೆ, ಚಿಗುರು ; **ಒಕ್ಕರು** - ಸುರಿಸಿದರು, **ಅಲರು** - ಹೂ, **ಧಕ್ಕಡೆಯರ** - ಧೈರ್ಯಶಾಲಿಗಳ, **ಆನಕ** - ಭೇರಿ, **ಸರಿಸ** - (ಸಮೀಪ), ಎದುರು.

ಹೊಗುವ್ಪೊಡೆಡೆಯಿಲ್ಲೆನಿಪ ಹರುಷದ |
ಹೊಗರಿನಲಿ ಹೊರೆಯೇರಿ ನೃಪ ದಂ |
ಡಿಗೆಯಲಿವರನು ಕೊಂಡು ಬಂದನು ರಾಜಮಂದಿರಕೆ || ೪೪ ||

ಹರಿದರಾ ಕ್ಷಣ ನೆರೆದ ಪೃಥ್ವೀ |
ಶ್ವರರು ಪದ್ಮಭವಾದಿ ದೇವರು |
ಸರಿದರಾ ಸಮಯದಲ ವಿಶ್ವಾಮಿತ್ರ ನಡೆತಂದು ||
ಅರಸ ಕೇಳಿವರುಗಳು ಭೂಮೀ |
ಶ್ವರ ದಶಸ್ಯಂದನನ ನಂದನ |
ರರಿಕೆಯಿದು ನಿನಗೆನುತ ಮುನಿ ಸರಿದನು ನಿಜಾಶ್ರಮಕೆ || ೪೫ ||

ಆಹುದು ಮತ್ತೇನೆಮ್ಮ ವಂಶಕೆ |
ಮಿಹಿರ ವಂಶಕೆ ಕೊಳುಕೊಡೆನೆ ನಿ |
ರ್ವಹಿಸಿತೇ ಸಂಬಂಧ ನರಕೇಸರಿಯ ಕರುಣದಲಿ ||
ಬಹಳ ಭಾಗ್ಯರು ನಾವಲಾ ಎನು |
ತಹತ ಪರಿತೋಷದಲಿ ನೃಪ ಮೋ |
ಲಹ ಮಹೋತ್ಸವಕೊಡನೆ ನೆನೆದನು ಬೀಯಗನ ಬರವ || ೪೬ ||

(೪೪) ಅಡಾಯುಧ - ಕತ್ತಿ, ಹೊಗರು - ಕಾಂತಿ, ಹೊರೆಯೇರಿ - ಉತ್ಸಾಹಪಟ್ಟು, ದಂಡಿಗೆ-ಪಲ್ಲಕ್ಕಿ.

(೪೫) ಹರಿದರು - ಹೋದರು, ದಶಸ್ಯಂದನ - ದಶರಥ, ಅರಿಕೆ - ತಿಳಿವಳಿಕೆ, ಸರಿ - ಹೋಗು.

(೪೬) ಮಿಹಿರ - ಸೂರ್ಯ, ಕೊಳು ಕೊಡೆ - (ತರುವುದು ಕೊಡುವುದು) - ಬಾಂಧವ್ಯ, ನಿರ್ವಹಿಸಿತೇ - ಉಂಟಾಯ್ತೇ, ನರಕೇಸರಿ - ನರಸಿಂಹ, ಅಹತ - ತಡೆಯಿಲ್ಲದ, ಮೋಲಹ - ಮುಂದೆ ನಡೆಯಬೇಕಾದ, ಬೀಯಗ - ಬೀಗನಾದ ದಶರಥ, ಬರವ - ಬರುವಿಕೆಯನ್ನು.

# ಹದಿನಾರನೆಯ ಸಂಧಿ

ಸೂ || ರಾಯ ಜನಕನು ಜಗದ ರಾಯಿರ |
ರಾಯ ರಘುನಂದನರಿಗಬುಜ ದ |
ಳಾಯತಾಂಬಕಿಯರನು ಕೊಟ್ಟನು ಕರಸಿ ದಶರಥನ ||

ಬರಸಿದುವು ಒಳಿಕುಭಯ ಮತ |
ವಿಸ್ತರದ ಪತ್ರಿಕೆಗಳು ಸುಧಾಮನ |
ವರ ಶತಾನಂದನನ ತೆರಳಿಚಿದನು ಮಹೀಪಾಲ ||
ತರುಣ ಕೇಳ್ಕೆ ಕುಶನೆ ಗಜ ರಥ |
ತುರಗ ಪದ ಬಲ ಸಹಿತಯೋಧ್ಯಾ |
ಪುರಗೆ ಪಯಣೋದ್ಯೋಗರಾದರು ಜನಕನಾಜ್ಞೆಯಲ || ೧ ||

ಅರುಹಿದರು ಮಣಿಹಾರರವರು |
ಬ್ಬರ ಬರವಿನ ಸ್ಥಿತಿಯನರಸಂ |
ಗರಸನಾಜ್ಞೆಯಲೆತ್ತಿದುದು ಗುಡಿ ಪುರದೊಳಗಲದಲಿ ||
ಧರಣಿಪತಿಯೋಲಗದ ಸಮಯವ |
ನರಿದು ನಡೆತಂದಾ ಸುಧಾಮನು |
ಚರಣಕಾನತನಾಗಿ ಕೊಟ್ಟನು ಬಿನ್ನವತ್ತಳೆಯ || ೨ ||

ಅರಸ ಒಳಿಕಾ ಜನಕ ಮಂತ್ರೀ |
ಶ್ವರನನುಚಿತ ಪ್ರೇಮ ವಚನದಿ |
ಹಿರಿದು ಮನ್ನಿಸಿ ತನ್ನ ನಿಜ ಸಿಂಹಾಸನಾರ್ಧದಲಿ ||

**ಸೂ|| ಆಯತ - ವಿಸ್ತಾರವಾದ.**

**(೧) ಬರಸಿದುವು - ಬರೆಯಲ್ಪಟ್ಟುವು, ಸುಧಾಮು - ಜನಕನ ಮಂತ್ರಿ, ಶತಾನಂದ - ಜನಕನ ಪುರೋಹಿತ, ತೆರಳಿಚು - ಕಳುಹಿಸು**

**(೨) ಮಣಿಹಾರ - ಓಲೆಕಾರ, ಗುಡಿ - ಧ್ವಜ, ಅಗಲದಲಿ - ವಿಸ್ತಾರವಾಗಿ, ಬಿನ್ನವತ್ತಳೆ - ವಿಜ್ಞಾಪನಾ ಪತ್ರಿಕಾ (ಸಂ.)**

**(೩) ಹಿರಿದು - ಹೆಚ್ಚಾಗಿ, ಮನ್ನಿಸಿ - ಗೌರವಿಸಿ.**

ಕರೆದು ಕುಳ್ಳಿರಿಸಿದನು ಮಿಕ್ಕಿನ |
ವರ ಶತಾನಂದಾದಿಗಳನುಪ |
ಚರಿಸಿ ಬಳಿಕಾ ಮಂತ್ರಿಗಿಂತೆಂದನು ಮಹೀಪಾಲ || ೩ ||

ಕುಶಲನೇ ಜನಕ ಕ್ಷಿತೀಶನು |
ಕುಶಪತಾಕನು ಹದುಳಿಗನೆ ತ |
ದ್ವಸುಮತೀಶನ ಬಂಧುಗಳು ಸುಕ್ಷೇಮಿಗಳೆ ಎನಲು ||
ಕುಶಲವರ್ಗಳು ಜೀಯ ದೇವರಿ |
ಗೊಸಗೆಯಾದ ವಿವಾಹ ಪತ್ರಿಕೆ |
ಯೆಸಕವನು ಚಿತ್ತವಿಸಿಯೆನಲೋದಿದುದು ಲಿಖಿತಾರ್ಥ || ೪ ||

ಸ್ವಸ್ತಿ ಶ್ರೀಮದ್ರಾಜ ರಾಜ ಸ |
ಮಸ್ತ ಗುಣ ರಾಜಿತ ಸಹಸ್ರ ಗ |
ಭಸ್ತಿ ವಂಶ ಲಲಾಮ ಸಕಲ ನೃಪಾಲ ಮಣಿಮಕುಟ ||
ಮಸ್ತಕಾಂಘ್ರಿ ಸರೋಜ ಸೂನೃತ |
ವಿಸ್ತರಣ ಸಾಕೇತಪುರ ವಿ |
ನ್ಯಸ್ತ ವೈಭವ ನೃಪಗೆ ಬಿನ್ನಹ ಜನಕ ಭೂಪತಿಯ || ೫ ||

ರಾಯ ಚಿತ್ತೈಸಖಿಳ ನೃಪರ ವಿ |
ಡಾಯಿಗೆಡಿಸಿದ ಚಂದ್ರಧರ ಚಾ |
ಪಾಯುಧವ ಗೆಲಿದೊಲಿಸಿದನು ರಘುನಾಥನವನಿಜೆಯ ||
ಈಯಶೇಷ ಮಹೋತ್ಸವದ ಸು |
ಶ್ರೀಯವನು ಕೈಕೊಂಡು ಬಂಧು ನಿ |
ಕಾಯ ಸಹಿತೈತಹುದೆನುತ ವಾಚಿಸಿದುದಾ ಲಿಖಿತ || ೬

(೪) ಕುಶಪತಾಕ - ಕುಶಧ್ವಜ, ಹದುಳಿಗ - ಕ್ಷೇಮವುಳ್ಳವನು, ಕುಶಲ + ಅವರ್ಗಳು, ದೇವರಿಗೆ - ತಮಗೆ, ಒಸಗೆಯಾದ - ಶುಭಕರವಾದ, ಎಸಕ - ರೀತಿ, ಓದಿದುದು - ಓದಲ್ಪಟ್ಟಿತು, ಲಿಖಿತಾರ್ಥ - ಬರೆದಿದ್ದ ಅಭಿಪ್ರಾಯ

(೫) ಸ್ವಸ್ತಿ ಮಂಗಳವಾಗಲಿ, ಸಹಸ್ರ ಗಭಸ್ತಿ ವಂಶ ಲಲಾಮ-ಸೂರ್ಯವಂಶಕ್ಕೆ ತಿಲಕದಂತಿರುವ, ಮಸ್ತಕ - ತಲೆ, ಸೂನೃತ ವಿಸ್ತರಣ - ಸತ್ಯವ್ರತವುಳ್ಳ, ಸಾಕೇತಪುರ - ಅಯೋಧ್ಯಾ ಪಟ್ಟಣ, ವಿನ್ಯಸ್ತ - ನೆಲಸಿದ

(೬) ವಿಡಾಯಿ - ಹೆಮ್ಮೆ, ಚಂದ್ರಧರ - ಈಶ್ವರ, ಅಶೇಷ - ಸಂಪೂರ್ಣ, ಸುಶ್ರೀಯ - ಏಳಿಗೆ, ನಿಕಾಯ - ಸಮೂಹ, ಐತಹುದು - ಬರಬೇಕು.

ಏಸಿದೆತ್ತಣ ಸುದ್ದಿ ಪರಮ ತ |
ಪೋನಿಧಿಯು ಮಖ ಪಾಲನೆಗೆ ತ |
ತ್ಸೂನುಗಳು ಗಮಿಸಿದರು ಮೇಲಿದು ಬೆರಗಲೇ ಎನುತ ||
ಮಾನ ನಿಧಿ ಮನದನುಗತದ ಸು |
ವ್ಯಾನದಲಿ ಕೇಳಿದನು ಗೌತಮ |
ಸೂನುವನು ಹೇಳಿದನು ಮುನಿ ಮೇಲಣ ಕಥಾಂತರವ || ೭ ||

ಮುನಿಪ ವಿಶ್ವಾಮಿತ್ರ ಮಖ ಪಾ |
ಲನೆಯ ಗೌತಮ ಮುನಿವರನ ಮಾ |
ನಿನಿಯ ಶಾಪ ವಿಮೋಚನೆಯನರ್ಧೇಂದುಶೇಖರನ ||
ಧನು ಪರಿಚ್ಛೇದವ ಧರಾನಂ |
ದನೆಯ ಪಾಣಿಗ್ರಹಣದುಜ್ಜುಗ |
ವಿನಿತ ಪೇಳ್ದೆಚ್ಚರಿಸಿದನು ಮೇಲಣ ಮಹೋತ್ಸವವ || ೮ ||

ಹರುಷ ಲತೆ ಲಂಬಿಸಲಿಕವರನು |
ಪಿರಿದು ಮನ್ನಿಸಿ ಬೀಡಿಕೆಯ ಮಂ |
ದಿರಗಳಿಗೆ ಬೀಳ್ಕೊಟ್ಟನುಚಿತೋಕ್ತಿಯಲಿ ಮರು ದಿವಸ ||
ಪರುಠವಿಸಿ ಪಯಣವನು ತತ್ಪುರ |
ವರದ ಹೊರ ವಳಯದಲಿ ಗುಡಿಯು |
ಪ್ಪರಿಸಿದುದು ಮಾಂಗಲ್ಯ ತೂರ್ಯತ್ರಯದ ರಭಸದಲಿ || ೯ ||

ಶೆಗಿಸಿದನು ಭಂಡಾರದಲಿ ಝಗ |
ಝಗಿಪ ರತ್ನಾಭರಣ ವಸನಾ |
ದಿಗಳಸಮಿಳ ಸುಗಂಧ ಕನ್ಯಾಭೂಷಣಾವಳಿಯ ||

(೭) ತಪೋನಿಧಿ - (ತಪಸ್ಸೇ ಧನವಾಗಿ ಉಳ್ಳವನು) - ವಿಶ್ವಾಮಿತ್ರ, ಮಖ - ಯಜ್ಞ, ತತ್ಸೂನುಗಳು - ಆ ಮಕ್ಕಳು, ಅನುಗತ - ಉಂಟಾದ, ಗೌತಮ ಸೂನು - ಶತಾನಂದ, ಕಥಾಂತರ - ಕಥಾ ವಿಸ್ತಾರ.

(೮) ಗೌತಮ .....ಮಾನಿನಿ - ಅಹಲ್ಯೆ, ಅರ್ಧೇಂದು ಶೇಖರ - ಈಶ್ವರ, ಪರಿಚ್ಛೇದ - ಮುರಿಯುವಿಕೆ, ಉಜ್ಜುಗ - ಉದ್ಯೋಗ (ಸಂ.), ಎಚ್ಚರಿಸು - ಸೂಚಿಸು.

(೯) ಲಂಬಿಸಲಿಕೆ - ಹಬ್ಬಲು, ಬೀಡಿಕೆ - ಬಿಡಾರ, ಪರುಠವಿಸು - ಸಿದ್ಧಪಡಿಸು, ಉಪ್ಪರಿಸು - ಎತ್ತಿಕಟ್ಟು, ಮಾಂಗಲ್ಯ - ಮಂಗಳಕರ, ತೂರ್ಯತ್ರಯ - ನೃತ್ತ, ಗೀತ, ವಾದ್ಯ ಈ ಮೂರು.

(೧೦) ವಸನ-ಬಟ್ಟೆ, ಕನ್ಯಾಭೂಷಣ-ಹೆಣ್ಣಿಗಿಡಬೇಕಾದ ಒಡವೆ, ಭಾರಿಸು - (ಭಾರವಾಗು) -

ಅಗಣಿತದ ಪೆಟ್ಟಿಗೆಯ ಹೊರೆಯಾ |
ಳುಗಳ ಸಂದಣಿ ನೂಕಿದುದು ಸರ |
ಕುಗಳಸದಳದ ಬಂಡಿಗಳು ಭಾರಿಸಿದುವಿಳೆ ಜಡಿಯ || ೧೦ ||

ಗಳಿತ ಹಾಳಿತ ಧಾಳಧಳ ನಿ |
ರ್ದಳಿತ ನಾನಾ ಧಾನ್ಯ ಗುಡ ತಂ |
ಡುಲ ಘೃತಾದಿ ಸಮಸ್ತ ಸಂಭಾರಗಳ ಹೇರುಗಳ ||
ಹಲವು ಕೊಟ್ಟಿಗ ಬಂಡಿ ನೆಲಕೊಂ |
ಬಳತೆಯಲಿ ನಡೆಗೊಂಡುವೀಯಂ |
ದಳದ ಸಾಲಿಟ್ಟಣಿಸಿತಂತಃಪುರ ಪುರಂಧ್ರಿಯರ || ೧೧ ||

ಇರಿಸಿ ದೃಷ್ಟಿ ಜಯಂತರನು ಪುರ |
ಕರಸ ರಥವೇರಿದನು ನೃತ್ಯದ |
ತರುಣಿಯರ ಹರಿವಾಣದಾರತಿಗಳ ವಿಳಾಸದಲಿ ||
ಗುರು ವಸಿಷ್ಠ ಸುಮಂತ್ರ ಭರತಾ |
ದ್ಯರು ಸುಹೃಜ್ಜನ ಪೌರಜನದು |
ಬ್ಬರದ ಸೌರಂಭದಲಯೋಧ್ಯಾ ಪುರವ ಹೊರವಂಟ || ೧೨ ||

ಮಣಿಮಯದ ದಂಡಿಗೆಯ ಹೊನ್ನಂ |
ದಣದ ಮುಸುಕಿನಲರಸಿಯರ ಭಾ |
ರಣೆಯ ಕಂಚುಕಿ ನಿಕರದುಗ್ಘಡಣೆಗಳ ಘಾಡಿಸಲು ||
ಕುಣಿವ ಕುದುರೆಯ ಹಣ್ಣಿದುರು ವಾ |
ರಣ ವರೂಥ ಪದಾತಿಯುಲಿ ದಿ |
ಬ್ಬಣವ ಹೊರವಂಟನು ಮಹೀಪತಿ ಸಕಲ ವಿಭವದಲಿ || ೧೩ ||

ತುಂಬು, ಜಡಿಯ - ಕುಸಿಯಲು.

(೧೧) ಗಳಿತ - ಜಲ್ಲಿಸಿದ, ಹಾಳಿತ - ಕೇರಿದ, ಧಾಳಧಳ ನಿರ್ದಳಿತ - ದಡದಡನೆ ಕುಟ್ಟಿದ, ತಂಡುಲ - ಅಕ್ಕಿ, ಸಂಭಾರ - ಪದಾರ್ಥ, ಕೊಟ್ಟಿಗೆ - ಕಣಜ, ಓಡೆ, ನೆಲಕೊಂಬ-ಭೂಮಿಯನ್ನೆಲ್ಲ ಒಳಕೊಳ್ಳುವ, ಇಟ್ಟಣಿಸು – ನಾಲಾಗಿ ನಿಲ್ಲು, ಪುರಂಧ್ರಿ - ಸ್ತ್ರೀ.

(೧೨) ದೃಷ್ಟಿ ಜಯಂತ - ಇವರಿಬ್ಬರೂ ಅರಮನೆಯ ಅಧಿಕಾರಿಗಳು, ಪುರಕೆ - ಪಟ್ಟಣದ ಕಾವಲಿಗೆ, ಹರಿವಾಣ - ದೊಡ್ಡ ತಟ್ಟೆ, ಸುಮಂತ್ರ - ದಶರಥನ ಮಂತ್ರಿ, ಸುಹೃಜ್ಜನ - ಸ್ನೇಹಿತರು, ಉಬ್ಬರ - ಹೆಚ್ಚು.

(೧೩) ದಂಡಿಗೆ - ಪಲ್ಲಕ್ಕಿಯ ದಂಡಿ (ಕೊಂಬು), ಭಾರಣೆ-ಭಾರ, ಕಂಚುಕಿ - ಅಂತಃಪುರದ ಗೌಡಿಯರು, ಘಾಡಿಸು - ಹೆಚ್ಚು, ಹಣ್ಣಿದುರು ವಾರಣ - ಹೌದ ಮೊದಲಾದುವುಗಳನ್ನು ಹಾಕಿ ಸವಾರಿಗೆ ಸಿದ್ಧಪಡಿಸಿದ ದೊಡ್ಡ ಆನೆ, ವರೂಥ-ರಥ, ಪದಾತಿ ಕಾಲು ನಡಗೆಯ ಸೈನ್ಯ, ದಿಬ್ಬಣ-ಮೆರೆವಣಿಗೆ

ಸೀತೆಯಣುಗರು ಕೇಳಿರೈ ದಿಗು |
ಜಾತ ಜರಿಯಲು ಮೊಳೆವ ವಾದ್ಯ |
ವ್ರಾತದಲಿ ನಿಮ್ಮರಸ ಪಯಣದಮೇಲೆ ಪಯಣದಲಿ ||
ಚಾತುರಂಗದ ಚಟುಳ ಚರಣೋ |
ದ್ಧೂತ ರಜವುಪ್ಪರಿಸಲಾ ಝಷ |
ಕೇತನನ ಚೈತ್ರನ ವಸಂತನ ಕ್ರೀಡೆಯೆನೆ ನಭವ || ೧೪ ||

ದಿವಸ ಹದಿನೈದಕ್ಕೆ ಸಾರಿದ |
ರವರು ಜನಕನ ಪಟ್ಟಣವನು |
ತ್ಸವ ಮಿಗಿಲು ಬಳಿಕಾ ವಿದೇಹನು ನೃಪತಿ ದಶರಥನ ||
ಯುವತಿಯರ ನರ್ತನದ ಕಹಳಾ |
ರವದ ಕನ್ನಡಿ ಕಳಶದಭಿನವ |
ದವಿರಳೋತ್ಸವದಿಂದಲಿದಿರ್ಗೊಂಡೊಯ್ದನೊಲವಿನಲಿ || ೧೫ ||

ಮಾಡಿದರಮನೆ ನಿಜ ನಿವಾಸದ |
ಬೀಡಿಕೆಗಳಾದುವು ಬಳಿಕ್ಕೆಡೆ |
ಯಾಡಿದರು ಪರಿಚಾರಕರು ಸಚಿವರು ಪುರೋಹಿತರು ||
ಮೋದಗಂಡಂಬುಧಿಯ ಹರುಷದ |
ಘಾಡಣೆಯಲಿ ಸುಧಾಮ ಸಹಭವ |
ಗೂಡಿ ಬಂದನು ಜನಕ ದಶರಥರಾಯನರಮನೆಗೆ || ೧೬ ||

ತವಕದಿಂದಿದಿರೆದ್ದು ಜನಕನ |
ನವನಿಪತಿ ತಕ್ಕೈಸಿ ಮಹದು |
ತ್ಸವದಲಾತನ ನಿಲಿಸಿದನು ಸಿಂಹಾಸನಾರ್ಧದಲಿ ||

(೧೪) ಅಣುಗ - ಮಗ, ದಿಗುಜಾತ - ದಿಕ್ಕುಗಳ ಸಮೂಹ, ಜರಿ - ಜಾರುವಂತೆ, ಚಟುಳ - ತೀಕ್ಷ್ಣ, ಚರಣೋದ್ಧೂತ ರಜ - ಪಾದಗಳಿಂದೆಬ್ಬಿಸಲ್ಪಟ್ಟ ಧೂಳು, ಉಪ್ಪರಿಸು-ಮೇಲಕ್ಕೇಳು, ಝಷ ಕೇತನ - (ಮೀನಧ್ವಜವುಳ್ಳವನು) - ಮನ್ಮಥ.

(೧೫) ಸಾರಿದರು - ಸೇರಿದರು, ಉತ್ಸವ ಮಿಗಿಲು - ಹೆಚ್ಚಾದ ಸಂತೋಷದಿಂದ, ಅವಿರಳ - ಎಡೆಬಿಡದ.

(೧೬) ಎಡೆಯಾಡು - ಓಡಾಡು, ಮೋದಗಂಡ - ಮೋದವನ್ನು ಕಂಡ, ಸುಧಾಮ - ಜನಕನ ಮಂತ್ರಿ, ಸಹಭವ - (ಸಹೋದರ) - ಕುಶಧ್ವಜ.

(೧೭) ತವಕ - ಸಂಭ್ರಮ, ತಕ್ಕೈಸು - ತಬ್ಬಿಕೊಳ್ಳು, ಎವಗೆ - ನಮಗೆ.

ರವಿಕುಲಂಗಾ ನೃಪತಿ ಕೈಮುಗಿ |
ದೆವಗೆ ಬಿಯ್ಯಗರಾದಿರೀ ಭಾ |
ಗ್ಯವನು ಕಾಣಿಸಿದುದು ಪುರಾಕೃತ ಪುಣ್ಯಫಲವೆಂದ || ೧೭ ||

ಎನುತ ಥಿಮ್ಮನೆ ನಿಂದು ದಶರಥ |
ಜನಪನಪಸವ್ಯದಲಿ ಸಿಂಹಾ |
ಸನದೊಳವತರಿಸಿರ್ದ ಮನು ಕುಲ ಗುರು ವಸಿಷ್ಠಂಗೆ ||
ತನು ಪುಳಕದುಬ್ಬಿನಲಿ ನಿಮಿ ಕುಲ |
ಜನಪನಾನತನಾಗಿ ಮಿಕ್ಕಿನ |
ಮುನಿ ಜನಕೆ ಕೈಮುಗಿದು ಕುಳ್ಳಿದನಧಿಕ ಹರುಷದಲಿ || ೧೮ ||

ರಾಜ ಋಷಿಗಳೊಳುತ್ತಮನು ನಿಮಿ |
ರಾಜ ವಂಶದೊಳಧಿಕನಗ್ಗದ |
ರಾಜ ವರ್ಗದೊಳಗ್ಗಳನು ನೀನೆಂದು ಕೊಂಡಾಡಿ ||
ಆ ಜಗದ್ವಂದಿತ ತಪೋಧನ |
ರಾಜನೊಯ್ಯನೆ ನಗುತ ವಂಶ ವಿ |
ರಾಜಿತನೊಳೀ ಮಾತನೆಂದನು ಕುಲ ಪರಿಶ್ರುತದ || ೧೯ ||

ಮುನಿಯ ಮಾತಿಂಗಾ ಜನಕನಾ |
ನನವನೀಕ್ಷಿಸಿದನು ಶತಾನಂ |
ದನನನಾ ಮುನಿ ಬಳಿಕ ನಿಮಿರಾಜೇಂದ್ರ ಸಂತತಿಯ ||
ಜನಪರುದಯವನರುಹಿ ಮಿಥಿಲಾ |
ವನಿಪನಭ್ಯುದಯವನು ವಿರಚಿಸಿ |
ದನು ವಿಶುದ್ಧ ಚರಿತ್ರವನು ಬಳಿಕಾ ಮಹೀಪತಿಗೆ || ೨೦ ||

(೧೮) ಥಿಮ್ಮನೆ - ತಟ್ಟನೆ, ಅಪಸವ್ಯ - ಬಲಗಡೆ, ಅವತರಿಸಿರ್ದ - ಕುಳಿತಿದ್ದ, ಪುಳಕ - ರೋಮಾಂಚ.

(೧೯) ಅಗ್ಗದ - ಶ್ರೇಷ್ಠವಾದ, ಅಗ್ಗಳ - ಶ್ರೇಷ್ಠ, ಜಗದ್ವಂದಿತ - ಲೋಕಪೂಜ್ಯ, ತಪೋಧನ ರಾಜ - (ಋಷಿಶ್ರೇಷ್ಠ) - ವಸಿಷ್ಠ, ವಂಶ ವಿರಾಜಿತ - ಕುಲಭೂಷಣನಾದ ಜನಕ, ಕುಲ ಪರಿಶ್ರುತದ - ವಂಶದ ವಿಷಯದಲ್ಲಿ ತಿಳಿಯಬೇಕಾದ.

(೨೦) ಉದಯವನು - ಹುಟ್ಟನ್ನು, ಅಭ್ಯುದಯ - ಏಳಿಗೆ, ವಿರಚಿಸಿದನು - ವಿವರಿಸಿ ಹೇಳಿದನು.

ವರ ವಿದೇಹ ನೃಪಾಲನಾ ನಿಮಿ |
ಧರಣಿಪತಿಗುದ್ಭವಿಸಿದುದ ವಿ |
ಸ್ತರಿಸಿದನು ಬಳಿಕಾ ವಿದೇಹ ಪರಂಪರೆಯ ನೃಪರ ||
ಚರಿತವನು ಕೊಂಡಾಡಿ ಜನಕನ |
ನಿರತಿಶಯ ವಂಶ ಪ್ರಸಿದ್ಧ |
ಸ್ಫುರಿತ ಧಾರ್ಮಿಕತನವನೊರೆದನು ಮುನಿ ವಸಿಷ್ಠಂಗೆ || ೨೧ ||

ಅಹುದು ಬಳಿಕೇನುತ್ತಮೋತ್ತಮ |
ರಹಿರಲೇ ವಂಶದಲ ನಾವೀ |
ಮಿಹಿರ ವಂಶದ ರಾಯರನು ನಿಮಗರುಹ ಬೇಹುದಲೆ ||
ದ್ರುಹಿಣನಿಂ ಕಶ್ಯಪನು ಕಶ್ಯಪ |
ಗಹಿಮಕರನಾ ಮಿಹಿರನಿಂದೀ |
ಮಹಿಗೆ ಮನುವರನಾದನಾತನಿನಾಯ್ತು ಮನುವಂಶ || ೨೨ ||

ಅತನಿಂದಿಕ್ಷ್ವಾಕು ವಂಶ |
ಖ್ಯಾತನಾದನು ಜನಿಸಿದನು ಬಳಿ |
ಕಾತನನ್ವಯದಲಿ ದಲೀಪನುದಾರ ಗುಣಯುತನು ||
ಆತನಿಂದೀಚೆಯಲಿ ರಘು ಮಾಂ |
ಧಾತ ಸಗರ ಭಗೀರಥಾದಿ ಮ |
ಹೀತಳಾಧಿಪರೊಲಿದು ಪಾಲಿಸಿದರು ನಿಜಾನ್ವಯವ || ೨೩ ||

ಅಜನು ಬಳಿಕಾ ಸಂತತಿಯ ಭೂ |
ಭುಜರ ಮಿಕ್ಕನು ನಡೆವಳಿಯಲಾ |
ತ್ಮಜನು ಜನಿಸಿದನೀ ದಶಸ್ಯಂದನ ಮಹೀಪಾಲ ||
ತ್ರಿಜಗಕತಿಶಯರಿವರು ಸದ್ವಂ |
ಶಜರು ಬಳಿಕೀ ರಾಮ ರಾಮಾ |
ನುಜರು ಮಕ್ಕಳು ನಾಲ್ವರೀತಂಗೆಂದನಾ ಮುನಿಪ || ೨೪ ||

(೨೧) ನಿರತಿಶಯ - ಬಹಳ ಹೆಚ್ಚಾದ, ಸ್ಫುರಿತ - ಪ್ರಕಾಶಮಾನವಾದ.

(೨೨) ಅಹಿರಿ ಅಲೇ - ಆಗಿರುವಿರಷ್ಟೆ, ಅರುಹ ಬೇಹುದಲೆ - ತಿಳಿಸಬೇಕಲ್ಲವೇ ? ದ್ರುಹಿಣ - ಬ್ರಹ್ಮ, ಅಹಿಮಕರ - ಸೂರ್ಯ.

(೨೩) ಅನ್ವಯ - ವಂಶ, ನಿಜಾನ್ವಯವ - ತಮ್ಮ ವಂಶದ ಪ್ರಸಿದ್ಧಿಯನ್ನು, ಪಾಲಿಸಿದರು - ರಕ್ಷಿಸಿಕೊಂಡು ಬಂದರು

(೨೪) ಅಜ - ಅಜ ಮಹಾರಾಯ, ನಡೆವಳಿಯಲಿ ಮಿಕ್ಕನು - ನಡತೆಯಲ್ಲಿ ಮೀರಿಸಿದನು.

ಕುಲದಲತ್ಯುತ್ತಮರು ರಾಜಾ |
ವಳಿಯೊಳಧಿಕರು ನಿಯತ ಧರ್ಮದ |
ಬಳಕೆಯಲಿ ಬಲ್ಲಿದರು ಕೋವಿದರಖಿಳ ಕಲೆಗಳಲಿ ||
ಕೊಳುಕೊಡಗೆ ಸಂದೇಹವೇ ನೆರೆ |
ಬಳಕೆಯವರೇ ನೀವೆನುತ ಮುನಿ |
ತಿಲಕನುಭಯ ನೃಪಾಲಕರ ಕೊಂಡಾಡುತಿಂತೆಂದ || ೨೫ ||

ಸಲಹಿದನು ಜನಕ ಕ್ಷಿತೀಶನು |
ನೆಲದೊಳುದಿಸಿದ ಮಗಳನೆಂದೇ |
ಹಲಬರಾಡುವರದರಿನರಸನ ತನಯಳಲ್ಲೆಂದು ||
ಉಲುಕುವುದು ಚಿತ್ತದಲಿ ಜನನದ |
ನೆಲೆಯನರುಹಿದೊಡೊಪ್ಪುಗೊಂಬುದ |
ಕಲಸಿಕೆಯದೇಕೆಂದು ಮುನಿ ನುಡಿದನು ವಿದೇಹಂಗೆ || ೨೬ ||

ಮುನಿಪ ಚಿತ್ತೈಸಹುದು ನೀವೆಂ |
ದಿನಿತು ಪೂರ್ವದಿ ರಾಜಸೂಯದ |
ವಿನುತ ಮಖಭೂಮಿಯನು ಶೋಧಿಸಲಲ್ಲಿ ಲಾಂಗಲದ ||
ಮೊನೆಗೆ ಸಿಲುಕಿದ ಭೂಗತಾಲಯ |
ವನರುಹಾಕರವಿರಲು ಕಂಡೆನು |
ಕನಕ ಕಮಲದ ಕರ್ಣಿಕೆಯ ಮಧ್ಯದಲಿ ಕೋಮಲೆಯ || ೨೭ ||

ಈ ಕುತೂಹಲಿಕೆಯನು ಕಂಡು ಮ |
ಹಾಕುಳದಿ ನಾವಂಜಿ ಮನದಲಿ |
ಸಾಕು ನಮಗೀ ಸ್ಥಳವೆನುತ ತದ್ಭೂಮಿ ಗರ್ಭಿತದ ||

(೨೫) ನಿಯತ ಧರ್ಮದ ಬಳಕೆ - ಕ್ಲಪ್ತವಾದ ಸ್ವಧರ್ಮವನ್ನು ನಡೆಯಿಸುವುದು, ಬಲ್ಲಿದರು- ಶ್ರೇಷ್ಠರು, ಕೋವಿದ - ಪಂಡಿತ, ಕಲೆ - ಶಾಸ್ತ್ರ, ಬಳಕೆಯವರು - ಚೆನ್ನಾಗಿ ತಿಳಿದವರು

(೨೬) ಅದರಿಂ - ಆದಕಾರಣ, ಅರಸನ ತನಯಳು - ರಾಜಪುತ್ರಿ, ಉಲುಕುವುದು - ಸಂಕೋಚವುಂಟಾಗುವುದು, ನೆಲೆ - ರೀತಿ, ಅಲಸಿಕೆ - ತಡ

(೨೭) ನೀವೆಂದಿನಿತು ಅಹುದು - ನೀವು ಹೇಳಿದುದಿಷ್ಟು ನಿಶ್ಚಯವು, ಲಾಂಗಲ - ನೇಗಿಲು, ಭೂಗತಾಲಯ ವನರುಹಾಕರ - ನೆಲದೊಳಗಿರುವ ಒಂದು ಕೊಳ, ಕರ್ಣಿಕೆ - ಬಡ್ಡೆ (ಮಧ್ಯಭಾಗ).

(೨೮) ಕುತೂಹಲಿಕೆ - ಆಶ್ಚರ್ಯ, ಮಹಾಕುಳ - ಹೆಚ್ಚಾದ ವ್ಯಾಕುಲತೆ, ಶ್ರೀಕರಾಲಯವು -

ಶ್ರೀಕರಾಲಯವಿದು ನಿಸರ್ಗ ಪು |
ರಾಕೃತಿಯಲಿರಲೆಂಬ ಸಮಯಕೆ |
ನಾಕಮುನಿ ನಡೆತಂದು ಬಳಿಕಿಂತೆಂದ ನಮಗಂದು || ೨೮ ||

ಭೀತಿ ಬೇಡೆಲೆ ಜನಕ ಜೀವನ |
ಜಾತಮಂದಿರೆಯಾಕೆ ಯಾಕೆಯ |
ನೋತು ಸಲಹೆಂದಿತ್ತನಾ ಮುನಿನಾಥನೊಲವಿನಲಿ ||
ಸೀತೆಯೆಂದೇ ನಾಮಕರಣವ |
ನಾತಮಾಡಿಸಿ ಬಳಿಕ ಘನ ಸಂ |
ಪ್ರೀತಿ ವಚನದಿನೊರೆದನಭಿಗತ ಕಾರ್ಯ ವಿಸ್ತರವ || ೨೯ ||

ಮನುಜ ರೂಪಿಂದಿಳೆಯೊಳೀ ಗೋ |
ಮಿನಿಯ ಪತಿ ವಸುಮತಿಯ ಭಾರವ |
ನೊನೆಯಲುದಿಸಿದನಾ ಮಹಾತ್ಮಂಗೀಕೆ ಸೇರುವೊಡೆ ||
ಧನುವನೊಡ್ಡಿ ಪಿನಾಕಪಾಣಿಯ |
ಜನಪರನು ಬರಿಸಾ ಕಳಂಬಾ |
ಸನವ ಗೆಲಿದಂಗೀವುದಾತನೆ ವಿಷ್ಣು ಕೇಳೆಂದ || ೩೦ ||

ತೆರನಿದೀಗಿದು ನಿಮಗಿದುವೆ ಮನ |
ಕರಿಸದೊಡೆ ನಿಮ್ಮಡಿಗೆ ನಾವ್ ಕಂ |
ದೆರವ ಮಾಡುವೆವೆನುತ ನೆನೆದನು ನೃಪತಿ ನಾರದನ ||
ತುರುಗಿ ತೂಳುವ ಶುಭ್ರ ಕಾಂತಿಯ |
ನಿರಿಸಿನಲಿ ನಡೆತಂದು ನಿಂದಿರ |
ಲೆರಗಿದರು ಬಳಿಕುಭಯ ರಾಯರು ನಾರದನ ಪದಕೆ || ೩೧ ||

ಸಂವತ್ಸರವಾದ ಮನೆಯು, ನಿಸರ್ಗ ಪುರಾಕೃತಿಯಲಿ - ಸ್ವಭಾವವಾದ ಪೂರ್ವಸ್ಥಿತಿಯಲ್ಲಿ, ನಾಕಮುನಿ - (ದೇವಋಷಿ) - ನಾರದ.

(೨೯) ಜೀವನ ಜಾತ ಮಂದಿರೆ - (ಕಮಲವೇ ವಾಸಸ್ಥಾನವಾಗಿ ಉಳ್ಳವಳು) - ಲಕ್ಷ್ಮಿ, ಓತು - ಪ್ರೀತಿಸಿ, ಅಭಿಗತ - ಮುಂದೆ ನಡೆಯಬೇಕಾದ.

(೩೦) ಗೋಮಿನಿ - ಲಕ್ಷ್ಮಿ, ಒನೆ - (ಕೇರು) - ಪರಿಹರಿಸು, ಪಿನಾಕಪಾಣಿ - (ಪಿನಾಕವೆಂಬ ಬಿಲ್ಲನ್ನು ಕೈಯಲ್ಲಿ ಹಿಡಿದವನು) - ಈಶ್ವರ, ಕಳಂಬಾಸನ - (ಬಾಣಾಸನ) - ಬಿಲ್ಲು.

(೩೧) ಮನಕರಿಸು - ಒಪ್ಪು, ಕಂದೆರವು - ಪ್ರತ್ಯಕ್ಷ, ತುರುಗಿ ತೂಳುವ - ತುಂಬಿ ತುಳುಕುವ, ನಿರಿಸು - (ನಿಲವು) - ಎದುರಿಗೆ ನಿಲ್ಲುವಿಕೆ.

ಜನಪರಬ್ಬರ ಹರಸಿ ವಿವಿಧಾ |
ರ್ಚನೆಯ ಕೈಕೊಂಡುಭಯ ರಾಯರ |
ಮನದಣಿಯೆ ಕೊಂಡಾಡಿ ವಂಶ ದ್ವಿತಯ ಶುದ್ಧತೆಯ ||
ವಿನುತ ಚರಿತಕೆ ಮೆಚ್ಚಿ ಸೀತಾ |
ವನಿತೆ ರಾಘವರಿವರು ಲಕ್ಷ್ಮೀ |
ವನರುಹಾಂಬಕರವತರಣವೆಂದರುಪಿದನು ಮುನಿಪ || || ೩೨ ||

ತಿಳುಪಿ ನೃಪರಿತ್ತಂಡವನು ಕೈ |
ಕೊಳಿಸಿದನು ಕೊಳುಕೊಡೆಗೆ ನಿಮ್ಮವೊ |
ಲಿಳೆಯೊಳಾರ್ಯ ಭಾಗ್ಯವುಳ್ಳವರೆನುತ ಕೊಂಡಾಡಿ ||
ತಳರ್ದನಮರ ಮುನೀಂದ್ರನಂಬುಜ |
ದಳ ಸುನೇತ್ರನ ನಾಮ ಕೀರ್ತನೆ |
ಗಳ ಸುವೀಣಾ ನಾದದಲಿ ನಳಿನಜನ ಪುರಿಗಾಗಿ || ೩೩ ||

ಸುರ ಮುನಿಯ ಮತವಿಡಿದು ಲಗ್ನವ |
ಪರುರವಿಸಿದರು ಬಳಿಕಲಾ ರಘು |
ವರಗೆ ಸೀತಾದೇವಿಯನು ಸೌಮಿತ್ರಿಗೂರ್ಮಿಳೆಯ ||
ಭರತ ಶತ್ರುಘ್ನರಿಗೆ ಜನಕಾ |
ವರಜ ವೀರ ಕುಶಧ್ವಜಾತ್ಮಜೆ |
ಯರನು ನಿರ್ಧರಿಸಿದರು ಮುನಿಪ ವಸಿಷ್ಠನಾಜ್ಞೆಯಲಿ || ೩೪ ||

ಬೀಳುಕೊಂಡನು ಜನಕನುರು ನಿ |
ಸ್ಸಾಳದಬ್ಬರ ಗಬ್ಬರಿಸೆ ಭೂ |
ಪಾಲರರಮನೆಗಳಲಿ ನಡೆದುವು ಪೂರ್ವವೇದಿಗಳು ||

(೩೨) ವಿವಿಧಾರ್ಚನ - ಮಧುಪರ್ಕಾದಿಗಳಿಂದ ಕೂಡಿದ ಪೂಜೆ, ವನರುಹಾಂಬಕ - ವಿಷ್ಣು, ಅವತರಣ - ಅವತಾರ.

೩೩) ಇತ್ತಂಡ - ಉಭಯ ಪಕ್ಷ, ಕೈಕೊಳಿಸು - ಅಂಗೀಕರಿಸುವಂತೆ ಮಾಡು, ನಳಿನಜ - ಬ್ರಹ್ಮ.

(೩೪) ಮತವಿಡಿದು - ಅಭಿಪ್ರಾಯಾನುಸಾರವಾಗಿ, ಪರುರವಿಸು-ಗೊತ್ತುಮಾಡು, ಸೌಮಿತ್ರಿ-ಲಕ್ಷ್ಮಣ, ಅವರಜ - (ಜನಕನ) ತಮ್ಮ.

(೩೫) ಗಬ್ಬರಿಸೆ - ಹರಡಲು, ಪೂರ್ವವೇದಿ - ಲಗ್ನಕ್ಕೆ ಮೊದಲು ಮಾಡಬೇಕಾದ ಪುಣ್ಯಾಹ

ಮೇಲೆ ನಾಂದೀಮುಖದ ಸಂಭ್ರಮ |
ಮೇಳವಿಸೆ ಶೈಲಜೆಯ ಸಿರಿಯು ವಿ |
ಶಾಲ ವಿಭವೋದ್ವಾಹ ಗೇಹದ ಸಕಲ ಸಂಭ್ರಮವ || ೩೫ ||

ಕುಶನೆ ಕೇಳ್ ಕಲ್ಯಾಣ ವಿಭವದ |
ಲೆಸೆದುದಾ ಮಣಿಮಯ ವಿವಾಹದ |
ವಸತಿ ಮುತ್ತಿನ ಚೌಕದಲಿ ವಿಮಳಾಂಕುರಾರ್ಪಣದ ||
ಪಸರಿಕೆಗಳುಜ್ಜ್ವಲ ವಿನೂತನ |
ವಸನ ದರ್ಪಣ ದೀಪದಲಿ ಪೂ |
ಜಿಸಿದ ಕಾಂಚನದೈರಣೆಯ ಶೋಭೋಪಕರಣದಲಿ || ೩೬ ||

ಕನಕ ಪತ್ರಾವಳಿಯ ವರ ಚಂ |
ದನದ ಕುಸುಮಾಕ್ಷತೆಯ ಗೋರೋ |
ಚನದ ಲಾಜೆಯ ದಧಿಯ ದೂರ್ವೆ ಸುವರ್ಣ ಬಾಸಿಗದ ||
ವಿನುತ ಭದ್ರ ದುಕೂಲ ಮಣಿ ಕಾಂ |
ಚನ ವಿಭೂಷಣ ಭಕ್ಷ್ಯ ಫಲದು |
ಬ್ಬನಲಿ ದಶ ಧಾನ್ಯಾದಿ ವಿಸವದಲೆಸೆದುದಾ ಭವನ || ೩೭ ||

ನೆರೆದುದಾ ಮಂಟಪದ ಬಹಿರಾ |
ವರಣದಲಿ ವಿಪ್ರ ವಿಶ ಶೂದ್ರೋ |
ತ್ತರರು ಸಾಹಿತ್ಯರು ಕಲಾವಿದರಖಿಳ ಕೋವಿದರು ||
ಸರಸ ಕವಿ ವಾಗ್ಮಿಗಳು ಮಂತ್ರ |
ಜ್ಞರು ಮಹಾ ಪಂಡಿತರು ನಾನಾ |
ದರುಶನಾಚಾರಿಯರು ಮುಖ್ಯ ಸಮಸ್ತ ಜನ ನಿಕರ || ೩೮ ||

ಮೊದಲಾದುವು, ಮೇಳವಿಸು - ಸೇರು, ಶೈಲಜೆ - ಪಾರ್ವತಿ, ಉದ್ವಾಹ ಗೇಹ - ಮದುವೆಯ ಮನೆ.

(೩೬) ವಸತಿ - ಮನೆ, ಚೌಕ - ನಾಲ್ಕು ಮೂಲೆಯುಳ್ಳ ಮಂಟಪ, ಅಂಕುರಾರ್ಪಣ - ಧಾನ್ಯದ ಪೈರನ್ನು ಮಾಡುವುದು, ಪಸರಿಕೆ - ವಿಸ್ತಾರ, ವಸನ - ಬಟ್ಟೆ, ದರ್ಪಣ - ಕನ್ನಡಿ, ಐರಣೆ - ಕಾಳು ಚೆಲ್ಲಿ ಪೈರುಮಾಡಿರುವ ಕುಂಡ

(೩೭) ಪತ್ರಾವಳಿ - ಎಲೆಗಳ ಸಮೂಹ, ಲಾಜೆ - ಅರಳು, ದೂರ್ವೆ - ಗರಿಕೆಯ ಹುಲ್ಲು, ಬಾಸಿಗ - ಬಾಷಿಂಗ, ಭದ್ರ ದುಕೂಲ - ಮಂಗಳ ವಸ್ತ್ರ.

(೩೮) ಬಹಿರಾವಣ - ಹೊರಗಿನ ಪೌಳಿ, ವಿಶ - ವೈಶ್ಯರು, ಸಾಹಿತ್ಯರು - ಭಾಷಾಶಾಸ್ತ್ರಜ್ಞರು, ಕೋವಿದರು - ಪಂಡಿತರು, ವಾಗ್ಮಿ - ಮಾತಾಡುವುದರಲ್ಲಿ ಚತುರ, ದರುಶನಾಚಾರಿಯರು - ತರ್ಕ ಮೊದಲಾದ ಶಾಸ್ತ್ರಗಳಲ್ಲಿ ಪ್ರವೀಣರು.

ತಾಳ ಗತಿಯ ಮೃದಂಗ ರವದ ರ |
ಸಾಳಿ ಗೀತದ ಗಾಯಕರ ವೈ |
ತಾಳಿಕರ ವಂದಿಗಳ ವೀಣಾ ರವದ ನರ್ತನದ ||
ಬಾಲೆಯರ ಬಹುವಿಧದ ಮೋಹನ |
ಜಾಲದುಬ್ಬಿನ ಕಾವ್ಯ ಗೀತದ |
ಸಾಲ ಸತ್ಸಾರಂಭ ರಂಜಿಸಿತಾ ಮಹಾಸ್ಥಳವ || ೩೯ ||

ತರುಣಿಯರ ಶುಭಗೀತ ಧರಣೀ |
ಸುರರ ಸೂಕ್ತ ಸುಮಂತ್ರ ಸಂಪ |
ತ್ಸರಿಕರಾಯತ ರವನೆಸೆದುದುದ್ವಾಹ ಗೇಹದಲಿ |
ತರುಣ ಕೇಳೀಚೆಯಲಿ ರಘುಪತಿ |
ಭರತ ಲಕ್ಷ್ಮಣದೇವ ಶತ್ರು |
ಘ್ನರುಗಳಿಭ ಕಂಧರದಲೊಪ್ಪಿದರರಸನಾಜ್ಞೆಯಲಿ || ೪೦ ||

ಇಡಿದ ಮುತ್ತಿನ ಸೂಸಕದ ಬೆಳು |
ಗೊಡೆಯ ಚಿಮ್ಮುವ ಚಾಮರದ ತರ |
ವಿಡಿದ ಸೀಗುರಿಗಳ ವಿಡಾಯಿಯ ನೊಸಲ ಬಾಸಿಗದ ||
ಹಿಡಿದ ಕೈದೀವಿಗೆಯ ಸಾಲಿನ |
ತುಡುಕುವೆಳಗಿನ ವಂದಿ ಜನದು |
ಗ್ಗಡದ ರಾಜಕುಮಾರಕರು ನಡೆತಂದರೊಲವಿನಲಿ || ೪೧ ||

ಸಂದಣಿಸಿದುವು ಕರಿ ತುರಗ ಬಳಿ |
ಸಂದು ನೂಕಿದಖಿಳ ನಾರಿಯ |
ರಂದಣಗಳಿಟ್ಟಣಿಸಿದುವು ದಶರಥನ ಬಂಧುಜನ ||

(೩೯) ವೈತಾಳಿಕ - ಸ್ತುತಿಪಾಠಕ, ವಂದಿ - ಹೊಗಳುಭಟ್ಟ, ಸಾಲ - ಸಾಲಿನ

(೪೦) ಸೂಕ್ತ - ದೇವತಾಸ್ತುತಿ ಸಂಬಂಧವಾದ ಶುಭ ವಚನಗಳ, ಸಂಪತ್ಸರಿಕರಾಯತ ರವ- ಮಂಗಳ ದ್ರವ್ಯಗಳ ಸಂಬಂಧವಾಗಿ ಕೂಗಿಹೇಳುವ ಮಾತುಗಳ ಶಬ್ದ, ಇಭ ಕಂಧರ - ಆನೆಯ ಹೆಗಲು

(೪೧) ಇಡಿದ - ತುಂಬಿದ, ಸೂಸಕ - ಕುಚ್ಚು, ತರವಿಡಿದ - ಸಾಲಾಗಿರುವ, ವಿಡಾಯಿ ಠೀವಿ, ನೊಸಲ - ಹಣೆಯ, ತುಡುಕುವೆಳಗು - ಸಾಲುದೀಪ.

ಮುಂದೆ ಕಂಬಿಯ ಕಂಚುಕಿಯರೊಲ |
ಏಂದ ವಿಪ್ರರ ಮಂತ್ರ ಘೋಷಣೆ |
ಯಿಂದ ಬಂದರು ರಾಜ ಪುತ್ರರು ರಾಜ ಬೀದಿಯಲಿ || ೪೨ ||

ಅಣುಗ ಕೇಳ್ಕೆ ಸಭದ ತಾರಾ |
ಗಣ ತದೀಯ ಮಹೋತ್ಸವದ ದಿ |
ಬ್ಬಣಕೆ ನೆರೆದುವೊ ಪುರದೊಳೆನೆ ಬೆಳಗಿದುದು ದೀಪಾಳಿ ||
ಮಣಿ ಮುಕುರದಬಲೆಯರು ನೃತ್ಯದ |
ಗಣಿಕೆಯರ ಮಾಂಗಲ್ಯವಾದ್ಯದ |
ಕುಣಿತದಲಿ ನೆಲ ಕುಸಿಯೆ ಹೊಕ್ಕರು ಜನಕನರಮನೆಯ || ೪೩ ||

ಇಳಿದರಾನೆಯನಬಲೆಯರ ಹೊಂ |
ದಳಿಗೆಗಳ ಪಸುಗೂಳ ದೀಪಾ |
ವಳಿಯ ಸೊಡರಿನ ಸಾಲಸೆಯೆ ಸೂಸುಗಳ ಸೊಗಸಿನಲಿ ||
ಒಳಗ ಬಲ್ಲವರೂರ್ಧ್ವ ಮುಖದಂ |
ಜುಳಿಗಳಲಿ ಜಯ ಜಯ ಎನಲು ಹೊಕ್ಕರು |
ನಿಳಯವನು ನಿರ್ಜರರ ದುಂದುಭಿ ವಾದ್ಯ ರಭಸದಲಿ || ೪೪ ||

ಏನನೆಂಬೆನು ಜನಕ ನೃಪನ ನ |
ಏನ ಭಾಗ್ಯವನಮಮ ಜಗದಭಿ |
ಮಾನ ದೈವದ ಲಲಿತ ಪದ ಕಮಲಾಭಿಷೇಚನವ ||
ಶ್ರೀನಿವಾಸ ಸ್ಮರಣೆಯಲಿ ವಿ |
ಜ್ಞಾನ ಮುಖದಲ ಮಾಡಿ ತಾಳ್ದನ |
ನೂನ ತೀರ್ಥವ ಶಿರದೊಳೇನು ಕೃತಾರ್ಥನೋ ಎಂದ || ೪೫ ||

(೪೨) ಕಂಬಿ - ಬೆತ್ತ.

(೪೩) ದಿಬ್ಬಣ - ಮೆರವಣಿಗೆ, ಮುಕುರ - ಕನ್ನಡಿ, ಗಣಿಕೆ - ವೇಶ್ಯೆ

(೪೪) ಹೊಂದಳಿಗೆ - ಚಿನ್ನದ ಹರಿವಾಣ, ಪಸುಗೂಳು - ಹಸಿರು ಬಣ್ಣದ ಅನ್ನ, ಸೂಸು - ಹೂವನ್ನು) ಎರಚು, ಒಳಗ ಬಲ್ಲವರು - ಅಪ್ಸರರು, ಊರ್ಧ್ವಮುಖದ ಅಂಜುಳಿ - ಮೇಲಕ್ಕೆ ಎತ್ತಿದ ಬೊಗಸೆ, ನಿರ್ಜರರು - ದೇವತೆಗಳು.

(೪೫) ಜಗದಭಿಮಾನ ದೈವ - (ಶ್ರೀರಾಮ), ಅಭಿಷೇಚನ - ತೊಳೆಯುವುದು, ವಿಜ್ಞಾನ ಮುಖ - ಶಾಸ್ತ್ರಜ್ಞಾನ ಪೂರ್ವಕವಾಗಿ, ಅನೂನ - (ನ್ಯೂನತೆಯಿಲ್ಲದ) - ಶ್ರೇಷ್ಠ.

ಬಳಿಕ ಮಧುಪರ್ಕಾದಿ ವೈದಿಕ |
ವಿಳಸದಭಿರಂಜನೆಯಲಾ ಕಳ |
ಕಳವ ಮಾಣಿಸುತಿತ್ತರುತ್ತಮ ಗುಡವ ಜೀರಗೆಯ ||
ನಿಲಿಸಿ ಮಟ್ಟಕ್ಕಿಯಲಿ ಮದವ |
ಕ್ಕಳಿಗೆ ಕನ್ಯಾವರಣವಾದುವು |
ಗಳಿಗೆವಟ್ಟಲ ಲಗ್ನದೊಳು ಪುಣ್ಯಾಹ ರಚನೆಯಲಿ || ೪೬ ||

ಇಳೆಯ ಮಗಳನು ರಾಘವಂಗೂ |
ರ್ಮಿಳೆಯನಾ ಸೌಮಿತ್ರಿಗುಳಿದರ |
ಗುಳಿದನುಜ ತನುಜೆಯರ ಧಾರೆಯ ನೆರೆದನಾ ಜನಕ ||
ಸುಳಿದರಾ ದಂಪತಿಗಳುರು ಮಂ |
ಜುಳದ ಮಣಿ ವೇದಿಕೆಗೆ ಹೋಮಾ |
ನಲನ ಬಲವಂದೆಡಕೆ ಸಾರಿದರವರ ಪತ್ನಿಯರು || ೪೭ ||

ಆದುದವರ ವಿವಾಹ ವೈಭವ |
ವೈದಿಕದಲವನೀಸುರರು ಮೊದ |
ಲಾದ ಯಾಚಕ ವೃಂದ ತಣಿದುದು ಬಹಳ ದಾನದಲಿ ||
ಆ ದಶಸ್ಯಂದನನ ಜನಕನ |
ಮೇದಿನಿಯ ಸೇರುವೆಯ ರಾಯರ |
ನಾದರಿಸಿದರು ತಮ್ಮೊಳುಡುಗೊರೆಯುಚಿತ ವಚನದಲಿ || ೪೮ ||

ವರ ಶುಭೋದಯದಿಕ್ಕೆ ಸಂಪ |
ತ್ಕರದ ನೆಲೆವನೆ ಸಿರಿಯ ಸೊಂಪಿನ |
ಶರಧಿ ಸೊಬಗಿನ ಜನ್ಮ ಸುಮ್ಮಾನದ ಮಹಾಸ್ಥಾನ ||

(೪೬) ಮಧುಪರ್ಕ - ಉಪಹಾರ, ಕಳಕಳ - ಗದ್ದಲ, ಮಾಣಿಸು - ನಿಲ್ಲಿಸು, ಮೆಟ್ಟಕ್ಕಿ - ಮೆಟ್ಟಿಕೊಂಡು ನಿಲ್ಲುವ ಬಿದಿರಿನ ಚಿಬ್ಬಲು, ಮದವಕ್ಕಳು - ಮದುವೆಯ ಗಂಡು ಹೆಣ್ಣು, ಕನ್ಯಾವರಣ - ಹೆಣ್ಣನ್ನು ಕೋರುವುದು, ಗಳಿಗೆವಟ್ಟಲು - (ಹೊತ್ತನ್ನು ತಿಳಿಸುವ ಬಟ್ಟಲು) - ಘಟಿಕಾಯಂತ್ರ, ಲಗ್ನ - ಹೊತ್ತು.

(೪೭) ಅನುಜ ತನುಜೆಯರು - ತಮ್ಮನ ಮಕ್ಕಳಾದ ಮಾಂಡವಿ ಶ್ರುತಕೀರ್ತಿಯರು, ಮಂಜುಳ - ಮನೋಹರ, ಮಣಿ ವೇದಿಕೆ - ರತ್ನದ ಹಸೆಜಗುಲಿ, ಹೋಮಾನಲ - ಹೋಮಾಗ್ನಿ, ಬಲವಂದು - (ಬಲದಿಂದ ಬಂದು) - ಪ್ರದಕ್ಷಿಣೆ ಮಾಡಿ.

(೪೮) ವೈದಿಕದಲಿ - ವೇದೋಕ್ತವಾಗಿ, ತಣಿ - ತೃಪ್ತಿಪಡು, ಮೇದಿನಿಯ ಸೇರುವೆಯ - ರಾಜ್ಯಕ್ಕೆ ಸೇರಿದ, ಉಡುವ + ಕೊರೆ - ಉಡುಗೊರೆ - ಉಡುವ ಬಟ್ಟೆ.

(೪೯) ಇಕ್ಕೆ - ಆಶ್ರಯ, ನೆಲೆವನೆ - ವಾಸದ ಮನೆ, ಜನ್ಮ - ಹುಟ್ಟು, ಸುಮ್ಮಾನ - ಸಂತೋಷ.

ನಿರುಪಮೋತ್ಸವ ಶಾಲೆ ಹರ್ಷೋ |
ತ್ಕರದ ಜನನ ಸ್ಥಳವಿದೆನಲಾ |
ಕರುಷಿಸಿತು ಜನಮನವನನುಪಮ ಪರಿಣಯ ಸ್ಥಾನ || ೨೯ ||

ಪರಮ ಸಂಭ್ರಮದಿಂದ ವರ ವಾ |
ಸರ ಚತುಷ್ಟಯದಿರುಳು ದಂಪತಿ |
ವರರು ಮೆರೆದರು ಭದ್ರ ಮದ ಸಿಂಧುರದ ಕಂಧರದ ||
ಸುರುಚಿರದ ರತ್ನಪ್ರಭಾ ಪಂ |
ಜರದ ಗದ್ದುಗೆಗಳಲಿ ನೃಪರು |
ಬ್ಬರು ಮಹಾ ವಿತರಣದ ವೈಭವದಖಿಳ ರಚನೆಯಲಿ || ೩೦ ||

ಮರು ದಿವಸ ಮಾರುಳಿಯು ಸಮನಂ |
ತರದಲವಭೃಥದೋಕುಳಿಯು ವಿ |
ಸ್ತರಣವೆಸೆದುದು ವಿಳಸಿತೋತ್ಸವ ವಿವಿಧ ವಿಭವದಲಿ ||
ಪರಿಮಳದ ಪನ್ನೀರ ನವ ಕ |
ರ್ಪೂರದ ಕಸ್ತೂರಿ ಕುಂಕುಮದ ಕೊ |
ಪ್ಪರಿಗೆಗಳ ಸಾಲೆಸೆದುದನುಪಮ ಹೇಮ ಮಣಿಮಯದ || ೩೧ ||

ನನೆಯ ಕಂಚುಕಗಳಲಿ ಹೂದುರು |
ಬನ ಹಿಣಿಲ್ಗಳ ದಂಡೆಗಳ ಮು |
ಮ್ಮೊನೆಯ ಮುಂಜೆರಗುಗಳ ಚಂದ್ರಿಕೆ ಪಟದ ಚಲ್ಲಣದ ||
ಕನಕ ರತ್ನಾಭರಣ ಕಾಂತಿಯ |
ವನಿತೆಯರು ಬಳಸಿದರು ಬವರದ |
ಮನಸಿಜನ ಮಾಸಾಳನಂದದಲುಭಯ ಭೂಪುಪರ || ೩೨ ||

ಮಹಾಸ್ಥಾನ - ದೊಡ್ಡ ಸ್ಥಳ, ಪರಿಣಯ - ಮದುವೆ

(೩೦) ವಾಸರ ಚತುಷ್ಟಯ - ನಾಲ್ಕು ದಿನ, ಸಿಂಧುರ-ಆನೆ, ರತ್ನ ಪ್ರಭಾ ಪಂಜರ - ಹಂಜರವನ್ನು ಬಿಗಿದಂತೆ ರತ್ನಕಾಂತಿಯು ಆವರಿಸಿಕೊಂಡಿರುವ, ಗದ್ದುಗೆ - ಪೀಠ

(೩೧) ಮಾರುಳಿ - ನಡೆಯಬೇಕಾದ ಇತರ ಕಾರ್ಯ, ಅವಭೃಥ - ವಿವಾಹ ಮೊದಲಾದ ದೀಕ್ಷೆಯ ಕೊನೆಯಲ್ಲಿ ಮಾಡಬೇಕಾದ ಸ್ನಾನ, ಅನುಪಮ ಹೇಮ ಮಣಿಮಯದ ಕೊಪ್ಪರಿಗೆಗಳ ಸಾಲೆಸೆದುದು.

(೩೨) ನನೆಯ ಕಂಚುಕ - ಹೂವಿನ ಕುಪ್ಪಸ, ಹಿಣಿಲ್ - ಹೆಕ್ಕತ್ತು, ಮುಮ್ಮೊನೆಯ ಮುಂಜೆರಗುಗಳ-ಮುಂದಕ್ಕೆ ಸಿಕ್ಕಿಸಿಕೊಂಡ ಸೆರಗಿನ ತುದಿಯುಳ್ಳ, ಚಂದ್ರಿಕೆ ಪಟದ - ಚಂಗಾವಿ ಸೀರೆಯುಳ್ಳ, ಚಲ್ಲಣ - ಚಡ್ಡಿ, ಬವರ - ಯುದ್ಧ, ಮಾಸಾಳು - ಭಟ.

ಕೊಂಡು ಕುಂಕುಮ ವಾರಿಗಳ ಹೊ |
ನ್ನಂಡೆಗಳ ಜಳಜಂತ್ರಗಳ ಮುಂ |
ಕೊಂಡು ನೃಪರಿಬ್ಬರ ವಧೂ ನಿಕುರುಂಬಮಾ ನೃಪರ ||
ಮಂಡಳಿಯು ತನ್ನೃಪ ಕುಮಾರರ |
ತಂಡ ಸೌರಂಭದಲಿ ಸುರರೆಳ |
ವೆಂಡಿರುತ್ಸಾಹಿಸಲು ಹೊಯ್ದಾಡಿದರುನ್ನೋಕುಳಿಯ || ೫೩ ||

ಹೊರೆದುದಿಳೆ ಸೌರಭ್ಯ ಶೈತ್ಯೋ |
ತ್ಕರವನಂಬರ ವಳಯದಗಲಕೆ |
ಪರಿಮಳಿಸಿದುದು ಗಂಧವಾಹನ ನಾಡಿಕೆಯ ಸರಣಿ ||
ಸುರಭಿಮಯವಾಯ್ತಬ್ಜಸಖ ಹಿಮ |
ಕಿರಣರಾಮೋದೈಕ ಭಾರೋ |
ತ್ಕರ ಮರೀಚಿಗಳಾದರನುಪಮ ವಾರ ಕೇಳಿಯಲಿ || ೫೪ ||

ಆದುದಲ್ಲಿಂಮೇಲೆ ಮಾಮನೆ |
ಮೇದಿನೀ ಪತಿ ಜನಕರಾಯಂ |
ಗಾ ದಿವಾಕರ ಕುಲ ಲಲಾಮನಿಗಖಿಳ ವಿಭವದಲಿ ||
ಆದರಿಸಿದನು ಜನಕನಿಭ ರಥ |
ಕೈದು ರತ್ನಾಭರಣ ಕಾಂತಾ
ವೇದಿಸಿಯ ಬಳುವಳಿಗಳಿಂ ಒಳಿಕಾ ಕುಮಾರಕರ || ೫೫ ||

(೫೩) ಹೊನ್ನಂಡೆ - ಚಿನ್ನದ ಕೊಳಗದಪ್ಪಲೆ, ಜಳಜಂತ್ರ - ಜೀರು ಕೊಳವೆ, ನಿಕುರುಂಬ - ಸಮೂಹ.

(೫೪) ಹೊರೆದುದು - ವ್ಯಾಪಿಸಿತು, ಸೌರಭ್ಯ - ಸುವಾಸನೆ, ಶೈತ್ಯೋತ್ಕರ - ಹೆಚ್ಚಾದ ತಂಪು, ಗಂಧವಾಹ - ಗಾಳಿ, ನಾಡಿಕೆಯ ಸರಣಿ - ಸಂಚಾರ ಮಾರ್ಗ, ಸುರಭಿ - ಸುವಾಸನೆ, ಅಬ್ಜಸಖ - ಸೂರ್ಯ, ಹಿಮಕಿರಣ - ಚಂದ್ರ, ಆಮೋದೈಕ ಭಾರೋತ್ಕರ ಮರೀಚಿಗಳು - ಸುವಾಸನೆಯೇ ಮುಖ್ಯ ಭಾರವಾಗಿ ಉಳ್ಳ ಕಿರಣವುಳ್ಳವರು.

(೫೫) ಮಾಮನೆ - ಬೀಗರ ಔತಣ, ಕೈದು - ಆಯುಧ, ಕಾಂತಾ - (ಹೆಂಗಸರು) - ದಾಸಿಯರು, ಬಳುವಳಿ - ಹೆಣ್ಣುಮಗಳಿಗೆ ಕೊಡುವ ವಸ್ತುಗಳು

# ಹದಿನೇಳನೆಯ ಸಂಧಿ

ಸೂ || ಭೂಮಿಪರನುರೆ ಜರಿದ ಭಾರ್ಗವ |
ರಾಮನನು ಗೆಲಿದತುಳ ಬಲ ರಘು |
ರಾಮ ಸಹಿತಜಸೂನು ಬಂದನಯೋಧ್ಯೆಗೊಲವಿನಲಿ ||

ಧರಣಿಜೆಯ ಪರಿಣಯದ ಸಮನಂ |
ತರದಲಾ ದಶರಥ ಮಹೀಪತಿ |
ಪುರವ ಹೊರವಂಟನು ಕಣಾ ಜನಕ ಕ್ಷಿತೀಶ್ವರನ ||
ತರುಣ ಕೇಳ್ಳೈ ಬಳಿಕ ದಶರಥ |
ನರಸಿಯರು ನಂದನರು ನಂದನ |
ರರಸಿಯರು ಗುರು ಮಂತ್ರಿ ಜನ ಸಹಿತಖಿಳ ವಿಭವದಲಿ || ೧ ||

ಕಳುಹಲೈತಂದನು ನಿಮಿಷಾಶ್ವರ |
ಕುಲ ಲಲಾಮನಶೇಷ ನೃಪ ಮಂ |
ಡಳಿಯ ಮಸ್ತಕ ಮಣಿಯ ನಾಲುಕು ಪಯಣ ಪರಿಯಂತ ||
ಇಳಿವ ಕಂಬನಿಗಳಲಿ ಕಂಪಿತ |
ಗಳದ ಬಿಕ್ಕುಳಿನಕ್ಕೆಯಲ ಮ |
ಕ್ಕಳನು ಕೈವರ್ತಿಸಿ ಕಕುತ್ಸ್ಥಾನ್ವಯನ ಬೀಳ್ಕೊಂಡ || ೨ ||

ಬಳಿಕ ದಶರಥ ಸಾರ್ವಭೌಮನ |
ದಳದ ಸಂಭ್ರಮದಬ್ಬರದ ರವ |
ವಳುಕಿಸಿತು ಸುರ ನರ ಭುಜಂಗಮ ಭುವನ ವೀಥಿಗಳ ||

ಸೂ|| ಜರಿದ - ತಿರಸ್ಕರಿಸಿದ, ಭಾರ್ಗವರಾಮ - ಪರಶುರಾಮ, ಅಜಸೂನು - (ಅಜ ಮಹಾರಾಜನ ಮಗ) - ದಶರಥ

(೧) ಸಮನಂತರ -ತರುವಾಯ, ಕಣಾ - ಅಲ್ಲವೇ, ದಶರಥ ಮಹೀಪತಿ ದಶರಥನರಸಿ .... ಸಹಿತ ಅಖಿಳ ವಿಭವದಲಿ ಜನಕ ಕ್ಷಿತೀಶ್ವರನ ಪುರವ ಹೊರವಂಟನು ಎಂದನ್ವಯ.

(೨) ಮಸ್ತಕ ಮಣಿ - (ಶಿರೋಮಣಿ) - ಶ್ರೇಷ್ಠ, ಕಂಬನಿ - ಕಣ್ಣೀರು, ಕಂಪಿತ ಗಳ - ನಡುಗುತ್ತಿರುವ (ಕೊರಲು) ಕಂಠಧ್ವನಿ, ಬಿಕ್ಕುಳಿನ ಅಕ್ಕೆ - ಬಿಕ್ಕುಳಿಸಿಕೊಂಡು ಅಳುವಿಕೆ, ('ಅಕ್ಕೆ' ಎಂಬುದು 'ಅಳ್ಕೆ' ಎಂಬ ಹಳಗನ್ನಡ ಶಬ್ದದಿಂದಾದ ರೂಪ), ಕೈವರ್ತಿಸು - ಕಳುಹಿಸಿಕೊಡು.

(೩) ದಳ - ಸೈನ್ಯ, ಅಳುಕಿಸು - ಹೆದರಿಸು.

ಇಳೆಯ ಪಾರ್ಥಿವರಥಟು ಕೊಡಲಿಯ |
ಕೊಲೆಗಡಿಕಗದು ಸೊಗಸೆ ಸುಳಿದನು |
ವಿಲಯ ರುದ್ರನ ಕುಪಿತ ರೌದ್ರಾವೇಶ ರೋಷದಲಿ || ೩ ||

ಕರಿ ಘಟೆಗಳುಪ್ಪರಿಸೆ ಜಗ್ಗನೆ |
ಜರಿದು ನಿಂದುವು ಕುಣಿವ ಕುದುರೆಗ |
ಳುರಕೆ ಕಬ್ಬಿಯ ಕುಸಿದು ಕುಕ್ಕರಿಸಿದುವು ಭೀತಿಯಲಿ ||
ಕೆರಿಸ ಬಾಯಲಿ ಹಾಯ್ದು ಬಳಲಿದ |
ಕರದ ಕೈದುಗಳರಸುಗಳು ಬಾ |
ಯ್ದೆರೆಯದೇ ನೆಲನೆಸುತ ಪರವಶರಾದರಲ್ಲಲ್ಲಿ || ೪ ||

ಉಲುಹುಡೆಗೆದಿಂಗುವ ಸಮುದ್ರದ |
ಸಲಿಲದವೊಲಾಯ್ತಖಿಳ ಸೇನಾ |
ಜಲಧಿ ಕಾಣೆನು ಮಲೆವ ಮಹಿಪರ ಮುನಿಯ ಮುಂಬಿನಲಿ ||
ಕಳಚಿತರಸನ ಮನದ ಧೈರ್ಯಾ |
ಚಲದ ಬೈಸಿಕೆ ಹದನನದ ಕಂ |
ಡಲಘು ಭುಜಬಲ ರಾಮ ನಿಂದನು ಮುಂದೆ ಭಾರ್ಗವನ || ೫ ||

ನಿಮಗಿದೇತಕೆ ಕ್ಷತ್ರಿಯರೊಳು |
ದ್ಧ್ರಮಿತತನ ಭೂಭುಜರ ಭುಜ ಏ |
ಕ್ರಮದ ಪರಿಪಾಡುಗಳು ನೀವೇ ನಿಮ್ಮ ಚಿತ್ತದಲಿ ||

ಅಥಟು ಕೊಡಲಿಯ ಕೊಲೆಗಡಿಕಗೆ - ಬಲವಾದ ಕೊಡಲಿಯಿಂದ ಕಡಿದು ಕೊಲ್ಲುವವನಿಗೆ - ಪರಶುರಾಮನಿಗೆ, ಸೊಗಸೆ - ಸಹಿಸುವುದೆ ? ಸುಳಿದನು - ಕಾಣಿಸಿಕೊಂಡನು, ವಿಲಯ - ಪ್ರಳಯ.

(೪) ಘಟೆ - ಗುಂಪು, ಉಪ್ಪರಿಸು - ನೆಗೆ, ಉರಕೆ - ರಭಸಕ್ಕೆ, ಕಬ್ಬಿಯ ಕುಸಿದು - ಕಡಿವಾಣವನ್ನು ಹರಿದುಕೊಂಡು, ಕೆರಿಸ ಬಾಯಲಿ ಹಾಯ್ದು - ಬಾಯೊಣಗಿಹೋಗಿ, ಬಾಯ್ದೆರೆಯದೇ - ಬಿರಿಯಬಾರದೇ, ಪರವಶರಾದರು - ಮೈಮರೆತರು.

(೫) ಉಲುಹು - ಶಬ್ದ, ಮಲೆವ-ಗರ್ವಿಸುವ, ಮುನಿ - (ಪರಶುರಾಮ), ಮುಂಬಿನಲಿ - ಎದುರಿಗೆ, ಧೈರ್ಯಾಚಲದ ಬೈಸಿಕೆ ಕಳಚಿತು - (ಧೈರ್ಯವೆಂಬ ಬೆಟ್ಟದ ಬಿಗಿ ಬಿಟ್ಟುಹೋಯ್ತು) - ಧೈರ್ಯ ತಪ್ಪಿತು, ಹದನ - ರೀತಿ.

(೬) ಉದ್ಧ್ರಮಿತತನ - ಗರ್ವಿಸುವುದು, ಭೂಭುಜ - ದೊರೆ, ಪರಿಪಾಡು - ರೀತಿ,

ಸಮತೆಯಲಿ ಸುಮುಖದಲಿ ತಿಳಿದಾ |
ಕ್ರಮಿಸುವುದೆ ಸುಪ್ರೌಢಿ ಬಲು ಸಂ |
ಭ್ರಮವು ಸಾಕೀಯೊಪ್ಪದಲಿ ಜಾರುವುದು ಲೇಸೆಂದ || ೬ ||

ಕೆಲಕೆ ತೊಲಗುವುದುಚಿತ ಹಿಂದಣ |
ಬಲುಹು ದಂಡಿಗೆ ಹುಲು ದೊರೆಗಳಲಿ |
ಸಲುವುದಲ್ಲದೆ ಸಲ್ಲದಿತ್ತಲು ಶೌರ್ಯ ನಿಮ್ಮಡಿಯ ||
ತಿಳಿವೊಡವನೀಸುರರಿಗಿಂದ |
ಗ್ಗಳರು ಶೌರ್ಯದಲವನಿಪರು ವೆ |
ಗ್ಗಳರು ವಿಪ್ರರು ವಿಧಿ ವಿಹಿತ ಕರ್ಮದಲಿ ನಮಗೆಂದ || ೭ ||

ಧ್ಯಾನ ಮೌನ ಸಮಾಧಿ ಶೌಚ |
ಸ್ನಾನ ಜಪ ತಪ ನಿತ್ಯ ನಿಯಮ |
ಜ್ಞಾನ ಸತ್ಕರ್ಮ ಪ್ರವಿಸ್ತರ ದೇವತಾ ಭಜನೆ ||
ಮೌನಿಗಳಿಗಿದು ಮಾರ್ಗ ಶರಸಂ |
ಧಾನ ಸಮಯೋಚಿತದ ಶೌರ್ಯವ |
ನೂನ ಪಾರ್ಥಿವ ಕರ್ಮ ನಿಮಗಿದು ಯೋಗ್ಯವಲ್ಲೆಂದ || ೮ ||

ಸೆಣಸುವುದು ಸುವ್ಯಾಕರಣ ಪರಿ |
ಗಣಿತ ಶಾಸ್ತ್ರಜ್ಞರಲಿ ಸಮರದೊ |
ಳಣಕಿಸುವುದನಮಾನರಲಿ ಸಂಗ್ರಾಮ ಸ್ಥಾಪನೆ ||
ಕುಣಿದುವಾ ಕುಡಿಮಿಾಸೆ ಬಿಡದಿಂ |
ಗಣವನುಗುಳಿದುವಕ್ಷಿಕಲ್ಪದ |
ಕಣುಗಿಡಿಯ ಕರ್ಕಶ ಕಪರ್ದಿಯ ಬಗೆಗೆ ಮನದಂದ || ೯ ||

ಸಮತೆಯಲಿ......ಸುಪ್ರೌಢಿ - ಸಮಾಧಾನದಿಂದ ಸುಲಭವಾಗಿ ತಿಳಿದು ನಿಮ್ಮ ಧರ್ಮವನ್ನು ನೀವು ಅನುಸರಿಸುವುದೇ ಜಾಣತನ, ಒಪ್ಪ - ಸಂದರ್ಭ.

(೭) ಕೆಲ - ಪಕ್ಕ, ಬಲುಹು ದಂಡಿಗೆ-ಶಕ್ತಿಯ ಪರಂಪರೆ, ಹುಲು - ಅಶಕ್ತರಾದ, ಇತ್ತಲು ನಿಮ್ಮಡಿಯ ಶೌರ್ಯ ಸಲ್ಲದು-ನಮ್ಮ ಮೇಲೆ ನಿಮ್ಮ ಪರಾಕ್ರಮವು ನಡೆಯದು, ಅಗ್ಗಳರು - ವೆಗ್ಗಳರು-ಹೆಚ್ಚಾದವರು.

(೮) ಪ್ರವಿಸ್ತರ - ವಿಸ್ತಾರವಾದ, ಮೌನಿ - ಋಷಿ, ಸಮಾಧಿ - ಯೋಗ, ಶೌಚ - ಪರಿಶುದ್ಧತೆ, ಶರ ಸಂಧಾನ - ಬಾಣವನ್ನು ಹೂಡುವುದು, ಪಾರ್ಥಿವ ಕರ್ಮ - ರಾಜರ ಕೆಲಸ.

(೯) ಸೆಣಸು - ಹೋರಾಡು, ಅಣಕಿಸು - (ಶಕ್ತಿಯಿಲ್ಲದಿದ್ದರೂ) ಮತ್ತೊಬ್ಬರಂತೆ ಆಡು, ಸಂಗ್ರಾಮ - ಯುದ್ಧ, ಇಂಗಳ - ಕೆಂಡ, ಕಲ್ಪದ......ಕಪರ್ದಿಯ-ಪ್ರಳಯ ಕಾಲದಲ್ಲಿ ಕಣ್ಣಿನಲ್ಲಿ ಕೆಂಡಗಳನ್ನು ಕಾರುತ್ತ ಭಯಂಕರನಾದ ರುದ್ರನ, ಬಗೆಗೆ ಮನದಂದ - ರೀತಿಗೆ ಮನಸ್ಸನ್ನು ಮಾಡಿದನು (ರೌದ್ರ ರೂಪವನ್ನು ಹೊಂದಿದನು).

ತರಣಿಯನು ತುಸವೆಂದು ತುಂಡದ |
ಅರೆವ ರಾಹುವ ತಾರೆ ತವಕಿಸಿ |
ತರುಬಿ ನಿಲುವವೊಲಾಯ್ತುಲಾ ಕ್ಷತ್ರಿಯರು ತಾವು ಗಡ ||
ಧರಣಿಯಮರರು ನಾವು ಗಡ ಸಾ |
ಗರವ ಸರಸಿಯು ಸೆಣಸುವಂತಾ |
ಯ್ತರಿಯಬಹುದಿನ್ನೆನುತ ಕೊಡಲಿಯ ಜಡಿದನಾ ರಾಮ || ೧೦ ||

ಹಾಯಿತುರಿ ಹೊದರೆದ್ದು ಕೊಡಲಿಯ ||
ಬಾಯ ಧಾರೆಯಲಖಿಳ ಜಗವವಿ ||
ದೋ ಎನಲು ಸೀವರಿಸಿ ಶಿಖಿ ಮೊಗೆದುದು ಮರುತ್ಪಥವ ||
ವಾಯು ವರುಣ ಕುಬೇರ ಯಮ ವ |
ಜ್ರಾಯುಧರು ಹಮ್ಮೈಸಿದರು ಹರಿ |
ವಾಯಿತೆಮಗೆಂದೊಡನೆ ದಶರಥರಾ ಏನಳವಳಿದ || ೧೧ ||

ರಾಮನಕಟಾ ಹಸುಳೆ ಭಾರ್ಗವ |
ರಾಮನಗ್ಗದ ಜವನು ಭೂಮಿಯೊ |
ಳಾ ಮಹೀಶಾಧೀಶ ವಂಶಾರಣ್ಯವನು ತರಿದ ||
ಭೀಮ ಬಲ ವಿಕ್ರಮಗೆ ಜಗದಭಿ |
ರಾಮ ಸಿಲುಕಿದನಿನಕುಲಾಂಬುಧಿ |
ಸೋಮ ಕೈವಶವಾದನೇ ಹಾ ಎನುತ ಹರಿತಂದ || ೧೨ ||

(೧೦) ತರಣಿ - ಸೂರ್ಯ, ತುಸ - (ತುಷಾ (ಸಂ.) - ಹೊಟ್ಟು) - ಅಲ್ಪವಸ್ತು, ತುಂಡ - (ಮುಖ) - ಬಾಯಿ, ಅರೆ - ಅಗಿದು ಪುಡಿಮಾಡು, ತಾರೆ - ನಕ್ಷತ್ರ, ತವಕಿಸು - ಉತ್ಸಾಹಗೊಳ್ಳು, ತರುಬು - ಪ್ರತಿಭಟಿಸು, ಜಡಿ - ಅಲ್ಲಾಡಿಸು.

(೧೧) ಹಾಯಿತು - ನುಗ್ಗಿತು, ಹೊದರೆದ್ದು - ಒಟ್ಟಿಗೆ ಎದ್ದು, ಅವಿದು ಓ ಎನಲು - ಅವಿತು ಕೊಂಡು ಅಯ್ಯೋ ಎನ್ನಲು, ಸೀವರಿಸಿ - ಧಗ್ಗೆಂದು, ಶಿಖಿ - ಅಗ್ನಿ, ಮೊಗೆ - ತುಂಬು, ಮರುತ್ಪಥ - ಆಕಾಶ,ವಜ್ರಾಯುಧ - ಇಂದ್ರ, ಹಮ್ಮೈಸು - ಮೈಮರೆ, ಹರಿವಾಯಿತು - ಕೊನೆಗಾಲವು ಬಂದಿತು, ಅಳವಳಿ - ಬಲಗುಂದು.

(೧೨) ಹಸುಳೆ - ಮಗು, ಜವ - ಯಮ (ಸಂ.), ಆ ಮಹೀಶ .. ..ವಿಕ್ರಮ - ದೊರೆಗಳ ಗುಂಪೆಂಬ ವನವನ್ನು ಕತ್ತರಿಸಿದ ಮಹಾ ಬಲ ಪರಾಕ್ರಮವುಳ್ಳ (ಪರಶುರಾಮ), ಅಭಿರಾಮ-ಮನೋಹರ, ಇನಕುಲಾಂಬುಧಿ ಸೋಮ - (ಸೂರ್ಯವಂಶವನ್ನಭಿವೃದ್ಧಿ ಮಾಡುವವನು)-ರಾಮ, ಹರಿತಂದ - (ದಶರಥನು) ಓಡಿಬಂದನು.

ಕಂಡನ್ನೈಯನ ಮನದಧೈರ್ಯದ |
ದಂಡಿಯನು ಸೀ ಬೇಡಿಕೊಳಲೇ |
ಕಂಡಲೆದು ಕೆಲ ಸಾರಿ ಸ್ಥೈರಿಸು ನಿಮಿಷ ಮಾತ್ರದಲಿ ||
ಖಂಡಪರಶು ಮಹೋಗ್ರ ಚಾಪ ನಿ |
ಖಂಡನನು ಸುಳಿಸಿದನು ನಿಶಿತ ಸು |
ಕಾಂಡವನು ಭೃಗುಸುತನ ಕೊಡಲಿಯ ಕೊರಳ ಸರಿಸದಲಿ || ೧೩ ||

ಉಸಿರಲೇನದ ಕಲ್ಪದಲಿ ಸುಳಿ |
ವಶನಿಗೆಣೆಯೆನಿಸುವ ಮಹಾಯುಧ |
ವೆಸೆದುದ್ಯೆ ವ್ಯೋಮದಲಿ ರಾಮನ ಶಿತ ಶರಾಗ್ರದಲಿ ||
ಪಶುಪತಿ ಬ್ರಹ್ಮಾಮರರು ಮಾ |
ನಸದೊಳರಿದರು ಪಲ್ಲಟಿಸಿತಿ |
ನ್ನಸುರಹರನವತಾರವೆಂದುಬ್ಬಿದರು ಹರುಷದಲಿ || || ೧೪ ||

ಘನತರ ಕ್ರೋಧಾಗ್ನಿ ಮಿಗೆ ಸಂ |
ಜನಿಸೆ ಭಾರ್ಗವನುಗ್ರ ವೈಷ್ಣವ |
ಧನುವನುಗಿದೇರಿಸಿದನವನೀನಾಥರಳವಳಿಯೆ ||
ವನಜಸಂಭೂತಾಂಡವೆಡ ಬಲ |
ಕೊನೆಯೆ ಬಿಲು ದನಿದೋರಿ ಕೋಲಿನ |
ಕೊನೆಗೆ ಕೈಯಿಕ್ಕಿದನು ದಿವ್ಯಾಮೋಘ ಮಂತ್ರದಲಿ || ೧೫ ||

(೧೩) ಮನದ ಅಧೈರ್ಯದ ದಂಡಿ, ದಂಡಿ - ಹೆಚ್ಚಿಕೆ, ಅಂಡಲೆ - ಪೀಡಿಸು, ಖಂಡಪರಶು ಈಶ್ವರ, ನಿಖಂಡನನು - ಮುರಿದವನು, ಸುಳಿಸಿದನು - ಬಿಟ್ಟನು, ನಿಶಿತ - ಹರಿತವಾದ, ಕಾಂಡ - ಬಾಣ.

೧೪. ಕಲ್ಪ - ಪ್ರಳಯ, ಅಶನಿ - ಸಿಡಿಲು, ಮಹಾಯುಧವು ಕೊಡಲಿಯು, ರಾಮನ ಶ್ರೀರಾಮನ, ಶಿತ - ಹರಿತವಾದ, ಮಾನಸ - ಮನಸ್ಸು, ಅಸುರಹರನ - ವಿಷ್ಣುವಿನ, ಅವತಾರವು, ಪಲ್ಲಟಿಸಿತು - ಬದಲಾಯಿಸಿತು

(೧೫) ಉಗಿದೇರಿಸಿದನು - ಎಳೆದು ಕಟ್ಟಿದನು, ವನಜಸಂಭೂತಾಂಡ - ಬ್ರಹ್ಮಾಂಡ, ಒನೆ - ತೂಗಾಡು, ಬಿಲು ದನಿದೋರಿ - ಧನುಷ್ಟಂಕಾರ ಮಾಡಿ, ಕೋಲು ಬಾಣ, ದಿವ್ಯಾಮೋಘ ಮಂತ್ರದಲಿ - ವ್ಯರ್ಥವಾಗದ ದೇವತಾ ಮಂತ್ರದಿಂದಭಿಮಂತ್ರಿಸುತ್ತ.

ಮನದೊಳಗೆ ನಸು ನಗುತ ನಿಮ್ಮಯ |
ಜನಕ ರಥದಿಂದಿಳಿದು ಪಾರ್ಥಿವ |
ಜನ ಮಹಾಂಬುಧಿ ವಡಬನೆಡೆಗಿದಿರಾಗಿ ನಡೆತಂದು ||
ಅನಿಮಿಷರು ಕೊಂಡಾಡೆ ಹೂಡಿದ
ಧನುವ ಮೇಲ್ವಾಯ್ದುಗಿದುಕೊಂಡಾ |
ಮುನಿಗೆ ಬಳಿಕೀ ಮಾತನೆಂದನು ಮಧುರ ವಚನದಲಿ || || ೧೬ ||

ನೀವು ವಿಪ್ರರು ವಿಪ್ರ ಹಿಂಸಾ |
ವ್ಯಾವಹಾರಿಕವೆಮಗೆ ದುಷ್ಟವ |
ಲಾ ವಿಶೇಷ ಜ್ಞಪ್ತಿ ಸೂಕ್ತಿಕರೋದಿದರ್ಥದಲಿ ||
ನೀವು ವಂದ್ಯರು ನಮಗೆ ನಿಮಗಿ |
ನ್ನಾವ ಜಂಜಡ ಬೇಡ ತಪದ ಫ |
ಲಾವಳಿಯೆ ಸಾಕಿನ್ನು ಬಿಜಯಂಗೈಯಿ ನೀವೆಂದ || ೧೭ ||

ಮನುಜನಲ್ಲೀತನು ಮದೀಯ |
ಧ್ವನಿಗೆ ಭೂಭುಜ ವರ್ಗದಬಲಾ |
ಜನದ ನಿಬ್ಬರ ಗರ್ಭ ಕಳಚುವುದೆಮ್ಮ ಕೋಪದಲಿ ||
ಜನಪರುಳಿದವರಲ್ಲವಿದು ಗೋ |
ಮಿನಿಯ ಗಂಡನ ಘನತರದ ಘಾ |
ಡಣೆಯಲಾ ಗತಿ ಪಲ್ಲಟಿಸಿತೆನುತುಬ್ಬಿದನು ರಾಮ || ೧೮ ||

ಆಯಿತೆಮ್ಮವತಾರವೀ ರಾ |
ಮಾಯಣದ ನಾಟಕಕೆ ದೀಪ್ತಿ |
ನ್ಯಾಯದವೊಲೆನುತಪ್ಪಿ ಬಳಿಕಕ್ಷಯ ನಿಷಂಗವುದ ||

(೧೬) ಪಾರ್ಥಿವ ..ವಡಬ-(ಕ್ಷತ್ರಿಯ ಕುಲವೆಂಬ ಸಮುದ್ರಕ್ಕೆ ಬಡಬಾಗ್ನಿ) -ಕ್ಷತ್ರಿಯ ವಿನಾಶಕ, ಉಗಿದುಕೊಂಡು - ಕಿತ್ತುಕೊಂಡು

(೧೭) ವಿಶೇಷಜ್ಞಪ್ತಿ . ಅರ್ಥದಲಿ ಎಮಗೆ ವಿಪ್ರ ಹಿಂಸಾ ವ್ಯಾವಹಾರಿಕವು ದುಷ್ಟವಲಾ-ಹೆಚ್ಚಾದ ತಿಳಿವಳಿಕೆಯುಳ್ಳ ಶಾಸ್ತ್ರಜ್ಞರು ಹೇಳಿದ ಅಭಿಪ್ರಾಯದಿಂದ ನಮಗೆ ಬ್ರಾಹ್ಮಣ ಹಿಂಸೆಯು ನಿಂದ್ಯವಾದುದಲ್ಲವೆ ! ಜಂಜಡ - ವ್ಯಥೆ

(೧೮) ಮದೀಯ.. ಕಳಚುವುದು - ನನ್ನ ಸದ್ದನ್ನು ಕೇಳಿದ ಮಾತ್ರಕ್ಕೆ ಕ್ಷತ್ರಿಯ ಬಲದ ಸ್ತ್ರೀಯರಿಗೆ ಗರ್ಭಸ್ರಾವವಾಗುವುದು, ನಿಬ್ಬರ - ಪೂರ್ಣವಾದ, ಗೋಮಿನಿ - ಲಕ್ಷ್ಮಿ, ಘಾಡಣೆ - ರಭಸ, ಗತಿ ಪಲ್ಲಟಿಸಿತು-ಮಾರ್ಗವು ಬದಲಾಯಿಸಿತು (ಬೇರೊಂದು ಅವತಾರವು ಬಂದಿತು).

(೧೯) ದೀಪ್ತಿ ನ್ಯಾಯ - ಎಂದರೆ ಬಾಗಿಲಿನ ಹೊಸಲಿನ ಮೇಲಿಟ್ಟ ದೀಪವು ಬಾಗಿಲಿನಿಂದ ಒಳ

ಸಾಯಕವನೊಲಿದಿತ್ತು ತಾಪಸ |
ರಾಯ ತೆರಳಿದನಾಶ್ರಮಕೆ ಬಳಿ |
ಕಾಯಿತಧಿಕೋತ್ಸವವು ದಶರಥ ಸಾರ್ವಭೌಮಂಗೆ || ೧೯ ||

ಲವನೆ ಕೇಳ್ಳೈ ಬಂದನೀ ರಾ |
ಘವನ ಬಳಿಗಾ ಸಮಯುದಲಿ ವೈ |
ಷ್ಣವ ಮಹಾ ಚಾಪವನು ಬೇಡಲು ಸುರಪನಾಜ್ಞೆಯಲಿ ||
ತವಕ ಮಿಗೆ ಮಕರಾಕರೇಶ್ವರ |
ನವಿರಳದ ವಿನಯದಲಿ ತದ್ವೈ |
ಷ್ಣವ ಮಹಾ ಕೋದಂಡವನು ಪಡೆದಿತ್ತನಿಂದ್ರಂಗೆ || ೨೦ ||

ಮುಂದೆ ಕಾರಣವುಂಟೆನುತ ಸಂ |
ಕ್ರಂದನನು ಬಳಿಕಾ ಧನುವ ನಿಜ |
ಮಂದಿರದಲಿರಿಸಿದನಲ್ಲೈ ವಧೆಗರಿ ದಶಾನನನ ||
ಬಂದನಲ್ಲಿಂಮೇಲೆ ಸೇನಾ |
ವೃಂದ ಸಹಿತ ಮನೋನುರಾಗದ |
ಸಂದಣಿಯ ಸೌರಂಭದಲಿ ಸಾಕೇತ ಪುರವರಕೆ || ೨೧ ||

ಕಲಶ ಕನ್ನಡಿ ತೋರಣದ ಹೊಂ |
ದಳಿಗೆಯಾರತಿಗಳ ಸುಲಲನಾ |
ವಳಿಯ ಮಂಗಳ ಪಾಠಕರ ನರ್ತನದ ನಾರಿಯರ ||
ಉಲಿವ ವಾದ್ಯದಲೆಡ ಬಲದ ಹೆ |
ಕ್ಕಳದ ನೋಟಕ ಜನದಲಾ ನೃಪ |
ಕುಲ ಶಿರೋಮಣಿ ಹೊಕ್ಕನನುಪಮ ರಾಜಮಂದಿರವ || ೨೨ ||

ಭಾಗಕ್ಕೂ ಹೊರಭಾಗಕ್ಕೂ ಕೂಡ ಬೆಳಕನ್ನುಂಟುಮಾಡುವುದು (ಎಂದರೆ, ನನ್ನ ಅವತಾರಕ್ಕೆ ಇನ್ನು ಮೇಲೆ ಪ್ರಾಮುಖ್ಯತೆ ಇಲ್ಲ), ಅಕ್ಷಯ ನಿಷಂಗವು-ಎಷ್ಟು ತೆಗೆದುಕೊಳ್ಳುತ್ತಿದ್ದರೂ ಬಾಣಗಳು ಕಡಿಮೆಯಾಗದೆ ತುಂಬಿರುವ ಬತ್ತಳಿಕೆ, ಸಾಯಕ - ಬಾಣ, ತಾಪಸ ರಾಯ - (ಋಷೀಶ್ವರ) - ಪರಶುರಾಮ

(೨೦) ಸುರಪ - ಇಂದ್ರ, ಮಕರಾಕರೇಶ್ವರ - (ಮೊಸಳೆಗಳ ವಾಸಸ್ಥಳವಾದ ಸಮುದ್ರದ ಅಧಿಪತಿ) - ವರುಣ.

(೨೧) ಸಂಕ್ರಂದನ - ಇಂದ್ರ, ಅರಿ ದಶಾನನನ ವಧೆಗೆ, ಸಾಕೇತಪುರ - ಅಯೋಧ್ಯಾ ಪಟ

(೨೨) ಹೊಂದಳಿಗೆ - ಚಿನ್ನದ ತಟ್ಟೆ, ಉಲಿವ - ಶಬ್ದಮಾಡುವ, ಹೆಕ್ಕಳ - ಆಧಿಕ್ಯ.

[ ಬಾಲಕಾಂಡವು ಮುಗಿದುದು ]